Sri T. MARIAPPA.—There is a Government Order on the subject. Is it necessary that I should repeat what is contained in the Government Order ?

Sri A. BHEEMAPPA NAIK.—I want the terms of reference. Was it only the selection of a site? There should be terms of reference included so that the members of the committee may move about.

Sri T. MARIAPPA.—Mainly to select a site best suited for locating the Agricultural College.

(*Interruption*)

Sri W. H. HANUMANTHAPPA (Bangalore District—General).—Within the Mysore State?

Sri T. MARIAPPA.—Yes.

Sri A. BHEEMAPPA NAIK.—If selection of a site takes two years, will location take twenty years at the earliest?

Sri T. MARIAPPA.—I refuse to answer that question.

Sri L. SIDDAPPA (Shimoga District—General).—When was the proposal to constitute a committee received from the Principal?

Sri T. MARIAPPA.—The Government Order is dated 14th December 1948. It was in December 1947.

Sri L. SIDDAPPA.—I remember it was June 1947.

Sri T. MARIAPPA.—It is correspondence ending with letter dated 15th December 1947 from the Principal.

Sri L. SIDDAPPA.—So the committee is keeping pace with the Government's despatch of work?

Sri T. MARIAPPA.—I repudiate the suggestion. But the Government Order itself is dated 14th December 1948. It is one year and three months; it is not one year and eight months.

Sri L. SIDDAPPA.—So one year after the proposals were received, the Government passed orders constituting the committee?

Sri T. MARIAPPA.—Even prior to September 1947 there was a lot of correspondence on the subject. I can quote chapter and verse. Proposals were received in June 1947 and final orders were passed in December 1948.

Mr. SPEAKER.—Question time is over.

Furnishing Answers to Questions expeditiously.

Mushir-ul-Mulk J. MAHOMED IMAM (Chitaldrug *cum* Tumkur-Muslim).—We have sent interpellations to the Government for furnishing answers as early as possible so that they may be of use to us at the time of discussion on various subjects. Government have not furnished answers to all the interpellations till now and placed them in our hands.

Mr. SPEAKER.—III Part also is printed.

Janab J. MAHOMED IMAM.—It is not obligatory that they should provide answers only to those that are taken up. They must furnish answers beforehand to help us in our work, and to keep us in possession of facts. So I submit that answers to all the questions may be given to us as early as possible and not as and when they finish part by part that is given to us. I do not know the policy adopted by the Government.

Sri K. CHENGALARAYA REDDY (Leader of the House).—Hon'ble Member knows it very well.

Janab J. MAHOMED IMAM.—Now the present practice seem to be, 5 or 6 questions are taken up for furnishing answers to them; till these questions are finished, they do not furnish answers to other questions. My contention is that as early as possible they must prepare answers for all the questions and give them to the members.

Mr. SPEAKER.—It was not being done before. As and when they got replies, they used to give them.

Janab J. MAHOMED IMAM.—They were doing it as quickly as possible. By the middle of the session, answers to most of the questions would be in our hands. So, I submit that the Government may prepare the answers for all the questions and furnish them;

Secondly, with regard to the order in which they are placed, I do not know what their policy is and how they select the questions to be placed before the House. There are many important questions.

Mr. SPEAKER.—As and when they get answers to questions, they place them before the House.

Janab J. MAHOMED IMAM.—It should not be left to the discretion of the Executive. That is what I say. What is the procedure in Delhi and other places? It depends upon the priority. Often, replies to questions that are received first, will be placed before the House. Now it is left to the discretion of the Government--I am not making any insinuation—and they may place before the House only such questions that are convenient to them.

Sri K. CHENGALARAYA REDDY.—On a point of order, Mr. Speaker. The Hon'ble Member said that he did not want to impute any motive; in the next breath he said that the Government are likely to postpone answers to such questions that are not convenient to them to answer. There is an insinuation in that and I hope the Hon'ble Member will be pleased to withdraw it.

Sri L. SIDDAPPA (Shimoga District—General).—If there is insinuation, it is perfectly warranted by facts. I may tell you that three of the questions which were tabled for the Representative Assembly, October Session of 1949, Question No. 8 standing in my name.........

ಅಧ್ಯಕ್ಷರು.—ತಾವು ಉಪಪ್ರಶ್ನೆಗಳನ್ನು ಹಾಕುವುದನ್ನು ಸ್ವಲ್ಪ ಕಡಿಮೆ ಮಾಡಿಕೊಂಡರೆ ಆಗ ನಾವು ಇನ್ನೂ ಅಧಿಕ ಪ್ರಮಾಣದಲ್ಲಿ ಪ್ರಶ್ನೆಗಳನ್ನು ತೆಗೆದುಕೊಂಡು ಮುಗಿಸಬಹುದು. ಅದರಂತೆ ಮಾಡಿದರೆ ಅನುಕೂಲ. ಅದೆಲ್ಲ ಸದಸ್ಯರ ಮೇಲೆ ಇರುತ್ತದೆ. ಅಲ್ಲದೆ ತಾವೀಗ ಕೇಳತಕ್ಕ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ. ಹಿಂದಿನ ಅಧಿವೇಶನದ ವಿಷಯವನ್ನು ಈಗ ಚರ್ಚಿಸಲು ಹೇಗೆ ಸಾಧ್ಯ! ಈಗಿನ ಕಾನೂನುಗಳೇ ಬೇರೆ. ಕಾರ್ಯಕ್ರಮದ ಆಚರಣೆಯೇ ಬದಲಾಯಿಸಿ ಹೋಗಿದೆ.

Sri L. SIDDAPPA.—They have been repeated now so much so that the Government had very nearly eight months' time. They should have been ready with the answers. You will please remember that in printing the volume for the proceedings of the October Session of 1949, all the questions and answers to these questions, whether they come up before the Assembly or not, have got to be printed. At least for that purpose, they should have been ready. Now the same questions have been repeated and answers are still not ready. The inference is that because those questions are inconvenient to them to answer, they are not ready.

Sri K. CHENGALARAYA REDDY.—I may at once say that the Government are not under any obligation to give answers to all the questions in one set under the existing rules and standing orders. I have already indicated that the procedure to be hereafter followed is to place only answers to such of the questions which will be listed beforehand on the very day and whether we have to do it one hour before or at the time of answering, it is for the Chair to prescribe the procedure. Let us look forward to the procedure that is in the offing rather than try to suggest a procedure in the reverse way which will be going even beyond the procedure that we are now following. Hon'ble Members are aware of the procedure followed in the other Legislatures. That being the case, I do not think there is any justification whatsoever to either insinuate or to draw inferences according to Hon'ble Members' pleasure. I might say that we have already sent to the Legislature Office, as the office is aware, answers to more than 100 questions. I might take the House into confidence. We are personally following up the progress of the answers to questions and we are doing every thing possible to expedite the giving of answers to all the questions in time. Under these circumstances, I am really sorry that members of the standing of Janab Mahomed Imam and Sri Siddappa should have been pleased to make the remarks that they have made.

Sri L. SIDDAPPA.—With regard to this question, I wrote a letter to the Secretary in the month of November after the Dasara Session was over.

Then again I wrote another letter. Even then I was not furnished with answers This is what is stated in the Secretary's letter.

"With reference to your letter dated............ as regards furnishing answers to questions tabled for the Representative Assembly, October Session 1949, separate action is being taken in the matter... ...."

Then again I reminded the Secretary. This is the reply I received :—

"In continuation of this office letter No... ..... informing him that separate action will be taken in regard to furnishing answers, I am directed to state that answers to your question have not yet been received from Government and that the Secretary concerned has been addressed in the matter."

Then again I wrote to the Secretary saying that he might inform the Government and ask them to furnish answers to this question. Under these circumstances, is it too much to infer that because the questions are inconvenient to Government they have been keeping back the answer?

Rajamantrapravina H. B. GUNDAPPA GOWDA (Hassan District—General).—I remember to have heard the Chief Minister saying in the course of his remarks that the Government are not bound to furnish replies for all questions.

Sri K. CHENGALARAYA REDDY.—I did not say so.

ಅಧ್ಯಕ್ಷರು.—ಪ್ರಶ್ನೆಗಳಿಗೆ ಉತ್ತರಗಳು ಒದಗಿಸಲ್ಪಟ್ಟಂತೆಲ್ಲಾ, ಅಂಥಾ ಪ್ರಶ್ನೆಗಳನ್ನು ಮೊದಲು ಇಲ್ಲಿ ಚರ್ಚೆ ಮಾಡಲು ತೆಗೆದುಕೊಳ್ಳಲಾಗುತ್ತದೆಯೆಂದು ತಿಳಿಸಿದ್ದಾರೆ, ಅಷ್ಟೆ.

Sri H. C. DASAPPA (Minister for Finance and Industries).—It is an unheard of procedure.

ಅಧ್ಯಕ್ಷರು.—ಹಿಂದೆ ಬರೀ ಪ್ರಶ್ನೆಗಳ ಸಂಪೂರ್ಣ ಪಟ್ಟಿಯೊಂದನ್ನು ಅಲಾಯಿದ ಅಚ್ಚು ಹಾಕಿಸಿ ಸದಸ್ಯರಿಗೆ ಹಂಚಲಾಗುತ್ತಿತ್ತೆಂದೂ, ಆದರೆ ಈ ಸಾರ್ತಿ ಹಾಗೆ ಮಾಡಿರುವುದಿಲ್ಲವೆಂದೂ ಜನಾಬ್ ಇಮಾಂರವರು ತಿಳಿಸಿದ್ದಾರೆ. ಅಷ್ಟೇ ಹೊರತಾಗಿ ಯಾವಾಗಲೂ ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳನ್ನು ಒಂದೇ ಸಾರಿಗೆ ಒದಗಿಸಿ ಅಚ್ಚು ಹಾಕಿಸಿ ಕೊಟ್ಟಿಲ್ಲ.

ಶ್ರೀ ಕೆ. ಟಿ. ಭಾಷ್ಯಂರವರು (ಲಾ ಮತ್ತು ಲೇಬರ್ ಸಚಿವರು).—Sir, I want to say a few words in this connection. ಸಾಧ್ಯವಾದ ಮಟ್ಟಿಗೂ ಬಂದ ಪ್ರಶ್ನೆಗಳಿಗೆಲ್ಲಾ ಉತ್ತರಗಳನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನಪಟ್ಟಿದ್ದಾರೆ. ಆದರೆ ಕೆಲವು ವೇಳೆ ಒಂದೊಂದು ಪ್ರಶ್ನೆಗೆ ಅನೇಕ ವಿಚಾರಗಳನ್ನು ಕ್ರೋಢೀಕರಿಸಿ ಉತ್ತರ ಕೊಡಬೇಕಾಗಿರುತ್ತದೆ. ಈ ಕಾರಣದಿಂದ ಕೊಂಚ ಸಾವಕಾಶವಾಗಬಹುದು. ಅದರಲ್ಲೂ ಈ ಸಾರಿ 12 ದಿವಸಗಳು ಮಾತ್ರ ಕಾಲಾವಕಾಶ ಕೊಟ್ಟಿರುವುದು.

ಒಬ್ಬ ಸದಸ್ಯರು.—ಅದನ್ನು ನೀವೇ ಮಾಡಿಕೊಂಡಿದ್ದು!

ಶ್ರೀ ಕೆ. ಟಿ. ಭಾಷ್ಯಂರವರು.—ನಾವು ಮಾಡಿಕೊಂಡಿದ್ದರೂ, ಎಲ್ಲಾ ಸದಸ್ಯರ ಅನುಕೂಲಕ್ಕೆಂದೇ ಆ ರೀತಿ ಮಾಡಿರುವುದು. ಮೂವತ್ತು ದಿವಸಗಳಷ್ಟು ಕಾಲ ಕೊಟ್ಟಿದ್ದರೆ ಮಾನ್ಯ ಸದಸ್ಯರಿಗೇ ಅನಾನುಕೂಲವಾಗುತ್ತಿತ್ತು. ಇದನ್ನರಿತು ಹನ್ನೆರಡು ದಿವಸಗಳು ಕೊಟ್ಟರೆ ಸಾಕೆಂದು ಏರ್ಪಾಡು ಮಾಡಿದ್ದೇವೆ. ಈ ಹನ್ನೆರಡು ದಿವಸಗಳಲ್ಲಿ ಎಷ್ಟು ಪ್ರಶ್ನೆಗಳಿಗೆ ಉತ್ತರಗಳನ್ನು ಶೇಖರಿಸುವುದಕ್ಕೆ ಸಾಧ್ಯವೋ ಅಷ್ಟಕ್ಕೂ ಕೊಡುತ್ತೇವೆ. ಇದುವರೆಗೂ ಪ್ರಶ್ನೋತ್ತರ ಕಾಲದಲ್ಲಿ ಯಾವ ಪ್ರಶ್ನೆಗಾಗಲಿ ಉತ್ತರ ಬಾರದೆ ಅನಾನುಕೂಲವಾಯಿತೆಂದು ಯಾರೂ ಹೇಳಿಲ್ಲ. ಕ್ರಮವಾದಮಟ್ಟಿಗೂ ಉತ್ತರ ಒದಗಿಸುತ್ತಿದ್ದೇವೆ. ಈಗಾಗಲೇ ಮೂರು ಭಾಗಗಳಲ್ಲಿ ಪ್ರಶ್ನೋತ್ತರಗಳು ತಮ್ಮ ಕೈಸೇರಿವೆ. ನಾಲ್ಕನೆಯ ಭಾಗವೂ ಸದ್ಯದಲ್ಲೇ ಬರುವುದಿದೆ. ಎಲ್ಲಾ ಪ್ರಶ್ನೆಗಳಿಗೂ ಆದಷ್ಟು ಬೇಗ ಉತ್ತರ ಕಳುಹಿಸಿಕೊಡಬೇಕೆಂದಿದೆ. ಇಷ್ಟಾದರೂ ಕೆಲವು ಪ್ರಶ್ನೆಗಳಿಗೆ ಹೆಚ್ಚಿನ ಕಾಲಾವಕಾಶ ಕೊಡಬೇಕಾದ್ದು ಅನಿವಾರ್ಯ. ಅಂಥಾದ್ದರಲ್ಲೂ ಯಾರಾದರೂ ಸದಸ್ಯರು ಇಂಥ ಪ್ರಶ್ನೆಗೆ ಸ್ಪಷ್ಟವಾಗಿ ಬೇಗ ಉತ್ತರ ಕಳುಹಿಸಿಕೊಡಬೇಕೆಂದು ಕೇಳಿದರೆ ಕೊಡುತ್ತೇವೆ. ಮಾನ್ಯ ಸದಸ್ಯರೊಬ್ಬರು ಹಿಂದೆ ಅಸೆಂಬ್ಲಿಯಲ್ಲಿ ಪ್ರಶ್ನೆ ಕಳುಹಿಸಿದಾಗಲೂ ಉತ್ತರ ಕೊಡಬಹುದಾಗಿದ್ದರೂ ಕೊಡಲಿಲ್ಲ, ಈ ಸಾರಿ ಮತ್ತೆ ಅದೇ ಪ್ರಶ್ನೆಯನ್ನು ಕಳುಹಿಸಿಕೊಟ್ಟರೂ ಈ ಸಾರಿಯೂ ಉತ್ತರ ಕೊಡಲಿಲ್ಲವೆಂದು ಹೇಳಿದರು. ಹಿಂದೆ ಉತ್ತರ ಕಳುಹಿಸದಿರುವುದಕ್ಕೆ ಸಂದರ್ಭ ಏನಿತ್ತೋ ಈಗ ಹೇಳಲಾರೆ. ಈಗ ಅವರು ಕಳುಹಿಸಿಕೊಟ್ಟಿರುವ ಪ್ರಶ್ನೆಯನ್ನು ಉತ್ತರ ಸಂಗ್ರಹಿಸಲಿಕ್ಕೆ ಕಳುಹಿಸಿದ್ದೇವೆ. ಸದ್ಯದಲ್ಲೇ ಕೊಡುತ್ತೇವೆ.

ಆದರೂ ಒಂದು ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕೆಂದಿದ್ದೇನೆ. ಇಷ್ಟು ಕಾಲದ ಒಳಗೇ ಉತ್ತರ ಕಳುಹಿಸಿಕೊಡಬೇಕೆಂದು ಎಲ್ಲೂ ಪದ್ಧತಿಯಿಲ್ಲ. ಆಗಿಂದಾಗ್ಗೆ ಉತ್ತರ ಒದಗಿದಂತೆಲ್ಲಾ ಕಳುಹಿಸಿಕೊಡುತ್ತಾ ಬರುತ್ತೇವೆ. ಕ್ರಮವಾದ ಮಟ್ಟಿಗೂ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಬೇಕೆಂಬುದೇ ನಮ್ಮ ಆಶೆ. ಇದರಲ್ಲಿ ಮುಚ್ಚುಮರೆ ಮಾಡುವುದಕ್ಕೆ ಕಾರಣವೇ ಇಲ್ಲ. ಅಂಥ ಅಭಿಪ್ರಾಯವೂ ಇಲ್ಲ. ಕೆಲವು ಪ್ರಶ್ನೆಗಳು ಪ್ರಶ್ನೋತ್ತರಗಳ ಕಾಲಕ್ಕೆ ಸರಿಯಾಗಿ ಬರದಿರಬಹುದು. ಅಂಥಾದ್ದರಲ್ಲೂ ಯಾರಾದರೂ ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ಮುಂಚೆ ತೆಗೆದುಕೊಳ್ಳಬೇಕೆಂದು ಹೇಳಿ ಸ್ಪಷ್ಟವಾಗಿ ಉತ್ತರ ಕಳುಹಿಸಿಕೊಡಬೇಕೆಂದು ಸೂಚಿಸಿದರೆ ಜಾಗ್ರತೆ ಉತ್ತರ ತರಿಸಿಕೊಡುವುದಕ್ಕೂ ಪ್ರಯತ್ನ ಮಾಡುತ್ತೇವೆ.

We will try our best to furnish answers. Generally, we give answers to all questions as far as possible and as expeditiously as possible. I want to disabuse the minds of such of the members who have any misapprehensions about us. Government have absolutely no intention of leaving any question unanswered, nor of preventing supplementary questions being put on

any question whatever by keeping back answers. We want to give every Hon'ble Member of this House every facility to put as many supplementary questions as possible, not only in respect of the questions tabled by him but also of those put by other Hon'ble Members.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಇವತ್ತು ಶ್ರೀಪಾರ್ಕ್ ಸಿದ್ದಪ್ಪನವರು ಕಳುಹಿಸಿಕೊಟ್ಟಿರುವ 18ನೇಯ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಳ್ಳುವ ಸಂದರ್ಭದಲ್ಲಿ, ಆ ಪ್ರಶ್ನೆಯನ್ನೂ, ನಾನು ಕಳುಹಿಸಿ ಕೊಟ್ಟಿರುವ ಪ್ರಶ್ನೆಯನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರು ಸೂಚನೆ ಮಾಡಿದರು. ಆದರೆ ಈಗ ನನ್ನ ಕೈಗೆ ಬಂದಿರುವ ಮೂರನೆಯ ಭಾಗದ ಪ್ರಶ್ನೋತ್ತರಗಳನ್ನು ನೋಡಿದ್ದರಲ್ಲಿ ಅಲ್ಲಿಯೂ ಕೂಡ ನನ್ನ ಪ್ರಶ್ನೆ ಬಂದಿಲ್ಲ. ಅಂದಮೇಲೆ ಈ ಅಧಿವೇಶನದಲ್ಲಿ ನನ್ನ ಪ್ರಶ್ನೆ ಬರುವ ಹಾಗೆಯೇ ಕಾಣುವುದಿಲ್ಲ.

Sri K. CHENGALARAYA REDDY.—Sir, in view of the debate that has taken place on the particular subject, I would earnestly request the Chair to give a definite ruling, and lay down a procedure in this behalf so that there may be no misapprehensions either in the minds of the Government or the Hon'ble Members. Government want to give full facilities to all Members to put supplementary questions. As the Hon'ble Law Minister stated, so far as the Government are concerned, furnishing answers to questions has been very satisfactory. I do not think, in my experience, so many questions have been answered within the short time of the commencement of the session. I keep watch of progress in this behalf. Answers to about a hundred questions have been sent to the Legislature Office and less than half of the questions remain unanswered. I can assure the House, as I have already stated that they will have answers to all the questions tabled by them even before the Session is adjourned.

ಅಧ್ಯಕ್ಷರು.—ಈ ವಿಚಾರದಲ್ಲಿ ಏನಾದರೂ ಈಗಿರುವ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದಿದ್ದರೆ, ಈ ಸಭೆಯಿಂದ ಒಂದು ಸಮಿತಿಯನ್ನು ರಚನೆಮಾಡಿ ನಿಬಂಧನೆಗಳನ್ನು ಏರ್ಪಾಡು ಮಾಡುವ ಸಂಬಂಧದಲ್ಲಿ ಇದನ್ನೂ ಪರ್ಯಾಲೋಚನೆ ಮಾಡಬಹುದು. ಈಗ ಸದಸ್ಯರು ಕಳುಹಿಸಿಕೊಟ್ಟಿರುವ ಸುಮಾರು 110 ಪ್ರಶ್ನೆಗಳಲ್ಲಿ 100 ಪ್ರಶ್ನೆಗಳಿಗಾಗಲೇ ಸರ್ಕಾರದವರು ಉತ್ತರಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಇತರ ಕಡೆಗಳಲ್ಲಿ ಪ್ರಶ್ನೋತ್ತರಗಳು ಯಾವ ರೀತಿ ನಡೆಯುತ್ತಿರುತ್ತವೆಯೆಂಬುದನ್ನು ನೋಡಿದರೆ, ಕೇವಲ ಎರಡು ಮೂರು ನಿಮಿಷಗಳಿಗೆ ಒಂದೊಂದು ಪ್ರಶ್ನೆ ಮುಗಿದು ಹೋಗುತ್ತದೆ. ಆದರೆ ಇಲ್ಲಿ ದಿನಕ್ಕೆ ಮೂರು ನಾಲ್ಕು ಪ್ರಶ್ನೆಗಳನ್ನು ಪೂರ್ತಿ ಮಾಡುವುದೂ ಕಷ್ಟವಾಗಿದೆ. ಮಾನ್ಯ ಸದಸ್ಯರು ಸ್ವಲ್ಪಮಟ್ಟಿಗೆ cross examination ಮಾಡುವುದನ್ನು ಕಡಿಮೆಮಾಡಿದರೆ ಅನುಕೂಲ. ಆಗ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಬಹುದೆಂದು ತೋರುತ್ತದೆ.

ಆಮೇಲೆ, ಹಾಲ ಬಂದಿರತಕ್ಕ ಖೋತಾ ಸೂಚನೆಗಳು ಒಟ್ಟು ಸುಮಾರು 259. ಖೋತಾ ಸೂಚನೆಗಳನ್ನು ಕಳುಹಿಸಿಕೊಡುವುದಕ್ಕೆ ನಿನ್ನೆ ದಿವಸದವರೆಗೂ ಅವಕಾಶ ಕೊಟ್ಟಿದ್ದರಿಂದ ನಾಳೆ ದಿವಸ ಮುದ್ರಣವಾಗಿ ಪ್ರತಿಗಳು ಬರುತ್ತವೆ. ಬಂದ ನಂತರ ಅವುಗಳನ್ನು ಸದಸ್ಯರಿಗೆ ಹಂಚಲಾಗುತ್ತದೆ. ಆದರೂ ಈಗ ಗೊತ್ತು ಮಾಡಿರತಕ್ಕ ಕಾಲಾವಧಿಯೊಳಗೆ ಈ ಖೋತಾ ಸೂಚನೆಗಳೆಲ್ಲವನ್ನೂ ಚರ್ಚೆಗೆ ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಇವುಗಳಲ್ಲಿ ಯಾವ್ಯಾವುದನ್ನು ತೆಗೆದುಕೊಳ್ಳಬೇಕೆಂಬುದನ್ನು ಮಾನ್ಯ ಸದಸ್ಯರು ತಮ್ಮತಮ್ಮಲ್ಲೇ ತೀರ್ಮಾನ ಮಾಡಿಕೊಂಡರೆ ಎಲ್ಲಾ demand ಗಳನ್ನೂ ಚರ್ಚೆ ಮಾಡಬಹುದು. ಇಲ್ಲದಿದ್ದರೆ ಕೆಲವೇ ಬಾಬುಗಳನ್ನು ಚರ್ಚೆ ಮಾಡಿ ಮಿಕ್ಕವುಗಳನ್ನು ಕೊನೆಯದಿನ ಗಿಲೋಟಿನ್‌ಗೆ ಹಾಕಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಯಾವ್ಯಾವುಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ತೀರ್ಮಾನಮಾಡಿಕೊಂಡು ನನಗೆ ತಿಳಿಸಿದರೆ ಅನುಕೂಲವಾಗುತ್ತೆ.

ಈಗ ಬಡ್ಜೆಟ್ ಭಾಷಣ ಮುಂದುವರಿಯಬಹುದು.

THE BUDGET FOR 1950-51.

First Stage—General Discussion.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಬಡ್ಜೆಟ್. ಭಾಷಣ ಇಂದಿಗೇ ಮುಗಿಯುತ್ತದೆಯೇ ಅಥವಾ ಸೋಮವಾರವೂ ಉಂಟೇ?

ಅಧ್ಯಕ್ಷರು.—ಅದು ಎಷ್ಟು ಜನ ಮಾತನಾಡುತ್ತಾರೋ ಅದರ ಮೇಲೆ ಹೋಗುತ್ತದೆ.

Sri K. CHENGALARAYA REDDY (Leader of the House).—Sir, we have to complete the Budget in all its stages before the 31st of this month. Four days will have to be set apart for Demands and for moving cut motions, etc. Thirty-first March is the day set apart for Supplementary Demands for Grants, Appropriation Bill, etc. As such it will not be possible to give one more day for General Discussion on the Budget.

Mr. SPEAKER.—Can we have discussion on the Budget to-morrow?

MANY VOICES.—Not on a Sunday, Sir.

Janab MAHMOOD SHARIFF. (Mysore *cum* Mandya *cum* Hassan Muslim).—May I request the Hon'ble Speaker to ascertain as to how many more members are going to speak on the Budget so that time may be apportioned accordingly.

Mr. SPEAKER.—There are many who want to speak.

Sri K. CHENGALARAYA REDDY.—Sir, the usual procedure has been this. Every Minister will take up about ten minutes to just reply to the points pertaining to his portfolios raised by the Hon'ble Members of this House. Then the Finance Minister will cover the entire ground particularly with regard to the financial aspect and on the subjects that he is having in his portfolio. Then I will be taking a few minutes to conclude finally. In all, about an hour and a half or two hours are required by us.

Rajamantrapravina H. B. GUNDAPPA GOWDA (Hassan District—General).—Previous experience shows the other way. Not less than two and a half hours have been taken by the Government for the reply.

Mr SPEAKER.—The Hon'ble Leader of the House has stated that Government may require about 1½ or 2 hours.

Sri K. T. BHASHYAM (Minister for Law and Labour).—On behalf of the Ministers, we have got such a strong case that ten minutes will be sufficient for each of us.

Mr. SPEAKER.—Hon'ble Members may speak on the Budget till 11-30 A.M.

Sri H. K. VEERANNA GOWDA (Mandya District—General).—Sir, there are many members who want to speak on the Budget and they will not be able to do so if we have to stop at 11-30.

Janab MOHAMED HANIEF.—(Bangalore—Muslim).—In the beginning you have been very liberal and now to cut short.......................

Sri K. CHENGALARAYA REDDY.—If the Hon'ble Members are agreeable and if the Chair also is agreeable, I want to suggest that we may have a session this afternoon.

(Many members were agreeable to this suggestion.)

Mushir-ul-Mulk J. MAHOMED IMAM (Chitaldrug *cum* Tumkur—Muslim).—In that case, Sir, I suggest that we may sit till 2 P.M., now and adjourn to meet again at 4 P.M.

Sri K. CHENGALARAYA REDDY.—No, Sir. 2 P.M., will be too late. We may sit till 1 P.M., and then meet again in the afternoon at 4 P.M. The House may then sit for hearing the replies of the Ministers.

Mr. SPEAKER.—The House will sit now till 1 P.M., and then adjourn. It will again meet at 4 P.M., when the Hon'ble Ministers will reply and continue till 6 P.M.

(ಅಷ್ಟು ಹೊತ್ತಿಗೆ ಅಧ್ಯಕ್ಷರು ಹೊರಗೆ ಹೋದರು. ಅನಂತರ ಡೆಪ್ಯುಟಿ ಸ್ಪೀಕರ್‌ರವರಾದ ಶ್ರೀ ಎಲ್. ಎಚ್. ತಿಮ್ಮಬೋಯಿಯವರು ಅಧ್ಯಕ್ಷತೆ ವಹಿಸಿದರು.)

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಅಧ್ಯಕ್ಷರೇ, ಸಭೆಯ ಮುಂದಿಟ್ಟಿರುವ ಆಯವ್ಯಯಪಟ್ಟಿಯನ್ನು ನೋಡಿದರೆ ಸ್ವಲ್ಪ ನಿರಾಶೆಯಾಗುತ್ತಿದೆ. ಕಾರಣ ಈಗ ನಮ್ಮ ದೇಶದಲ್ಲಿರುವ ಪ್ರಬಲವಾದ ಚಳುವಳಿಯನ್ನು, ಸಮಾಜಘಾತಕವಾದ ಚಳುವಳಿಯನ್ನು ತಪ್ಪಿಸಬೇಕಾದರೆ ನಮ್ಮ ದೃಷ್ಟಿ ಕೋಣ ಬದಲಾವಣೆಯಾಗಬೇಕು. ಬರಬರುತ್ತಾ ಶ್ರೀಮಂತರ ಮೇಲಿನ ತೆರಿಗೆ ಹೊರೆ ಜಾಸ್ತಿಯಾಗಬೇಕು ಮತ್ತು ಬಡವರ ಮೇಲಿನ ಹೊರೆ ಕಡಿಮೆಯಾಗಬೇಕು. ಆ ಸೂಚನೆಯನ್ನು ಈ ಸಾರಿಯ ಬಡ್ಜೆಟ್ಟಿನಲ್ಲಿ ನಾನು ನಿರೀಕ್ಷಿಸಿದ್ದೆ. ಆದರೆ ಅದಕ್ಕೆ ಯಾವ ಸೂಚನೆಯೂ ಇಲ್ಲದ್ದರಿಂದ ನಿರಾಶೆಯಾಯಿತು, ಶ್ರೀಮಂತರ ಮೇಲೆ ಅತ್ಯಧಿಕವಾಗಿ ತೆರಿಗೆಗಳನ್ನು ಹಾಕುವುದಕ್ಕೆ ಅವಕಾಶವಿದೆ. ಈ ಅವಕಾಶವನ್ನು ಮುಂದಿನ ವರ್ಷವಾದರೂ ಸರ್ಕಾರದವರು ಉಪಯೋಗಿಸುಕೊಳ್ಳುತ್ತಾರೆಂಬ ಭರವಸೆಯಿಂದ ಈ ಬಡ್ಜೆಟ್ಟಿಗೆ ನನ್ನ ಬೆಂಬಲವನ್ನು ಕೊಡಲು ಸಿದ್ಧವಾಗಿದ್ದೇನೆ.

ಎರಡನೆಯದಾಗಿ, ಮೈಸೂರು ಸರ್ಕಾರದ ನೀತಿಯಲ್ಲಿ, ಅದು ಸಾಧಿಸಿದ ನೀತಿಯಲ್ಲಿ, ಸ್ವಲ್ಪ ಬದಲಾವಣೆ ಆಗಬೇಕಾಗಿರುವುದು ಅವಶ್ಯಕವಾಗಿದೆ. ಸುಮಾರು ಮೂರು ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಆದರೆ ನಮ್ಮ ದೇಶವನ್ನು ಪುನರ್ರಚನೆ ಮಾಡುವುದಕ್ಕೆ ತಕ್ಕ ವ್ಯಕ್ತಿಗಳನ್ನು ಸೃಷ್ಟಿಸುವುದಕ್ಕೆ, ತಯಾರು ಮಾಡುವುದಕ್ಕೆ, ಸಾಕಾದಷ್ಟು ಶ್ರದ್ಧೆಯಿಂದ ಕೆಲಸ ಮಾಡುತ್ತಿಲ್ಲವೆಂದು ನನಗೆ ಕಂಡು ಬರುತ್ತದೆ. ಡಾಕ್ಟರ್ ರೆಡ್ಡಿಯವರ ವರದಿ ಬಂದು ಬಹಳ ದಿನವಾದರೂ ಅದರ ಪ್ರಕಾರ ಕಾರ್ಯಕ್ರಮ ಕೈಗೊಂಡಿಲ್ಲ. ಪ್ರತಿವರ್ಷವೂ ಸುಮಾರು 12 ಸಾವಿರ ಮಂದಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವವರು ನಮ್ಮ ಸಮಾಜಕ್ಕೆ ಹೊರೆಯಾಗುತ್ತಿದ್ದಾರೆಂದು ಕಾಣುತ್ತದೆ. ವಿದ್ಯಾಭ್ಯಾಸದ ಪದ್ಧತಿ ನೋಡಿದರೆ

ಹೈಸ್ಕೂಲಿನಲ್ಲಿ ವಾರಕ್ಕೆ 33 ಗಂಟೆಗಳ ಕಾಲ ನಡೆಯುವ ಪಾಠ ಪ್ರವಚನಗಳ ಕಾಲದಲ್ಲಿ 11 ಪೀರಿಯಡ್‌ಗಳು ಇಂಗ್ಲೀಷ್ ಭಾಷೆಗಾಗಿ ವಿನಿಯೋಗಿಸಲ್ಪಡುತ್ತಿವೆ. ಇಂಗ್ಲೀಷ್ ಭಾಷೆಯನ್ನು ಕಲಿಯುವುದಕ್ಕಾಗಿ ನಮ್ಮ ಮಕ್ಕಳ ಅರ್ಧ ಭಾಗದ ಕಾಲವೆಲ್ಲಾ ಅನ್ಯಾಯವಾಗಿ ವ್ಯಯವಾಗುತ್ತಿದೆ. ಇದನ್ನು ಸರ್ಕಾರದವರು ಸರಿಪಡಿಸಿರುವುದಿಲ್ಲ. ಈ ಸಾರಿಯಾದರೂ ಕೂಡಲೇ ಈ ಜೂನ್ ನಲ್ಲಿ ಶಾಲೆಗಳು ಪ್ರಾರಂಭವಾಗುವುದಕ್ಕೆ ಮುಂಚೆ ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಮೂರನೆಯದಾಗಿ, ಈ ದೇಶದಲ್ಲಿ, ಅದರಲ್ಲೂ ದಕ್ಷಿಣ ದೇಶದಲ್ಲಿ, ಕೋಮುವಾರುಭಾವನೆ ಬೇಕಾದ ಹಾಗಿದೆ. ಈಗ ಅದು ಕಡಿಮೆಯಾಗುವ ಸೂಚನೆಯಿದೆ. ಅದನ್ನು ಕಡಿಮೆ ಮಾಡಲು ಪ್ರಯತ್ನ ಮಾಡಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯ. ಯಾವಾಗಲೋ, ಯಾವುದೋ ಒಂದು ಕಾಲದಲ್ಲಿ ಈ ಕೋಮುವಾರು ವಿದ್ಯಾರ್ಥಿ ನಿಲಯಗಳನ್ನು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಡುವ ದೃಷ್ಟಿಯಿಂದ ಸ್ಥಾಪನೆ ಮಾಡಿದರು. ಆ ಕಾಲ ಈಗ ನಿಂತುಹೋಗುವ ಸಂಭವವಿದೆ. ಆದರೆ ಅದಕ್ಕೆ ಗ್ರ್ಯಾಂಟನ್ನು ನಿಲ್ಲಿಸಿ ಎಂದು ಹೇಳುವುದಿಲ್ಲ. ಇನ್ನು ಮುಂದಾದರೂ ಈ ಕೋಮುವಾರು ವಿದ್ಯಾರ್ಥಿನಿಲಯಗಳಿಗೆ ಯಾವ ಗ್ರ್ಯಾಂಟನ್ನೇ ಆಗಲಿ ಅಥವಾ ಪ್ರೋತ್ಸಾಹವನ್ನೇ ಆಗಲಿ ಸರ್ಕಾರ ಕೊಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ಆಹಾರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಹೋಟಲುಗಳ ಮೇಲೆ ಹತೋಟಿಯಿಡಬೇಕು. ನಮ್ಮ ದೇಶದ ಹೋಟಲುಗಳ ಸಂಖ್ಯೆಯನ್ನೂ ಮಿತಿಗೊಳಿಸಬೇಕು. ಈ ಕಾರ್ಯಕ್ರಮ ಕೈಗೊಂಡರೆ ಆಗ ಬಹುಶಃ ನಮ್ಮ ದೇಶದಲ್ಲಿ ಅನ್ನ ಕ್ಷಾಮ, ಹಾಲಿನ ಕ್ಷಾಮ ಅಷ್ಟಿರುವುದಿಲ್ಲ.

ಸುಮಾರು 1½ ವರ್ಷದ ಹಿಂದೆ ಸರ್ಕಾರದವರು ಒಂದು ಕಾನೂನು ಮಾಡಿದರು. ಅದು ದನಗಳ ಕುಯ್ಯುವುದನ್ನು ನಿಷೇಧಿಸುವುದಕ್ಕೆ ಸಂಬಂಧಪಟ್ಟ ಆಕ್ಟು. ಅದನ್ನು ಸರ್ಕಾರದವರು ಕೂಡಲೇ ಪುನಃ ಪರಿಶೀಲಿಸಬೇಕಾಗಿದೆ. ಈಗ ಉಪಯೋಗಕ್ಕೆ ಬಾರದಿರುವ ದನಗಳ ಸಂಖ್ಯೆ ಹೆಚ್ಚುತ್ತಿದೆ. ಅಲ್ಲದೆ ಗ್ರಾಮಾಂತರಗಳಲ್ಲಿರುವವರು ಈ ಉಪಯೋಗಕ್ಕೆ ಬಾರದೇ ಇರುವ ದನಗಳನ್ನು ಪಾಲಿಸುವುದಕ್ಕೆ ತಯಾರಾಗಿಲ್ಲ. ಅವನ್ನು ಪಾಲಿಸುವುದಕ್ಕೆ ಸರ್ಕಾರ ಒಂದು ವ್ಯವಸ್ಥೆ ಮಾಡಿದ ಹೊರತು, ದನಗಳ ಕುಯ್ಯುವುದನ್ನು ನಿಷೇಧಿಸುವುದಕ್ಕೆ ಸಂಬಂಧಪಟ್ಟ ಆಕ್ಟಿನಿಂದ ಈಗಿರುವಂತೆ ಏನೂ ಪ್ರಯೋಜನವಾಗಲಾರದು. ಇದರಿಂದ ದನಕರುಗಳಿಗೆ ಹೆಚ್ಚು ತೊಂದರೆಯೇ ಹೊರತು ರಕ್ಷಣೆ ಮಾಡಿದ ಹಾಗಾಗುವುದಿಲ್ಲ ಎಂದು ಸೂಚಿಸಲು ಇಷ್ಟಪಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು ಕುಡಿತದ ವಿಚಾರವನ್ನು ಪ್ರಸ್ತಾಪಮಾಡಿದರು. ಹೆಂಡ ಮತ್ತು ಬೀರ್— ಇವು ಆರೋಗ್ಯಕ್ಕೆ ಹಾನಿಕರವಲ್ಲವೆಂದು ಅನೇಕ ವಿಜ್ಞಾನ ಶಾಸ್ತ್ರಜ್ಞರೂ ಹೇಳಿದ್ದಾರೆ. ಅದನ್ನು ಪರಿಶೀಲಿಸಬೇಕು. ಸುಮ್ಮನೆ ಯಾವುದೋ ಕಾಲದಲ್ಲಾದ ಚಳುವಳಿಯನ್ನು ಮುಂದುವರಿಸಿಕೊಂಡು ಬಂದು ನಮಗೆ ಬರುವ ಆದಾಯವನ್ನು ಕಡಮೆ ಮಾಡಿಕೊಳ್ಳುವುದೂ ಅಲ್ಲದೆ ಅದನ್ನು ನಿರೋಧಿಸುವುದಕ್ಕೆ ಹೆಚ್ಚು ಖರ್ಚು ಮಾಡಬೇಕಾಗಿದೆ. ಇದರ ಪರಿಣಾಮ ಜನರ ಮೇಲೆ ಯಾವ ರೀತಿ ಆಗುತ್ತದೆ ಎಂದು ವಿಚಾರ ಮಾಡಬೇಕಾದ ಕಾಲ ಒದಗಿದೆ. ಈಗ ಸಾರಾಯಿ ತಯಾರುಮಾಡುತ್ತಿರುವುದು ಕೈಮೇಲೆ ಬಿದ್ದರೆ ಕೈ ಸುಡುತ್ತದೆ. ಅಷ್ಟು ತೀಕ್ಷಣವಾದ ರೂಪದಲ್ಲಿರುವುದನ್ನು ಜನ ಕುಡಿಯುತ್ತಿದ್ದಾರೆಂದು ಹೇಳುತ್ತಾರೆ. ಜನರ ಆರೋಗ್ಯಕ್ಕೆ ಅದು ಹಾನಿಯಲ್ಲವೇ ಎಂಬುದನ್ನು ಯೋಚನೆಮಾಡಬೇಕೆಂದು ಹೇಳುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಇದು ಯುಕ್ತವೇ, ಜನರಿಗೆ ಹಾನಿಯಿದೆಯೇ, ಪ್ರಯೋಜನವಿದೆಯೇ ಎಂದು ಸರ್ಕಾರವು ವಿಚಾರಮಾಡುವ ಕಾಲ ಒದಗಿದೆ. ಇದು ಅವರ ಕರ್ತವ್ಯವಾಗಿದೆ.

ಈಗ ನಮ್ಮ ಮುಂದಿರುವ ಬಡ್ಜೆಟ್ಟಿನಲ್ಲಿ ಒಂದು ಲೋಪವಿದೆ. ಯುದ್ಧಾನಂತರ ಯೋಜನೆಗಳಿಗಾಗಿ, ಪ್ರಾಜೆಕ್ಟುಗಳಿಗಾಗಿ, ರಸ್ತೆಗಳು ಮನೆಗಳು ಮುಂತಾದುವುಗಳಿಗಾಗಿ 5 ಲಕ್ಷ, 7 ಲಕ್ಷ ಮುಂತಾಗಿ ಅಂದಾಜಾಗಿರುವುದಕ್ಕೆ 25 ಸಾವಿರ, 50 ಸಾವಿರ ಹೀಗೆ ಕೊಡಲು ಸೂಚಿಸಿದ್ದಾರೆ. ಇದು ತಿರುಪತಿ ಕ್ಷೌರ ಮಾಡಿದ ಹಾಗಾಗಿದೆ. ಹೀಗೆ ಹಣ ಖರ್ಚು ಮಾಡುವುದರಿಂದ ಸರಿಯಾಗಿ ವಿನಿಯೋಗವಾಗುವುದಿಲ್ಲ. ಯಾವುದಾದರೂ ಮಾಡಬೇಕೆಂದಿದ್ದರೆ ಅವುಗಳಲ್ಲಿ ಕೆಲವನ್ನಾದರೂ ಚುನಾಯಿಸಿ ಪೂರ್ತಿಯಾಗಿ ಈ ವರ್ಷದ ಅವಧಿಯಲ್ಲೇ ಮಾಡಿ ಮುಗಿಸಬೇಕು. ಹಾಗಿಲ್ಲದೆ ಎಲ್ಲಾ ಕೆಲಸಗಳನ್ನೂ ಷುರುಮಾಡಿ ಅರ್ಧಂಬರ್ಧ ಮಾಡುವುದು ಉಚಿತವಲ್ಲ. ಜನರಿಗೂ ಅದರಿಂದ ಉಪಯೋಗವಿಲ್ಲ. ಸರ್ಕಾರದವರು ಇದನ್ನು ಮನಗಂಡು ಯೋಜನೆಗಳ ಕ್ರಮವನ್ನು ತಕ್ಕ ಹಾಗೆ ಬದಲಾಯಿಸುತ್ತಾರೆಂಬ ಭರವಸೆಯಿದೆ.

ಮತ್ತು ಮೈಸೂರು ಸಿಟಿಯಲ್ಲಿ ಟ್ರಸ್ಟ್ ಬೋರ್ಡು ಮತ್ತು ಮುನಿಸಿಪಾಲಿಟಿ—ಈ ಎರಡು ಸಂಸ್ಥೆಗಳೂ ಕಳೆದ 25 ವರ್ಷಗಳಿಂದ ಒಟ್ಟಿಗೆ ಕೆಲಸ ಮಾಡಿದೆ. ಹೀಗಿರುವಾಗ ಆ ಮುನಿಸಿಪಾಲಿಟಿಯನ್ನು ಹೇಳದೆ ಕೇಳದೆ, ಅದಕ್ಕೆ ತಿಳಿಸದೆ ಸರ್ಕಾರದವರು ತಾವಾಗಿಯೇ ಅದನ್ನು ಎರಡು ಭಾಗಮಾಡಿ ಟ್ರಸ್ಟ್ ಬೋರ್ಡಿಗೆ ಬೇರೆ ಛೇರ್ಮನ್ನರನ್ನು ನೇಮಕ ಮಾಡಿದರು. ಇದಾದ ಮೇಲೆ ಟ್ರಸ್ಟ್ ಬೋರ್ಡು ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಸುಮ್ಮನೆ ಸರ್ಕಾರದ ಮೇಲೆ ಹೆಚ್ಚಿನ ಖರ್ಚು ಬಿದ್ದ ಹಾಗಾಗಿದೆ. 25 ವರ್ಷಗಳಿಂದಲೂ ಕೆಲಸ ಮಾಡಿರುವಾಗ ಮುನಿಸಿಪಾಲಿಟಿಯವರನ್ನು ಕೇಳದೆ ಸರ್ಕಾರದವರು ಈ ರೀತಿ ಮಾಡಿದ್ದು ವಿಷಾದಕರವೆಂದು ಹೇಳದೆ ವಿಧಿಯಿಲ್ಲ. ಈಗ ಮೈಸೂರು ಮುನಿಸಿಪಾಲಿಟಿಯವರು ಒಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಪ್ರಜಾ ಸರ್ಕಾರದವರು ಖಂಡಿತವಾಗಿ ಅವರು ಸೂಚಿಸಿರುವಂತೆ ಜಾರಿಗೆ ಕೊಡುತ್ತಾರೆಂಬ ಭರವಸೆಯನ್ನಿಟ್ಟು ಈ ವಿಷಯವನ್ನು ಇಲ್ಲಿಗೇ ಬಿಡುತ್ತೇನೆ.

ಮೈಸೂರು ಸಂಸ್ಥಾನದಲ್ಲಿ ಗ್ರಾಮ ಬಡಾವಣೆಗಳಿಲ್ಲದೆ ಬಹಳ ತೊಂದರೆಯಾಗಿದೆ. ಗೃಹ ಸಚಿವರಾದ ಶ್ರೀಮಾನ್ ಮರಿಯಪ್ಪನವರು ಅರಸೀಕೆರೆ ಗ್ರಾಮಕ್ಕೆ 24-12-1947ರಲ್ಲಿ ಭೇಟಿ ಕೊಟ್ಟಾಗ ಅಲ್ಲಿ ಗಂಗ ಮತಸ್ಥರು ಈ ರೀತಿ ತೊಂದರೆಯಾಗಿದೆಯೆಂದು ಹೇಳಿಕೊಂಡರು. ಬಡವರಿಗೆ ತಮ್ಮ ಮನೆಗಳನ್ನು ಕಟ್ಟಿಕೊಳ್ಳಲು ಇರುವ ತೊಂದರೆ ಇನ್ನೂ ನಿವಾರಣೆಯಾಗಲಿಲ್ಲ. ಸರ್ಕಾರದವರನ್ನು ಕೇಳಿದರೆ, ಅದಕ್ಕೆ ಕಾನೂನಿದೆ, ಅದರ ಪ್ರಕಾರ ನಡೆಯಬೇಕು, ಸ್ವಲ್ಪ ನಿಧಾನವಾಗುತ್ತದೆ ಎಂದು ಹೇಳುತ್ತಾರೆ. ಇದು ದೊಡ್ಡ ಸಭೆ, ಇದಕ್ಕೆ ಸಾಕಾದಷ್ಟು ಅಧಿಕಾರ ಬಲವಿದೆ. ಈಗಿರುವ ಈ ಕಾನೂನಿನಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದನ್ನು ಬದಲಾವಣೆ ಮಾಡಿ ಈ ಅಧಿವೇಶನದಲ್ಲೇ ಈ ಸಭೆಯ ಮುಂದೆ ತಂದು ಇದರ ಒಪ್ಪಿಗೆ ಪಡೆದು ಬಡವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅನುಕೂಲ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಆಹಾರದ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಹೇಳಬೇಕಾಗಿದೆ. ಮಿಲ್ಲಿನ ಅಕ್ಕಿಯಿಂದ ಆರೋಗ್ಯ ಕೆಟ್ಟು ಅನಾರೋಗ್ಯವುಂಟಾಗುತ್ತದೆಂದು ಎಲ್ಲ ಶಾಸ್ತ್ರಜ್ಞರೂ ವಿಜ್ಞಾನಿಗಳೂ ಹೇಳುತ್ತಿದ್ದಾರೆ. ಕುಟ್ಟಿದ ಅಕ್ಕಿಯೇ ಶರೀರಕ್ಕೆ ಒಳ್ಳೆಯದೆಂದು ಅಭಿಪ್ರಾಯವಿದೆ. ಹೀಗಿದ್ದರೂ ಮಿಲ್ಲುಗಳ ಸಂಖ್ಯೆ ಬೇಕಾದಷ್ಟು ಬೆಳೆಯುತ್ತಿದೆ. ಈ ಮಿಲ್ಲುಗಳಿಂದ ಕಾಳಸಂತೆಯೂ ಹೆಚ್ಚಾಗಿದೆ. ಇದಕ್ಕೆ ನನ್ನ ಸೂಚನೆಯೇನೆಂದರೆ, ಈ ಮಿಲ್ಲುಗಳನ್ನು ನಿಲ್ಲಿಸಿ ಹಿಂದೆ ಜನರು ಹೇಗೆ ಕುಟ್ಟಿದ ಅಕ್ಕಿಯನ್ನು ಉಪಯೋಗಿಸುತ್ತಿದ್ದರೋ ಹಾಗೆ ಈಗಲೂ ಉಪಯೋಗಿಸಿದರೆ, ಜನರ ಆರೋಗ್ಯ ಉತ್ತಮಗೊಳ್ಳುವುದಲ್ಲದೆ ಬಡಜನರಿಗೆ ಕೂಲಿಯೂ ಸಿಕ್ಕಿ ಅವರು ಜೀವನ ಮಾಡಿಕೊಳ್ಳಬಹುದು.

ಈಗ ಡಿಪೋ ಚಾರ್ಜು ಮತ್ತು ದ್ವಿದಳ ಧಾನ್ಯಗಳ ಮೇಲೆ ಹಾಕಬೇಕೆಂದಿರುವ ತೆರಿಗೆಯನ್ನು ಖಂಡಿತವಾಗಿ ಸರ್ಕಾರದವರು ವಾಪಸ್ಸು ತೆಗೆದುಕೊಳ್ಳಬೇಕು. ಇದರಿಂದ ಬಡವರ ಮೇಲೆ ಹೊರೆ ಬೀಳುತ್ತದೆ. ಸಾಮಾನ್ಯವಾಗಿ ಶ್ರೀಮಂತರು ಬತ್ತ, ರಾಗಿ ಬೆಳೆಯುತ್ತಾರೆ. ಅವರೇನೂ ಈ ತೆರಿಗೆಯನ್ನು ಕೊಡಬೇಕಾಗುವುದಿಲ್ಲ. ಆಹಾರ ದವಸವನ್ನು ಕೊಳ್ಳುವುದಕ್ಕೆ ಹೋಗತಕ್ಕ ಬಡಜನರ ಮೇಲೆ ಇದು ಬೀಳುತ್ತದೆ. ಆದುದರಿಂದ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಈಗ ನಾನು ಕೊಟ್ಟಿರುವ ಸಲಹೆಗಳನ್ನು ಖಂಡಿತವಾಗಿ ಸರ್ಕಾರದವರು ಪರಿಶೀಲಿಸಿ, ಇದಕ್ಕೆ ಗಮನ ಕೊಟ್ಟು, ಜನರ ಅಭಿಪ್ರಾಯಗಳು ಹೇಗೆ ಪ್ರತಿಬಿಂಬಿತವಾಗಿವೆಯೆಂಬುದನ್ನು ನೋಡಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುವರೆಂದು ನಂಬಿ ಈ ಬಜೆಟ್ಟನ್ನು ಅನುಮೋದಿಸುತ್ತೇನೆ.

Sri H. SIDDAVEERAPPA (Chitaldrug District—General).—Mr. Deputy Speaker, Sir,............

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—I rise to a point of order, Sir. ಸ್ಪೀಕರ್ ಆಗಲೀ, ಡೆಪ್ಯುಟಿ ಸ್ಪೀಕರ್ ಆಗಲೀ ಛೇರ್ಮನ್‌ರಾಗಲೀ ಯಾರೇ ಆಗಲೀ ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಸಭೆಯ ಕಾರ್ಯಕಲಾಪಗಳನ್ನು ನಡೆಸುತ್ತಿರುವಾಗ ಅಧ್ಯಕ್ಷರನ್ನು ಯಾವ ರೀತಿ ಸಂಬೋಧನೆ ಮಾಡಬೇಕೋ ಅದೇ ರೀತಿ ಮಾಡಬೇಕು.........

Sri H. SIDDAVEERAPPA.—I hope the time taken by him will be excluded in allowing me time to speak on the Budget:

ಶ್ರೀ ಎಂ. ಮಾದಯ್ಯನವರು.—ನಿಬಂಧನೆಗಳಲ್ಲಿ:

> "All references made to the Speaker should be made to the other person presiding over the meetings"

ಎಂದಿದೆ. "All references" ಎಂದರೆ, ನನ್ನ ಅಭಿಪ್ರಾಯದಲ್ಲಿ ಅಧ್ಯಕ್ಷರನ್ನು 'Mr. Speaker, Sir,' ಎಂದು ಸಂಬೋಧಿಸಿದರೆ ಇತರರನ್ನೂ ಹಾಗೆಯೇ ಸಂಬೋಧನೆ ಮಾಡಬೇಕೆಂದು ಕಾಣುತ್ತದೆ. ಇದರ ಮೇಲೆ ರೂಲಿಂಗ್ ಕೊಡಬೇಕು.

Mr. DEPUTY SPEAKER.—There is no point of order. Mr. Siddaveerappa may speak.

Sri H. SIDDAVEERAPPA.—Sir, I wish to associate myself with the chorus of tributes paid to the Finance Member for having placed a surplus Budget before this Hon'ble House. I welcome the proposals contained therein.

At the very outset, Sir, I wish to speak only one or two sentences with regard to the financial integration and refer to the rather uncharitable remark made by Sri B. Hutche Gowda with regard to the alleged part said to have been played by our representatives at the Indian Parliament. Sir, I do not know how far the Hon'ble Member has studied the Report of the Krishnamachari Committee, but I may say that our Finance Minister, with the help of his band of workers, has secured the maximum good for the State and if Mr. Hutche Gowda were to closely study all the conditions and terms that have been secured by our State and takes an impartial view, I think instead of criticising, the Finance Member will have to be congratulated. Of course, the Hon'ble Member Mr. Imam referred in his speech to the financial integration and said 'What will be our fate after ten years?' If he were to remember for a moment that we are a part, an integral part of the Indian Union and if he were to remember that no part of the Union will be allowed to suffer financially, he cannot possibly have any objection or any misgivings with regard to that. After all, Sir, the States are like the several parts of the human body, the Union being at the head. If any part of the body is going to suffer, the Union is always there to step in and render as much help as possible. And therefore viewed from any point of view, the financial integration will have to be welcomed rather than criticised. (Hear, hear).

Sir, if we are to peruse the Budget Memorandum, it will be seen from Annexure 2 and Annexure 1, and if we study the Budgets from the year 1938-39 up to 1950-51, it will be seen, that there is a gradual progress both with regard to income and expenditure. Starting from the year 1938-39 when our income was 398·28 lakhs, our income now has risen to 1,169·88 lakhs. Likewise, in 1938-39 our expenditure was 379·49 lakhs and now it is

1,166'82 lakhs. Therefore it will be seen that the expenditure also has kept pace with the increase in the revenue.

It has been said, Sir, that the recommendations of the Economy Officer have been kept in view while preparing this Budget. If you see the total amount spent only for the services, it is Rs. 3,24,75,379. Therefore it strikes one that Government at some stage will have to try to see that maximum retrenchment effected. I am sure that Government have kept that in view as has been elicited in reply to several interpellations in that connection and will apply their mind to see that as much economy is introduced consistent with efficiency.

Sir, the time at my disposal is very short so that it is not possible to substantiate any point I may place before this House. I would like to submit a few suggestions for the consideration of the Government. The first and foremost thing that strikes one if he studies the Budget is that there is too much emphasis on industrial side and very little emphasis on the side of agriculture. I am not one of those who are against starting any industries in the State but I am one of those who believe that first things must be served first. We have heard it said that Mysore is foremost among the industrial countries in India and I welcome it. But if we see the turnover we find that the figures are rather not so very encouraging. By the end of 1951 Government are spending over Rs. 4 crores for Bhadravati Iron, Steel and Cement Works. It is said that they are going to start a Fertiliser Factory in Bhadravati. I think the Hon'ble Member Sri Mascarenhas referred to it the other day and said that before we start these heavy industries we must be sure of our own ground. And as Sir M. Visvesvaraya himself said last year while opening the Industrial Conference that in a country like India where 70 per cent of the population are illiterate and ill-fed and very poor, we will have to stress very much upon small scale industries rather than big industries. With regard to fertilizers the Hon'ble Minister for Finance is well aware that the Government of India are going to start a factory at Singri in Bihar which will come into working order by the end of 1951. Its annual production is said to be 350,000 tons whereas our total requirement in the country is only 5 lakhs tons. Therefore my humble submission is that Government may consider this matter and see how far this artificial fertilizer factory will have to be pushed through.

Sri H. C. DASAPPA (Minister for Finance and Industries).—I am afraid the Hon'ble Member's figures are not quite correct. So far as the Fertilizers and the capacity of the Singri scheme are concerned I have got figures.

Sri H. SIDDAVEERAPPA.—I have got figures.

Then the next point I have got to say with regard to the artificial fertilizer factory is this. We know what Professor Einstein in one of his interviews with Dr. Amarnath Jha, who was once the Vice-Chancellor of the Benares University, said.—

> "Prof. Einstein, who evinced much interest in India asked Dr. Jha to convey to the people of India that though by using huge tractors, machinery and chemical fertilizers they could force up production for a time, the eventual result of it all was likely to be the complete loss of the fertility of the soil, resulting in irreparable injury to the country."

Therefore some people who sincerely believe, based on scientific data, say that artificial fertilizers may, in the long run, prove more harmful than beneficial. Then I may by passing reference say that I have got a copy of the Press Information Bureau, published by the Government of India last month, wherein they say :

> "The present supplies of fertilizers in India including the quantity imported provide approximately 50,000 tons of Nitrogen, whereas nearly 2 million tons of this fertilizer are now wasted in urban and rural areas due to improper conservation and incomplete utilization of human and cattle wastes. As such, the success of the programme of intensive cultivation depends essentially on the proper conservation and utilization of this very large quantity of refuse material. Town waste must be utilised with the help f necessary l gislat on, as has been done in the case of East Punjab. Cattle urine must be preserved... ..."

Therefore my humble suggestion is that if we concentrate upon this compost scheme perhaps you will be able to get

as much Nitrogen as is necessary to supply food to our soil.

Then, Sir, with regard to agriculture and food it has been said that our country has been deficit only to the tune of 7 per cent. It is one of the tragedies of our times that although two-thirds of the population not only in our country but also in the world have been engaged in agriculture, still two-thirds of the population are underfed. It is not far difficult to seek the reason. It will be seen that before the war when the country was in the grip of economic depression nobody ever cared to look at the agriculturist, when corn was sold at Rs. 2 per palla and when the price was not sufficient to meet the demands of cultivation. What has happened? Everybody is now thinking of the agriculturist because there is the pinch, because there is the demand to get food sufficient to meet our requirements. It will also be seen that although the "Grow More Food" campaign is in progress in this country from the year 1943, we are only scratching on the surface. We have not been able to make any headway or progress in this direction. The reason is not far to seek. Now the agriculturist is looked after or even his presence is being felt because there is so much demand. What is required is the intention or policy. I may here quote the instance of Great Britain. England found it difficult after the war to depend entirely upon other countries for food requirements. They passed an Act called the Agricultural Act in Britain wherein for a minimum period of 25 years they guaranteed the price to be given to agriculturists. If for any period the prices went beyond that level Government would step in and purchase. I think the Government may profit by that experience and it is also said that in Great Britain, after all this ecouragement was given, the production went up by 70 per cent. I am really thankful to the Government for introducing here a co-operative scheme for farming as contained in the Gazette dated 16th March 1950, wherein the Government have thought of starting several co-operative farming societies. I may also make a reference here to Ganga Kagal scheme because that is one of the best experiments made in India on a large scale where 43,750 acres have been brought under plough. I wish the Hon'ble Minister for Food will bear it mind and see that the same progress as the scheme associated with the name of Ganga Kagal is maintained here. That scheme was started on 17th December 1947 and within 10th April 1948 they ploughed and harvested 9,839 acres of virgin soil and by June 1949, 22,000 acres of virgin soil was ploughed and harvested. What distresses me is that the provision made in the Budget, *viz.*, Rs. 79,000 for each unit of the scheme that has been started by our Government is very inadequate. I think the Government will have to take more courage and see that as much money as is needed is provided for this scheme because we are all aware that the Government of India have said that they are not going to import any corn after 1951.

I hope, the State is already sufficiently instructed to see that as much as possible self-sufficiency is achieved by the end of 1951. In view of this fact, it is absolutely essential that agriculture is entrusted solely to one Minister who should be made responsible for bringing about self-sufficiency by the end of 1951. And therefore, it can be seen that if we are to become self-sufficient, great emphasis must be laid on agriculture and appreciable progress is made in that direction. I may also here mention that as has been perhaps brought to the notice of the Agriculture Minister himself, the iron implements that are supplied to the agriculturists are wholly inadequate. I have got certain figures, but as the time at my disposal is very short, I do not want to refer to them. I would request the Government most earnestly to see that wherever agriculturists are badly in need of implements, they are supplied with the necessary implements.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ನಮ್ಮ ಮುಂದೆ ಆಶಾದಾಯಕವಾದ

ಬಡ್ಜೆಟ್ಟನ್ನು ಇಟ್ಟಿದ್ದಾರೆ. ಅದಕ್ಕೋಸ್ಕರವಾಗಿ ನಾನು ಮೊಟ್ಟಮೊದಲನೆಯದಾಗಿ ಅವರನ್ನು ವಂದಿಸಬೇಕಾಗಿದೆ. ಹಿಂದೆ ಮಂತ್ರಿಗಳಾಗಿದ್ದ ಮಾನ್ಯ ಜನಾಬ್ ಇಮಾಂರವರು ಭಾಷಣ ಮಾಡುತ್ತಿದ್ದ ಕಾಲದಲ್ಲಿ ನಾನು ಬಹಳ ಕುತೂಹಲದಿಂದ ಮತ್ತು ಹೆಚ್ಚಿನ ಕಾತುರತೆಯಿಂದ ಅವರ ಭಾಷಣವನ್ನು ಕೇಳುತ್ತಿದ್ದೆನು. ಕಾರಣವೇನೆಂದರೆ, ಅವರು ಹಿಂದೆ ಮಂತ್ರಿಗಳಾಗಿದ್ದರು, ಅವರು ಹೆಚ್ಚಿನ ವಿಷಯಗಳನ್ನೇನಾದರೂ ತಿಳಿಸಬಹುದು, ಅವರು ಬಡ್ಜೆಟ್ಟನ್ನು ಓದಿ ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲರು ಎಂಬುದಾಗಿ ಭಾವಿಸಿದ್ದೆ. ಆದರೆ ನಾನು ಎಷ್ಟು ಕಾತುರತೆಯಿಂದ ಮತ್ತು ಆಶಾದಾಯಕ ಭಾವನೆಯಿಂದ ನಿರೀಕ್ಷಿಸಿದ್ದೆನೋ, ಅಷ್ಟು ಮಟ್ಟಕ್ಕೆ ಅದು ಬರಲಿಲ್ಲವೆಂದು ಹೇಳಬೇಕಾಗಿದೆ. ಆದರೆ ಶ್ರೀ ಎ. ಭೀಮಪ್ಪನಾಯಕರೇ ಈ ಬಗ್ಗೆ ಬೇಕಾದಷ್ಟು ಸಮರ್ಪಕವಾದ ಉತ್ತರಗಳನ್ನು ಕೊಟ್ಟಿರುವುದರಿಂದ ನಾನು ಈ ಬಗ್ಗೆ ಹೆಚ್ಚು ಹೇಳಬೇಕಾದುದಿಲ್ಲ. ಆದ್ದರಿಂದ ನಾನಿದನ್ನು ಇಷ್ಟಕ್ಕೇ ಬಿಟ್ಟುಬಿಡುತ್ತೇನೆ.

ನಾನೀದಿವಸ ಹೆಚ್ಚಾಗಿ ಮಾತನಾಡಬೇಕಾಗಿರುವುದು ಸ್ಥಳೀಯ ಪ್ರಜಾಧಿಕಾರ ವಿಷಯವಾಗಿ. ಈ ವರ್ಷ ಈ ಬಾಬಿಗೆ ಸರ್ಕಾರದವರು ಒದಗಿಸಿರುವುದು 40 ಲಕ್ಷ ರೂಪಾಯಿಗಳೆಂದು ತೋರುತ್ತಿದೆ. ಆದರೆ ಇದು ಬಹಳ ಕಡಿಮೆಯಾಯಿತೆಂದು ಹೇಳುತ್ತೇನೆ. ಹೀಗೆ ಏತಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆಂದರೆ ಈ ಮೊಬಲಗನ್ನು ಎಲ್ಲ ಮುನಿಸಿಪಾಲಿಟಿಗೂ ಹಂಚಿದರೆ ಕೆಲವಕ್ಕೆ ಏನೂ ದೊರೆಯದೇ ಹೋಗಬಹುದು. ಅಥವಾ ದೊರೆತರೂ ಅದು ತೀರಾ ಕಡಿಮೆಯಾಗಿರುತ್ತೆ. ಒಂದೊಂದು ಸಂದರ್ಭದಲ್ಲಿ ದೊಡ್ಡ ದೊಡ್ಡ ಮುನಿಸಿಪಾಲಿಟಿಯವರು ಅಂದರೆ ಶ್ರೀ ಭೀಮಪ್ಪ ನಾಯಕರಂಥವರು ಬಂದು ಮೊದಲು ಅವರೇ ಆ 4–5 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಸಿಕೊಂಡು ಬಿಟ್ಟರೆ ಇನ್ನುಳಿದ ಸಣ್ಣಪುಟ್ಟ ಮುನಿಸಿಪಾಲಿಟಿಗಳವರ ಗತಿಯೇನು? ಅವರಿಗೆಲ್ಲಾ ಹೇಗೆ ಹಣವನ್ನೊದಗಿಸಲಿಕ್ಕೆ ಸಾಧ್ಯವಾಗುತ್ತೆ? ಆದಕಾರಣ ಮುನಿಸಿಪಾಲಿಟಿಗಳಲ್ಲಿ ನೀರು ಸರಬರಾಯಿಗಾದರೂ ಹೆಚ್ಚು ಹಣ ಒದಗಿಸಬೇಕೆಂದು ಹೇಳುತ್ತೇನೆ.

ಇವರಲ್ಲಿ ಇನ್ನೊಂದು ವಿಷಯವಾಗಿದೆ. ಕೆಲವು ಮುನಿಸಿಪಾಲಿಟಿಗಳಿರುವ ಕಡೆ ನಾಟಕ ಮತ್ತು ಸಿನಿಮಾ ಇತ್ಯಾದಿಗಳಿಗೆ ಎಂಟರ್‌ಟೈನ್‌ಮೆಂಟ್ ಹಾಕಿದ್ದಾರೆ. ಹಾಗೆ ಮಾಡುತ್ತ ಕೆಲವು ಕಡೆ ಅಂಥಾ ಮುನಿಸಿಪಾಲಿಟಿಯವರ ಖರ್ಚುಜಾತ ಉಳಿದಿದ್ದನ್ನು ಆಯಾಯ ಮುನಿಸಿಪಾಲಿಟಿಗಳಿಗೇ ಕೊಡುತ್ತಿದ್ದಾರೆ. ಅದರಂತೆ ನಮ್ಮಲ್ಲೂ ಆ ತೆರಿಗೆ ಹಾಕಿದ್ದಾರೆ. ಆದರೆ ನಮಗೆ ಅದರಲ್ಲಿ ಏನನ್ನೂ ಕೊಡುತ್ತಿಲ್ಲ. ಕೆಲವಕ್ಕೆ ಕೊಡುತ್ತಿದ್ದಾರೆ, ಕೆಲವಕ್ಕೆ ಮಾತ್ರ ಕೊಡುತ್ತಿಲ್ಲ. ಇದಕ್ಕೆ ಕಾರಣವೇನೆಂಬುದು ಗೊತ್ತಾಗಲಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ತಾವು ತಿಳಿಸುತ್ತಿರುವುದು ಯಾವ ಟ್ಯಾಕ್ಸ್ ವಿಚಾರ? ಹಾಗೆ ನಾವು ಕೊಡದೆ ಇರುವುದು ಯಾರಿಗೆ?

ಶ್ರೀ ಕೆ. ಎಚ್. ಮುದಿಯಪ್ಪನವರು.—ನಾನು ತಿಳಿಸಿದ್ದು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸಿನ ವಿಚಾರ. ನಮ್ಮ ಮುನಿಸಿಪಾಲಿಟಿಗೆ ಕೊಟ್ಟಿಲ್ಲ. ಹಿಂದಿದ್ದ ಮಂತ್ರಿಮಂಡಲದ ಕಾಲದಲ್ಲೇ ಈ ಮುನಿಸಿಪಾಲಿಟಿಗಳ ಮೇಲೆ ಮುನಿಸಿಪಲ್ ಹೈಸ್ಕೂಲುಗಳ ಭಾರವನ್ನೂ ಹಾಕಿಬಿಟ್ಟರು. ಆದರೆ ಆ ಮುನಿಸಿಪಾಲಿಟಿಗಳಿಗೆ ಏನು ಉತ್ಪತ್ತಿ ಇರುತ್ತೆಂಬುದು ಎಲ್ಲರಿಗೂ ತಿಳಿದಿರತಕ್ಕ ವಿಚಾರವೇ ಆಗಿದೆ. ಜನಗಳೇನೋ ಒಂದು ಉತ್ಸಾಹ ಭಾವನೆಯಿಂದ ಸ್ಕೂಲುಗಳನ್ನು ಕೇಳಿದ್ದಾರೆ. ಆದರೆ ನಾವೀಗ ಆ ಹೈಸ್ಕೂಲುಗಳನ್ನು ನಡೆಸಲು ಬರತಕ್ಕ 10 ಸಾವಿರ ರೂಪಾಯಿಗಳನ್ನೂ ಅದಕ್ಕೆ ಕೊಡಬೇಕಾಗಿದೆ. ಇನ್ನು ಅಲ್ಲಿ ಉತ್ಪತ್ತಿಯಾಗುವ ಅಷ್ಟಿಷ್ಟು ಹಣವು ಆ ಪಾಠಶಾಲೆಯ ಆಯಾಯ ತಿಂಗಳಿನ ಸಂಬಳ ಸಾರಿಗೆಗೆ ಸಾಕಾಗುತ್ತಿಲ್ಲ. ಈ ಬಗ್ಗೆ ಮುಂದಕ್ಕೆ ನಾವೇನಾದರೂ ಸಂಬಂಧಪಟ್ಟ ಮಂತ್ರಿಗಳ ಬಳಿಗೆ ಹೋಗಿ ಕೇಳಿದರೆ ಅವರು ಬಡ್ಜೆಟ್ಟನಲ್ಲಿ ಹೆಚ್ಚಿಗೆ ಒದಗಿಸಿಲ್ಲ, ನಾವೇನು ಮಾಡುವುದಕ್ಕೂ ಆಗುವುದಿಲ್ಲ, ಇರುವುದರಲ್ಲಿ ಸರಿಪಡಿಸಿಕೊಳ್ಳಬೇಕೆಂದು ಹೇಳಿಬಿಡುತ್ತಾರೆ. ಆದ್ದರಿಂದ ಸರ್ಕಾರದವರು ಇದನ್ನು ಈಗಲೇ ದಯವಿಟ್ಟು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಏನೋ ಆಶೆಪಟ್ಟು ನಮ್ಮ ಊರಿಗೂ ಒಂದು ಹೈಸ್ಕೂಲು ಬಂದರೆ ಅನುಕೂಲವಾದೀತೆಂದು ಈ ಮುನಿಸಿಪಲ್ ಹೈಸ್ಕೂಲು ಬೇಕೆಂದು ಕೇಳಿದ್ದವರ ಪೈಕಿ ನಾನೂ ಒಬ್ಬ. ಆದರೆ ಈಗ ಅದರಿಂದಾಗುತ್ತಿರುವ ವ್ಯಥೆಯನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈ ವಿದ್ಯಾಭ್ಯಾಸದ ಬಾಬಿಗಾಗಿ 2 ಕೋಟಿ 83 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ಈ ಸರ್ಕಾರಕ್ಕೆ, ಇನ್ನು ಈ ಮುನಿಸಿಪಲ್ ಹೈಸ್ಕೂಲುಗಳ ಬಗ್ಗೆ ಆಗುತ್ತಿರುವ 5 ಲಕ್ಷ ರೂಪಾಯಿಗಳನ್ನು ಇಂಥ ಸಣ್ಣ ಪುಟ್ಟ ಮುನಿಸಿಪಾಲಿಟಿಗಳ ಮೇಲೆ ಹೇರುವುದನ್ನು ಸಂಪೂರ್ಣವಾಗಿ ತಪ್ಪಿಸಿ ಅದನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ನಾನು ತಮಗೆ ಒಂದು ಸಲಹೆ ನೀಡಲಿಚ್ಛಿಸುತ್ತೇನೆ.

ಇದೇ ಸಂದರ್ಭದಲ್ಲಿ ನಾನು ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಹೈಸ್ಕೂಲುಗಳಿಗೂ ಪಟ್ಟಣಗಳಲ್ಲಿರತಕ್ಕ ಹೈಸ್ಕೂಲುಗಳಿಗೂ, ಅಂದರೆ ಸರ್ಕಾರಿ ಹೈಸ್ಕೂಲುಗಳಿಗೂ ಬಹಳ ವ್ಯತ್ಯಾಸವಿದೆ. ಸರ್ಕಾರಿ ಹೈಸ್ಕೂಲುಗಳಿರುವ ಕಡೆಯಲ್ಲಿ ಜನರು ಕೇವಲ ಒಂದು ಮುನಿಸಿಪಲ್ ಟ್ಯಾಕ್ಸ್ ಕೊಡುವುದರಿಂದಲೇ ವಿದ್ಯಾಸೌಕರ್ಯಗಳನ್ನೆಲ್ಲಾ ಪಡೆಯುತ್ತಿದ್ದಾರೆ. ಆದರೆ ನಮ್ಮ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಮುನಿಸಿಪಲ್ ಹೈಸ್ಕೂಲುಗಳನ್ನಿಟ್ಟುಕೊಂಡಿರತಕ್ಕವರು ಇತ್ತ ಕಡೆ ಮುನಿಸಿಪಾಲಿಟಿಗೆ ತೆರಿಗೆಯನ್ನು ಕೊಟ್ಟು, ಅತ್ತ ಎಜುಕೇಷನ್ ಸೆಸ್ ಸಹ ಕೊಡುತ್ತಿದ್ದಾರೆ. ಇದನ್ನೆಲ್ಲಾ ಲೆಕ್ಕ ಹಾಕಿದರೆ ನಾವು ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ದುಡ್ಡು ಕೊಟ್ಟು ಕೊಂಡುಕೊಂಡಹಾಗೆ ಆಗಿರುತ್ತದೆ. ಇದನ್ನೂ ಸಹ ಸರ್ಕಾರದವರು ಮುಖ್ಯವಾಗಿ ತಮ್ಮ ಗಮನದಲ್ಲಿಡಬೇಕಾಗಿದೆ. ಇನ್ನು ಈ ಕೆಲವು ಮುನಿಸಿಪಲ್ ಹೈಸ್ಕೂಲುಗಳಲ್ಲಿ ಸರಿಯಾಗಿ ಹೆಡ್ಮಾಸ್ಟರೇ ಇರುವುದಿಲ್ಲ. ಕೆಲವು ಕಡೆ ಶಾಲಾ ಸಿಬ್ಬಂದಿಗೆ ಸಕಾಲಕ್ಕೆ ಸಂಬಳವನ್ನೂ ಸಹ ಕೊಡುತ್ತಿಲ್ಲ. ಈ ಎಲ್ಲ ತೊಂದರೆಗಳಿರುವುದರಿಂದ ತಾವು ಇಷ್ಟು ಅಪಾರವಾದ ಹಣವನ್ನು ಈ ವಿದ್ಯಾ ಬಾಬಿಗಾಗಿ ಖರ್ಚು ಮಾಡಲು ಸಿದ್ಧರಾಗಿರುವಾಗ ಈ ಎಲ್ಲಾ ಖಾಸಗೀ ಹೈಸ್ಕೂಲುಗಳನ್ನೂ ತಮ್ಮ ಆಡಳಿತಕ್ಕೇ ತೆಗೆದುಕೊಂಡು ನಮಗೆ ಅನುಕೂಲಮಾಡಬೇಕೆಂದೂ, ತನ್ಮೂಲಕ ಮುನಿಸಿಪಾಲಿಟಿಗಳಿಗೆ ಬರತಕ್ಕ ಎಲ್ಲಾ ಉತ್ಪತ್ತಿಯನ್ನೂ ಆಯಾಯ ಮುನಿಸಿಪಾಲಿಟಿಗಳಿಗೇ ಬಿಟ್ಟುಕೊಟ್ಟು ಅವರ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯುವಂತೆ ಮಾಡಬೇಕೆಂದೂ ತಿಳಿಸುತ್ತೇನೆ.

ಗ್ರಾಮಾಭಿವೃದ್ಧಿ ಬಾಬಿಗಾಗಿ ಮಾನ್ಯ ಮಂತ್ರಿಗಳು ಎಷ್ಟು ಹಣ ಒದಗಿಸಿದ್ದಾರೆಂದು ನಿನ್ನೆ ದಿವಸ ನೋಡಿದಾಗ ನನಗೆ ನಿಜವಾಗಿಯೂ ಬಹಳ ನಿರಾಶೆಯನ್ನುಂಟುಮಾಡಿತು. ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ

ಬಾವಿಗಳಿಗಾಗಿ ಕೇವಲ ನಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ! ಹೋದ ವರ್ಷ ಎಷ್ಟು ಒದಗಿಸಿದ್ದರೋ ಈ ಸಾರಿಯೂ ಅಷ್ಟೇ ಒದಗಿಸಿದ್ದಾರೆ. ಇದನ್ನು 9 ಡಿಸ್ಟ್ರಿಕ್ಟ್‌ಗಳಲ್ಲೂ ಹಂಚಿದರೆ ಒಂದೊಂದಕ್ಕೆ 25–30 ಸಾವಿರ ರೂಪಾಯಿಗಳಾಗಬಹುದು. ಅಂದರೆ ತಾಲ್ಲೂಕುವಾರು 5–6 ಸಾವಿರ ರೂಪಾಯಿಗಳಾಗಬಹುದು. ಒಂದು ತಾಲ್ಲೂಕಿಗೆಲ್ಲಾ ಐದು ಸಾವಿರ ರೂಪಾಯಿಗಳಾದರೆ ಇದರಿಂದ ಎಷ್ಟು ಬಾವಿಗಳನ್ನು ಮಾಡಿಸಬಹುದೆಂಬುದನ್ನು ಸರ್ಕಾರದವರೇ ಯೋಚನೆ ಮಾಡಬಹುದು. ಸಂಚಾರ ಸೌಕರ್ಯಗಳಿಗಾಗಿ ಸುಮಾರು 16–20 ಲಕ್ಷ ರೂಪಾಯಿಗಳನ್ನು ಕೊಡುತ್ತಾ ಬಂದಿದ್ದೀರಿ. ಆದರೆ ಕುಡಿಯುವ ನೀರಿಗಾಗಿ ಇಷ್ಟೊಂದು ಕಡಿಮೆ ಒದಗಿಸಿರುವುದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. 'ಕುಡಿಯುವುದಕ್ಕೆ ನೀರು ಕೊಡದ ಸರ್ಕಾರ ಎಂಥ ಸರ್ಕಾರ' ಎಂದು ನೀವೇ ಹಿಂದೆ ಹೇಳುತ್ತಿದ್ದಿರಿ. ಇಂದು ವಾಸ್ತವವಾಗಿ ನೀವು ಕುಡಿಯುವ ನೀರಿಗೆ ಏರ್ಪಾಡು ಮಾಡದಿರುವಾಗ ಇದೂ ಅಂಥಾ ಸರ್ಕಾರವೇ ಎಂದು ಹೇಳಬೇಕಾಗಿದೆ. ಆದ್ದರಿಂದ ಸರ್ಕಾರದವರು ಈ ಸಂಚಾರ ಸೌಕರ್ಯಗಳಿಗಾಗಿ ಕೊಟ್ಟಿರುವುದನ್ನಾದರೂ ಕುಡಿಯುವ ನೀರಿನ ಬಾವಿಗಳಿಗಾಗಿ ಕೊಡಬೇಕೆಂದು ಸೂಚನೆ ಮಾಡುತ್ತೇನೆ.

ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು) —ತಾವು ದಯವಿಟ್ಟು ಬಡ್ಜೆಟ್ಟನ್ನು ಸರಿಯಾಗಿ ತಿರುಪಿ ನೋಡಿ. ಇದಕ್ಕಾಗಿ ಏಳು ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಹೋದ ವರ್ಷ ಏಳು ಲಕ್ಷ, ಈ ವರ್ಷ ಏಳು ಲಕ್ಷ—ಈ ರೀತಿ ಕೊಡುತ್ತಿದ್ದೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ನಾನು ಗ್ರಾಮಾಭಿವೃದ್ಧಿ ಕಮಿಟಿಯ ಛೇರ್ಮನ್ನನಾಗಿದ್ದು ಖುದ್ದು ಅನುಭವದಿಂದ ಹೇಳುತ್ತಿದ್ದೇನೆ. ತಾವು ಒದಗಿಸಿದ್ದ ಹಣವನ್ನು ನಾನಾ ತಾಲ್ಲೂಕುಗಳಿಗೆ ಹಂಚಿದ್ದರಲ್ಲಿ ನಮ್ಮ ಕಡೂರು ತಾಲ್ಲೂಕಿಗೆ 4½ ಸಾವಿರ ರೂಪಾಯಿಗಳು ಬಂತು. ಈ ಹಣ ಎಷ್ಟು ಮಾತ್ರವೂ ಸಾಲದಾಗಿದ್ದರೂ, ಸರ್ಕಾರದವರು ಮುಂದೆ ಅವಶ್ಯಕತೆ ತೋರಿಸಿದರೆ ಹೆಚ್ಚಿಗೆ ಕೊಡುತ್ತಾರೆಂದು ತಿಳಿದು 11½ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬಾವಿ ತೆಗೆಸಿದೆವು. ಆದರೆ ಇ ದಿನವರೆಗೂ ಸರ್ಕಾರದಿಂದ ಹೆಚ್ಚಿಗೆ ಹಣ ಬರಲಿಲ್ಲ. ಕಂಟ್ರಾಕ್ಟುದಾರನಿಗೆ 4,000 ರೂಪಾಯಿಗಳನ್ನು ಸದ್ಯಕ್ಕೆ ಪಾವತಿಮಾಡಿ ಬಾಕಿ ಹಣವನ್ನು ಮುಂದಿನ ವರ್ಷ ಬರುವ ಹಣದಿಂದ ಕೊಡಬೇಕಾಗಿದೆ. ಸರ್ಕಾರದವರು ಗ್ರಾಮಾಭಿವೃದ್ಧಿ ಯೋಜನೆಯೊಂದನ್ನು ಹೊಸದಾಗಿ ಜಾರಿಗೆ ತಂದು ನಾವು ಕೆಲಸ ಮಾಡದಿರುವುದನ್ನು, ಕೆಲಸ ಮಾಡುವುದಕ್ಕೆ ಹಣ ಕೊಟ್ಟರೇ ವಿನಾ, ಇಂಥಾ ಅವಶ್ಯಕವಾದ ಕೆಲಸಕ್ಕೆ ಏನೂ ಹೆಚ್ಚಿಗೆ ಕೊಡಲಿಲ್ಲ. ಆದ್ದರಿಂದ ಸಂಚಾರ ಸೌಕರ್ಯದ ಕೆಲಸ ಸದ್ಯಕ್ಕೆ ಉಳಿದರೆ ಉಳಿಯಲಿ, ದಯಮಾಡಿ ಕುಡಿಯುವ ನೀರಿನ ಬಾವಿಗಳಿಗಾಗಿ ಹೆಚ್ಚಿಗೆ ಹಣ ಒದಗಿಸಿ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ ನಾನು ಸ್ವಲ್ಪಮಟ್ಟಿಗೆ ಹೆಚ್ಚಿಗೆ ಮಾತನಾಡಬೇಕಾಗಿದೆ. ವರ್ಷವರ್ಷ ತಾವು 200 ಪ್ರೈಮರಿ ಸ್ಕೂಲುಗಳನ್ನೂ, ಕೊನೆಯಪಕ್ಷ 100 ಮಿಡ್ಲ್ ಸ್ಕೂಲುಗಳನ್ನೂ ಮತ್ತು 15–20 ಹೈಸ್ಕೂಲುಗಳನ್ನೂ ಕೊಡಬೇಕೆಂದು ಒಂದು ಗೊತ್ತಾದ ಪದ್ಧತಿ ಮಾಡಿಕೊಂಡಿದ್ದಂತೆ ಕೇಳಿದ್ದೇನೆ. ಆದರೆ ಈ ವರ್ಷ ನೋಡಿದರೆ ಅದಕ್ಕೇನೂ ವ್ಯವಸ್ಥೆ ಮಾಡಿರುವಂತೆ ಕಾಣಲಿಲ್ಲ. ಕಟ್ಟಡಗಳನ್ನು ಕಟ್ಟಿಸುವುದಕ್ಕೂ ಏನೂ ಒದಗಿಸಿಲ್ಲ. ಹೀಗಿರುವಾಗ ವಿದ್ಯಾಭ್ಯಾಸ ಹೆಚ್ಚಿಗೆ ಮಾಡಬೇಕೆಂದು ಹೇಳಿ ಕಟ್ಟಡಗಳೇ ಇಲ್ಲದಿದ್ದರೆ ಹೇಗೆ?

ಶ್ರೀ ಟಿ. ಮರಿಯಪ್ಪನವರು —ತಾವು ಬಡ್ಜೆಟ್ಟಿನ ಎರಡನೆಯ ಭಾಗವನ್ನು ನೋಡಿದ್ದೀರಾ?

ಶ್ರೀ ಕೆ. ಎಚ್. ಮುದಿಯಪ್ಪನವರು.—ನೋಡಿದ್ದೇನೆ. ನೀವು ಅದನ್ನು ಎಲ್ಲಿ ತೋರಿಸಿದ್ದೀರೋ ನನಗೆ ಗೊತ್ತಾಗಲಿಲ್ಲ.

ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಹಣ ಕೊಟ್ಟಿದೆ

ಶ್ರೀ ಕೆ. ಎಚ್. ಮುದಿಯಪ್ಪನವರು.—ಕೆಲವು ಸಂದರ್ಭಗಳಲ್ಲಿ ಪ್ರೈಮರಿ ಸ್ಕೂಲಿಗಾಗಿ ಊರಿನ ಮುಖಂಡರುಗಳು ಡೆಪ್ಯುಟಿ ಕಮಿಷನರ ಹೆಸರಿನಲ್ಲಿ ಹಣ ಜಮಾಮಾಡಿಸಿದರೂ ಸರ್ಕಾರದವರು ನಿರ್ದಿಷ್ಟವಾದ ಕಾಲದಲ್ಲಿ ಕಟ್ಟಡ ಕೊಡದಿರುವುದು ವಿಷಾದಕರ. ತಮ್ಮನ್ನು ಕೇಳಿದರೆ, ಸ್ಕೂಲು ಕಟ್ಟಡ ಕಟ್ಟಿಸಿಕೊಡಿ, ಉಪಾಧ್ಯಾಯರಿಗೊಂದು ವಾಸದಮನೆ ಏರ್ಪಾಡುಮಾಡಿಕೊಡಿ, ಸ್ಕೂಲು ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಅನೇಕ ಸಂದರ್ಭಗಳಲ್ಲಿ ಊರಿನವರು ಹಣ ಜಮಾ ಮಾಡಿದರೂ ಸರ್ಕಾರದವರು ತಮ್ಮ ಭಾಗದ ಕೋಟಾವನ್ನು ಕೊಡದೆ ಈ ರೀತಿ ನಿಧಾನಮಾಡುತ್ತಿರುವುದು ಶೋಚನೀಯ. ಆದ್ದರಿಂದ ದಯಮಾಡಿ ಸರ್ಕಾರದವರು ಈ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಹೇಳುತ್ತೇನೆ.

ಆಹಾರ ಹೆಚ್ಚಿಗೆ ಬೆಳೆಯುವ ಸಂಬಂಧದಲ್ಲಿ ಕೇವಲ ಕೆಲವು ಸಣ್ಣ ಪುಟ್ಟ ಕೆರೆಗಳನ್ನು ರಿಪೇರಿ ಮಾಡಿಸುವ ಕೆಲಸವನ್ನು ಕೈಕೊಂಡಿದ್ದೀರೇ ಹೊರತು ದೊಡ್ಡದೊಡ್ಡ ಕೆಲಸಗಳನ್ನಾವುದನ್ನೂ ಕೈಕೊಂಡಂತೆ ತೋರಲಿಲ್ಲ. ಏಕೆಂದರೆ, ಈಗ ನಮ್ಮ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕನ್ನು ನೋಡುವುದಾದರೆ ಅಲ್ಲಿ ಒಂದೇ ಒಂದು ಮೇಜರ್ ಕೆರೆಯನ್ನು ತೆಗೆದುಕೊಂಡಿದ್ದೀರಿ. ಬೇರೆಯೇನೂ ಇಲ್ಲ. ಮಾನ್ಯ ಮಂತ್ರಿಗಳು ಇನ್ಯಾವ ಕೆರೆಗಳ ಕೆಲಸಗಳನ್ನು ತೆಗೆದುಕೊಂಡಿದ್ದಾರೆಂದು ತಿಳಿಸಿದರೆ ಸಾಕು.

ಇನ್ನೊಂದು ವಿಷಯ. ಸರ್ಕಾರದವರು ಈಗ ಹೊಸದಾಗಿ ಡಿಪೊ ಚಾರ್ಜ್ ಎಂದು ಒಂದು ತೆರಿಗೆಯನ್ನು ಹಾಕಿದ್ದಾರೆ. ಇಂಥಾ ತೆರಿಗೆಯೇಕೆ, ಸ್ವಾಮಿ! ತಾವು ಹಿಂದೆ ವೇದಿಕೆಗಳ ಮೇಲೆ ನಿಂತು ಯಾವರೀತಿ ಭಾಷಣಗಳನ್ನು ಮಾಡುತ್ತಿದ್ದೀರೆಂಬುದನ್ನು ಯೋಚನೆಮಾಡಿ. ಈಗ ನೀವೇ ಹೀಗೆ ವಿಧಿಸುವುದಕ್ಕೆ ಹೊರಡುವುದು ಸರಿಯಲ್ಲ. ಆರ್ಥಿಕ ಸಚಿವರು ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಸಿ. ಆರ್. ಬಸಪ್ಪನವರು (ತುಮಕೂರು ಜಿಲ್ಲೆ).—ಒಂದು ಸೂಚನೆ, ಸ್ವಾಮಿ. ಹಿಂದೆ ರಾಜಪ್ರಮುಖರ ಭಾಷಣದ ಮೇಲೆ ಮಾತನಾಡುವಾಗ ಕೆಲವು ಸದಸ್ಯರು ಬಡ್ಜೆಟ್ ವಿಷಯವನ್ನೂ ಪ್ರಸ್ತಾಪಿಸಿ ಭಾಷಣ ಮಾಡಿದ್ದಾರೆ. ಈಗ ಅವರನ್ನು ಬಿಟ್ಟುಬಿಟ್ಟು ಮಿಕ್ಕವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಬಡ್ಜೆಟ್ಟಿನ ಮೇಲೆ ನನ್ನ ಸ್ನೇಹಿತರೆಲ್ಲರೂ ಮಾತನಾಡಿದ್ದಾರೆ. ನಾನು ಅವುಗಳನ್ನು ಮತ್ತೆ ಹೇಳುವ ಆವಶ್ಯಕವಿಲ್ಲ. ಆದ್ದರಿಂದ ನಾನು ಬಡ್ಜೆಟ್ಟಿನ ವಿಷಯದಲ್ಲಿ ಹೆಚ್ಚಿಗೆ ಮಾತನಾಡ

ಲಕ್ಕೆ ಹೋಗದೆ ನಮ್ಮ ಮಿತ್ರರಾದ ಜನಾಬ್ ಇಮಾಂರವರು ಹೇಳಿದ ಮಾತುಗಳಿಗೆ ಉತ್ತರವಾಗಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಒಬ್ಬ ಸದಸ್ಯರು.—ಆ ಕೆಲಸವನ್ನು ಮಂತ್ರಿಗಳಿಗೆ ಬಿಡಿ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಆದರೂ ನನ್ನ ಕರ್ತವ್ಯವನ್ನು ನಾನು ಮಾಡುತ್ತೇನೆ. ಜನಾಬ್ ಇಮಾಂರವರು ನಿನ್ನೆ ದಿವಸ ಮಾಡಿದ ಭಾಷಣವನ್ನು ಕೇಳಿ ನನಗೆ ನಿಜವಾಗಿಯೂ ಬಹಳ ವಿಷಾದವಾಯಿತು. ಶ್ರೀಮಾನ್ ಗುಂಡಪ್ಪಗೌಡರು ರಾಜಪ್ರಮುಖರ ಭಾಷಣದ ಮೇಲೆ ಮಾತನಾಡಿದ್ದನ್ನೂ ಕೇಳಿದೆ. ಬಹಳ ಸಮಂಜಸವಾಗಿತ್ತು. ಎಲ್ಲೆಲ್ಲಿ ಸರ್ಕಾರವನ್ನು ಟೀಕೆ ಮಾಡಬೇಕೋ, ಎಲ್ಲೆಲ್ಲಿ ಸರ್ಕಾರಕ್ಕೆ ನ್ಯಾಯವಾಗಿ ಸಲಹೆ ಕೊಡಬೇಕೋ, ಅಲ್ಲೆಲ್ಲಾ ಚೆನ್ನಾಗಿ ಸಲಹೆ ಮಾಡಿದ್ದಾರೆ. ಮಾನ್ಯ ಸಿದ್ದಪ್ಪನವರೂ ಅಷ್ಟೆ. ಅವರ ಭಾಷಣವೂ ಬಹಳ ಸಮಂಜಸವಾಗಿತ್ತು. ಆದರೆ ಜನಾಬ್ ಇಮಾಂರವರು ಹೇಳಿದ್ದು ಮಾತ್ರ ನನಗೆ ಮನ ನೋಯಿಸಿತು. ನಾನಾಗಲೇ ಹೇಳಿದೆ, ಮಾಜಿ ಮಂತ್ರಿಗಳು ಬಹಳ ಹುಷಾರಾಗಿ ಮಾತನಾಡಬೇಕು ಎಂದು. ದೇಶದಲ್ಲಿ ಯಾವ ಪಾರ್ಟಿಯೇ ಸರ್ಕಾರಕ್ಕೆ ಬರಲಿ—ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಒಂದೇ ಪಾರ್ಟಿ ಅಧಿಕಾರದಲ್ಲಿರುತ್ತದೆಂದು ಹೇಳುವುದಕ್ಕಾಗುವುದಿಲ್ಲ—ಯಾವ ಪಾರ್ಟಿಯೇ ಅಧಿಕಾರಸ್ಥಾನದಲ್ಲಿರಲಿ ಸರ್ಕಾರವೆಂಬ ಒಂದು ಪವಿತ್ರಸಂಸ್ಥೆಯ ವಿಷಯದಲ್ಲಿ ಜನತೆಗೆ ತಾತ್ಸಾರ ಭಾವನೆಉಂಟಾಗುವ ಹಾಗೆ, ಅಥವಾ ಅಪನಂಬಿಕೆಯುಂಟಾಗುವ ಹಾಗೆ ಒಂದು ವಾತಾವರಣವನ್ನು ಕಲ್ಪನೆ ಮಾಡುವುದಕ್ಕೆ ಪ್ರಯತ್ನ ಮಾಡಬಾರದು. ಹೀಗಿರುವಲ್ಲಿ ನಿನ್ನೆ ದಿವಸ ಆ ಮಾನ್ಯಸದಸ್ಯರು ಹೇಳಿದರು, ಕೋಟ್ಯಾಂತರ ರೂಪಾಯಿಗಳ ರಿಜರ್ವ್‌ಗಳನ್ನು ನಿಮ್ಮ ಕೈಗೆ ಕೊಟ್ಟೆವು, ಅವುಗಳನ್ನೆಲ್ಲಾ ಏನು ಮಾಡಿದ್ದೀರೋ ನನಗರ್ಥವಾಗುವುದಿಲ್ಲ, ಅವೆಲ್ಲಾ ಎಲ್ಲಿ ಹೋದುವೋ ಗೊತ್ತಿಲ್ಲ ಎಂದು.

ಜನಾಬ್ ಜೆ. ಮಹಮದ್ ಇಮಾಂರವರು.—ರಿಜರ್ವೆಲ್ಲಾ ಏನಾಯಿತೋ ಗೊತ್ತಿಲ್ಲ, ಏನು ಮಾಡಿದ್ದಾರೋ ಅರ್ಥವಾಗುವುದಿಲ್ಲ ಎಂದು ನಾನು ಹೇಳಿದೆ ಎಂದು ಅವರು ಕಲ್ಪನೆಮಾಡಿ ಹೇಳುತ್ತಿರುವುದು ಸರಿಯಲ್ಲ. ತಾವು ಕಾರ್ಯಕಲಾಪಗಳ ವರದಿಯನ್ನು ಬೇಕಾದರೆ ತೆಗೆಸಿ ನೋಡಬಹುದು. ರಿಜರ್ವ್ ಖರ್ಚುಮಾಡಿದ್ದಾರೆಂದು ಹೇಳಿದೆನೇ ಹೊರತು ಏನಾಯಿತೋ ಗೊತ್ತಿಲ್ಲವೆಂದು ಹೇಳಲಿಲ್ಲ. Receipts ಎಲ್ಲವನ್ನೂ ಖರ್ಚುಮಾಡಿದ್ದಾರೆಂದು ಹೇಳಿದೆ ಅಷ್ಟೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಜನಾಬ್ ಇಮಾಂರವರು, ಅವರು ಸರ್ಕಾರವನ್ನು ನಮ್ಮ ಕೈಗೆ ಕೊಟ್ಟಾಗ capital assets ಎಷ್ಟಿತ್ತು, ಈಗ ಎಷ್ಟಿದೆ. ಅವರು ಕೊಟ್ಟ legacy ಎಷ್ಟು, ಸರ್ಕಾರದ ಮೇಲೆ ಏನು ಹೊರೆ ಹೊರಿಸಿ ಹೋಗಿದ್ದಾರೆ ಎಂಬುದೊಂದನ್ನೂ ಹೇಳಲಿಲ್ಲ. ಏನೋ ಕೆಲವು ರಿಜರ್ವ್‌ಗಳನ್ನು ಕೊಟ್ಟು ಹೋದರೆಂದೂ, ನಮ್ಮ ಸರ್ಕಾರ ಈಗ ಬಂದು ನಿರ್ದಿಷ್ಟವಾದ ಯೋಜನೆ ಮಾಡದೆ ಎಲ್ಲವನ್ನೂ ಖರ್ಚುಮಾಡಿದರೆಂದೂ ಅಭಿಪ್ರಾಯ ಬರುವ ಹಾಗೆ ಅವರು ಹೇಳಿದರು. ಹಿಂದಿನ ಸರ್ಕಾರದವರು, ಈ ಸರ್ಕಾರ ಬರುವ ವೇಳೆಗೆ ಅನೇಕ ಆಜ್ಞೆಗಳನ್ನು ಮಾಡಿ ಹೋಗಿದ್ದರೆಂಬುದನ್ನು ಮರೆಯಬಾರದು. ಆವೃತ್ತ ವೆಚ್ಚವಾಗಿ $1\frac{1}{2}$ ಕೋಟಿ ರೂಪಾಯಿಗಳಷ್ಟು ಸಂಬಳದ ಪುನರ್ವಿಮರ್ಶೆಯಿಂದ ಹೊರೆಸಿಹೋದರು. ಅನಾವೃತ್ತ ವೆಚ್ಚವಾಗಿ ಸಂಬಳದ ಬಾಕಿ ಎಂದು $1-1\frac{1}{4}$ ಕೋಟಿ ರೂಪಾಯಿಗಳಷ್ಟು ಹೊರೆಸಿದರು. ಅದೇ ರೀತಿ ಅನೇಕ ಪ್ರಾಜೆಕ್ಟ್‌ಗಳು, ಜೋಗ್, ಭದ್ರಾವತಿ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ—ಇವುಗಳನ್ನು ಉತ್ತಮಪಡಿಸುವುದು, ಅನೇಕ ನೀರಾವರಿ ಯೋಜನೆಗಳನ್ನು ಪ್ರಾರಂಭ ಮಾಡುವುದು—ಇವೆಲ್ಲಾ ಮಾಡಿ ಯಂತ್ರೋಪಕರಣಗಳಿಗೆ ಆಜ್ಞೆ ಕೊಟ್ಟು ಅವರು ಹೊರಟು ಹೋದರು.

ಹಿಂದಿನ ಸರ್ಕಾರ ಬಿಟ್ಟದ್ದ ಕೆಲಸವನ್ನೆಲ್ಲಾ ಮುಗಿಸುವ ಭಾರ ಈ ಸರ್ಕಾರದ ತಲೆಯಮೇಲೆ ಬಿದ್ದಿದೆ. ಹಿಂದೆ ಕೆಲಸವನ್ನು ಪ್ರಾರಂಭಿಸಿರಬಹುದು, ರಿಜರ್ವ್‌ನಲ್ಲಿ ಹಣ ಇಟ್ಟಿರಬಹುದು, ಆದರೆ ಈಗ ವಿಶೇಷ ಪರಿಸ್ಥಿತಿಯಿದೆ. ಈಗ ಮುಂದುವರಿಯುವುದು ಬಹಳ ಕಷ್ಟವಾಗಿದೆ. ರಾಯರ ಗೋಪುರ ಮುಗಿಸುವ ಭಾರ ಈ ಸರ್ಕಾರದ ತಲೆಯ ಮೇಲೆ ಬಿದ್ದಿದೆ. ಜನಾಬ್ ಇಮಾಂರವರು ತಮ್ಮ ಕಾಲದಲ್ಲಿ ಹಣವನ್ನು ರಿಜರ್ವ್ ಇಟ್ಟಿದ್ದೆವೆಂದು ಹೇಳಿದರು. ಆದರೆ ಅವರು ತಮ್ಮ ಅಧಿಕಾರಸ್ಥಾನವನ್ನು ಜಾಗ್ರತೆ ತ್ಯಜಿಸಬೇಕಾದೀತೆಂದು ತಿಳಿದಿದ್ದರೆ, ಆ ರೀತಿ ಇಡುತ್ತಿರಲಿಲ್ಲ. ಅವರು ಹೋಗುವುದು ತಿಳಿದ ಮೇಲೆ ಒಂದೇ ವರ್ಷದಲ್ಲಿ ಒಂದೆರಡು ತಿಂಗಳಲ್ಲಿ ಅನೇಕ ಯೋಜನೆಗಳು ಹೊರಬಿದ್ದುವು. ಅವರು ಹೋಗತಕ್ಕ ಕಾಲದಲ್ಲಿ 23—24 ಜನರು ಅಸಿಸ್ಟೆಂಟ್ ಕಮಿಷನರಾದರು. ಈ ರೀತಿಯಾಗಿ ಅನೇಕ ಆಜ್ಞೆಗಳು ಅವರ ಕಾಲದಲ್ಲಾದುವು. ಅಮೇಲೆ ಸಾಲ ಕೇಳಿದ ತಕ್ಷಣ ಕೋಟ್ಯಾಂತರ ರೂಪಾಯಿಗಳನ್ನು ಕೊಡುವುದಕ್ಕೆ ಮುಂದೆ ಬಂದರೆಂದು ಹೇಳಿದರು. ಈಗಿನ ಸರ್ಕಾರದಲ್ಲೂ ಅದಕ್ಕೆ ಅವಕಾಶವಿದೆಯೆಂದು ನಾನು ಛಾಲೆಂಜ್ ಮಾಡುತ್ತೇನೆ. ಅವರು ಬಡ್ಜೆಟ್ಟನ್ನು ಪರಿಶೀಲಿಸಿದರೆ ಯಾವ್ಯಾವುದಕ್ಕೆ ಎಷ್ಟೆಷ್ಟು ಒದಗಿಸಿದ್ದಾರೆಂಬುದು ಅವರಿಗೇ ಗೊತ್ತಾಗುತ್ತದೆ. ಆಗಿನ ಕಾಲ ಹೇಗಿತ್ತೆಂದರೆ ಆಗ ಬಿ. ಎಲ್. ಗೋಪಾಲರಾಯರಂಥವರು ಬೇಕಾದಷ್ಟು ಹಣ ಕೊಡುವುದಕ್ಕೆ ಶಕ್ತಿವಂತರಾಗಿದ್ದರು. ಈಗಿನ ಸರ್ಕಾರ ಅಂಥವರನ್ನೆಲ್ಲಾ ಕಳೆದುಕೊಂಡಿದೆ ಎಂದು ಹೇಳುವುದು ನ್ಯಾಯವಲ್ಲ, ಧರ್ಮವಲ್ಲ ಎಂದು ಅವರ ಗಮನಕ್ಕೆ ತರಬೇಕಾಗಿದೆ. ಆಗಿನ ಪರಿಸ್ಥಿತಿಯೇ ಬೇರೆ, ಈಗಿನ ಪರಿಸ್ಥಿತಿಯೇ ಬೇರೆ. ಈ ಸರ್ಕಾರದವರೇನು ಮಾಡಿದ್ದಾರೆಂದು ಅವರು ಕೇಳಿದರು. ಆ ರೀತಿ ಅವರು ಪ್ರಶ್ನೆ ಮಾಡುವುದು ಸೂಕ್ತವಲ್ಲ. ಅದೆಲ್ಲವೂ ಬಡ್ಜೆಟ್ಟಿನ ಪುಸ್ತಕದಲ್ಲಿ ಅಂಕಿಅಂಶಗಳ ಮೂಲಕ ವಿಶದಪಡಿಸಿದೆ. ಈಗ ವಿದ್ಯಾಭ್ಯಾಸಕ್ಕಾಗಿಯೇ ಎಷ್ಟೋ ಖರ್ಚಾಗುತ್ತಿದೆ. ಆಗ ಎಷ್ಟು ಖರ್ಚು ಮಾಡಿದ್ದರು, ಈಗ ಎಷ್ಟು ಖರ್ಚಾಗಿದೆ, ಈಗ ಹೈಸ್ಕೂಲು, ಕಾಲೇಜುಗಳ ಸಂಖ್ಯೆ ಎಷ್ಟು ಹೆಚ್ಚಿದೆ ಎಂಬುದನ್ನು ನೋಡದೆ, ಹೀಗೆ ಮಾನ್ಯ ಸದಸ್ಯರು ಕೇಳುವುದು ಸರಿಯಾದ ಮಾರ್ಗವಲ್ಲ ಎಂದು ಹೇಳಬೇಕಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಈಗ ಲೋಯರ್ ಸೆಕೆಂಡರಿ ಪರೀಕ್ಷೆಗೆ 30 ಸಾವಿರ ವಿದ್ಯಾರ್ಥಿಗಳೂ, ಎಸ್. ಎಸ್. ಎಲ್. ಸಿ. ಪರೀಕ್ಷೆಗೆ 13 ಸಾವಿರ ವಿದ್ಯಾರ್ಥಿಗಳೂ ಕುಳಿತಿದ್ದಾರೆ. ಅದೇ ಅವರ ಕಾಲದಲ್ಲಿ ಆ ಸಂಖ್ಯೆ ನೋಡಿದರೆ ಬಹಳ ಕಡಮೆಯಿದೆ. ಈಗ ಎಷ್ಟೋ ಹೈಸ್ಕೂಲುಗಳೂ, ಮಿಡ್ಲ್ ಸ್ಕೂಲುಗಳೂ, ಪ್ರೈಮರಿ ಸ್ಕೂಲುಗಳೂ ಆಗಿವೆ. ಇದನ್ನೆಲ್ಲಾ ಸ್ವಲ್ಪ ಯೋಚನೆ ಮಾಡಿದರೆ ಜನರು ಆಕ್ಷೇಪಣೆ ಮಾಡುವುದಕ್ಕೆ ನಿಜವಾಗಿಯೂ ಅನೇಕ ಕಾರಣಗಳಿವೆ. ಅವರ ಕಾಲದಲ್ಲಿ ಜನರಿಗೆ ಕಷ್ಟವಿದ್ದರೂ ಹೇಳಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ವರ್ತಮಾನ ಪತ್ರಿಕೆಗಳಲ್ಲಿ ತಿಳಿಸುವುದಕ್ಕೂ ಪತ್ರಿಕೆಗಳ ಸಂಖ್ಯೆ ಹೆಚ್ಚಾಗಿರಲಿಲ್ಲ, ಆಗ ಮೂರು ಮಾತ್ರ ಇದ್ದುವು. ಜೊತೆಗೆ ಸರ್ಕಾರದ ಹೆದರಿಕೆ, ಆ

ಪತ್ರಿಕೆಗಳನ್ನು ಮುದ್ರಿಸಬೇಕಾದರೆ ಸರ್ಕಾರವನ್ನು ಕೇಳಿಯೇ ಮಾಡಬೇಕಾಗಿತ್ತು. ಆದರೆ ಈ ದಿವಸ ಸರ್ಕಾರವನ್ನು ಟೀಕೆ ಮಾಡುವುದೇ ಒಂದು ಫ್ಯಾಷನ್ ಆಗಿದೆ. ಈಗ ಒಂದು ಪರ್ವಕಾಲವಾದ್ದರಿಂದ ಎಷ್ಟೇ ಸಂಪಾದನೆ ಮಾಡಿದರೂ ಇನ್ನೂ ಮಾಡಬೇಕೆಂಬ ಆಸೆ ಮನುಷ್ಯರಿಗೆ ಇದ್ದೇ ಇರುತ್ತದೆ. ಈ ಪರ್ವ ಕಾಲದಲ್ಲಿ ಸರ್ಕಾರ ಏನೇ ಮಾಡಿದರೂ ಜನರಿಗೆ ತೃಪ್ತಿಯಿರುವುದಿಲ್ಲ. ಆದ್ದರಿಂದ ಹಿಂದೆ ಚೆನ್ನಾಗಿತ್ತು, ಈಗ ಹಾಗಿದೆ, ಹೀಗಿದೆ ಎಂದು ಹೇಳುವುದರಲ್ಲಿ ಸತ್ಯಾಂಶವಿಲ್ಲ. ಆಗ ಕ್ಷಾಮ ಬಂದರೆ ಏಕೋ ಕಷ್ಟ ಬಂತು ಎಂದು ದೇವರನ್ನು ಕೇಳಿಕೊಳ್ಳುತ್ತಿದ್ದರು. ಅನ್ನಾಹಾರವಿಲ್ಲದಿದ್ದರೆ ಹಣೇಬರಹವೆಂದು ಹೇಳುತ್ತಿದ್ದರು. ಆದರೆ ಈಗ ಕ್ಷಾಮ ಬಂದರೆ ಸರ್ಕಾರವನ್ನು ಬಯ್ಯುತ್ತಾರೆ. ಈ ದಿವಸ ದೇವರ ಪೂಜೆ ಮಾಡುವುದಿಲ್ಲ. ಅನ್ನ ಕ್ಷಾಮ ಬಂದರೆ ಸರ್ಕಾರವೇ ಕಾರಣವೆಂದು ಈಗ ಹೇಳುತ್ತಾರೆ. ಅದೇ 10 ವರ್ಷಗಳ ಕೆಳಗೆ ಹಾಗೆ ಹೇಳುತ್ತಿರಲಿಲ್ಲ. ಒಟ್ಟಿನಲ್ಲಿ ಕಾಂಗ್ರೆಸ್ ಸರ್ಕಾರ ಬಂದುದರಿಂದ ಮಳೆ ಹೋಯಿತು ಎಂದು ಹೇಳುವ ಕಾಲವಿದು. ಈ ಪರ್ವಕಾಲದಲ್ಲಿ ಸರ್ಕಾರ ಎಷ್ಟೇ ಮಾಡಿದರೂ ಮನಸ್ಸು ಪರಿವರ್ತನೆಯಾಗುವುದು ಕಷ್ಟ. ಸರ್ಕಾರದವರು ಅಂಕಿ ಅಂಶ ತೋರಿಸಬಹುದು. ವಿದ್ಯಾಭ್ಯಾಸಕ್ಕಾಗಿಯೂ, ಮಲೆನಾಡಿನಲ್ಲಿ ಡಿ. ಡಿ. ಟಿ. ಪ್ರಯೋಗಕ್ಕಾಗಿಯೂ, ರೈತರಿಗೆ ಹೆಚ್ಚು ಸೌಕರ್ಯವನ್ನೊದಗಿಸುವುದಕ್ಕಾಗಿಯೂ, ಈಗ ಎಷ್ಟೋ ಖರ್ಚು ಮಾಡಿದ್ದಾರೆ. ಆದರೆ ದೇಶದಲ್ಲಿ ಅಶಾಂತಿ ವಾತಾವರಣವಿರುವುದರಿಂದ ಈಗ ವಿಶೇಷ ಪರಿಸ್ಥಿತಿಯಿದೆ, ಹಿಂದೆ ಇರಲಿಲ್ಲ ಎಂದು ಹೇಳಬಾರದು. ಹೀಗೆ ಅಶಾಂತಿ ಹಿಂದೆಯೂ ಇತ್ತು. ಆಗ ದೇವರ ಮೇಲೆ ಭಾರ ಹಾಕುತ್ತಿದ್ದರು. ಈಗ ಆ ರೀತಿ ಹೆಚ್ಚು ಕಡಮೆಯಾದರೆ ಸರ್ಕಾರವನ್ನು ಬಯ್ಯುತ್ತಾರೆ. ಏಕೆಂದರೆ, ಅವರ ಗುರುಗಳು ನಾವು, ಅವರಿಗೆ ಕಲಿಸಿದವರು ನಾವು. ಆದ್ದರಿಂದ ಇವಾಂರವರು ಇದನ್ನು ಮನಸ್ಸಿನಲ್ಲಿಡಬಾರದು.

Sri L. SIDDAPPA (Shimoga District-General).—It is a frank confession.

ಶ್ರೀ ಎಂ ವಿ. ಕೃಷ್ಣಪ್ಪನವರು.—ಹಿಂದಿಲ್ಲದಿರುವ ಕಷ್ಟ ಕಾರ್ಪಣ್ಯ ಈಗಲೇ ಬಂದಿದೆಯೆಂಬ ಅಭಿಪ್ರಾಯವನ್ನು ಅವರು ಮನಸ್ಸಿನಲ್ಲಿಟ್ಟುಕೊಳ್ಳಬಾರದೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಆಹಾರ ಪರಿಸ್ಥಿತಿ ವಿಷಯದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಸರ್ಕಾರದವರು ಈಗ ಅಹಾರಾಭಾವವನ್ನು ನೀಗುವುದಕ್ಕಾಗಿ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಕಾರಣಾಂತರದಿಂದ ಕೆಲವು ಕಡೆ ತೊಂದರೆಯಾಗಿರಬಹುದು. ಆದ್ದರಿಂದ ಆಹಾರ ಶಾಖೆಯ ಸಚಿವರನ್ನು ನಿಷ್ಠೂರ ಮಾಡುವುದು ಯುಕ್ತವಲ್ಲ. ಈ ಯೋಜನೆಯ ಪ್ರಕಾರ ಪಟ್ಟಣದಲ್ಲಿ ಹೆಚ್ಚು ತರಕಾರಿ ಬೆಳೆಯುವಂತೆ ಮಾಡಬೇಕು. ಮಂತ್ರಿಗಳೂ ಕೂಡ ತಮ್ಮ ಕಾಂಪೌಂಡುಗಳಲ್ಲಿ ತರಕಾರಿಯನ್ನು ಬೆಳೆಯಬೇಕು. ಶ್ರೀ ಚೆನ್ನಿಗರಾಮಯ್ಯನವರ ಮತ್ತು ಶ್ರೀ ಸಿದ್ದಯ್ಯನವರ ಕಾಂಪೌಂಡಿನಲ್ಲೇನೋ ಬೆಳೆಯುತ್ತಿದ್ದಾರೆ. ಆದರೆ ಕಾರ್ಲ್‌ಟನ್ ಹೌಸ್‌ನಲ್ಲಿಲ್ಲ.

ಬಾಕಿ ಮಂತ್ರಿಗಳೂ ಸಹ ತರಕಾರಿಯನ್ನು ತಮ್ಮ ಬಂಗಲೆಗಳಲ್ಲಿ ಬೆಳೆಯಬೇಕು.

Sri K. CHENGALARAYA REDDY.—The vegetable garden in Ballabrooie got the first and second prizes in the Market Show. The vegetable garden in Carlton House will get first prize next time, I may assure the Hon'ble Member.

ಶ್ರೀ ಟಿ. ಮರಿಯಪ್ಪನವರು.—ನನಗೆ ಕಾಂಪೌಂಡಿಲ್ಲ, ಆದರೂ ಸಹ ಇರುವ ಜಾಗದಲ್ಲಿಯೇ ತರಕಾರಿ ಬೆಳೆಯುತ್ತಿದ್ದೇನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ತರಕಾರಿಯು ಬಹಳ ಒಳ್ಳೆಯ ಆಹಾರ ಪದಾರ್ಥ. ಆಲೂಗೆಡ್ಡೆ, ಕೋಸು ಮುಂತಾದ್ದನ್ನು ಬೆಳೆದರೆ ಆಹಾರ ವಸ್ತುಗಳಾಗಿ ಉಪಯೋಗಿಸಬಹುದು, ಇತರ ಧಾನ್ಯಗಳನ್ನೂ ಉಳಿತಾಯ ಮಾಡಬಹುದು. ಆದ್ದರಿಂದ ಪಟ್ಟಣಗಳಲ್ಲಿ ತರಕಾರಿಯನ್ನು ಹೆಚ್ಚಾಗಿ ಬೆಳೆಯುವಂತೆ ಮಾಡಬೇಕು. ಪ್ರತಿಯೊಬ್ಬರೂ ಅವರವರ ಕಾಂಪೌಂಡಿನಲ್ಲಿ ತರಕಾರಿ ಬೆಳೆಯಬೇಕು. ಸರ್ಕಾರದವರು ಕೊಡುವ ಪ್ರೋತ್ಸಾಹ ಸಾಲದು. ಮುನಿಸಿಪಾಲಿಟಿಯವರು ಮಾರ್ಕೆಟ್ಟಿನಲ್ಲಿ ಪ್ರದರ್ಶನ ನಡೆಸಿ ಬಹುಮಾನ ಹಂಚಿದ್ದಾರೆ. ಸರ್ಕಾರದವರು ಲಾಲ್ ಬಾಗಿನಲ್ಲಿ ಮಾಡಿದ ಹಾಗೆ ತರಕಾರಿಯ ಪ್ರದರ್ಶನ ನಡೆಸಬೇಕು. ಸದ್ಯಕ್ಕೆ ಪುಷ್ಪ ಪ್ರದರ್ಶನಮುಂತಾದ ಫೇರ್ ಷೋಗಳನ್ನು ನಿಲ್ಲಿಸಬೇಕು.

ಶ್ರೀ ಟಿ. ಮರಿಯಪ್ಪನವರು.—ತರಕಾರಿಗಳ ಪ್ರದರ್ಶನವೂ ಇದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ವರ್ತಮಾನ ಪತ್ರಿಕೆಗಳಲ್ಲಿ ಫೇರ್‌ಷೋಗಳಲ್ಲಿ ಬಹುಮಾನ ವಿನಿಯೋಗವಾಗಿರುವುದಾಗಿ ತಿಳಿಸಿರುವುದನ್ನು ನೋಡಿದ್ದೇನೆ. ಅದಕ್ಕಿಂತ ಹೆಚ್ಚಾಗಿ ತರಕಾರಿಗೆ ಪ್ರೋತ್ಸಾಹ ನೀಡಬೇಕು.

Sri K. CHENGALARAYA REDDY.—The Hon'ble Member has not seen the entire Ballabrooie. There is a first class vegetable garden there. He can go now and see.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮಂತ್ರಿಗಳು ಮಾದರಿಯಾಗಿ ತರಕಾರಿ ಬೆಳೆದು ಪಟ್ಟಣದ ಜನರೂ ಬೆಳೆಯಲು ಏರ್ಪಡಿಸಿ ಆಹಾರ ಅಭಾವವನ್ನು ಆದಷ್ಟು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಪಟ್ಟಣ ವಾಸಿಗಳು ಹೆಚ್ಚಾಗಿ ಬೆಳೆದು ಹಳ್ಳಿಯವರಿಗೂ ಹಂಚಿ ಸಹಕಾರ ತೋರಿಸಲಿ. ಮತ್ತೆ ಆಹಾರ ಪರಿಸ್ಥಿತಿ ಉತ್ತಮವಾಗಿ ಹೆಚ್ಚಾಗಿ ಹೋಟಲುಗಳಲ್ಲಿ ಇಡ್ಲಿ, ದೋಸೆ ಮಾಡುವ ಕಾಲ ಬರಲಿ ಎಂದು ಹಾರೈಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ಈಗ ನಮ್ಮ ಈ ಸಭೆಯ ಮುಂದೆ ಮಂಡಿಸಿರತಕ್ಕ ಬಡ್ಜೆಟ್ಟನ್ನು ನೋಡಿದರೆ ನನ್ನ ಮನಸ್ಸಿಗೆ ಒಂದು ಭಾವನೆ ಬರುತ್ತದೆ. ಇದು ಒಂದು ಪಂಚಾಗದಂತಿದೆ. ಆದರೆ ಪಂಚಾಗವೆಂದರೆ ಅದರಲ್ಲಿ ಐದು ಭಾಗಗಳು ಸೇರಿರುತ್ತವೆ. ನಮ್ಮ ಸರ್ಕಾರದ ಆಡಳಿತ ಕೇಂದ್ರಕ್ಕೆ ಹಿಂದಿನಿಂದಲೂ ಅಠಾರಾ ಕಚೇರಿ ಎಂದು ಹೆಸರಿತ್ತು. ಎಂದರೆ 18 ಭಾಗಗಳಿದ್ದುವು. ಈಗಿನ ಆಡಳಿತದಲ್ಲಿ 18 ಇಲಾಖೆಗಳಿಗಿಂತಲೂ ಬಹಳ ಹೆಚ್ಚಾಗಿವೆ. ಹೆಚ್ಚು ಹೆಚ್ಚು ಬಾಬುಗಳಾದಂತೆಲ್ಲ ಹೆಚ್ಚು ಹೆಚ್ಚು ಇಲಾಖೆಗಳು ಬೆಳೆದುಕೊಂಡು ಹೋಗಿವೆ. ಈ ಬಡ್ಜೆಟ್ಟು ಒಂದು ಪಂಚಾಂಗವೆಂದು ನನ್ನ ಭಾವನೆಯಾದರೂ, ಇದನ್ನು ನಮ್ಮ ಹಣ

ಕಾಸಿನ ಮಂತ್ರಿಗಳು ತಯಾರು ಮಾಡಿ ಇಲ್ಲಿ ಮಂಡಿಸಿದ್ದಾರೆ. ಆದರೆ ಕೆಲಸ ಕಾರ್ಯಗಳು ಲಗ್ನಗಳು ನಡೆಯುವ ರೀತಿ ನಡೆಯುತ್ತವೆ. ಅಂದರೆ, ಯಾವುದೋ ಗೊತ್ತಾದ ಕಾಲಕ್ಕೆ ಪಂಚಾಂಗವನ್ನು ನೋಡಿ ಲಗ್ನ ಕಟ್ಟುತ್ತಾರೆ. ಆದರೆ ಆ ಲಗ್ನ ಕಾರ್ಯತಃ ನಡೆಯುವುದು ಬೇರೆ ಕಾಲದಲ್ಲಿ. ಲಗ್ನ ಕಟ್ಟಿದಂತೆ ನಡೆಯುವುದಿಲ್ಲ. ಹೀಗೆ ಹೇಳುವುದರಲ್ಲಿ ನನ್ನ ಉದ್ದೇಶವಿಷ್ಟೆ : ಈ ಬಡ್ಜೆಟ್ಟಿನಲ್ಲಿ ನಮೂದಿಸಿರುವಂತೆ ಏನಿದೆಯೋ ಅದೆಲ್ಲವೂ ಕಾರ್ಯರೂಪಕ್ಕೆ ಬರಬೇಕು. ಮೊಟ್ಟ ಮೊದಲನೆಯದಾಗಿ ಒಂದು ವಿಷಯವನ್ನು ಬಹಳ ಆಶ್ಚರ್ಯದಿಂದಲೂ ವಿಷಾದದಿಂದಲೂ ಹೇಳಬೇಕಾಗಿದೆ. ನಮ್ಮ ಕಾಂಗ್ರೆಸ್ಸಿನವರು ಮಂತ್ರಿಮಂಡಲಕ್ಕೆ ಬರುವುದಕ್ಕಿಂತ ಮುಂಚೆ ನಮ್ಮ ದೇಶದಲ್ಲಿ ಈಚಲು ಮರಗಳಿರಬಾರದು, ಕುಡಿತವಿರುವುದು ನ್ಯಾಯವಲ್ಲ, ಅಬ್ಕಾರಿ ಬಾಬನ್ನೇ ತೆಗೆದು ಹಾಕಬೇಕು ಎಂದು ಹೇಳುತ್ತಿದ್ದರು. ಇಂತಹ ಬಾಬು ಈಗಲೂ ಈ ಬಡ್ಜೆಟ್ಟಿನಲ್ಲಿ ಸೇರಿರುವುದನ್ನು ನೋಡಿದರೆ ನನಗೆ ಬಹಳ ವಿಷಾದವಾಗುತ್ತದೆ. ಇಂತಹ ಕಾಂಗ್ರೆಸ್ ಸರ್ಕಾರವಿರುವಾಗ ಇದರಿಂದ ಬರುವ ಉತ್ಪತ್ತಿ ಒಂದು ಕೋಟಿ ಎಂಭತ್ತೆಂಟು ಲಕ್ಷ ಚಿಲ್ಲರೆ ರೂಪಾಯಿ ಎಂದು ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರಲ್ಲಾ ಎಂದು ವ್ಯಸನವಾಗಿದೆ. ಕುಡಿತದಿಂದ ಮಾನವ ಜನಾಂಗದಲ್ಲಿ ಅನೇಕರು ಹಾಳಾಗುತ್ತಿದ್ದಾರೆ. ಹೀಗಿರುವಾಗ ಕಾಂಗ್ರೆಸ್ ಮಂತ್ರಿಗಳೂ ಇದಕ್ಕೆ ಅವಕಾಶ ಕೊಟ್ಟಿರುವುದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ಕಾಂಗ್ರೆಸ್ ಪಕ್ಷದವರು ಅನೇಕರು ಒಂದು ಸಂಸ್ಥೆ ಅಥವಾ ಪಕ್ಷದ ಶಿಸ್ತಿಗೆ, ನಿರ್ಬಂಧಕ್ಕೆ ಒಳಪಟ್ಟು ಮಾತನಾಡಿದ್ದಾರೆ. ಆದರೂ ಕೂಡ ಈ ವಿಚಾರದಲ್ಲಿ ಕೆಲವು ಸ್ನೇಹಿತರು ನಾವು ಮಾತನಾಡಬೇಕೆಂದಿದ್ದ ವಿಷಯಗಳನ್ನೇ ಮಾತನಾಡಿದ್ದಾರೆ.

ಇನ್ನು ಸೇಲ್ಸ್ ಟ್ಯಾಕ್ಸ್ ಅಥವಾ ಮಾರಾಟ ತೆರಿಗೆಯ ವಿಚಾರ. ನಮ್ಮ ಪ್ರಜಾಸರ್ಕಾರ ಬಂದರೆ ಬಡವರಿಗೆ ಬಹಳ ಸಹಾಯ ಮಾಡುತ್ತೇವೆಂದು ಹೇಳುತ್ತಿದ್ದರು. ಇಂತಹ ಪ್ರಜಾಸರ್ಕಾರ ಬಂದಮೇಲೆ ಮಾರಾಟ ತೆರಿಗೆ ಮುಂತಾದ ಹೊಸ ತೆರಿಗೆಗಳನ್ನು ಹಾಕುತ್ತಿದ್ದಾರೆ. ಹಿಂದಿನ ಸರ್ಕಾರ ಯಾವುದಾದರೂ ಹೊಸ ತೆರಿಗೆಗಳನ್ನು ಹಾಕಿದ್ದರೆ ಇವರು ಎಷ್ಟೋ ಟೀಕೆ ಮಾಡುತ್ತಿದ್ದರು. ಸಂತ್ಯಾಂಶಗಳನ್ನು ಪರಿಶೀಲನೆ ಮಾಡುವುದು ಎಲ್ಲರ ಕರ್ತವ್ಯವಾದರೂ, ಹಿಂದಿನ ಸರ್ಕಾರದವರೇನಾದರೂ ಈ ಮಾರಾಟ ತೆರಿಗೆಯನ್ನು ಜಾರಿಗೆ ತಂದಿದ್ದರೆ ಇವರಿಂದ ಎಷ್ಟೋ ಟೀಕೆ ಬರುತ್ತಿತ್ತು. ಮಾನ್ಯ ಮಿತ್ರರು ಇನ್ನೊಬ್ಬರ ತಪ್ಪುಗಳನ್ನು ತೋರಿಸುತ್ತಿದ್ದಾರೆಯೇ ಹೊರತು ತಮ್ಮ ತಪ್ಪನ್ನು ಇನ್ನೊಬ್ಬರು ತೋರಿಸಿದರೆ ಅದನ್ನು ತಿದ್ದಿಕೊಳ್ಳುವ ಶಕ್ತಿಯಿಲ್ಲವೆಂದು ಕಾಣುತ್ತದೆ.

ಶ್ರೀ ಎಚ್. ಸಿ. ದಾಸಪ್ಪನವರು.—ಯಾರಿಗೆ ?

ಶ್ರೀ ಟಿ. ಸಿ. ಹೊನ್ನಪ್ಪನವರು.—ನನ್ನ ಕೆಲವು ಮಿತ್ರರ ವಿಚಾರ ಹೇಳಿದೆನೇ ಹೊರತು ಸರ್ಕಾರದವರಿಗೆ ಹೇಳಲಿಲ್ಲ.

ಈಗ ನಮ್ಮ ಸರ್ಕಾರದವರು ಕೆಲವು ಯೋಜನೆಗಳನ್ನು ತಯಾರು ಮಾಡುತ್ತಿದ್ದಾರೆ. ಉದಾಹರಣೆಗೆ ಹೆಚ್ಚು ಬೆಳೆ ಬೆಳೆಯುವ ಯೋಜನೆಯನ್ನು ತೆಗೆದುಕೊಳ್ಳೋಣ. ಇದರ ವಿಚಾರದಲ್ಲಿ ಸರ್ಕಾರದವರಿಗೆ ನಾನು ಹೇಳುವುದಿಷ್ಟೆ : ಇದರಲ್ಲಿ ಖಂಡಿತವಾಗಿ ನೀವು ಸೋಲುತ್ತೀರಿ, ಇದನ್ನು ಸರಿಯಾದ ರೀತಿಯಲ್ಲಿ ಮಾಡಿಲ್ಲ. ನಾನು ಟೀಕೆಯನ್ನೂ ಮಾಡುತ್ತೇನೆ, ಸಲಹೆಯನ್ನೂ ಕೊಡುತ್ತೇನೆ, ಈ ಯೋಜನೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಉದಾಹರಣೆಗೆ, ಬಾವಿಗಳಿಗೆ ಕೊಡುತ್ತಿರುವ ಸಹಾಯ ದ್ರವ್ಯದಲ್ಲಿ ಸೇಕಡ 25 ರಷ್ಟು ಕೂಡ ಈ ಕೆಲಸಕ್ಕಾಗಿ ಉಪಯೋಗವಾಗುತ್ತಿಲ್ಲ. ತಾವು ಇದನ್ನು ಪರೀಕ್ಷೆಮಾಡಬಹುದು ಮಾಡಿದರೆ, ಅನೇಕರು ಬಾವಿಗೋಸ್ಕರ ಎಂದು ಹೇಳಿ ತೆಗೆದುಕೊಂಡ ಹಣದಿಂದ ಸಾಲ ತೀರಿಸಿಕೊಂಡಿದ್ದಾರೆ, ವ್ಯಾಪಾರ ಮಾಡಿದ್ದಾರೆ, ಮದುವೆ ಮಾಡಿದ್ದಾರೆ. ಹೀಗೆ ಬೇರೆ ಬೇರೆ ಕೆಲಸಗಳಿಗೆ ಉಪಯೋಗಿಸಿದ್ದಾರೆ. ಸರ್ಕಾರದವರು ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟುವುದರಿಂದ ಅದರ ಫಲ ಅಥವಾ ಪ್ರಯೋಜನ ತಾತ್ಕಾಲಿಕವಾಗಿ ನಮ್ಮ ಕೈಗೆ ಸಿಕ್ಕುವುದಿಲ್ಲ. ಇವುಗಳಿಂದ 1951ನೆಯ ಇಸವಿಯಲ್ಲಿ ನಮ್ಮ ದೇಶ ಆಹಾರದ ವಿಚಾರದಲ್ಲಿ ಸ್ವಪರಿಪೂರ್ಣವಾಗುವುದಕ್ಕೆ ಸಾಧ್ಯವಿಲ್ಲ, ಇದಕ್ಕೆ ಬದಲು ಈಗಿರುವ lift irrigation ಅಭಿವೃದ್ಧಿ ಮಾಡಬೇಕು, ವಿದ್ಯುಚ್ಛಕ್ತಿ ಪಂಪುಗಳನ್ನು ಹೆಚ್ಚು ಹೆಚ್ಚಾಗಿ ಜನ ತೆಗೆದುಕೊಂಡು ಉಪಯೋಗಿಸಲು ಪ್ರೋತ್ಸಾಹ ಕೊಡಬೇಕು. ನದಿಗಳಿಂದ ನೀರನ್ನು ಎತ್ತರವಾದ ಪ್ರದೇಶಗಳಿಗೆ ಕೊಟ್ಟರೆ ಪ್ರಯೋಜನವಾಗುತ್ತದೆ.

ಶ್ರೀ ಟಿ. ಮರಿಯಪ್ಪನವರು.—ಅಲ್ಪಕಾಲಾವಧಿಯ ಯೋಜನೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ಟಿ. ಸಿ. ಹೊನ್ನಪ್ಪನವರು.—ತಮ್ಮ ಉದ್ದೇಶ ಹಾಗಿದ್ದರೂ ಆದರಂತೆ ನಡೆಯುತ್ತಿಲ್ಲ.

Janab SYED ABDUR RAHMAN (Chikmagalur *cum* Shimoga–Muslim).—On a point of order, Sir. Can the Minister speak from a different seat ?

Sri T. MARIAPPA (Home Minister).—I am not going to speak again. (Laughter)

(So saying the Hon'ble Minister came back to his seat.)

ಶ್ರೀ ಟಿ. ಸಿ. ಹೊನ್ನಪ್ಪನವರು.—ಸರ್ಕಾರದವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನೇ ನೋಡಿದರೂ ಕೂಡ ಅನೇಕ ಸಂದರ್ಭಗಳಲ್ಲಿ ಅವರ ಈ ಯೋಜನೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಇದ್ದ ಉತ್ಪತ್ತಿಗಿಂತಲೂ ಈಗ ಕಡಿಮೆಯಾಗುತ್ತಿದೆ. ಈಗ ಮಾಡಿರತಕ್ಕ ಯೋಜನೆಗಳಿಂದ ರಿಜರ್ವ್‌ನಲ್ಲಿದ್ದ ಹಣ ಖರ್ಚಾಯಿತೇ ಹೊರತು ಸ್ವಲ್ಪವೂ ಪ್ರಯೋಜನವಾಗಲಿಲ್ಲವೆಂದು ಜನರು ತುಂಬಾ ಆಕ್ಷೇಪಣೆಮಾಡುತ್ತಿದ್ದಾರೆ. ಆದಕಾರಣ ಯೋಜನೆಗಳನ್ನು ಮಾಡಿದರೆ ಅವುಗಳನ್ನು ಸರಿಯಾಗಿ ಕಾರ್ಯರೂಪಕ್ಕೆ ತರಬೇಕು.

ಇನ್ನು ರಸ್ತೆಗಳ ವಿಚಾರ. ನಮ್ಮ ಮಂತ್ರಿಗಳು ನೀಲಗಿರಿಗೆ ದಯಮಾಡಿಸಿರಬಹುದು. ಆಗ ಆ ರಸ್ತೆಯನ್ನು ನೋಡಿರಬಹುದು. ಆ ರಸ್ತೆಯಲ್ಲಿ ಮೈಸೂರಿನ ಗಡಿಗೆ ಸೇರಿದ ಭಾಗ ಎಲ್ಲಿಯವರೆಗಿದೆ ಎಂದು ಯಾರನ್ನೂ ಕೇಳಬೇಕಾಗಿಲ್ಲ. ಮಂತ್ರಿಗಳು ಅಲ್ಲಿಗೆ ಹೋಗಿ ಬಂದ ಒಂದು ವಾರವಾದ ಮೇಲೆ ನಾನು ಅಲ್ಲಿಗೆ ಹೋಗಿದ್ದೆ. ಆ ರಸ್ತೆಯ ಸ್ಥಿತಿಯನ್ನು ನೋಡಿ ಮೈಸೂರು ಸರ್ಕಾರದ ಕೆಲಸ ಈ ಮಟ್ಟಕ್ಕೆ ಇಳಿಯಬಹುದೇ ಎಂದು ನನಗೆ ವ್ಯಸನವಾಯಿತು. ನಾನು ಕಾಂಗ್ರೆಸ್ ಸರ್ಕಾರವನ್ನು ಜರಿಯಬೇಕೆಂದು ಹೇಳುತ್ತಿಲ್ಲ. ಆದರೆ ಮದ್ರಾಸು ಪ್ರಾಂತಕ್ಕೆ ಸೇರಿದ ರಸ್ತೆಗೂ ನಮ್ಮ ರಸ್ತೆಗೂ ಇರುವ ವ್ಯತ್ಯಾಸ ನೋಡಿ ವ್ಯಸನದಿಂದ ಹೇಳುತ್ತೇನೆ. ನಮ್ಮ ಸರ್ಕಾರಕ್ಕೆ ಸೇರಿದ ರಸ್ತೆಯಲ್ಲಿ ಒಂದೊಂದು ಅಡಿಗೂ ಹಳ್ಳ ಕೊಳ್ಳಗಳಿವೆ, pits and pots ಇವೆ.

ಶ್ರೀ ಟಿ. ಮರಿಯಪ್ಪನವರು.—ಅದೊಂದು ರಸ್ತೆಯನ್ನು ಮಾತ್ರ ನೋಡಿ ಹೇಳಬಾರದು, ತಾವು ಮದ್ರಾಸಿಗೆ ಸೇರಿದ ಬೇರೆ ರಸ್ತೆಗಳನ್ನೂ ನೋಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕಾಗುತ್ತದೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಒಳ್ಳೆ ರಸ್ತೆಗಳು ಬಹಳ ಅವ್ಯವಸ್ಥೆಯಲ್ಲಿವೆ. ನಿಮ್ಮ ಕಾರುಗಳು ಅಲ್ಲಿಗೆ ಹೋದರೆ ಒಳ್ಳೆಯ ಸ್ಥಿತಿಯಲ್ಲಿ ವಾಪಸ್ಸು ಬರುವಹಾಗೆಯೇ ಇಲ್ಲ. ತಾವು ರೋಡ್ ಇನ್ಸ್‌ಪೆಕ್ಷನ್‌ಗೆ ಹೋಗತಕ್ಕ ಕಾಲದಲ್ಲಿ ಡಬ್ಬಲ್‌ಸ್ಪ್ರಿಂಗ್ ಇರತಕ್ಕ ಕಾರನ್ನು ತೆಗೆದುಕೊಂಡು ಹೋಗಬೇಡಿ. ಹಳೇ ಕಾರನ್ನು ತೆಗೆದುಕೊಂಡು ಹೋಗಿ. ಆಗ ತಮಗೇ ಗೊತ್ತಾಗುತ್ತದೆ. ತಾವು ಕಾಂಕ್ರೀಟ್ ರಸ್ತೆಗೆ 800 ರೂಪಾಯಿ ಕೊಡುತ್ತೀರಿ. ಅದೇ ಬಾಕೀ ರಸ್ತೆಗಳಿಗೆ ಎಷ್ಟು ಕೊಡುತ್ತೀರಿ ಎಂಬುದನ್ನು ನೋಡೋಣ. ಮೆಟಲ್ ರಸ್ತೆಗೆ 100 ರೂಪಾಯಿಯಿಂದ 250 ರೂಪಾಯಿಗಳೊಳಗೆ ಕೊಡುತ್ತಾ ಇದ್ದೀರಿ. ಕಾಂಕ್ರೀಟ್ ರಸ್ತೆಗೆ ತಾವು ಆರು ತಿಂಗಳು ಕೈಹಾಕದೇ ಇದ್ದರೂ ಚಿಂತೆಯಿಲ್ಲ. ಈ ರಸ್ತೆಗಳಿಗೆ ಮಾತ್ರ ಹೆಚ್ಚು ಗಮನ ಕೊಡಬೇಕು. ಎಷ್ಟೋ ಮಾರ್ಕೆಟಿಂಗ್ ರಸ್ತೆಗಳಿಗೂ ಕೂಡ ತಾವು 250 ರೂಪಾಯಿಗಳನ್ನು ಕೊಡುತ್ತಾ ಇದ್ದೀರಿ. ಅಷ್ಟು ಸ್ವಲ್ಪ ಹಣದಿಂದ ರಿಪೇರಿ ಮಾಡಿದ ರಸ್ತೆಗಳು ಬಹಳ ಕಾಲ ಹೇಗೆ ನಿಲ್ಲುತ್ತವೆ? ಆದ್ದರಿಂದ ತಾವು ಕೊಡತಕ್ಕ ಗ್ರಾಂಟು ಸಾಲದು. ಉಪಯೋಗಿಸುವ ಕ್ರಮವೂ ಸಹ ಸರಿಯಾಗಿಲ್ಲ. 3 ಇಂಚು ದಪ್ಪ ಜಲ್ಲಿ ಹಾಕಿದರೆ ಮೂರು ವರ್ಷ ನಾಲ್ಕು ವರ್ಷ ಆ ರಸ್ತೆ ರಿಪೇರಿಗೆ ಕೈಹಾಕಬೇಕಾಗುವುದಿಲ್ಲ. ಒಂದೊಂದು ಫರ್ಲಾಂಗಿಗೆ ಒಂದೊಂದು ಇಂಚು ದಪ್ಪ ಜಲ್ಲಿ ಹಾಕುವುದರಿಂದ ಪ್ರತಿವರ್ಷವೂ ರಿಪೇರಿ ಮಾಡಬೇಕಾಗುತ್ತದೆ, ಅಲ್ಲದೆ ಹಣವೂ ಸಹ ಖರ್ಚಾಗುತ್ತದೆ. ಇದನ್ನು ಸರಿಪಡಿಸಿದರೆ ನಮ್ಮ ಸರ್ಕಾರದವರಿಗೆ ದೋಷಾರೋಪಣೆ ಬರುವುದಿಲ್ಲವೆಂದು ಹೇಳುತ್ತೇನೆ.

ವಿದ್ಯಾಭ್ಯಾಸದ ವಿಚಾರ ಹೇಳುವುದಾದರೆ ತಾವು ಎಲ್ಲವನ್ನೂ ಸಿಟಿಗಳಲ್ಲಿ ಕೇಂದ್ರೀಕೃತ ಮಾಡಿದ್ದೀರಿ. ಗ್ರಾಮಾಂತರದಲ್ಲಿರತಕ್ಕ ಜನಗಳಿಗೆ ಸೌಕರ್ಯ ಒದಗುತ್ತಿಲ್ಲ. ಗ್ರಾಮಾಂತರಗಳಲ್ಲಿ ಸ್ಕೂಲುಗಳು ಬೇಕೆಂದರೆ ಕಟ್ಟಡಗಳನ್ನು ಕಟ್ಟಿಸಿ ಕೊಟ್ಟರೆ ಸ್ಕೂಲು ಕೊಡುತ್ತೇವೆ ಎಂದು ಹೇಳುತ್ತೀರಿ.

ಹೊಟೆಲುಗಳು ಬಹಳ ಜಾಸ್ತಿಯಾಗಿ ಬಿಟ್ಟಿವೆ. ಅವುಗಳನ್ನು ಕಡಿಮೆ ಮಾಡಿದ ಹೊರತು ಜನಗಳಿಗೆ ಅನುಕೂಲವಾಗುವುದಿಲ್ಲ.

ಶ್ರೀ ಟಿ. ಮರಿಯಪ್ಪನವರು.—ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಹೊಟೇಲುಗಳನ್ನು ನಿಲ್ಲಿಸಲಾಗಿದೆಯಲ್ಲಾ !!

ಶ್ರೀ ಟಿ. ಸಿ. ಹೊನ್ನಪ್ಪನವರು.—ಅಷ್ಟೇ ಸಾಲದು. ಸಿಟಿಗಳಲ್ಲಿರತಕ್ಕ ಹೊಟೇಲುಗಳನ್ನೂ ನಿಲ್ಲಿಸಬೇಕು. ಶೇಕಡ 80 ರಷ್ಟು ಜನ ಗ್ರಾಮಾಂತರಗಳಲ್ಲಿರತಕ್ಕವರು ಸಿಟಿಗಳಿಗೆ ಬಂದುಬಿಟ್ಟಿರುತ್ತಾರೆ. ಹಳ್ಳಿಗಳಲ್ಲಿ ವ್ಯವಸಾಯ ಮಾಡುವುದಕ್ಕೆ ಕೂಲಿಗಳು ಸಿಕ್ಕದೆ ಬಹಳ ಕಷ್ಟಪಡಬೇಕಾಗಿದೆ. ಹೊಟೇಲುಗಳಲ್ಲಿ ಸುಲಭವಾಗಿ ಊಟಕ್ಕೆ ಸಿಗುತ್ತದೆ ಎಂದು ಆರೀತಿ ಪಟ್ಟಣಗಳಿಗೆ ಬಂದು ಸೇರುತ್ತಿದ್ದಾರೆ. ಆದ್ದರಿಂದ ಹೊಟೇಲುಗಳನ್ನು ಬಂದು ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರು ವಿದ್ಯಾವಂತರಾದ ಹೊರತು ಸಾಧ್ಯವಿಲ್ಲ.

ಇನ್ನು ಮಿಲ್ಲುಗಳ ವಿಚಾರ ಸ್ವಲ್ಪ ಹೇಳುತ್ತೇನೆ. ಮಿಲ್ಲುಗಳಲ್ಲಿ ಅಕ್ಕಿಗೆ ಪಾಲಿಷ್ ಕೊಡುತ್ತಾ ಇರುವುದು ತುಂಬಾ ಅನ್ಯಾಯ. ತಾವು ಕೊಡತಕ್ಕ ಅಕ್ಕಿಗೆ ಪಾಲಿಷ್ ಮಾಡಿಸದೇ ಉಪಯೋಗಿಸುವ ಹಾಗೆಯೇ ಇಲ್ಲ. ತಾವು ಕೊಡುವ ಅಕ್ಕಿಯಲ್ಲಿ ಬೇಕಾದಷ್ಟು ಬತ್ತ ಇರುತ್ತದೆ, ಅದರ ಜೊತೆಗೆ ಹೊರಟುಹೋಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ಅಪಾದನೆ ಬರುತ್ತಾ ಇದೆ. ಇವುಗಳನ್ನೆಲ್ಲಾ ಸರಿಪಡಿಸಿದ ಹೊರತು ಈ ಸರ್ಕಾರದವರಿಗೆ ಶ್ರೇಯಸ್ಸು ಬರುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಜೋಯಿಸರು (ಮೈಸೂರು ಜಿಲ್ಲೆ).—ಸ್ವಾಮಿ, ನೆನ್ನೆಯ ದಿನದಿಂದ ಈ ಬಡ್ಜೆಟ್ ಭಾಷಣಗಳನ್ನು ಕೇಳುತ್ತಾ ಇದ್ದರೆ ಒಂದು ಸಿನಿಮಾ ನೋಡಿದ್ದು ಜ್ಞಾಪಕಕ್ಕೆ ಬರುತ್ತಾ ಇದೆ. ಆ ಸಿನಿಮಾದಲ್ಲಿ ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಹಾಗಿದ್ದೆ, ಹೀಗಿದ್ದೆ ಎಂದು ಹೇಳುತ್ತಾ ಇದ್ದರು. ಅದೇ ರೀತಿ ನಮ್ಮ ಕಾಲದಲ್ಲಿ, ನಮ್ಮ ಸರ್ಕಾರದ ಏರ್ಪಾಡು ಹಾಗಿತ್ತು, ಹೀಗಿತ್ತು ಎಂಬ ವಾದವಿವಾದ ನಡೆಯುತ್ತಾ ಇದೆ. ನನ್ನ ದೃಷ್ಟಿಯಲ್ಲಿ ಸರ್ಕಾರ ಇದ್ದುದು ಇದ್ದ ಹಾಗೆಯೇ ಇದೆ. ಇವತ್ತೂ ಇದೆ, ಮುಂದೆಯೂ ಇರುತ್ತದೆ. ವ್ಯಕ್ತಿಗಳು ಮಾತ್ರ ಬದಲಾವಣೆಯಾಗಿರಬಹುದು. ಆದ್ದರಿಂದ ಅವತ್ತು ಏನಿತ್ತು, ಇವತ್ತು ಏನಾಗಿದೆ ಎಂಬುದನ್ನು ಏನೂ ಹೇಳಬೇಕಾಗಿಲ್ಲ. ಇವತ್ತಿನ ದಿನ ಬರುವ ವರ್ಷದಲ್ಲಿ ಯಾವ ಕಾರ್ಯ ಆಗುತ್ತದೆ, ಈ ವರ್ಷ ಏನು ಮಾಡಬಹುದು ಎಂಬುದನ್ನು ಮಾತ್ರ ನೋಡಿದರೆ ಸಾಕು ಎಂದು ನಾನು ಭಾವನೆ ಮಾಡಿದ್ದೇನೆ.

ಈ ಬಡ್ಜೆಟ್‌ನಲ್ಲಿ ನಮಗೆ ಹೊಸದಾಗಿ ಕಾಣುತ್ತಾ ಇರತಕ್ಕದ್ದು ಎಂದರೆ ಕೇಂದ್ರ ಸರ್ಕಾರದವರಿಗೂ ಮತ್ತು ನಮಗೂ ಆಗಿರತಕ್ಕಂಥ ಒಂದು ಆರ್ಥಿಕ ಸಮ್ಮಿಳನ—ಕರಾರು, ಒಪ್ಪಂದ ಎಂದು ಯಾವುದು ಬೇಕಾದರೂ ಹೇಳಲಿ—ಆ ದೃಷ್ಟಿಯಲ್ಲಿ ಒಂದು ಬದಲಾವಣೆ ಆಗಿದೆ. ಅದರಲ್ಲೂ ನಮ್ಮ ಸರ್ಕಾರದವರು ಅವರ ಕೈಲಾದಷ್ಟೂ ಮಾಡಿ ಜಯಶೀಲರಾಗಿದ್ದಾರೆಂದು ಅಭಿಪ್ರಾಯಪಡುವವರಲ್ಲಿ ನಾನೂ ಒಬ್ಬ. ಇನ್ನೊಂದು ವ್ಯತ್ಯಾಸ ಏನು ಕಾಣುತ್ತಾ ಇದೆ ಎಂದರೆ, ಸಾಮಾನ್ಯವಾಗಿ ಬಡ್ಜೆಟ್ಟುಗಳನ್ನೆಲ್ಲಾ ನೋಡಿದರೆ ಆದಾಯ ಕೆಲವು ಕೋಟಿ ರೂಪಾಯಿಗಳು, ಖರ್ಚು ಕೆಲವು ಕೋಟಿ ರೂಪಾಯಿಗಳು, ಈ ಖರ್ಚಿನ ಜೊತೆಗೆ ಸಾರ್ವಜನಿಕ ಉಪಯುಕ್ತತೆಗೆ ಒಂದಷ್ಟು, ಅಪದ್ಧನ ಎಂಬುದಾಗಿ ಒಂದಷ್ಟು ಇಡುವುದು, ಮೊದಲಿನಿಂದಲೂ ಬಂದಿರತಕ್ಕ ಪದ್ಧತಿ. ಆ ಪದ್ಧತಿಯನ್ನು ಇವತ್ತಿನ ದಿನ ನಾವು ಈ ಬಡ್ಜೆಟ್‌ನಲ್ಲಿ ಕಾಣುತ್ತಾ ಇಲ್ಲ. ಅದಕಾರಣ, ಏನಪ್ಪಾ ಇರುವುದನ್ನೂ ಖರ್ಚು ಮಾಡಿಬಿಡುತ್ತಾ ಇದ್ದಾರಲ್ಲಾ ಎಂದು ಹೇಳತಕ್ಕ ವಾದ ಬಹಳ ಪ್ರಬಲವಾಗಿ ಏರುತ್ತಾ ಇದೆ. ಒಂದು ಗಾದೆ ಜ್ಞಾಪಕಕ್ಕೆ ಬರುತ್ತಾ ಇದೆ. "ಕುಳಿತುಕೊಂಡು ಊಟ ಮಾಡುವವನಿಗೆ ಕುಡಿಕೆ ಹಣ ಸಾಲದು" ಎನ್ನುವ ಹಾಗೆ, ಎಷ್ಟೇ ಹಣ ಸಂಪಾದನೆ ಮಾಡಿದರೂ ಕುಳಿತುಕೊಂಡು ಊಟ ಮಾಡಿದರೆ ಅದೂ ಸಾಲುವುದಿಲ್ಲ. ಅದನ್ನು ವ್ಯಯ ಮಾಡಲೇಬೇಕು. ಆದರೆ ಹಿಂದಿನ ಬಡ್ಜೆಟ್‌ಗಳಿಗೂ ಇದಕ್ಕೂ ಏನು ವ್ಯತ್ಯಾಸ ಎಂದರೆ, ಕುರಿ ಕೊಬ್ಬಿದಷ್ಟೂ ಕುರುಬನಿಗೆ ಲಾಭ ಎನ್ನುವಹಾಗೆ ಇರತಕ್ಕ ದುಡ್ಡನ್ನೆಲ್ಲಾ ಜನರ ಮೇಲೆ ಎರಚಿ ಸಾಮಾನ್ಯ ಪ್ರಜೆಗೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿದರೆ, ಜನಕ್ಕೆ ಅನುಕೂಲವಾದರೆ, ಅದರಿಂದ ಸರ್ಕಾರಕ್ಕೆ ಬೇಕಾದಂಥ ಸಹಾಯ, ಸಂಪತ್ತು ಬರುತ್ತದೆ ಎಂಬ ಒಂದು ನೀತಿ,

ಒಂದು ತತ್ವ ಅಡಕವಾಗಿದೆ. ಆ ದೃಷ್ಟಿಯಿಂದ ಈ ಬಡ್ಜೆಟ್ಟನ್ನು ರಚನೆ ಮಾಡಿದ್ದಾರೆಂದು ನಾನು ಭಾವನೆ ಮಾಡುತ್ತೇನೆ.

ಸ್ವಾಮಿ, ಇಷ್ಟು ಹೇಳಿ ಇನ್ನು ಕೈಗಾರಿಕೆಯ ವಿಷಯಕ್ಕೆ ಹೋಗುತ್ತೇನೆ. ಸರ್ಕಾರದವರು ಬೇಕಾದಷ್ಟು ಕೈಗಾರಿಕೆಗಳಲ್ಲಿ ಉದ್ಯುಕ್ತರಾಗಿದ್ದಾರೆ, ಕೆಲಸ ಕಾರ್ಯಗಳನ್ನು ನಡೆಸುತ್ತಾ ಇದ್ದಾರೆ. ಈ ಕೈಗಾರಿಕೆಗಳು ಸರ್ಕಾರದವರಿಗೆ ಸೇರಿದವುಗಳಾಗಿದ್ದರಿಂದ ಎಷ್ಟೋ ಸೌಲಭ್ಯಗಳು ಇವೆ.

ಹೀಗೆ ಖಾಸಗೀ ಕೈಗಾರಿಕೋದ್ಯಮಗಳು ಇರುವ ಹಾಗೆ ಮಾಡುತ್ತಾ ಹೋದರೆ ಮುಂದೆ ಈ ಕೈಗಾರಿಕೆಯೆಂಬುದು ಉಳಿಯುವ ಹಾಗೆ ನನಗೆ ಕಂಡು ಬರುತ್ತಿಲ್ಲ. ಈಗ ನಮ್ಮ ಆದಾಯ ತೆರಿಗೆಯ ಬಾಬುಗಳು ಕೇಂದ್ರಕ್ಕೆ ಹೋದ ತರುವಾಯ 4-5 ವರ್ಷಗಳವರೆಗೆ ಕೈಗಾರಿಕೆಯ ವಿಷಯದಲ್ಲಿ ನಾವು ಯಾವುದನ್ನೂ ಅಪೇಕ್ಷಿಸುವುದಕ್ಕೆ ಆಗುವುದಿಲ್ಲ. ಕಾರಣ, ಅವರು ನಮಗೆ ಯಾವಯಾವ ಬಾಬಿನಲ್ಲಿ ಎಷ್ಟೆಷ್ಟು ರಿಯಾಯಿತಿಗಳನ್ನು ತೋರಿಸುತ್ತಾರೆಂಬುದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಸಿ. ದಾಸಪ್ಪನವರು.—ತಾವು ಆರ್ಥಿಕ ವಿಲೀನೀಕರಣದ ಒಪ್ಪಂದವನ್ನು ತೆಗೆದು ನೋಡಿದರೆ ಅದರಲ್ಲಿ ಎಲ್ಲಾ ಮುಖ್ಯಾಂಶಗಳನ್ನೂ ನಮೂದಿಸಿರುವುದು ತಮಗೇ ಗೊತ್ತಾಗುತ್ತದೆ.

Sri G. A. ACHARYA (Bangalore District—General).—He is only pointing out to you, "Presume that there is income-tax and work your industries in such a manner that you need not be afraid to-morrow." That is a constructive suggestion.

ಶ್ರೀ ಎಂ. ಎಸ್. ಜೋಯಿಸರು.—ಈಗ ಏನೂ ಬರುತ್ತಿಲ್ಲವೆಂದು ನಾನು ಹೇಳುತ್ತಿಲ್ಲ. ತಾವು ಕೇಂದ್ರದವರೊಡನೆ ಅಷ್ಟು ಹೊಡೆದಾಡಿ ಅನುಕೂಲ ಮಾಡಿರುವುದಕ್ಕಾಗಿ ನಾನು ತಮ್ಮನ್ನು ವಂದಿಸುತ್ತೇನೆ. ಆದರೆ ಅದನ್ನೇ ನಂಬಿಕೊಂಡು ನಾವು ಬಹಳ ವರ್ಷಕಾಲ ಇರುವುದಕ್ಕಾಗುವುದಿಲ್ಲ.

ಈ ಸಂದರ್ಭದಲ್ಲಿ ನಾನೊಂದು ಸೂಕ್ತವಾದ ಸಲಹೆಯನ್ನು ಸೂಕ್ಷ್ಮವಾಗಿ ತಿಳಿಸಲಿಚ್ಛಿಸುತ್ತೇನೆ. ಈ ನಮ್ಮ ಹಣಕಾಸಿನ ಮಂತ್ರಿಗಳಿಗೆ ಈ ಹಣದ ವಿಚಾರ ವಿನಾ ಮತ್ತೆ ಯಾವ ಬಾಬುಗಳನ್ನೂ ಇವರಿಗೆ ಜೋಡಿಸಿಕೊಡಬಾರದೆಂಬುದೇ ಆಗಿದೆ ಆ ನನ್ನ ಸಲಹೆ. ಇದನ್ನು ನಾನೊಂದು ತತ್ವದೃಷ್ಟಿಯಿಂದ ಹೇಳುತ್ತಿದ್ದೇನೆ. ಹಣಕಾಸಿನ ಮಂತ್ರಿಗಳಿಗೆ ಯಾವಾಗಲೂ, ಹಣವನ್ನು ಗಳಿಸತಕ್ಕ ಬಾಬು ಒಂದು ಮಾತ್ರ ಇರಬೇಕೇ ಹೊರತು ಇತರ ಬಾಬುಗಳು ಅವರಿಗೆ ಇರಲೇಕೂಡದು. ಏತಕ್ಕೆಂದರೆ, ಖರ್ಚು ಬಾಬುಗಳ ಬಗ್ಗೆ ಅವರಿಗೊಂದು 'ಸವತಿ ಮಾತ್ಸರ' ಇದ್ದಂತೆ ಕಾಣತಕ್ಕ ಭಾವನೆ ಇರುತ್ತದೆ. ಅಂದರೆ, ಈಗಿರತಕ್ಕ ನಮ್ಮ ಮಂತ್ರಿಗಳಿಗೆ ಅಂಥಾ ಭಾವನೆಯಿದೆಯೋ ಅಥವಾ ಇಲ್ಲವೋ ಆ ವಿಚಾರ ನನಗೆ ತಿಳಿಯದು. ಅಂತೂ ಒಂದು ತತ್ವ ದೃಷ್ಟಿಯಿಂದ ಇರಬಾರದೆಂದು ನಾನು ಸಲಹೆ ಮಾಡುತ್ತೇನೆ.

Sri T. SUBRAMANYA (Tumkur District–General).—Industries Minister cannot be Finance Minister.

ಶ್ರೀ ಎಂ. ಎಸ್. ಜೋಯಿಸರು.—ಇನ್ನು ವಿದ್ಯುಚ್ಛಕ್ತಿಯ ಬಾಬಿನ ಪರವಾಗಿ ಹೇಳುವುದಾದರೆ ಆ ಬಾಬಿನಲ್ಲಿ ಸ್ವಲ್ಪ ಹೆಚ್ಚು ಉತ್ಪತ್ತಿ ಬರುವಂತೆ ಮಾಡಿದ್ದೀರೆಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನು ಸೇಲ್ಸ್ ಟ್ಯಾಕ್ಸ್ ವಿಚಾರವಾಗಿ ಹೇಳಬೇಕೆಂದರೆ, ಇದನ್ನು ಹಾಕತಕ್ಕ ಕಾಲದಲ್ಲಿ ತಾವು ದೇಶಾದ್ಯಂತವೂ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರುವುದಾಗಿ ತಿಳಿಸಿದ್ದಿರಿ. ಆದರೆ ಈಗ ಆ ಎಕ್ಸೈಜ್ ಬಾಬು ಇನ್ನೂ ಇರುವುದರಿಂದ ಆ ಇಲಾಖೆಯಿಂದ ಮೊದಲು ತಮಗೆ ಏನು ವರಮಾನ ಬರುತ್ತಿತ್ತೋ ಈಗ ಅದು ಕಡಿಮೆಯಾಗಿದೆ. ಆದರೆ ಮತ್ತೊಂದು ಕಡೆ, ಈ ಸೇಲ್ಸ್ ಟ್ಯಾಕ್ಸಿನಿಂದ ಪೂರ್ತಿ ವರಮಾನ ಬರುತ್ತದೆ. ಅಂತೂ ಈ ಬಾಬಿನಿಂದ ಈಗ ಸರ್ಕಾರಕ್ಕೆ ಮೊದಲಿಗಿಂತಲೂ ಹೆಚ್ಚು ಆದಾಯ ಬರುತ್ತಿದೆ. ಆದರೆ ಇದರ ಬಗ್ಗೆ ಕೊಂಚ ಖರ್ಚನ್ನೂ ಮಾಡಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ಒಂದು ಅಂಶವನ್ನು ತರಬೇಕಾಗಿದೆ. ಹಿಂದೆ ಈ ಸೇಲ್ಸ್ ಟ್ಯಾಕ್ಸ್ ಹಾಕತಕ್ಕ ಕಾಲದಲ್ಲಿ ಅಕ್ಕಾಯಿಯನ್ನು ಸಂಪೂರ್ಣವಾಗಿ ವಜಾ ಮಾಡುತ್ತೇವೆಂದು ತಿಳಿಸಿದ್ದಿರಿ. ತಾವು ಅದನ್ನು ಇನ್ನೂ ವಜಾ ಮಾಡದೆ ಇರುವುದರಿಂದ, ನಾನು ಹಣಕಾಸಿನ ಮಂತ್ರಿಗಳಿಗೆ ತಿಳಿಸುವುದೇನೆಂದರೆ, ಈ ವಿಚಾರದಲ್ಲಿ ತಾವು ಭರವಸೆ ನೀಡಿದ್ದ ಪ್ರಕಾರ ಈ ಅಕ್ಕಾಯಿ ಸುಂಕವನ್ನು ಸೇಲ್ಸ್ ಟ್ಯಾಕ್ಸ್ ಹಾಕಿದ ತಾರೀಖಿನಿಂದ ಅಂದರೆ ಜಾರಿಗೆ ಕೊಡಬೇಕೆಂದು ತಿಳಿಸುತ್ತೇನೆ.

ಇನ್ನು ಈ ವಿದ್ಯಾಭ್ಯಾಸದ ಬಾಬಿಗೂ ಸಹ ತಕ್ಕಷ್ಟು ಹಣವನ್ನು ಸರ್ಕಾರದವರು ಒದಗಿಸಿಲ್ಲ. ಆದರೆ ನನ್ನ ದೃಷ್ಟಿಯಲ್ಲಿ ಸರ್ಕಾರದವರಿಗೆ, ಈ ವಿದ್ಯಾಭ್ಯಾಸದ ಬಾಬಿನಲ್ಲಿ ಅಷ್ಟು ಹೆಚ್ಚು ಹಣವನ್ನು ಖರ್ಚು ಮಾಡಲು ಶಕ್ತಿ ಇಲ್ಲದೇ ಇರುವುದರಿಂದ, ಮತ್ತು ಎಲ್ಲಾ ಬಾಬುಗಳಿಗೂ ಇದೇ ರೀತಿ ಹಣವನ್ನೊದಗಿಸತಕ್ಕ ಬಗ್ಗೆ ಸರ್ಕಾರಕ್ಕೆ ಸಾಧ್ಯವಿಲ್ಲದ ಕಾರಣ ಈ ವಿದ್ಯಾಭ್ಯಾಸದ ಬಾಬಿನಲ್ಲಿ ಖಾಸಗಿಯವರು ಮುಂದೆ ಬಂದು ಹೆಚ್ಚು ಹೆಚ್ಚು ವಿದ್ಯಾಸೌಕರ್ಯಗಳನ್ನು ಕಲ್ಪಿಸುವಂತೆ ಮಾಡತಕ್ಕದ್ದು ಉತ್ತಮವಾದುದೆಂದು ಹೇಳುತ್ತೇನೆ. ಈ ಬಾಬಿಗೆ ತಾವಿನ್ನೂ 3 ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಾಲದೆಂದು ನನ್ನ ಅಭಿಪ್ರಾಯ. ಈಗ ಸರ್ಕಾರಿ ಪಾಠಶಾಲೆಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದು ತಿಂಗಳಿಗೆ ಸುಮಾರು ರೂ. 6–4–0 ಖರ್ಚಾಗುವಂತೆ ನನಗೆ ತಿಳಿದುಬಂದಿದೆ. ಆದರೆ ಖಾಸಗೀ ಸ್ಕೂಲುಗಳಲ್ಲಿ ಇಷ್ಟು ಖರ್ಚು ಆಗುತ್ತಿಲ್ಲ. ಇದರಲ್ಲಿ ಅಲ್ಪ ಸ್ವಲ್ಪ ಹೆಚ್ಚುಕಡಿಮೆ ಇರಬಹುದು. ಏತಕ್ಕೆಂದರೆ ಈ ಅಂಶಗಳನ್ನು ನಾನು ಅಷ್ಟು ನಿರ್ದಿಷ್ಟವಾಗಿ ಪರಿಶೋಧಿಸಿಲ್ಲ. ತಾವು ಈ ಬಗ್ಗೆ ಅವರಿಗೆ ಕೊಡುತ್ತಿರುವ ಗ್ರಾಂಟನ್ನು ನೋಡಿದರೆ ಈ 6¼ ರೂಪಾಯಿಗಳಿಗಿಂತಲೂ ಕಡಿಮೆಯಾಗಿರುವಂತೆ ಕಾಣುತ್ತದೆ. ಪ್ರೈವೇಟ್ ಏಡೆಡ್ ವಿದ್ಯಾಸಂಸ್ಥೆಗಳನ್ನು ನಡೆಯುತ್ತಿರುವ ಕಡೆಗಳಲ್ಲೆಲ್ಲಾ ಕೇವಲ 1 ಅಥವಾ 1¼ ರೂಪಾಯಿ ಖರ್ಚು ಬರುತ್ತಿದೆ. ಆದಕಾರಣ ಸಂಸ್ಥಾನದಲ್ಲಿ ಹೆಚ್ಚು ಹೆಚ್ಚಾಗಿ ಪಾಠಶಾಲೆಗಳನ್ನು ತೆರೆಯಲು, ತಾವು ಯಾವುದಾದರೂ ಒಂದು ನಿರ್ದಿಷ್ಟವಾದ ಯೋಜನೆಯನ್ನು ತಯಾರಿಸುವುದು ಉತ್ತಮವಾಗಿರುತ್ತೆಂದು ನಾನು ಸಲಹೆಮಾಡುತ್ತೇನೆ.

ಶ್ರೀ ಜಿ. ಎ. ಆಚಾರ್ಯರವರು.—ಇದು ಬಹಳ ಸತ್ಯವಾದ ಮಾತು.

ಶ್ರೀ ಎಂ. ಎಸ್. ಜೋಯಿಸರು.—ಇನ್ನು ನಮಗೆ ಉಳಿದಿರತಕ್ಕ ಆದಾಯದ ಬಾಬುಗಳಲ್ಲಿ ಇಕ್ಷೂರೆನ್ಸ್

ಒಂದಾಗಿದೆ. ಈ ಬಾಬನ್ನು ತಾವು ಸರಿಯಾಗಿ ವಿಚಕ್ಷಣೆಯಿಂದ ನಡೆಸುತ್ತಿಲ್ಲ. ಇದಕ್ಕಾಗಿ ತುಂಬಾ ವಿಷಾದಪಡಬೇಕಾಗಿದೆ. ಮೊದಲು ಮೊದಲು ಈ ಇನ್ಷೂರೆನ್ಸ್ ಹೆಲ್ಪರುಗಳಿಗೆ ಲೆಕ್ಕವಿಲ್ಲದ ಹಾಗೆ, ಯಾವ ಲೆಕ್ಕಾಚಾರವನ್ನೂ ಇಡದೆ ಯದ್ವಾತದ್ವ ಅವರಿಗೆ ಕಮಿಷನ್ ಕೊಟ್ಟರು. ಅವರು ಅದನ್ನು ಯಥೇಚ್ಛವಾಗಿ ಖರ್ಚುಮಾಡಿ, ಬಹಳ ದುಂದಾಗಿ ಜೀವನ ನಡೆಸುತ್ತಿದ್ದರು. ಆದರೆ ಹಿಂದಿನಿಂದಲೂ ಲೆಕ್ಕ ಇಟ್ಟು ಯಾರು ಯಾರಿಗೆ ಎಷ್ಟೆಷ್ಟು ಕೊಡಬೇಕಾಗಿರುತ್ತೆಂಬುದನ್ನು ಪರಿಗಣಿಸದೆ ವಿಶೇಷವಾಗಿ ಅಡ್ವಾನ್ಸು ಹಾಕಿ, ಈಗ ಅವರಿಗೆ ಅದನ್ನು ವಾಪಸ್ಸು ಕೊಡುವುದೊಂದೇ ಅಲ್ಲದೆ, ಅವರ ಕಮಿಷನ್ ಸಹ ಅವರಿಗೆ ಈಗ ಸಾಕಾಗದೆ ಅವರು ಜೀವನೋಪಾಯಕ್ಕಾಗಿ ತುಂಬಾ ತೊಂದರೆಪಡುತ್ತಿದ್ದಾರೆ. ಈ ಉದ್ಯಮ ಇತರೇ ವರ್ತಕತನದವರು ನಡೆಸಿಕೊಂಡು ಬಂದಂತೆ ನಡೆಯುತ್ತಿಲ್ಲ. ಈ ತೊಂದರೆಗಳಿಂದ ಹಿಂದಿದ್ದ ಅನೇಕ ಜನ ಏಜಂಟರುಗಳು ಈಗ ಈ ಇನ್ಷೂರೆನ್ಸಿನ ಬಗ್ಗೆ ಬಹಳ ಬೇಜಾರಾಗಿ ಅವರು ಒಳಗಿಂದೊಳಗೇ ಖಾಸಗೀ ಕಂಪೆನಿಗಳವರಿಗೆ ಸಹಾಯಮಾಡುತ್ತಿದ್ದಾರೆ. ಮುಂದೆ ಇದರಿಂದ ನಿಮಗೆ ಹೆಚ್ಚಿನ ತೊಂದರೆ ಒದಗಬಹುದು. ಈ ಇಲಾಖೆಯಲ್ಲಿ ಸರಿಯಾಗಿ ಸಿಬ್ಬಂದಿ ಇದ್ದಾಗ್ಯೂ, ಇಡಬೇಕಾಗಿದ್ದ ದಾಖಲೆಗಳೇ ಅನೇಕವು ನಿಂತುಹೋಗಿ ಲೆಡ್ಜರ್ ವಗೈರೆ ಖಾತೆಗಳೇ ಇಲ್ಲವೆಂಬುದಾಗಿ ತಿಳಿದುಬರುತ್ತದೆ. ತತ್ಪರಿಣಾಮವಾಗಿ ಸರಿಯಾಗಿ ಬೋನಸ್ಸನ್ನೂ ಕೂಡ ಡಿಕ್ಲೇರ್ ಮಾಡಲು ಅವಕಾಶವಾಗಿರುವುದಿಲ್ಲವೆಂದು ಕೇಳುತ್ತೇನೆ. ಆದ್ದರಿಂದ ತಾವು ಮೊದಲು ಈ ಅವ್ಯವಸ್ಥೆಗಳನ್ನೆಲ್ಲಾ ಸರಿಪಡಿಸಿ, ಅಪಪ್ರಚಾರಕ್ಕೆ ದಾರಿಯಿಲ್ಲದಂತೆ ತಡೆಗಟ್ಟಬೇಕೆಂದು ಸೂಚಿಸುತ್ತೇನೆ.

Sri G. A. ACHARYA.—A serious charge!

ಶ್ರೀ ಎಂ. ಎನ್. ಜೋಯಿಸರು.—I take the entire responsibility for it. ತಾವು ಇದನ್ನೆಲ್ಲಾ ಸರಿಪಡಿಸಿದರೆ ಧಾರಾಳವಾಗಿ ಹೆಚ್ಚಿನ ಬೋನಸ್ಸು ಕೊಡಲು ನಿಮಗೆ ಸಾಧ್ಯವಾಗಬಹುದು.

ಇನ್ನು ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರ ತಿಳಿಸುತ್ತೇನೆ. ಇದನ್ನು ತಾವು ಕಳೆದ ಜನವರಿ 26ನೆಯ ತಾರೀಖಿನ ದಿನವೇ ಮಾಡುವುದಾಗಿ ತಿಳಿಸಿದ್ದಿರಿ. ಇದು ಅಂದೇ ಆಗಬೇಕಾಗಿತ್ತು. ಈ ಬಗ್ಗೆ ನೌಕರರುಗಳಿಂದ ಎಷ್ಟರಮಟ್ಟಿನ ಅಪಪ್ರಚಾರವಾಗುತ್ತಿದೆಯೆಂಬುದನ್ನು ಹೇಳಲಿಕ್ಕೇ ಸಾಧ್ಯವಿಲ್ಲ. ಇದನ್ನು ಅಷ್ಟು ಬೇಗ ಮಾಡಿದ್ದರೆ ನಿಮ್ಮ ಮೇಲಿನ ಅಪಪ್ರಚಾರಕ್ಕೆ ದಾರಿಯಾಗುತ್ತಿರಲಿಲ್ಲ. ಆದ್ದರಿಂದ ಇನ್ನಾದರೂ ತಾವು ಬೇಗ ಇದನ್ನು ಏರ್ಪಾಡುಮಾಡಿ, ನೌಕರರು ಮಾಡುತ್ತಿರುವ ಅಪಪ್ರಚಾರವನ್ನು ಕೂಡಲೇ ತಡೆಗಟ್ಟಲು ಎಲ್ಲಾ ಕಾರ್ಯಕ್ರಮಗಳನ್ನೂ ತಾವು ಕೈಗೊಳ್ಳಬೇಕಾದ್ದು ತಮ್ಮ ಆದ್ಯ ಕರ್ತವ್ಯ. ಇದನ್ನು ಕೂಡಲೇ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಸರ್ವಿಸ್ ಬಡಾವಣೆ ವಿಚಾರದಲ್ಲಿ ಹೇಳಬೇಕಾಗಿರುವುದು, ತಾವು ಇದನ್ನು ನಿಲ್ಲಿಸಬೇಕಾದ್ದು ಅಗತ್ಯ. ಹಾಗೊಂದುವೇಳೆ ಮಾಡದೇ ವಿಧಿಯಿಲ್ಲವೆಂದು ಕಂಡುಬಂದಾಗ 1–2 ವರ್ಷಗಳ ಬಡಾವಣೆಯನ್ನು ತಾವು ಕೊಟ್ಟರೂ ಕೊಡಬಹುದು. ಆದರೆ ತಾವೀಗ ಅನುಸರಿಸುತ್ತಿರುವ ಪದ್ಧತಿಯಿಂದ ಕೆಳದರ್ಜೆಯ ನೌಕರರಿಗೆ ತುಂಬಾ ಅಸಮಾಧಾನ ಉಂಟಾಗಿದೆ. ಆದರೆ ಕೆಲವು ಬಾಬುಗಳಲ್ಲಿ ಅನಿವಾರ್ಯವಾಗಿ ಮೆಡಿಕಲ್ ಇತ್ಯಾದಿ ಬಾಬುಗಳಲ್ಲಿ, ನಿಪುಣತ ಜನಗಳು ಸಿಕ್ಕುವುದಿಲ್ಲವೋ, ಅಂಥಾ ಬಾಬುಗಳಲ್ಲಿ, ಕೆಳಗಿರತಕ್ಕ ನೌಕರರ ಬಡ್ತಿ ವಗೈರೆಗಳಿಗೆ ಯಾವ ಕುಂದಕವೂ ಇಲ್ಲದಂತೆ ಏರ್ಪಾಡುಮಾಡಬೇಕು. ತಾವೀಗ ಕೆಲವರಿಗೆ ಹಾಗೆ ಬಡಾವಣೆ ಕೊಡುತ್ತಿರುವುದರಿಂದ ಕೆಳಗಿರತಕ್ಕವರಿಗೆ ನಮಗೆ ದೊರೆಯಬೇಕಾಗಿದ್ದ ಪ್ರೊಮೋಷನ್, ಇನ್‌ಕ್ರಿಮೆಂಟ್, ವಗೈರೆ ನಮಗೆ ಸಿಕ್ಕದೆಹೋಯಿತು, ಆದ್ದರಿಂದ ನಾನೇಕೆ ಕಷ್ಟಪಟ್ಟು ದುಡಿಯಬೇಕು ಎಂಬ ನಿರಾಶಾಭಾವನೆ ಅವರಲ್ಲಿ ಎದ್ದು ಮೂಡುತ್ತದೆ. ಆದ್ದರಿಂದ ಅಂಥಾದ್ದಕ್ಕೆ ತಾವು ಅವಕಾಶವಿಲ್ಲದೆ ಎಲ್ಲರಿಗೂ ದೊರೆಯಬೇಕಾಗಿರುವ ಸಂಬಳ, ಬಡ್ತಿ ಇತ್ಯಾದಿಗಳು ನಿರಾತಂಕವಾಗಿ ದೊರೆಯುವಂತೆ ಮಾಡಿ ಬಡಾವಣೆ ಕೊಡಬಹುದೆಂದು ಹೇಳುತ್ತೇನೆ.

ಇನ್ನು ಕಟ್ಟಕಡೆಯದಾಗಿ, ನಾನು ಮೈಸೂರು ವಿಶ್ವವಿದ್ಯಾನಿಲಯದ ಪ್ರೋಛಾನ್ಸಲರ [illegible]ಯವಾಗಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಸಂಬಂಧವಾಗಿ ನಾನು ಮುಖ್ಯಮಂತ್ರಿಗಳಿಗೆ ಹೇಳಬೇಕಾಗಿರುವುದೇನೆಂದರೆ, ಇದೇ ಸಂಬಂಧವಾಗಿ ಹಿಂದೆ ಪ್ರಜಾಪ್ರತಿನಿಧಿ ಸಭೆಯಿದ್ದ ಕಾಲದಲ್ಲಿ, ಆಗಿನ ಪ್ರತಿನಿಧಿಗಳು ಈ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ಈ ವಿಚಾರವಾಗಿ ಏನೊಂದು ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿದ್ದರೂ, ಎಲ್ಲಾ ಪ್ರತಿನಿಧಿಗಳ ಗಮನಕ್ಕೆ ಅದನ್ನು ತಾರದೆ ನಾವು ಯಾವ ಕೆಲಸವನ್ನೂ ಮಾಡುವುದಿಲ್ಲವೆಂದು ತಿಳಿಸಿದ್ದರು. ಆದರೆ ಆಗ ಇದೇ ಸಂಬಂಧವಾಗಿ ಡಾಕ್ಟರ್ ಸಿ. ಆರ್. ರೆಡ್ಡಿಯವರನ್ನು, ಈ ಮಿತವ್ಯಯಕ್ರಮವನ್ನು ಜಾರಿಗೆ ತರಬೇಕೆಂದಿರುವಾಗ ಏಕೆ ಈ ಪ್ರೋಛಾನ್ಸಲರ್ ಹುದ್ದೆಗೇರಿಸಬೇಕು? ಇದು ಸಾಧುವಾದ್ದಲ್ಲವೆಂದು ವಾದಮಾಡಿದ ಕಾಲದಲ್ಲಿ ತಾವು ಯಾವುದನ್ನೂ ಮಾಡುವುದಿಲ್ಲವೆಂದು ಹೇಳಿದ್ದವರು ಈಗ ಅವರನ್ನು ನೇಮಕಮಾಡಿಕೊಂಡಿರುವುದರಿಂದ ಸರ್ಕಾರಕ್ಕೆ ಸುಮಾರು 60 ಸಾವಿರ ಅಥವಾ ಒಂದು ಲಕ್ಷ ರೂಪಾಯಿಗಳ ಖರ್ಚು ಹೆಚ್ಚಾಗಿರುತ್ತೆ. ಅಲ್ಲದೆ ತಾವು ಆಡಿದಂತೆ ನಡೆದುಕೊಳ್ಳಲಿಲ್ಲವೆಂಬ ಒಂದು ಅಸಮಾಧಾನ ಎಲ್ಲರಲ್ಲೂ ಮೂಡಿಹೋಗಿದೆ. ಮಂತ್ರಿಗಳಾಗಿರತಕ್ಕವರು ತಾವು ವೇದಿಕೆಯ ಮೇಲೆ ಕುಳಿತು ಯಾವುದಾದರೂ ಒಂದು ಮಾತನ್ನು ಹೇಳಿದರೆ, ಅದಕ್ಕೆ ತಕ್ಕಂತೆ ವರ್ತಿಸಬೇಕು. ಅಂತೂ ಒಟ್ಟಿನಲ್ಲಿ ಏನೇ ಆಗಿರಲಿ, ಇಂಥಾ ಆಶಾದಾಯಕವಾದ ಬಡ್ಜೆಟ್ಟನ್ನು ತಯಾರಿಸಿ ನಮ್ಮ ಮುಂದಿಟ್ಟಿದ್ದಕ್ಕಾಗಿ ನಾನು ತಮ್ಮನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

***Janab MAHMOOD SHARIFF** (Mysore *cum* Mandya *cum* Hassan—Muslim).—Mr. Speaker, Sir, without dealing with the strictly financial aspect of the Budget that has been placed before us, about which several Hon'ble Members have spoken—some complimenting the Government on the excellent results achieved and some passing adverse remarks about it—I should like to deal with a few topics in which I feel I am more homely. In the light of the Budget provisions made against them, I should like to see if the Government have adopted a forward policy, or whether the steps that have been taken by them are of a retrograde

nature. I am mindful however of the great strain that has been caused on the public exchequer due to several reasons inclusive mainly of the financial integration. Having been associated till very recently with the Government, I appreciate the great efforts that have been made by the Government in order to adjust themselves to the changing circumstances. But I cannot refrain from pointing out that if a more liberal policy had been adopted in regard to certain of these subjects, it would have resulted in better results.

The topics I said that I am going to deal with relate the Medical and Public Health Departments. I see from the speech of the Hon'ble Finance Minister on page 24, that he has catalogued a series of measures that were adopted by the Government in order to further the activities of the Medical and Health Departments. He has pointed out that several schemes have been brought into effect and several measures have taken to eradicate the incidence of tuberculosis and similar other diseases. But I should like to have seen new features of the policy that are going to be adopted. What are the new pastures that they are going to explore? How many new institutions are they going to establish? These are some of the points that I wish to ask.

It seems to me that we are not fully cognizant of the importance of the medical and public health questions. We have not yet recognise their importance. So far as health is concerned, that is the greatest capital asset not only of individuals but also of the community. Whateve improvements may be made on the industrial side, on the agriculture side and other sides, they cannot be appreciated, that is, they cannot be fully availed of unless the physical and mental condition of the people are improved to enjoy those facilities. I therefore stress that this aspect of the question should be given priority.

The Hon'ble Finance Minister may say that all these days we have lived under these limitations and we will certainly live in future also with these limitations. But may I remind him that under the new set up, new responsibilities have devolved on our shoulders. The freedom that has been bestowed on us has thrown on us more responsibilities also. Among those responsibilities, nothing is greater than that of promoting the public health of the people. I do agree with those Hon'ble Members of the rural sides that medical relief in the rural parts is very scanty. But there are several reasons for such scantiness. I wish I had more time to dilate upon this topic fully. One of the chief reasons is the scanty pay and the barren prospects of the doctors who are in service. I wish it were possible for me to bring home to Government this point. Discontent has been prevailing in the medical staff on account of the small pay that they receive. The medical men in service are not sufficiently compensated. In spite of this very big handicap, those people are sticking on to their posts on account of the convenience of the noble calling. Unless something drastic is done to improve their scales of pay and prospects, I am afraid things are going to deteriorate and worsen. Firstly you have to raise their scales of pay so as to bring them in line with those obtaining in other parts of India.

Sri M. GOVINDA REDDY.—May I know why the Hon'ble Member was not able to improve the scales of pay and other things when he was in the Ministry?

Janab MAHMOOD SHARIFF.—Proposals had been made but due to economy measures they could not be pursued further. But I am certain that they deserve priority.

As I already stated, the scales of pay should be increased to bring them into line with the other States. Secondly, housing facilities, and that too specially in malnad parts, should be given. An increase in the cadre of Surgeons and Assistant Surgeons has to be effected. Schemes and plans in these respects had already been worked out but on account of the paucity of funds they could not be brought into effect. I wish the

Hon'ble Minister for Finance and the Minister for Public Health take up these schemes in a serious spirit so that a satisfactory state of affairs may come about.

I am glad to say that about 81 health units have been established and I should say that they have done excellent work. On my tours in the rural parts, I have observed that people in the rural areas were fully satisfied with the work done by the health units. If you take for example the Mysore District, you will find that about 2,500 acres of land has been brought under the plough mainly due to the work done by these health units. Women who have been suffering from malaria—a dire disease in those parts—have been cured. The birth-rate in those parts has increased (Laughter). This is not a matter for laughter. These health units have been actively able to help the problem of "Grow More Food". Jog and other places, where this pestilence of malaria exists, have been depleted of human vitality. In all such places these health units have done good service.

In this connection I wish to say something about D.D.T. which is very efficacious in getting rid of malaria. We have got to get a better supply of D.D.T. I think we can manufacture this product in the Mysore State itself. I had a discussion about this with the professors of the Indian Institute of Science and I have been assured that if some more attention is paid to this subject, we can prepare all the D.D.T. we want. We have got cheap electricity, benzene and other products that are required for the manufacture of D.D.T. We have got to spend only about ten lakhs of rupees. The whole scheme may cost us about twenty lakhs of rupees, out of which the Government of India have promised to give us ten lakhs. The Central Government have promised to contribute this sum and if our Government are prepared to spend some more money, say about 15 lakhs of rupees, we will be able to eradicate or stamp out this disease completely. We are now spending about Rs. 18 lakhs so far as that is concerned. I feel that it is not quite sufficient. I would suggest that a small tax be imposed though I know that Hon'ble Members may feel such imposition obnoxious. I have made investigations I have come into contact with people living in rural areas and in the Malnad and I have ascertained from them that they are willing to pay a small tax of 8 annas per head.

Sri L. SIDDAPPA.—We are willing to pay.

Janab MAHMOOD SHARIFF.—Prevention is better than cure. That applies with great force in the case of preventive measures that we have to adopt to eradicate malaria.

A VOICE.—Is the levy of tax suggested to apply only to the Malnad?

Janab MAHMOOD SHARIFF.—No. It is not necessary that only the malnad people should pay. Even the maidan people may pay. In Bangalore and Mysore we know the music of mosquitoes: we have the experience of the mosquito sting; it is not necessary for me to dilate upon the inconveniences felt on account of the mosquito bite. If you are going to undertake that scheme, you can flood not only the rural parts of but also the whole of the Malnad with D.D.T. and eradicate the malaria disease completely.

Coming now to Excice Department, I heard with rapt attention the controversy raging between the two schools of thought as to the feasibility of continuing this prohibition policy which you have now adopted. Some are of the opinion that whatever you may do, illicit distillation will continue, because every house has become a distillery. (*A Voice*: "*Cottage Industry!*") But let me analyse the whole situation. The habit of drinking has been ingrained in the people; it is not going to be eliminated in the course of five or even ten years. They have nourished this habit for years together. How can you therefore expect cent per cent success in prohibition? But do not forget this. Wherever prohibition has been introduced, there people seem to be happy. If you go to those districts which have gone dry, you will see a wholesome atmosphere prevailing among the poor people,

(*A Voice*: "*Quite right.*") Women and children have been blessing the Government for the introduction of prohibition. It may be that the success is not cent per cent but the generations going to come, at least those young people who are going to come after 10 years will take to this with zeal. Therefore I would earnestly appeal to the Government not to give a quietus to this policy. As a matter of fact, only six months ago, while I was at Delhi and participated in the Health Ministers' conference, I asked Dr. John Matthai who presided as to the policy he was going to adopt and the Hon'ble Minister wriggled out saying that each State has been given full discretion as to what policy it can adopt in the matter. Anyhow so far as Mysore is concerned, so far as the people of the State are concerned, it is not necessary for me to dilate upon the wreck and ruin that is being caused by this evil habit. As guardians of the welfare of the people we will have to continue the policy although for the time being it is better for us to consolidate our position before proceeding further.

One last word I have to say. I make a very earnest appeal to the Hon'ble Members who represent the cream of the society of Mysore for communal harmony in the Mysore State. Unfortunately, on account of the recent tendencies in the Eastern Bengal and the Western Bengal and the carnage which has been perpetrated in both these places, feelings seem to have been a little strained. But let not those feelings have any repercussion here. Mysore has always been a model State so far as Hindu-Muslim amity also is concerned. The cordiality prevailing between the two sections is something wonderful, so far as this State is concerned. Whatever happens outside Mysore, whether in Eastern Bengal or in Western Bengal, let us look to the picture of Mahatma Gandhi which is there on the wall and whatever instructions he has given to us, whatever lessons he has preached to us, whatever he has said so far as bringing the two sections of people together, let us understand and follow them with fellow feelings so that here in Mysore, at least, let us live in perfect cordiality so characteristic of the Mysore State. (Loud cheers).

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಅಧ್ಯಕ್ಷರೇ, ನಮ್ಮ ಮುಂದೆ 1950–51ನೆಯ ಸಾಲಿನ ಆಯವ್ಯಯ ಪಟ್ಟಿಯನ್ನಿಟ್ಟಿದ್ದಾರೆ. ಅದರ ಪ್ರಕಾರ ಖರ್ಚು ಮತ್ತು ಆದಾಯವನ್ನು ನಮ್ಮ ಸರ್ಕಾರದ ಆರ್ಥಿಕ ಸಚಿವರು ಸರಿದೂಗಿಸಿದ್ದಾರೆ. ಅಲ್ಲದೆ ಇನ್ನೊಂದು ಭರವಸೆ ಕೊಡುತ್ತಾ, ಸ್ಪೆಷಲ್ ರಿಸರ್ವ್‌ನಿಂದ ಏನೂ ತೆಗೆದುಕೊಳ್ಳುವುದಿಲ್ಲ; ಅದಕ್ಕೆ ದೇಶವೆಲ್ಲ ದೊಡ್ಡ ಕೂಗೆದ್ದಿದೆ ಎಂದು ಹೇಳಿದ್ದಾರೆ. ಆದರೂ ಕೂಡ ಇನ್ನು ಮುಂದೆ ಹೀಗೆಯೇ ಸ್ವಲ್ಪ ದಿವಸಗಳು ಕಳೆದಮೇಲೂ ಕೂಡ ಇದೇ ರೀತಿ ಬಡ್ಜೆಟ್ಟನ್ನು ಸರಿದೂಗಿಸುವುದಕ್ಕೆ ಸಾಧ್ಯವೇ ಎಂದು ಯೋಚನೆಮಾಡಿದರೆ ಸಾಧ್ಯವಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ, ಆಹಾರ ಒಂದಕ್ಕೇ ಸುಮಾರು 2½ ಕೋಟಿ ರೂಪಾಯಿಗಳು ಖರ್ಚಾಗುತ್ತಿದೆಯೆಂದು ಹೇಳುವಾಗ ವರ್ಷ ವರ್ಷವೂ ಬಡ್ಜೆಟ್ಟನ್ನು ಸರಿತೂಗಿಸುವುದು ಬಹಳ ಕಷ್ಟವಾಗುತ್ತದೆ. ಬಡ್ಜೆಟ್ಟನ್ನು ತಿರವಿಹಾಕಿದರೆ ಮತ್ತು ಆರ್ಥಿಕ ಸಚಿವರ ಭಾಷಣವನ್ನು ನೋಡಿದರೆ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕೆಂಬ ಯೋಜನೆಯು ಅಷ್ಟು ಪ್ರಸ್ತಾಪವಾಗಿರುವಂತೆ ಕಾಣುತ್ತಿಲ್ಲ. ಸುಮಾರು 15 ಲಕ್ಷ ಜನರಿಗೆ ಆಹಾರವನ್ನು ಒದಗಿಸುವುದಕ್ಕಾಗಿ 2 ಕೋಟಿ ಚಿಲ್ಲರೆ ಖರ್ಚುಮಾಡುತ್ತಿದ್ದಾರೆ. ಆಹಾರ ಧಾನ್ಯಗಳ ಮೇಲೆ ಹತೋಟಿ ಆಜ್ಞೆ ಹಾಕಬೇಕೆಂದು ನಮಗೆ ಅಭಿಪ್ರಾಯವಿಲ್ಲ. ಆದರೂ ಕೇಂದ್ರ ಸರ್ಕಾರ ಹಾಕಬೇಕೆಂದು ಹೇಳುವುದರಿಂದ ನಾವು ಹಾಕಬೇಕಾಗುತ್ತದೆಂದು ಹೇಳುತ್ತಾರೆ. ಆದರೆ 15 ಲಕ್ಷ ಜನರ ಮೇಲೆ ನಮ್ಮ ಸರ್ಕಾರ ಏಕೆ ಈ ಖರ್ಚನ್ನು ಹಾಕಬೇಕು ಎಂಬುದನ್ನು ತೂಕವಾಗಿ ಯೋಚನೆ ಮಾಡಬೇಕು.

ಆಹಾರ ಹಂಚಲು ಸರ್ಕಾರಕ್ಕೆ ಎರಡು ಕೋಟಿ ಚಿಲ್ಲರೆ ಹಣ ಖರ್ಚಾಗುತ್ತದೆ. ಹೀಗೆ ಖರ್ಚಾಗುವುದನ್ನು ಜನರ ಮೇಲೆ ಹಾಕಬೇಕು, ಜನಗಳ ಮೇಲೆ ಇದನ್ನು ಹಾಕುವುದು ಬೇಡವೆಂದು ಕೆಲವರು ಹೇಳಬಹುದು. ಇದು ನ್ಯಾಯವಲ್ಲ.

At this stage the Hon'ble Deputy Speaker vacated the chair and Srimati Ratnamma Isaac one of the Panel of Chairmen occupied the Chair. (Loud Cheers).

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಒಂದು ಉದಾಹರಣೆ ಹೇಳುತ್ತೇನೆ. ಹಳ್ಳಿಯ ಜನರಿಗೆ ಬಟ್ಟೆಯನ್ನೊದಗಿಸುವುದರಲ್ಲಿ ಅದಕ್ಕೆ ತಗಲುವ ಬೆಲೆ, ಖರ್ಚು, ಲಾಭ ಇವುಗಳನ್ನೆಲ್ಲಾ ಸೇರಿಸಿ ಹೇಗೆ ರೈತರ ಮೇಲೆ ಹಾಕುತ್ತಾರೋ ಹಾಗೆಯೇ ಆಹಾರ ಧಾನ್ಯಗಳ ಮೇಲೆ ತಗಲುವ ಖರ್ಚನ್ನು ಜನರ ಮೇಲೆ ಹಾಕುವುದು ನ್ಯಾಯವಾಗಿದೆ. ಅದನ್ನು ಸರ್ಕಾರದವರು ಕೊಡುವುದು ನ್ಯಾಯವಲ್ಲ.

ಆಹಾರವನ್ನು ಹೆಚ್ಚು ಬೆಳೆಯುತ್ತೇವೆ, ಸ್ವಪರಿಪೂರ್ಣತೆ ಬರುವಂತೆ ಮಾಡುತ್ತೇವೆಂದು ಹೇಳುತ್ತಾರೆ. ಇದು 1951 ಕ್ಕೂ ಆಗುವುದಿಲ್ಲ, 1961 ಕ್ಕೂ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ರೈತರಿಗೆ ಈ ಹೊತ್ತು

ಬಹಳ ಕಷ್ಟ ಬಂದಿದೆ, In the history of Mysore, I do not think the agriculturists have suffered so much. ಅವರಿಗೆ ಪಟ್ಟೆಯಿಲ್ಲ, ಗುಳಗಳಿಲ್ಲ. ಹಣಕಾಸಿನ ಸಚಿವರೇನೋ ಭಾಷಣದಲ್ಲಿ—

"You will be glad to know that with a view to assist the Grow More Food campaign, the Government of India have since been induced to make an exclusive allotment of 2,400 tons for the year 1950. The quota for the general public however is extremely low and the Government of India have been urged to increase the quota."

ಎಂದು ಹೇಳಿದ್ದಾರೆ. ಹೀಗೆ induce ಮಾಡದೇಯಿದ್ದರೆ ಹೇಗೆ! ಮುಂದಿನ ವರ್ಷ ಅವರೂ ಕೊಡುವುದಿಲ್ಲವೆಂದು ಹೇಳಬಹುದು. ನಮ್ಮ ಊರಿನ ಕಡೆ ಎಷ್ಟೋ ಗಾಡಿಗಳು ಮುರಿದುಕೊಂಡು ಬಿದ್ದಿವೆ, ಪಟ್ಟೆಗಳಿಲ್ಲ, ಸರ್ಕಾರದವರು ಬಾರ್ ಡೋಜರುಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಈಗ ರೈತರಿಗೆ ಬೇಕಾಗಿರುವುದು ಗುಳ ಮತ್ತು ಗಾಡಿ ಪಟ್ಟೆ. ಇದನ್ನು ಒದಗಿಸದೇ ಹೋದರೆ ಅವರು ಹೆಚ್ಚು ಬೆಳೆಯುವುದಾದರೂ ಹೇಗೆ? ತರೀಕೆರೆ ಸೊಸೈಟಿಗೆ ಈ ಸಾರಿ ಕೇವಲ 52 ಜೊತೆ ಒದಗಿಸಿದ್ದಾರೆ. ಇದು ಏನೇನೂ ಸಾಲದು.

ಶ್ರೀ ಟಿ. ಮರಿಯಪ್ಪನವರು.—ಈಗ ಭದ್ರಾವತಿಯಲ್ಲಿ ತಯಾರಾಗುತ್ತಿದೆ. ಅದನ್ನು ಪ್ರತಿಯೊಂದು ಹಳ್ಳಿಗೂ ಇಷ್ಟಿಷ್ಟೆಂದು ಕೋಟಾ ಪ್ರಕಾರ ಕೊಡುತ್ತಿದ್ದೇವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಾಗಾದರೆ ರೈತರಿಗೆ ಹಾಗೆ ಹೇಳಿ. ಅವರು ಕೊಡ ದವಸವನ್ನು ಈ ವರ್ಷ ಕೊಡುವುದಕ್ಕಾಗುವುದಿಲ್ಲ, ಮುಂದಿನ ವರ್ಷ ಕೊಡುತ್ತೇವೆಂದು ಹೇಳುತ್ತಾರೆ.

ಶ್ರೀ ಟಿ. ಮರಿಯಪ್ಪನವರು.— ಇಕಸ್ಟ್ಯಾಬ್ಲಿಷ್‌ಮೆಂಟ್ ಪ್ರಕಾರ ಕಳುಹಿಸುತ್ತಾ ಇದ್ದೇವೆ. ಇನ್ನು ಸ್ವಲ್ಪ ದಿನಗಳಲ್ಲೇ ಅಲ್ಲಿಗೂ ತಲಪುತ್ತದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಸಕಾಲದಲ್ಲಿ ಬರದೆ ಮಳೆ ಬಿದ್ದ ಮೇಲೆ ಬಂದರೆ ಗಾಡಿಯನ್ನು ಉಪಯೋಗಿಸಲು ಸಾಧ್ಯವಿರುವುದಿಲ್ಲ. ಪಟ್ಟೆ ಮತ್ತು ಗುಳಗಳನ್ನು ಸಕಾಲದಲ್ಲಿ ಒದಗಿಸಿದರೆ ಉಪಯೋಗವೇ ವಿನಾ ಇಲ್ಲದಿದ್ದರೆ ಆಗುವುದಿಲ್ಲ.

ಇನ್ನೊಂದು ವಿಷಯ. ಲ್ಯಾಂಡ್ ರೆವಿನ್ಯೂ ಕೋಡಿನ ಪ್ರಕಾರ ಜಮೀನಿಗೆ ಕಂದಾಯ ಸಕಾಲದಲ್ಲಿ ಕೊಡದೇ ಹೋದರೆ ಅದನ್ನು ಹರಾಜು ಮಾಡುತ್ತಾರೆ. ಆದರೆ ಹರಾಜಿನಲ್ಲಿ ಕೊಂಡುಕೊಂಡವನಿಗೆ confirm ಆಗುವುದಿಲ್ಲ. ಕಂದಾಯವನ್ನು ಮೊದಲಿನ ಜಮೀನುದಾರ ಕೊಟ್ಟುಬಿಟ್ಟರೆ ಪುನಃ ವಾಪಸು ಅವನಿಗೇ ಹೋಗುವುದರಿಂದ, ಅನೇಕರು ಇದರಿಂದ ಜಮೀನು ಸಾಗು ಮಾಡದೆ ಹಾಗೆಯೇ ಇಟ್ಟುಕೊಂಡಿರುತ್ತಾರೆ. ಆದಕಾರಣ ಅಂತಹ ಸಂದರ್ಭಗಳಲ್ಲಿ ಅಂತಹ ಜಮೀನುಗಳನ್ನು ಯಾರು ಕೊಳ್ಳುತ್ತಾರೋ ಅವರಿಗೇ confirm ಮಾಡಿಬಿಡಬೇಕು. ಹೀಗೆ ಮಾಡಿ ಒಂದೆರಡು ತಿಂಗಳೊಳಗೆ ಅವರು ಜಮೀನನ್ನು ಸಾಗು ಮಾಡಬೇಕು ಇಲ್ಲದಿದ್ದರೆ ವಾಪಸು ಬಿಟ್ಟುಕೊಡಬೇಕು ಎಂದು ಅವರಿಗೆ ಹೇಳಬೇಕು.

ಇನ್ನೊಂದು ವಿಚಾರ. ತರೀಕೆರೆ ಮತ್ತು ಕಡೂರು ತಾಲ್ಲೂಕುಗಳಲ್ಲಿ 7 ಸಾವಿರ ಎಕರೆ ಅಮೃತಮಹಲ್ ಕಾವಲಿದೆ. ಅಜ್ಜಂಪುರ ವಗೈರೆ ಗ್ರಾಮಗಳಲ್ಲಿರುವ 2 ಸಾವಿರ ಎಕರೆ ಇದೆ. ಅಜ್ಜಂಪುರದಲ್ಲಿರುವ ಎರಡು ಸಾವಿರ ಎಕರೆಯನ್ನು ಇಟ್ಟುಕೊಂಡು ಉಳಿದುದನ್ನು ಜನರಿಗೆ ವ್ಯವಸಾಯಕ್ಕೆ ವಿಲೇ ಮಾಡಬಹುದು. ಅಜ್ಜಂಪುರದಲ್ಲಿ ವಿದ್ಯುಚ್ಛಕ್ತಿಯಿದೆ, ನೀರಿದೆ; ಬೇಸಿಗೆಯಲ್ಲಿ ಕೂಡ ಹುಲ್ಲು ಬೆಳೆಯಬಹುದು.

ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕೆಂದು ಸರ್ಕಾರದವರ ಉದ್ದೇಶವಿದ್ದರೂ ಕೂಡ ಅನೇಕ ಕಾರಣಗಳಿಂದ, ಕಾನೂನಿನಲ್ಲಿರುವ ಅಡಚಣೆಗಳಿಂದ ಜೀರ್ಣೋದ್ಧಾರ ಮಾಡಲು ಸಾಧ್ಯವಾಗಿಲ್ಲ. ಹೇಗಾದರೂ ಮಾಡಿ ಇವುಗಳನ್ನು ಜೀರ್ಣೋದ್ಧಾರ ಮಾಡಲು ಆದಷ್ಟು ಪ್ರಯತ್ನ ಮಾಡಬೇಕು. ಹಾಗಿಲ್ಲದಿದ್ದರೆ 1951ನೆಯ ಇಸವಿಯಲ್ಲಿ, 1961 ನೆಯ ಇಸವಿಗೂ ನಮಗೆ ಬೇಕಾದಷ್ಟು ಆಹಾರ ಬೆಳೆಯಲು ಸಾಧ್ಯವಾಗುವುದಿಲ್ಲ. ಜನರು ಆಹಾರವಿಲ್ಲದೆ ಸಾಯಬೇಕಾಗುತ್ತದೆ.

ಇನ್ನು ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ, ವಯಸ್ಕರ ವಿದ್ಯಾಭ್ಯಾಸಕ್ಕಾಗಿ ಐದು ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಹೀಗೆ ಮಾಡುತ್ತಿರುವುದು, ಐದು ಲಕ್ಷ ರೂಪಾಯಿನ ಕರೆನ್ಸಿ ನೋಟುಗಳನ್ನು ಬೆಂಕಿಯಲ್ಲಿ ಹಾಕುವುದು ಒಂದೇ ಇದಕ್ಕೆ ಖರ್ಚು ಮಾಡುವುದೂ ಒಂದೇ ಎಂದು ತೋರುತ್ತದೆ. 25 ವರ್ಷ ವಯಸ್ಸಾದಮೇಲೆ ವಿದ್ಯೆ ಕಲಿಸುವುದು ಸಾಧ್ಯವಿಲ್ಲ. ಮೊನ್ನೆ ನಡೆದ 'ಸೆಮಿನಾರ್' ನಲ್ಲಿ ಸಾಧ್ಯ ಎಂದು ಹೇಳಿರಬಹುದು. ಆದರೆ ಯಾರು ಹೇಳಿದರೂ ಸಾಧ್ಯವಿಲ್ಲ. ವಯಸ್ಕರ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿರುವ ಹಣ ವ್ಯರ್ಥ, ಇದನ್ನು ನಿಲ್ಲಿಸಬೇಕು. ಮನುಷ್ಯ 25 ವರ್ಷ ವಯಸ್ಸಾದ ಮೇಲೆ ವಿದ್ಯಾವಂತನಾಗುವುದಿಲ್ಲ. ಇದಕ್ಕೆ ಖರ್ಚು ಮಾಡುವುದಕ್ಕೆ ಬದಲು ಹೆಚ್ಚು ಪ್ರೈಮರಿ ಸ್ಕೂಲುಗಳನ್ನು ಕೊಡಿ. ಸುಮ್ಮನೆ ಮೂವತ್ತು, ನಲವತ್ತು ವರ್ಷ ವಯಸ್ಸಾಗಿ ವ್ಯವಸಾಯ ಮಾಡುವವನಿಗೆ ನೀನು ಓದು ಎಂದು ಹೇಳುವುದಕ್ಕೆ ಬದಲು ಸಣ್ಣ ಮಕ್ಕಳನ್ನು ವಿದ್ಯಾವಂತರಾಗಿ ಮಾಡಿ ಪ್ರೈಮರಿ ಸ್ಕೂಲು ಕಟ್ಟಡಗಳನ್ನು ಕಟ್ಟಿ ಸ್ಲೇಟು ಬಳಪ ಇಲ್ಲದ ಕಡೆ ಅದನ್ನು ಒದಗಿಸಿ. ಇದರಿಂದ ಪ್ರಯೋಜನವಾದರೂ ಆಗುತ್ತದೆ.

ಇನ್ನು ಅರಣ್ಯ ಸಂಪತ್ತಿನ ವಿಚಾರ. ಈ ಬಾಬಿನಿಂದ ಬರತಕ್ಕ ಉತ್ಪತ್ತಿಯನ್ನು ತೋರಿಸುತ್ತಾರೆಯೇ ಹೊರತು ವರ್ಷ ವರ್ಷವೂ ಎಷ್ಟೆಷ್ಟು ಮರಗಳನ್ನು ಕಡಿಯುತ್ತಾರೆಯೋ ಅಷ್ಟನ್ನಾದರೂ ಬೆಳೆಯುತ್ತಿದ್ದಾರೆಯೇ ಎಂಬುದನ್ನು ನೋಡುವುದಿಲ್ಲ. ಈಗಿನ ಪರಿಸ್ಥಿತಿಯನ್ನು ನೋಡಿದರೆ ಇನ್ನು ಹತ್ತು ಇಪ್ಪತ್ತು ವರ್ಷಗಳಲ್ಲಿ ನಮ್ಮ ದೇಶದಲ್ಲಿ ನಾಟಾ ಸಿಕ್ಕದೇ ಹೋಗಬಹುದು. ಸುಮ್ಮನೆ ಮರಗಳನ್ನು ಕಡಿಯುತ್ತೇವೆಯೇ ಹೊರತು ಬೆಳೆಸಲು ಪ್ರಯತ್ನಪಡುವುದಿಲ್ಲ.

ನಮ್ಮ ದೇಶದಲ್ಲಿರತಕ್ಕ ಕೈಗಾರಿಕೆಗಳನ್ನು ಬಹಳ ಕಷ್ಟಪಟ್ಟು ಬೆಳೆಸಿ ಪುರಸ್ಕಾರ ಕೊಡುತ್ತಾ ಬಂದಿದ್ದೇವೆ. ಆದರೆ ನಮಗೆ ಅವಶ್ಯಕವಾದಷ್ಟು ಕಬ್ಬಿಣ, ಸಿಮೆಂಟು, ಕಾಗದ ಮುಂತಾದ ಪದಾರ್ಥಗಳು ತಯಾರಾಗುತ್ತಿಲ್ಲ. ಮನೆ ಕಟ್ಟುವವರಿಗೆ ಸಿಮೆಂಟಿಲ್ಲದೆ ಬಹಳ ತೊಂದರೆಯಾಗುತ್ತಿದೆ. ಹಳ್ಳಿಯಲ್ಲಿ ಮನೆ ಕೆಲಸಕ್ಕೆ ಸಿಮೆಂಟ್ ಬೇಕಾದರೆ ಅದಕ್ಕೆ ಅರ್ಜಿ ಹಾಕಿ ಅದು ಅಸಿಸ್ಟೆಂಟ್ ಇಂಜಿನಿಯರು ಮತ್ತು ಎಗ್ಸಿಕ್ಯೂಟಿವ್ ಇಂಜಿನಿಯರುಗಳಿಂದ ಮಂಜೂರಾಗಿ ಬರಬೇಕು. ಇದರ ಕಷ್ಟವನ್ನು ನಾನೇ ಸ್ವತಃ ಅನುಭವಿಸಿದ್ದೇನೆ. ಇದು ಬಹಳ ಶೋಚನೀಯ ಪ್ರಸಂಗ.

ಇನ್ನೊಂದು ವಿಷಯ. ಬಡ್ಜೆಟ್ಟನ್ನು ನೋಡಿದರೆ ಮಲೆನಾಡು ಅಭಿವೃದ್ಧಿಗೆ ಯಾವ ಯೋಜನೆಯನ್ನೂ ಹಾಕಿಲ್ಲವೆಂಬುದು ವ್ಯಕ್ತವಾಗುತ್ತದೆ. ಹೆಚ್ಚು ಪ್ರಮಾಣದಲ್ಲಿ ಡಿ.ಡಿ.ಟಿ. ಉಪಯೋಗಿಸಿ ಮಲೇರಿಯಾ ರೋಗವನ್ನು ಅಲ್ಲಿ ತಡೆಗಟ್ಟಲು ಪ್ರಯತ್ನಿಸಬೇಕು. ಮೈದಾನ

ಪ್ರದೇಶಗಳ ಹಿತದೃಷ್ಟಿಯಿಂದಲೂ ಕೂಡ ಮಲೆನಾಡು ಅಭಿವೃದ್ಧಿಯಾಗಬೇಕು. ಏಕೆಂದರೆ ದೇಶಕ್ಕೆ ಬೇಕಾದ ಸಿಮೆಂಟು, ಕಬ್ಬಿಣ, ಬತ್ತ, ವಿದ್ಯುಚ್ಛಕ್ತಿ ಇವೆಲ್ಲವೂ ಮಲೆನಾಡಿನಿಂದ ಬರುವುದು. ಎಲ್ಲಿಯವರೆಗೆ ಮಲೆನಾಡಿನ ಜನರನ್ನು ಆರೋಗ್ಯವಾಗಿಡಲು ಪ್ರಯತ್ನ ಮಾಡುವುದಿಲ್ಲವೋ ಅಲ್ಲಿಯವರೆಗೆ ದೇಶ ಉಳಿಯುವುದಿಲ್ಲ. ಅವರ ಆರೋಗ್ಯವನ್ನು ಕಾಪಾಡಲು ಡಿ.ಡಿ.ಟಿ. ಯನ್ನು ವಿಶೇಷವಾಗಿ ಉಪಯೋಗಿಸಬೇಕು. ಅಲ್ಲಿ ಕಾರ್ಮಿಕರ ಸಮಸ್ಯೆ ಇದೆ. ಇದನ್ನು ನಿವಾರಿಸಲು ಬೇರೆ ಕಡೆಗಳಿಂದ ಕೂಲಿಯವರನ್ನು ಕರೆದುಕೊಂಡು ಬರುತ್ತೇವೆಂದರೆ ಈ ಮಾತನ್ನು ನಂಬುವುದಕ್ಕಾಗುವುದಿಲ್ಲ. ನಿಜವಾದ ಮಾರ್ಗವೆಂದರೆ, ಅಲ್ಲಿಯ ಜನರಿಗೇ ಆರೋಗ್ಯವನ್ನು ತುಂಬಬೇಕು. ಡಿ.ಡಿ.ಟಿ. ಯನ್ನು ಹೆಚ್ಚು ಹೆಚ್ಚಾಗಿ ತರಿಸಬೇಕು. ಇದಕ್ಕೆ ಮೈದಾನದವರೂ ಕಂದಾಯ ಕೊಡಬೇಕು. ಏಕೆಂದರೆ ಮಲೆನಾಡಿನ ಜನರು ಉಳಿಯದೇ ಹೋದರೆ ದೇಶಕ್ಕೆ ಯಾವ ಪದಾರ್ಥಗಳೂ ದೊರೆಯದೆ ಜನಕ್ಕೆ ಕಷ್ಟಬರುತ್ತದೆ. ಡಿ. ಡಿ. ಟಿ. ಹಂಚುವ ಕಾರ್ಯಕ್ರಮವನ್ನು ಆದಷ್ಟು ಜಾಗ್ರತೆ ಕೈಕೊಳ್ಳದಿದ್ದ ಪಕ್ಷದಲ್ಲಿ ಮಲೆನಾಡಿನವರು ಆಹಾರ ಸಾಮಗ್ರಿಗಳನ್ನು ಬೆಳೆಯುವುದಕ್ಕಾಗುವುದಿಲ್ಲ. ಬಡ್ಜೆಟ್ಟನ್ನು ತಾವು ಈ ವರ್ಷ ಸರಿತೂಗಿಸಬಹುದು. ಮುಂದಿನ ವರ್ಷ ಸರಿತೂಗಿಸಬಹುದು, ಅದರ ಮುಂದಿನ ವರ್ಷ ಸರಿತೂಗಿಸುವುದಕ್ಕಾಗುವುದಿಲ್ಲ. ಈ ವರ್ಷದ ಬಡ್ಜೆಟ್ ಸಮರ್ಪಕವಾಗಿದೆ ಎಂದು ಒಪ್ಪುತ್ತೇನೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗಾ ಜಿಲ್ಲೆ).—ಅಧ್ಯಕ್ಷರೇ, 1950–51ನೇ ಇಸವಿಯ ಈ ಬಡ್ಜೆಟ್ಟನ್ನು ಪರಿಶೀಲಿಸಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಮುಂಚೆ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ನನ್ನ ಅಭಿಲಾಷೆಯಿದೆ. ಕಳೆದ ಎರಡು ಮೂರು ಸಾರಿ ಈ ಸಭೆಯ ಮುಂದೆ ಸಂಸ್ಥಾನದ ಬಡ್ಜೆಟ್ಟನ್ನು ಇಟ್ಟಾಗ ಮತ್ತು ಇನ್ನೂ ಒಂದೆರಡು ಸಂದರ್ಭಗಳಲ್ಲಿ ನಾನು ಒಂದು ಸೂಚನೆಯನ್ನು ಸರ್ಕಾರದವರಿಗೆ ಕೊಟ್ಟಿದ್ದೇನೆ. ಅದೇನೆಂದರೆ ಈ ಬಡ್ಜೆಟ್ಟನ್ನು ತಯಾರು ಮಾಡುವಾಗ normal expenditure, normal income, and expenditure on post-war schemes.—ಇದನ್ನೆಲ್ಲಾ ಒಟ್ಟಿಗೆ ಸೇರಿಸುವುದು ಅಷ್ಟು ತೃಪ್ತಿಕರವಲ್ಲ, ಸಾರ್ವಜನಿಕರಿಗೂ, ಶಾಸನ ಸಭೆಯ ಸದಸ್ಯರಿಗೂ ಸರ್ಕಾರದವರು ಪೋಸ್ಟ್‌ವಾರ್ ಡೆವಲಪ್‌ಮೆಂಟ್‌ಸ್ಕೀಮನ್ನು ಎಷ್ಟುಮಟ್ಟಿಗೆ ಕೈಕೊಂಡು ಮುಂದುವರಿಸುತ್ತಾ ಇದ್ದಾರೆ ಎಂಬುದು ತಿಳಿಯಬೇಕಾದರೆ ಅದನ್ನೆಲ್ಲಾ ಒಂದೊಂದು ಹೆಡ್ಡಿಂಗ್‌ನಲ್ಲಿ ಇಡಬೇಕೆಂದು ಹೇಳಿದ್ದೆ. ನಮ್ಮ ಕೇಳಿಕೆಗೆ ಮನ್ನಣೆಯ ರೂಪವಾಗಿಯೂ ಮತ್ತು ಅವರಿಗೆ ತೋರಿದ ಕಾರಣಗಳಿಂದಲೂ ಸಹ ಫೈನಾನ್ಷಿಯಲ್ ಸೆಕ್ರೆಟರಿಯವರ ಮೆಮೋರ್‍ಯಾಂಡಂನಲ್ಲಿ ಕೇಂದ್ರದಿಂದ ಗ್ರ್ಯಾಂಟ್ ಕೇಳುವ ಬಗ್ಗೆ ಪ್ರತ್ಯೇಕವಾಗಿ ಕೊಟ್ಟಿದ್ದಾರೆ, ಆ ಬಗ್ಗೆ ನಾನು ನನ್ನ ವಂದನೆಗಳನ್ನು ಸರ್ಕಾರದವರಿಗೆ ಅರ್ಪಿಸುತ್ತೇನೆ. ಅದನ್ನು ಮಾನ್ಯ ಸಚಿವರಿಗೇ ಅಲ್ಲದೆ ಫೈನಾನ್ಷಿಯಲ್ ಸೆಕ್ರೆಟರಿಯವರಿಗೂ ಮತ್ತು ನಮಗೆ ತಿಳಿಯದೇ ಇರತಕ್ಕ ಅನೇಕ ಆಫೀಸರುಗಳಿಗೂ ಹೆಚ್ಚು ಶ್ರಮ ತೆಗೆದುಕೊಂಡು ತಯಾರು ಮಾಡಿದ್ದಕ್ಕಾಗಿ ಅವರೆಲ್ಲರಿಗೂ ನನ್ನ ವಂದನೆಗಳನ್ನು ಸಮರ್ಪಿಸುತ್ತೇನೆ. ಆದರೆ ಅತೃಪ್ತಿ ಕಂಡುಬರುವ ಒಂದು ವಿಷಯ ಎಂದರೆ ಬಡ್ಜೆಟ್ ಎಸ್ಟಿಮೇಟ್ಸ್‌ನಲ್ಲಿ ಪೋಸ್ಟ್‌ವಾರ್ ಡೆವಲಪ್ ಸ್ಕೀಂ ಅಷ್ಟೇ ಅಲ್ಲದೆ ಕೆಲವು normal expenditure ಸಹ ಸೇರಿಹೋಗಿದೆ. ಅದು ತೃಪ್ತಿಕರವಲ್ಲ. ಮುನ್ನುಡಿಯಲ್ಲಿ ಫೈನಾನ್ಷಿಯಲ್ ಸೆಕ್ರೆಟರಿಯವರು ಬೊಂಬಾಯಿನಲ್ಲಿ ಈ ಕ್ರಮ ಇದೆ, ಅದನ್ನು ಅನುಸರಿಸಿದ್ದೇವೆ ಎಂದು ಹೇಳಿದ್ದಾರೆ. ಬೇರೆ ಕಡೆ ಏನೇ ಕ್ರಮ ಇದ್ದರೂ ಸಹ ನಮಗೆ normal income, normal expenditure ಒಂದು ಕಡೆ ಇರಬೇಕು. ಪೋಸ್ಟ್‌ವಾರ್ ಸ್ಕೀಂಗೆ ಖರ್ಚು ಮಾಡತಕ್ಕ ಮೊಬಲಗು ಸ್ಪಷ್ಟವಾಗಿ ಒಂದು ಕಡೆ ಇರಬೇಕು. ಆ ರೀತಿ ಒಂದು ಕಡೆ ಇರಬೇಕೆಂದು ನಾನು ಒಂದು ಸೂಚನೆ ಕೊಡುತ್ತೇನೆ.

ಎರಡನೆಯದಾಗಿ ನೆನ್ನೆ ಮತ್ತು ಇವತ್ತಿನ ದಿನ ಭಾಷಣ ಮಾಡಿದ ಕೆಲವು ಸದಸ್ಯರು ಒಂದೆರಡು ವಿಷಯಗಳನ್ನು ಹೇಳಿದ್ದಾರೆ. ಉದಾಹರಣೆಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಗುರುರವರು ಅದೇನೋ ಇವೆರಡು ಪುಸ್ತಕಗಳಲ್ಲೂ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ, ಅವುಗಳೆಲ್ಲವನ್ನೂ ಜೀರ್ಣಿಸಿಕೊಳ್ಳುವುದಕ್ಕೇ ಆಗುವುದಿಲ್ಲ; confusion ಆಗಿದೆ ಎಂದು ಹೇಳಿದರು. ನಮಗೂ ಅದೇ confusion ಬಂದಿದೆ. ಹಿಂದಿನ ಬಡ್ಜೆಟ್ ಎಸ್ಟಿಮೇಟ್‌ನಲ್ಲಿ ಈ ವರ್ಷ ಎಷ್ಟು ಮೊಬಲಗು ಅಂದಾಜು ಮಾಡಿದ್ದಾರೆ; ಹಿಂದಿನ ವರ್ಷದ ಬಡ್ಜೆಟ್ ಪ್ರಾವಿಷನ್ ಎಷ್ಟಿತ್ತು; ಅದರ ಮೇಲೆ ರಿವೈಸ್ ಎಷ್ಟಾಗಿದೆ ಎಂಬುದು ಒಂದು ಕಡೆ ಕಾಣುತ್ತದೆ. ಈಗ ಒಂದು ಮೊಬಲಗನ್ನು ನೋಡಬೇಕಾದರೆ ಎರಡು ಪುಸ್ತಕದಲ್ಲಿ ಎರಡು ಮೂರು ಕಡೆ ನೋಡಬೇಕು. ಅದು ಎಷ್ಟು ಮಟ್ಟಿಗೆ confusion ಉಂಟುಮಾಡಿದೆ ಎಂದರೆ ಫೈನಾನ್ಷಿಯಲ್ ಸೆಕ್ರೆಟರಿಯವರ ಮೆಮೋರ್‍ಯಾಂಡಂ ಪ್ರತಿಯನ್ನು ನೋಡಿದರೆ ಅವರಿಗೂ ಸ್ವಲ್ಪ confusion ಉಂಟಾಗಿರುವ ಹಾಗೆ ಕಾಣುತ್ತದೆ. ಉದಾಹರಣೆಗೆ Irrigation Works, Restoration of minor tanks 3 lakhs; ditto Development 7 lakhs; total 10 lakhs ಎಂದು ಕೊಟ್ಟಿದ್ದಾರೆ. ಆದರೆ ಸರ್ಕಾರದವರು ಆ ಬಗ್ಗೆ ಇನ್ನೂ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಅದು ಯಾವ ಐಟಂನಲ್ಲಿ ಕಂಡು ಬಂದಿದೆ ಎಂದರೆ Food Production Drive ನಲ್ಲಿ ಇದೆ. ಬಡ್ಜೆಟ್ ತಯಾರು ಮಾಡಿದ ಫೈನಾನ್ಷಿಯಲ್ ಸೆಕ್ರೆಟರಿಯವರಿಗೇ confusion ಇರುವಾಗ ಬಾಕಿ ನಮ್ಮಂಥವರಿಗೆ ಇನ್ನೂ ಹೆಚ್ಚು confusion ಬರುವುದಕ್ಕೆ ಅವಕಾಶ ಇದೆ. ಏಕೆ ಹೇಳುತ್ತೇನೆ ಎಂದರೆ ಈ ಬಡ್ಜೆಟ್ ಅಂಕಿ ಅಂಶಗಳು ಬಹಳ ಕಷ್ಟವಾದದ್ದು. ಈ ಸಂದರ್ಭದಲ್ಲಿ ಒಂದು anecdote ಹೇಳಲು ಬಯಸುತ್ತೇನೆ. ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಕಾನ್ಸ್ಟಿಟ್ಯೂಷನಲ್ ಮತ್ತು ಫೈನಾನ್ಷಿಯಲ್ ಪ್ರಾವಿಷನ್‌ಗಳು ಚರ್ಚೆಗೆ ಬಂದಾಗ್ಯೇ ಡಾ|| ಅಂಬೆಡ್ಕರ್‌ರವರನ್ನು Father of Churchill Lord Chancellor ಆಗಿಂದಾಗ್ಗೆ, ಅವರಿಗೂ ಸಹ ಬಡ್ಜೆಟ್ ಅಂಕಿ ಅಂಶಗಳು ಅರ್ಥವಾಗದೆ, what do these damned dots mean ಎಂಬುದಾಗಿ ಫೈನಾನ್ಸ್ ಸೆಕ್ರೆಟರಿಯವರ ಸಮಜಾಯಿಷ್ ಕೇಳಿದರು ಎಂಬುದಾಗಿ ಹೇಳಿದರು. ಸಾಮಾನ್ಯವಾಗಿ ಈ ಬಡ್ಜೆಟ್‌ನ ಅಂಕಿ ಅಂಶಗಳು ಯಾರಿಗೂ ಹೊಳೆಯುವುದಿಲ್ಲ. ಬಹಳ ಕಷ್ಟ. ಆ ಬಗ್ಗೆ ಸರ್ಕಾರದವರಲ್ಲಿ ಒಂದು ವಿನಂತಿಮಾಡಿಕೊಳ್ಳುತ್ತೇನೆ. ಮುಖ್ಯವಾಗಿ ಮಾನ್ಯ ಅರ್ಥಿಕ ಸಚಿವರು ಯಾವ ಬಡ್ಜೆಟ್ ಭಾಷಣವನ್ನು ಮಾಡುತ್ತಾರೋ ಅದರಲ್ಲಿ ಮುಂದಿನ ವರ್ಷದ ಅಂಕಿ ಅಂಶಗಳ ಮುಖ್ಯಾಂಶಗಳನ್ನು ವಿವರವಾಗಿ ಕೊಡುವುದು ಬಹಳ ಸೂಕ್ತವೆಂದು ಅವರಿಗೆ ಸೂಚಿಸಲಚ್ಛಿಸುತ್ತೇನೆ.

ಅವರು ಮಾಡಿದ ಹಿಂದಿನ ಭಾಷಣದಲ್ಲಿ ತಕ್ಕಮಟ್ಟಿಗೆ ವಿಶದವಾಗಿ ಕೊಟ್ಟಿದ್ದರು. ಈ ವರ್ಷ ಕಾರಣಾಂತರಗಳಿಂದ ಪ್ರಾಯಶಃ ಕೊಟ್ಟಿಲ್ಲದೇ ಇರಬಹುದು. ಅದಕ್ಕೆ ಹೆಚ್ಚು ವಿವರ ಒದಗಿಸಿಲ್ಲ. ಜನಸಾಮಾನ್ಯರಿಗೂ ಮತ್ತು ನಮ್ಮಂಥವರಿಗೂ ಹೆಚ್ಚು ವಿಷಯ ಗೊತ್ತಾಗಬೇಕಾದರೆ ಮಾನ್ಯ ಆರ್ಥಿಕ ಸಚಿವರು ಅವರ ಭಾಷಣದಲ್ಲಿ ಬಡ್ಜೆಟ್‌ನ ವಿಷಯವಾಗಿ ಕೆಲವು ಮುಖ್ಯಾಂಶಗಳನ್ನು ಒದಗಿಸುವುದು ಬಹಳ ಅವಶ್ಯಕವೆಂದು ಮತ್ತೊಮ್ಮೆ ಸೂಚಿಸಲಿಚ್ಛಿಸುತ್ತೇನೆ. 1950-51ನೇ ಸಾಲಿನ ಆಯವ್ಯಯದ ವಿಚಾರದಲ್ಲಿ ನಾನು ಈಗ ಹೆಚ್ಚಾಗಿ ಏನನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಇದೇ ವಿಚಾರದಲ್ಲಿ ಕಳೆದ ಬಡ್ಜೆಟ್ ಅಧಿವೇಶನದಲ್ಲಿ, ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೇನೆ. ಈಗಿನ ಒಂದು ವರ್ಷದಲ್ಲಿ ಹೆಚ್ಚು ಕಡಿಮೆ ಅದೇ ಅಭಿಪ್ರಾಯಗಳೇ ನಿಜವೆಂದು ಕಂಡುಬಂದಿವೆ. ನಮ್ಮ ಸಂಸ್ಥಾನದ ಹಣಕಾಸಿನ ಸ್ಥಿತಿ ಹೇಗಿದೆಯೆಂದರೆ, ಕಾರಣಾಂತರಗಳಿಂದ ನೀವು ಅನುಸರಿಸುತ್ತಾ ಇರತಕ್ಕ ಪಾನನಿರೋಧದ ರೀತಿ ನೀತಿಯನ್ನು ನೋಡಿದರೆ ನೀವು ಈಗ ಮುಂದುವರಿಸದೆ ಹೋದರೂ ಇನ್ನು ಒಂದು ಅಥವಾ ಎರಡು ವರ್ಷದಲ್ಲಿ ಅದನ್ನು ಜಾರಿಗೆ ತಂದೇ ತರುತ್ತೀರಿ.

ಶ್ರೀ ಎಚ್. ಸಿ. ದಾಸಪ್ಪನವರು.—ನಿಲ್ಲಿಸುತ್ತೇವೆ ಎಂದು ಎಲ್ಲೂ ಹೇಳಿಲ್ಲ. Normal progress has been maintained.

Sri L. SIDDAPPA.—So far as Prohibition is concerned, you have not gone beyond your last year's programme. You expected Rs. 1,92,00,000 from Excise Duty. You expect the same amount next year also. That clearly shows that you are not prepared to go forward so far as Prohibition is concerned, at any rate during 1950-51.

Sri M. GOVINDA REDDY.—The Chair has no sex. I was only selecting some examples to show where substantial improvements can be made. Whatever the handicaps of this Government, I must say that they are singularly fortunate in having the assistance of tens of people who are intelligent and who can assist them in this field. In this House there are tens of people who can assist them. They can appoint an Industrial Board of three persons and a board to each department. They must have a planning committee. When I want to build a house, if I have a factory, I cannot convert it into a house. That would be a waste. Expenditure must be incurred therefore on a planned basis. That planned basis we are not having now. You must have a Planning Commission to advise and give suggestions as to how best departments can be co-ordinated. For every department a Board may be appointed, consisting of three people, non-officials. For example the Government have now put three non-officials, one in a Government job and the other two in private institutions. As the whole country knows, these people have discharged their duties to the best extent possible. No officer could have been more efficient than these people. Why should not the Government indent upon their help? Let them go and examine each department and submit a report for retrenchment and re-organisation. If they follow this method, more than two crores of rupees could be saved by way of retrenchment and that is good saving effected.

(Time was up and the bell was given.)

Mr. CHAIRMAN.—The House will now adjourn and re-assemble at Four of the Clock.

The Assembly adjourned at Twelve Minutes past One of the Clock and re-assembled at Four of the Clock, Mr. Speaker (Sri V. Venkatappa) in the Chair.

---

*ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟ್ ವಿಚಾರದಲ್ಲಿ ಕೊನೆಯ ಘಳಿಗೆಯಲ್ಲಿ ಮಾತನಾಡುವ ಅವಕಾಶ ನನಗೆ ದೊರೆತಿದೆ, ಆದರೂ ಕೂಡ ಇದರ ವಿಚಾರದಲ್ಲಿ ಆದಷ್ಟು ಜಾಗ್ರತೆ ಹೇಳಬೇಕೆಂದಿರುವ ಕೆಲವು ವಿಷಯಗಳನ್ನು ವಿಶದಪಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ಈ ಬಡ್ಜೆಟ್ಟಿನಲ್ಲಿ ಈ ಸಲ ಹೊಸದಾಗಿ ಡೆವಲಪ್‌ಮೆಂಟ್ ಸ್ಕೀಂಗಳ ವಿಚಾರವನ್ನು ಬಡ್ಜೆಟ್ಟಿನ ಎರಡನೆಯ ಭಾಗದಲ್ಲಿ ಪ್ರತ್ಯೇಕವಾಗಿ ತಿಳಿಸಿದ್ದಾರೆ. ಇದು ಸಂತೋಷಕರವಾದ ವಿಚಾರ. ಆದರೆ ಅನೇಕ ಮಾನ್ಯ ಮಹನೀಯರು ತಿಳಿಸಿದ ಹಾಗೆ ನಮಗೆ ಸ್ವಲ್ಪ ಅನುಮಾನ ಬರುವುದಕ್ಕೂ, ಸುಲಭವಾಗಿ ಅರ್ಥವಾಗದಿರುವುದಕ್ಕೂ ಅವಕಾಶವಿದೆ. ವಿದ್ಯಾಭ್ಯಾಸದ ಇಲಾಖೆ

ಯನ್ನು ತೆಗೆದುಕೊಂಡರೆ ಈ ವರ್ಷ ಎಷ್ಟು ಸ್ಕೂಲುಗಳನ್ನು ಕೊಟ್ಟರು ಎಂಬುದನ್ನು ಕಂಡುಹಿಡಿಯುವುದು ಸ್ವಲ್ಪ ಕಷ್ಟವಾಗಿದೆ. ಈ ರೀತಿಯಾಗಿ ಮಾಡಿರುವುದು ಬಹಳ ವಿಷಾದಕರ. ಈ ಬಡ್ಜೆಟ್ಟಿನ ಮೇಲೆ ನಾವು ಚರ್ಚೆ ಮಾಡುವಾಗ ಇದನ್ನು ಓದುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕು. ಬಡ್ಜೆಟ್ಟನ್ನು ಹಣಕಾಸಿನ ಸಚಿವರು ಸಭೆಯ ಅವಗಾಹನೆಗೆ ತಂದ ಮೇಲೆ 5-6 ದಿವಸಗಳ ಕಾಲಾವಕಾಶವಿದ್ದಿದ್ದರೆ ಚೆನ್ನಾಗಿ ಓದಿಕೊಂಡು ಬಂದು ಚರ್ಚೆ ಪ್ರಾರಂಭಿಸಲು ಅನುಕೂಲವಾಗುತ್ತಿತ್ತು. ಹಾಗೆ ಅವಕಾಶ ಸಿಕ್ಕಿದ್ದರೆ ಮಾನ್ಯ ಸದಸ್ಯರೂ ಕೂಡ ಕೂಲಂಕಷವಾಗಿ ಇದನ್ನು ಪರಿಶೀಲಿಸುತ್ತಿದ್ದರು. ಈ ಬಡ್ಜೆಟ್ಟಿನಲ್ಲಿ ಹಣಕಾಸಿನ ವಿಚಾರದಲ್ಲಿ ಹಲವಾರು ಅಂಕಿ ಅಂಶಗಳಿವೆ. ಅವನ್ನು ಸ್ವಲ್ಪ ಹೆಚ್ಚುಕಡಿಮೆ ಮಾಡಿದರೆ ಲಕ್ಷಾಂತರ ರೂಪಾಯಿಗಳ ವ್ಯತ್ಯಾಸವಾಗುತ್ತದೆ. ಈಗ ಈ ಬಡ್ಜೆಟ್ ಸರ್ಪ್ಲಸ್ ಅಥವ ಡಿಫಿಸಿಟ್ ಆಗಿದೆ ಎನ್ನುವ ವಿಚಾರಕ್ಕೆ ಕೈಹಾಕುವುದಿಲ್ಲ. ಮಾನ್ಯ ಸದಸ್ಯರನೇಕರು, ರಿಸರ್ವ್‌ನಿಂಧ ಹಣ ತೆಗೆದುಕೊಂಡು ಈ ವರ್ಷ ಖರ್ಚನ್ನು ಸರಿದೂಗಿಸಿದ್ದಾರೆ ಎಂದು ತಿಳಿಸಿದ್ದಾರೆ. ಆದ್ದರಿಂದ ಈ ಅಂಕಿ ಅಂಶಗಳು ವ್ಯತ್ಯಾಸ ಬಂದಿರುವುದಕ್ಕೆ ಪ್ರಾಮುಖ್ಯತೆ ಕೊಡುವುದಿಲ್ಲ. ಒಟ್ಟಿನಲ್ಲಿ ಹಣಕಾಸಿನ ಸಚಿವರು ಅವರ ಭಾಷಣದ ಕೊನೆಯಲ್ಲಿ ಹೀಗೆ ಹೇಳಿದ್ದಾರೆ:—"ಈ ಬಡ್ಜೆಟನ್ನು ನೋಡಿದರೆ ಯಾರೊಬ್ಬರೇ ಆಗಲಿ ಮಿತಿಮೀರಿದ ಆಶಾವಾದದಿಂದ ಚೋದಿತರಾಗಿ ಹಿಗ್ಗುವುದಕ್ಕಾಗಲಿ ಅಥವಾ ಅನವಶ್ಯವಾದ ನಿರಾಶಾವಾದದ ಪರಿಣಾಮಕ್ಕೊಳಗಾಗಿ ಕುಗ್ಗುವುದಕ್ಕಾಗಲಿ ಕಾರಣವಿಲ್ಲ." ಅವರು ಇದನ್ನು ಬಹಳ ಬುದ್ಧಿವಂತಿಕೆಯಿಂದ ವಿಚಾರಪೂರಿತವಾದ ರೀತಿಯಲ್ಲಿ ಹೇಳಿದ್ದಾರೆ. ಅದು ಸಂತೋಷಕರವಾಗಿದೆ. ಆದರೆ ಈಗಿನ ಸ್ಥಿತಿ ವಾಸ್ತವವಾಗಿ ನೋಡಿದರೆ ಯಾವ ಆತಂಕಕ್ಕೂ ಕಾರಣವಿಲ್ಲದೆ ಭದ್ರವಾಗಿದೆ. ಈ ದಿವಸ ಭದ್ರವಾಗಿ ಕಾಣಬಹುದು. ಆದರೆ ಮುಂದಕ್ಕೆ ನಮಗೆ ತೊಂದರೆಯ ಕಾಲ ಖಂಡಿತ ಬರುವ ಚಿನ್ಹೆಗಳು ಕಾಣುತ್ತಿವೆ. ಬರೀ ನಮ್ಮ ಸಾಧಾರಣ ಸ್ಥಿತಿಯಿಂದ ಇದನ್ನು ಹೇಳುತ್ತಿಲ್ಲ. ರಾಜಕೀಯ ಸ್ಥಿತಿಯನ್ನು ತೆಗೆದುಕೊಂಡರೂ, ಪ್ರಪಂಚದ ಸ್ಥಿತಿಯನ್ನು ತೆಗೆದುಕೊಂಡರೂ ನಮ್ಮ ಪರಿಸ್ಥಿತಿ ಎಷ್ಟು ಕಠಿಣವಾಗಿದೆಯೆಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ನಾವು ಸಾಧಾರಣ ಸ್ಥಿತಿಯಲ್ಲಿದ್ದೇವೆಂದು ಖಂಡಿತ ತಿಳಿಯಬಾರದು. ನಮ್ಮ ಅಕ್ಕಪಕ್ಕಗಳವರೂ ನಮ್ಮ ಮೇಲೆ ಕಣ್ಣಿಟ್ಟಿದ್ದಾರೆ. ಇಂಡಿಯಾ ಸರ್ಕಾರಕ್ಕೆ ಹೊಸ ವ್ಯಾಜ್ಯ ಪ್ರಾಪ್ತವಾಗಿದೆ. ಅವರು ಶಾಂತ ಪರಿಸ್ಥಿತಿಯಿರಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಅದಕ್ಕೆ ಅನೇಕ ಕಾರಣಗಳಿವೆ. ಈಗಲೂ ಕೂಡ ಉತ್ತರ ಇಂಡಿಯಾದಲ್ಲಿ ಜನರಿಗೆ ಕೋಪ, ಗಾಭರಿ ಇದೆ. ಬಡ್ಜೆಟ್ ಎಂಬುದು ನಮ್ಮ ಸರ್ಕಾರದ ಮತ್ತು ಸಂಸ್ಥಾನದ ಆಯವ್ಯಯ ಪಟ್ಟಿಯ ತಖ್ತೆ. ಬಡ್ಜೆಟ್ ಮಾಡಲು ನಮಗೆ ಏನು ಬೇಕೋ ಅದನ್ನು ರಿಸರ್ವ್‌ನಿಂದ ಅಥವಾ ಹಿಂದೆ ಪೂರ್ವಿಕರು ಸಂಪಾದಿಸಿರುವ ಫಂಡಿನಿಂದ ಅತ್ಯವಶ್ಯಕವಾದ ಬಾಬುಗಳಿಗೆ ತೆಗೆದುಕೊಂಡು ವಿನಿಮಾಡಿ, ಈಗಿನ ಪರಿಸ್ಥಿತಿಗೆ ಸರಿದೂಗಿಸಬೇಕೆಂಬ ಉದ್ದೇಶ ಸರಿಯಲ್ಲ. ಹಣವನ್ನು ಹೆಚ್ಚುಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದರಲ್ಲೂ ವಿಲೀನಿಕರಣದಿಂದ ನಮಗೆ ಹಣ ಕೊಡುವುದಕ್ಕೆ ಬಹಳ ಅವಕಾಶ ಸಿಕ್ಕಿದೆ. ಇಂಡಿಯಾ ಸರ್ಕಾರದವರು ನಮ್ಮನ್ನು ಚೆನ್ನಾಗಿ ಕಂಡಿದ್ದಾರೆ ಎಂದು ಹೇಳಬಹುದು. ಆದರೆ ನಮಗೆ ಹಣದ ವಿಚಾರದಲ್ಲಿ ತೊಂದರೆಗೆ ಅವಕಾಶವಿದೆ.

ವಿಲೀನಿಕರಣದಲ್ಲಿಯೂ ಕೂಡ ಈಗಲ್ಲ ನಾಳೆಯಾದರೂ ತೊಂದರೆ ಇದ್ದೇ ಇದೆ. ಸರ್ಕಾರದವರು ಇದನ್ನು ದೃಷ್ಟಿಯಲ್ಲಿಟ್ಟುಕೊಂಡಿರಬೇಕು. ನಾನು ಈ ಆಯವ್ಯಯದ ಪಟ್ಟಿಯ ವಿಚಾರದಲ್ಲಿ ಈಗ ಹೆಚ್ಚು ಹೇಳುವುದಿಲ್ಲ: ಒಂದು ವಿಷಯ ಮಾತ್ರ ಹೇಳುತ್ತೇನೆ. 1947 ನೆಯ ಇಸವಿಯಲ್ಲಿ ಹೊಸದಾಗಿ ಕಾಂಗ್ರೆಸ್ ಮಂತ್ರಿಮಂಡಲ ಅಧಿಕಾರಕ್ಕೆ ಬಂದಾಗ ಅವರು ಬಹಳ ಉತ್ಸಾಹದಿಂದ ಜನರಿಗೆ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡುತ್ತೇವೆಂದು ಹೇಳಿದರು. Enthusiasm overran discretion ಎಂದು ಹೇಳುವ ಹಾಗಾಯಿತು. ಯಾವ ಕೆಲಸವನ್ನು ಮಾಡಬೇಕಾದರೂ ಒಂದು plan ಬೇಕು. ನಮ್ಮ ಹಣವನ್ನು ಯಾವ ರೀತಿ ಖರ್ಚು ಮಾಡಬೇಕೆಂದು ಯೋಚನೆ ಮಾಡಬೇಕು. 1947 ರಲ್ಲಿ ಈ ಮಂತ್ರಿಮಂಡಲದವರು ಅಧಿಕಾರಕ್ಕೆ ಬಂದಾಗ ನಮ್ಮ ದೇಶದಲ್ಲಿ ಹಣದ ಮುಗ್ಗಟ್ಟು ಬಂದಿರಲಿಲ್ಲ. ಆಗ ಅವರು ಸಾಲವನ್ನೆತ್ತಬೇಕೆಂದು ಮನಸ್ಸು ಮಾಡಿದ್ದಿದ್ದರೆ ಖಂಡಿತವಾಗಿಯೂ ಕಡಿಮೆ ದರದ ಬಡ್ಡಿಯಲ್ಲಿ ಹಣ ಬರುತ್ತಿತ್ತೆಂದು ನಾನು ಹೇಳಬಲ್ಲೆ. ಆದರೆ ಅವರು ಇದಕ್ಕೆ ಮನಸ್ಸು ಮಾಡಲಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ಹಿಂದೆ ನಾವು ಸಾಲ ಮಾಡಿದುದನ್ನೇ ಅವರು ವಿರೋಧಿಸಿದ್ದರಲ್ಲ, ಆದ್ದರಿಂದ ಮಾಡಲಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಾಗೆ ಮಾಡಿದ್ದರೆ ಅದು ತಪ್ಪು. ಹಣ ಬೇಕಾದಷ್ಟು ಸಿಕ್ಕುತ್ತಿತ್ತು. ಈ ವಿಚಾರವನ್ನು ಅವರು ಸ್ವಲ್ಪ ಆಲೋಚನೆ ಮಾಡಬೇಕು. ಇದನ್ನೆಲ್ಲಾ ನೋಡಿದರೆ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ನಮಗೆ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಚುನಾಯಿತ ಅಧ್ಯಕ್ಷರನ್ನಿಟ್ಟುಕೊಳ್ಳುವ ಅಧಿಕಾರವನ್ನು ಕೊಟ್ಟರು. ಅದಕ್ಕೆ ಹಿಂದೆ ಈ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಡೆಪ್ಯುಟಿ ಕಮೀಷನರೇ ಅಧ್ಯಕ್ಷರಾಗಿರುತ್ತಿದ್ದರು. ಇವರು ಹಣವನ್ನು ಕೂಡಿಹಾಕಿಟ್ಟಿದ್ದರು. ಖಾಸಗೀ ಅಧ್ಯಕ್ಷರು ಬಂದಮೇಲೆ ಜನಗಳಿಗೆ ಅನುಕೂಲಮಾಡಿ ಒಳ್ಳೆಯ ಹೆಸರು ಪಡೆಯಬೇಕೆಂದು ಹಿಂದಿದ್ದ ಹಣವನ್ನೆಲ್ಲಾ ಧಾರಾಳವಾಗಿ ಖರ್ಚು ಮಾಡಿದರು. ಆದರೆ ಒಳ್ಳೆಯ ಕೆಲಸಗಳಿಗೇನೋ ಖರ್ಚು ಮಾಡಿದೆವು. ಹಾಗೆ ಈಗಿನ ಸರ್ಕಾರದವರೂ ಎಲ್ಲಿ ಎಲ್ಲವನ್ನೂ ಖರ್ಚುಮಾಡಿಬಿಟ್ಟು ಆಮೇಲೆ ಕಣ್ಣುಕಣ್ಣು ಬಿಡುತ್ತಾರೋ ಎಂಬ ದೊಡ್ಡ ಯೋಚನೆ ನನಗೆ ಬಂದಿದೆ. ಈಗ ಬಹಳ ಹುಷಾರಿನಿಂದ ಹೆಜ್ಜೆಯನ್ನಿಡಬೇಕಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ, ಹಣಕಾಸಿನ ಮಂತ್ರಿಗಳ ಸ್ಥಾನ ಬಹಳ ಇಕ್ಕಟ್ಟಿನ ಸ್ಥಾನ. ಇದು ಅವರಿಗೂ ಗೊತ್ತಿದ್ದರೂ ಅದನ್ನು ಈಗ ಹೇಳುವಹಾಗಿಲ್ಲ. ಈಗೇನೋ ಜನರು ಏನೇನು ಕೇಳುತ್ತಾರೋ ಅದನ್ನು ಮಾಡಿಕೊಡಬೇಕೆಂಬ ಉದ್ದೇಶವಿರಬಹುದು. ಆದರೆ ಮುಂದೆ ಖಂಡಿತವಾಗಿಯೂ ಕಷ್ಟಕಾಲ ಬರುತ್ತದೆ. ಕೈಗಾರಿಕಾ ನೀತಿಯ ವಿಚಾರದಲ್ಲಿ ನಮ್ಮ ಹಣಕಾಸಿನ ಮಂತ್ರಿಗಳು ಬಹಳ ಉತ್ಸಾಹದಿಂದ ಮುಂದುವರಿಯುವ ಹಾಗಿದೆ. ಈಗಿನ ಪರಿಸ್ಥಿತಿಯನ್ನು ನೋಡೋಣ. ಸರ್ಕಾರದವರ ಕೈಕೆಳಗೆ 12 ಕೈಗಾರಿಕೆ ಕಾರ್ಖಾನೆಗಳಿವೆ. ಅದರಲ್ಲಿ ಪೋರ್ಸಲೇನ್ ಕಾರ್ಖಾನೆಯೂ ಒಂದಾಗಿದೆ. ತಿರುವಾಂಕೂರಿನಲ್ಲಿ ಒಂದು ಪೋರ್ಸಲೇನ್ ಕಾರ್ಖಾನೆಯನ್ನು ಪ್ರಾರಂಭಿಸಿ ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಈ ಕೈಗಾರಿಕೆ ಅಲ್ಲಿ ಬಹಳ ಜಯಪ್ರದವಾಗಿ ನಡೆಯುತ್ತಿದೆ. ನಮ್ಮ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿ ಫರ್ನೇಸ್ ಇದೆ. ಇಂತಹದು ಪೌರ್ವಾತ್ಯ ದೇಶಗಳಲ್ಲೆಲ್ಲಿಯೂ ಇಲ್ಲವೆಂದು ಸರ್ ಮಿರ್ಜಾರವರು ಹೇಳುತ್ತಿದ್ದುದು ನನಗೆ ಜ್ಞಾಪಕಕ್ಕೆ ಬರುತ್ತಿದೆ. ಹೀಗಿರುವಾಗ ಇದಕ್ಕೆ ಏನು ಗಂಡಾಂತರ ಬಂದಿದೆಯೋ ಗೊತ್ತಾಗಲಿಲ್ಲ. ತಿರುವಾಂಕೂರಿನಲ್ಲಿ ಅಷ್ಟು ಚೆನ್ನಾಗಿ ನಡೆಯುತ್ತಿರುವಾಗ

ಇಲ್ಲಿ ನೋಡಿದರೆ ಹದಿನಾಲ್ಕು ಸಾವಿರ ರೂಪಾಯಿ ನಷ್ಟವಾಗಿದೆ, ನಷ್ಟದಲ್ಲೇ ನಡೆಯುತ್ತಿದೆ, ಕಾರಣವೇನು ?

*Sri H. C. DASAPPA.—I have stated in my speech alone that Rs. 14,000 does not represent the correct figure, because it was taken on account for the first four months only. The situation is quite different now. Rs. 14,000 does not represent the actual fact. Because a large leeway was yet to be made we provided something more in the Budget of 1949–50. In the accounts there was a heavy loss.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಸಂತೋಷ. ನೋಡೋಣ ಮುಂದಕ್ಕೆ ಇದೊಂದೇ ವಿಚಾರವಲ್ಲ, ನಮ್ಮ ಕಾರ್ಖಾನೆಗಳಲ್ಲಿ ಯಾವ ಯಾವುದು ವರಮಾನ ಕೊಡುವುದು, ಯಾವ ಯಾವುದರಿಂದ ನಷ್ಟವಾಗುತ್ತಿದೆ ಎಂಬುದನ್ನು ನೋಡಬೇಕು. ಲಿಮಿಟೆಡ್ ಕೈಗಾರಿಕೆ ಸಂಸ್ಥೆಗಳಿಗೆ ಹಣ ಕೊಟ್ಟರೆ ವಾಪಸು ಬರುತ್ತದೆಯೇ ಎಂಬುವನ್ನೂ ನೋಡಬೇಕು. ಕ್ರಿಯೋಸೋಟಿಂಗ್ ಕಾರ್ಖಾನೆ, ಬೆಳ್ಳಾರ ಚಿನ್ನದಗಣಿ ಇವುಗಳಲ್ಲೂ ನಷ್ಟವಾಗಿದೆ. ಖಾಸಗೀಜನರು ನಡೆಸುವಂತೆ ಸರ್ಕಾರ ಕೈಗಾರಿಕೆಗಳನ್ನು ನಡೆಸಲು ಸಾಧ್ಯವೆ ? ನಮ್ಮ ಜನರಲ್ಲಿ ಅಷ್ಟು civic responsibility ಬೆಳೆದಿದೆಯೇ ಎಂಬುದನ್ನೆಲ್ಲಾ ನೋಡಿಕೊಂಡು ನಿಧಾನವಾಗಿ ಮುಂದುವರಿಯಬೇಕೆಂದು ಹೇಳಿದರು. ಅದು ನಿಜ. ಹಾಸನದ ಇಂಪ್ಲಿಮೆಂಟ್ಸ್ ಕಾರ್ಖಾನೆಯನ್ನು ನೋಡೋಣ. ನಾನು ಸಾಮಾನ್ಯವಾಗಿ ನನಗೆ ಬೇಕಾದ ಸಾಮಾನುಗಳನ್ನು ಅಲ್ಲಿ ಕೊಳ್ಳುವುದು. ಬೆಲೆ ಯಾವಾಗಲೂ ಹೆಚ್ಚು.

Sri K. CHENGALARAYA REDDY.—What is the Hon'ble Member's suggestion regarding that please?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇಲ್ಲಿ ಹೀಗೆ ಹೆಚ್ಚು ಬೆಲೆ ಆಗಲು ಕಾರಣವೇನು ಎಂಬುದನ್ನು ವಿಚಾರ ಮಾಡಬೇಕು. ಟಾಟಾ ಕಂಪೆನಿಯವರು ಇದೇ ಸಾಮಾನುಗಳನ್ನು ಸರಬರಾಜು ಮಾಡುತ್ತಾರೆ. ಅಲ್ಲಿಂದ ಇಲ್ಲಿಗೆ ಬಂದರೂ ಎಷ್ಟು ಕಡಿಮೆ ಬೆಲೆಗೆ ಮಾರುತ್ತಾರೆ. ಕಾರಣವೇನಿರಬಹುದೆಂಬುದನ್ನು ಪರೀಕ್ಷಿಸಬೇಕು.

ಮೊನ್ನೆ ಇದೇ ಹಾಸನದ ಇಂಪ್ಲಿಮೆಂಟ್ಸ್ ಕಾರ್ಖಾನೆಯವರು 300 ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಕೇವಲ 10 ಪಲ್ಲ ರಾಗಿ 60 ಪಲ್ಲ ಹುರುಳಿ ಬಂದಿದೆ.

ಶ್ರೀ ಟಿ. ಮರಿಯಪ್ಪನವರು.—ಈಚೆಗೆ ಬಹಳ ಕಾಲಾತೀತವಾದ ಮೇಲೆ ಅವರಿಗೆ ಜಮೀನು ಕೊಟ್ಟದ್ದು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಒಟ್ಟಿನಲ್ಲಿ ಅಲ್ಲಿ ಕೆಲಸ ಮಾಡುವ ಜನರಲ್ಲಿ ತಿಂಗಳಾದ ಕೂಡಲೆ ತಮ್ಮ ಸಂಬಳ ಬಂದರೆ ಸಾಕೆಂಬ ಮನೋಭಾವವಿರುವಾಗ ಸರ್ಕಾರದಿಂದ ನಡೆಯುವ ಕಾರ್ಖಾನೆಗಳಲ್ಲಿ ಲಾಭ ಬರುತ್ತದೆಯೆ ಎಂಬುದನ್ನು ನೋಡಬೇಕು.

ಶ್ರೀ ಎಚ್. ಸಿದ್ದಯ್ಯನವರು.—ಇಲ್ಲೇ ಪಕ್ಕದಲ್ಲಿರುವ ಸಾಬೂನು ಕಾರ್ಖಾನೆ ನೋಡಿ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದು ಪೂರ್ವದಿಂದಲೂ ಚೆನ್ನಾಗಿ ನಡೆಯುತ್ತಿದೆ. ಅದಕ್ಕೆ ಈಗ ಯಾರೂ credit ತೆಗೆದುಕೊಳ್ಳುವ ಹಾಗಿಲ್ಲ.

ಈಗಿರುವ ಕೈಗಾರಿಕೋದ್ಯಮಗಳಲ್ಲಿ ಏನೇನು ಲೋಪದೋಷಗಳಿವೆ ಎಂಬುದನ್ನು ಪರಿಕ್ಷಿಸಿ ನೋಡಿ qualitative improvement ಮಾಡುವ ಏರ್ಪಾಡು ನಡೆಯಲೆಂಬುದು ನನ್ನ ಅಭಿಪ್ರಾಯ. ಇದನ್ನು ವಿವರವಾಗಿ ಮುಂದೆ ಹೇಳುತ್ತೇನೆ.

ಪಾನ ನಿರೋಧದ ವಿಚಾರದಲ್ಲಿ ಸರ್ಕಾರದವರಿಗೂ ನನಗೂ ಭಿನ್ನಾಭಿಪ್ರಾಯವಿದೆ. ಮಹಾತ್ಮಾ ಗಾಂಧಿಯವರ ತತ್ವವನ್ನೇ ಮರೆತಂದಿದೆ. Parting of ways ಏನಾದರೂ ಇದೆಯೋ ಏನೋ. ಇವರನ್ನು ಕೇಳಿದರೆ ಕೇಂದ್ರದವರು ನಿಧಾನವಾಗಿ ಹೋಗಿ ಎಂದು ಹೇಳುತ್ತಿದ್ದಾರೆಂದು ಹೇಳುತ್ತಾರೆ. ಆದರ ಅರ್ಥ ಹೊಸ ಯೋಜನೆಗಳನ್ನು ನಿಧಾನವಾಗಿ ಜಾರಿಗೆ ತನ್ನಿ ಎಂದಿರಬಹುದು.

Sri K. CHENGALARAYA REDDY.—Pace.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅನುಕೂಲ ಸಿಂಧು, ಸಂದರ್ಭಾನುಸಾರ ಅರ್ಥವೆಂಬು ಕಾಣುತ್ತದೆ. ಈಗ ಹೇಗಾಗಿದೆಯೆಂದರೆ, ಇಬ್ಬರು ಕುಡುಕರು ಒಬ್ಬ ಹಾಸನದಲ್ಲಿ ಇನ್ನೊಬ್ಬ ಕಡೂರಿನಲ್ಲಿದ್ದರೆ, ಕಡೂರಿನಲ್ಲಿ ಕುಡಿಯುವವನು ಕೆಟ್ಟವನು, ಅಲ್ಲಿ ಅದು ದೋಷ ಹಾಸನದಲ್ಲಿ ಕುಡಿಯುವವನದು ದೋಷವಿಲ್ಲ ಎನ್ನುವುದು. ಹೀಗೆ ಮಾಡುವುದಕ್ಕೆ ಯಾವ ನೀತಿಯ ಆಧಾರವಿದೆ? ಸರ್ಕಾರದವರು ಹೇಳುವುದು ಒಂದು ಕುಂಟನೆಪವೆಂದು ಹೇಳುತ್ತೇನೆ. ಹೊಸದಾಗಿ ಯಾರಿಂದಲೂ ಈ ವಿಷಯದಲ್ಲ ಪಾಠಕಲಿಯಬೇಕಾಗಿಲ್ಲ. ಪಾನ ನಿರೋಧ ಯೋಜನೆಯನ್ನು ಮಾಡಿದ ಮೇಲೆ ಧೈರ್ಯವಾಗಿ ದೇಶಕ್ಕೆಲ್ಲಾ ಜಾರಿ ಮಾಡಿ ನೋಡಬೇಕು. ಒಂದು ವೇಳೆ ಅದು ಜಯಪ್ರದವಾಗಿ ನಡೆಯದಿದ್ದಾರೆ ಬಿಟ್ಟು ಬಿಡಬಹುದು. ಈಗ ಸರ್ಕಾರದವರಿಗೆ ನಾನು ಹೇಳುವುದಿಷ್ಟು; ನೀವು ಅಡಿಕೆ ಕತ್ತರಿಗೆ ಮಧ್ಯದಲ್ಲಿ ಸಿಕ್ಕಿಕೊಂಡಿದ್ದೀರಿ. ಅನೇಕ ಜನ ಅನೇಕ ವಿಧವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಬಹಳ ದೂರುಗಳಿಗೆ ಸಿಕ್ಕಿದ್ದೀರಿ. ಈ ಸಂಬಂಧವಾಗಿ ಒಂದು ವಿಷಯ ಹೇಳುತ್ತೇನೆ. ಪಾನ ನಿರೋಧ ಮೂರು ಜಿಲ್ಲೆಗಳಿಗೆ ಬಾರದೆಯಿರುವಂತೆ ಸರ್ಕಾರದಲ್ಲಿ influence ಉಪಯೋಗ ಮಾಡಿದರೆ ನಾನು ಒಂದು ಲಕ್ಷ ರೂಪಾಯಿ ಕೊಡುತ್ತೇನೆಂದು ಒಬ್ಬರು ಹೇಳಿಕೊಂಡು ತಿರುಗುತ್ತಿದ್ದರು. ಇದು ನನ್ನ ಕಿವಿಗೆ ಬಿದ್ದು ಅವನನ್ನು ನಾನು ಬೈದು ಕಳುಹಿಸಿದ್ದೇನೆ. ಹೀಗೆಲ್ಲಾ ಜನರಲ್ಲಿ ನಡೆಯುತ್ತಿದೆ. ಕೆಲವು ಜಿಲ್ಲೆಗೆ ಜಾರಿಗೆ ತರುತ್ತೇವೆಂದು ಹೇಳುತ್ತಿರೆ ಇದ್ದರೆ ಅದು ಜನಗಳು ಮಾತನಾಡುವುದಕ್ಕೆ ಅವಕಾಶವಾಗಿದೆ. ಆ ವಿಚಾರ ನನ್ನ ಕಿವಿಗೆ ಬಂದು ಬಿದ್ದಿದೆ. ಅದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ನೆನ್ನೆ ದಿನ ಶ್ರೀಮಾನ್ ಹುಚ್ಚೇಗೌಡರು ಆ ವಿಚಾರವನ್ನು ಹೇಳಿದಾಗ ಮಾನ್ಯ ಮಂತ್ರಿಗಳು 'question' ಎಂದು ಹೇಳಿದ ಹಾಗೆ ಇತ್ತು. ಇದನ್ನು ನೋಡಿದರೆ ಕಂಟ್ರಾಕ್ಟರುಗಳಿಗೆ ಸಹಾಯ ಮಾಡುವ ಏರ್ಪಾಡಾದ ಹಾಗೆ ಆಗಿದೆ. ಈಸಲ 145 ಲಕ್ಷ ರೂಪಾಯಿನಿಂದ 184 ಲಕ್ಷ ರೂಪಾಯಿಗಳ ವರಗೂ ವರಮಾನ ಏರಿದೆ. ಇದರಿಂದ ಏನುಗೊತ್ತಾಗುತ್ತದೆ? ಕಂಟ್ರಾಕ್ಟರುಗಳಿಗೆ ಎಷ್ಟು ಅನುಕೂಲವಿದೆ ಎಂಬುದನ್ನು ಆಲೋಚಿಸಬೇಕು. ಶ್ರೀಮಾನ್ ಚೆನ್ನಬಸಪ್ಪನವರು ಇರಬಹುದು. ಅವರು ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ಹೇಳಿದ್ದರು. ಅವರು ಹೇಳುತ್ತಿದ್ದುದು ನನಗೆ ಚೆನ್ನಾಗಿ ಜ್ಞಾಪಕವಿದೆ. ಪಾನನಿರೋಧವನ್ನು

ಜಾರಿಗೆ ತರುವಾಗ ಅನೇಕ ವಿಧವಾಗಿ ಪ್ರಯತ್ನಗಳು ನಡೆಯುತ್ತದೆ. ಕಂಟ್ರ್ಯಾಕ್ಟರುಗಳಿಂದ 5 ಲಕ್ಷ ರೂಪಾಯಿಗಳವರೆಗೂ ವಸೂಲು ಮಾಡುತ್ತಾ ಇದ್ದಾರೆ ಎಂದು ಬಹಿರಂಗವಾಗಿ ಆಕ್ಷೇಪಣೆ ಮಾಡಿದರು. ಆ ವಿಷಯದಲ್ಲಿ ನಾನು ಹೇಳುವುದು ಇಷ್ಟೆ. ಅವರ vested interest ಇತ್ತು. ಕಂಟ್ರ್ಯಾಕ್ಟರುಗಳು ಹಣವಂತರು. ಈಚಲು ಮರದ ಕೆಳಗೆ ನೀರು ಕುಡಿದರೂ ಹೆಂಡ ಕುಡಿದರು ಎಂದ ಹಾಗೆ ಆಗುತ್ತದೆ. ಈ ವ್ಯತ್ಯಾಸ ಇಟ್ಟುಕೊಳ್ಳಬಾರದು. ಪಾನ ನಿರೋಧ ಜಾರಿಗೆ ಬಂದ ಮೇಲೆ ಹಳ್ಳಿಗಾಡುಗಳಲ್ಲಿ ನನಗೆ ತಿಳಿದ ಮಟ್ಟಿಗೆ ಜನಗಳು ಚೆನ್ನಾಗಿದ್ದಾರೆ. ಎಲ್ಲಿ ಹೋದರೂ ಈ ಪಟ್ಟಣಗಳಲ್ಲಿ ಅಕ್ಕ ಪಕ್ಕದ ಪ್ರದೇಶಗಳಿಂದ ಜನಗಳು ಬಂದು ಕುಡಿಯುವರು ಅಧಿಕವಾಗಿದ್ದಾರೆ. ಅಷ್ಟೇ ಅಲ್ಲದೆ ಕುಡಿಯದೇ ಇರುವವರೂ ಹೊಸದಾಗಿ ಇತ್ತೀಚೆಗೆ ಹಳ್ಳಿಗಾಡುಗಳಲ್ಲಿ ಕುಡಿಯುವುದನ್ನು ಕಲಿಯುತ್ತಾ ಇದ್ದಾರೆ. ಆದ್ದರಿಂದ ತಾವು ಪಾನ ನಿರೋಧದ ವಿಷಯದಲ್ಲಿ ಬಹಳ ತಪ್ಪು ಹೆಜ್ಜೆ ಇಡುತ್ತಾ ಇದ್ದೀರಿ. ಇದು ಗಾಂಧೀಜಿಯವರ ತತ್ವದ ದೃಷ್ಟಿಯಿಂದ ನ್ಯಾಯವಲ್ಲ, ಅದು ನಿಮ್ಮ ಜವಾಬ್ದಾರಿ. ಪಾನ ನಿರೋಧವನ್ನು ಖಂಡಿತ ಜಾರಿಗೆ ತರಬೇಕೆಂದು ಮತ್ತೊಮ್ಮೆ ಹೇಳುತ್ತೇನೆ.

ಇನ್ನು ಹೆಚ್ಚು ಆಹಾರದ ಬೆಳೆ ಬೆಳೆಯುವ ವಿಚಾರವಾಗಿ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಗಂಗ್ಲಾಖಾದರ್ ಯೋಜನೆ ಪ್ರಕಾರ ನೀವೂ ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿದ್ದೀರಿ. ಅದು ಜಯಪ್ರದವಾಗಿ ಆಗಬೇಕಾಗಿದ್ದರೆ, ಅದರಲ್ಲಿ ಕೆಲವು ಬದಲಾವಣೆಗಳು ಆಗಬೇಕಾಗುತ್ತವೆ. ಅಲ್ಲಿ ಭೂಮಿ ಯಾವ ರೀತಿ ಇದೆ. ನಿರಾಶ್ರಿತರನ್ನು ಹೇಗೆ ನೆಲೆಸುವಂತೆ ಮಾಡಿ ಆ ಕಾರ್ಯವನ್ನು ಮಾಡುವುದಕ್ಕೆ ಉದ್ಯುಕ್ತರಾಗಿದ್ದಾರೆ ಎಂಬುದನ್ನೆಲ್ಲಾ ನೋಡಬೇಕು. ಆ ವಿಷಯದಲ್ಲಿ ನೀವು ಬಹಳ ಹುಷಾರಾಗಿ ಹೋಗಬೇಕಾಗಿದೆ. ಒಟ್ಟಿನಲ್ಲಿ ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆ ಇವತ್ತು ನೀವು ಹಾಕಿದರೆ ಇನ್ನು 4–5 ವರ್ಷ ಆದ ಮೇಲೆ ಅದರಿಂದ ಪ್ರತಿಫಲ ಪಡೆಯಬಹುದು. ಇಂದು ಹೊಸ ಭೂಮಿ ಅಬಾದಿಗೆ ಬರಬೇಕಾದರೆ ನಾಲ್ಕೈದು ವರ್ಷ ಬೇಕೇ ಬೇಕು. ಅದನ್ನು ಯೋಚನೆ ಮಾಡಬೇಕು. ಅದ್ಯದಲ್ಲಿ ಮೂರು ಲಕ್ಷ ಎಕರೆ ನಾಲಾಪ್ರದೇಶದಲ್ಲಿ ಗದ್ದೆ ಪ್ರದೇಶ ಇದೆ. ನೀರಾವರಿ ಅನುಕೂಲತೆ ಇದೆ. ನೀವು ಕಾಲಕ್ಕೆ ಸರಿಯಾಗಿ ಗೊಬ್ಬರ, ಹಿಂಡಿ ಬೀಜ ಕೊಟ್ಟರೆ ಬೇಕಾದಷ್ಟು ಬೆಳೆ ಮಾಡಬಹುದು. ವ್ಯವಸಾಯದ ಇಲಾಖೆಯಲ್ಲಿ ವಿಶೇಷ ಸಿಬ್ಬಂದಿಯನ್ನಿಟ್ಟು ಒಂದು ಎಕರೆಗೆ ಒಂದು ಪಲ್ಲ ಹೆಚ್ಚು ಮಾಡಿದರೆ 3 ಲಕ್ಷ ಪಲ್ಲಾ ಹೆಚ್ಚಿಗೆ ಬರುತ್ತದೆ. ಅಷ್ಟು ಬಂದರೆ ಎಷ್ಟೋ ಆಯಿತು.

ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಅದಕ್ಕೇ ಕಂಪೋಸ್ಟ್ ಗೊಬ್ಬರ ಒದಗಿಸುವ ಪ್ರಯತ್ನ ಇದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಾಲಾ ಪ್ರದೇಶದಲ್ಲಿ ಒದಗಿಸಿ.

ಶ್ರೀ ಟಿ. ಮರಿಯಪ್ಪನವರು.—ಹಾಗೆಯೇ ಮಾಡಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗ ಕೃಷ್ಣರಾಜ ಸಾಗರದಲ್ಲಿ ಹೆಚ್ಚಾಗಿ ನೀರಿಲ್ಲ. ಕಣ್ವಾಪ್ರಾಜೆಕ್ಟಿನಲ್ಲಿ ನೀರಿಲ್ಲ, ಹಸಿರು ಗೊಬ್ಬರ ಇಲ್ಲ. ಹಿಂಡಿಯನ್ನು ಕಂಟ್ರೋಲ್ ಮಾಡಿದ್ದೀರಾ.

ಶ್ರೀ ಟಿ. ಮರಿಯಪ್ಪನವರು.—ಕಂಟ್ರೋಲ್ ಮಾಡಿ ನಾಲಾ ಪ್ರದೇಶದಲ್ಲಿ ದಾಸ್ತಾನು ಮಾಡಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇದಕ್ಕೇ ನೀವು ಹೆಚ್ಚು ಗಮನವನ್ನು ಕೊಟ್ಟರೆ ಆಗುತ್ತದೆ. ಮೊದಲಿನಿಂದಲೂ ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿ ದೊಡ್ಡ ರಿಸರ್ವಾಯರ್‌ಗಳನ್ನು ನಿರ್ಮಿಸುವುದಕ್ಕೆ ನಿಗಾ ಕೊಟ್ಟಿದ್ದಾರೆಯೇ ಹೊರತು ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದರ ಕಡೆ ನಿಗಾ ಕೊಟ್ಟಿಲ್ಲ. ಆ ವಿಷಯಕ್ಕೆ ಗಮನ ಕೊಡಬೇಕು.

ಇನ್ನು ಗ್ರಾಮಪುನರುಜ್ಜೀವನದ ವಿಚಾರ. ನಮ್ಮ ಸ್ನೇಹಿತರು ಇದೊಂದು legacy ಎಂದು ಹೇಳಿದರು. ಆದರೆ ಮಾನ್ಯ ಮಂತ್ರಿಗಳ ಕಾಮಧೇನು, ಕಲ್ಪವೃಕ್ಷ ಎಂದು ಹೇಳಿರುತ್ತಾರೆ. ಇದರ ವಿಚಾರದಲ್ಲಿ ನಾನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ಕೆಲವು ವರ್ಷಗಳ ಕಾಲ ನ್ಯಾಯವಿಧಾಯಕ ಸಭೆಯ ಅಧ್ಯಕ್ಷನಾಗಿದ್ದುದರಿಂದ ಹೊರಗೆ ಹೇಳುವುದಕ್ಕೆ ಅವಕಾಶವಿರಲಿಲ್ಲ. ಪ್ರತಿಯೊಂದು ಹೋಬಳಿಯಲ್ಲೂ ಯಾರು ನ್ಯಾಯವಾಗಿ ವರ್ತಿಸುತ್ತಾರೋ ಅಂಥವರನ್ನು ಚುನಾಯಿಸಿ ಗ್ರಾಮ ಸುಧಾರಕರು ಎಂಬುದಾಗಿ ಹಿಂದೆ ನೇಮಕ ಮಾಡಿದ್ದೆವು. ಅದರಿಂದ ಬಹಳ ಪ್ರಯೋಜನ ಇತ್ತು ಎಂದು ಹೇಳುತ್ತೇನೆ. ನಿಜವಾಗಿಯೂ ಸ್ಥಳೀಯ ಅಭಿಮಾನ ಮತ್ತು ಸ್ಥಳೀಯ ಮುಖಂಡತ್ವ ಉತ್ಪನ್ನ ಮಾಡುವ ಉದ್ದೇಶದಿಂದ ಆ ಯೋಜನೆಯನ್ನು ಮಾಡಿದ್ದೆವು. ಈಗ ಖಾಸಗೀ ಜನಗಳ ಸಹಕಾರ, ಜವಾಬ್ದಾರಿ ಸರ್ಕಾರ ಬೇಕು ಎಂದು ಹೇಳುತ್ತಿರುವಾಗ ನೀವು ಅನುಸರಿಸುತ್ತಿರುವ ಮಾರ್ಗ ಸರಿಯಲ್ಲ. ನಾನು ಮಂತ್ರಿ ಪದವಿಯಿಂದ ನಿವೃತ್ತನಾಗುವುದಕ್ಕೆ ಮುಂಚೆ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಪ್ರತಿಯೊಂದು ಹೋಬಳಿಯಲ್ಲೂ 35–40 ಗ್ರಾಮಗಳ ಪಟೇಲರು, ಪಂಚಾಯ್ತು ಅಧ್ಯಕ್ಷರೂ ಸೇರಿ ಒಬ್ಬ ಗ್ರಾಮಸುಧಾರಕರನ್ನು ಚುನಾವಣೆ ಮಾಡಬೇಕೆಂದು ಮಾಡಿದೆ. ಅದಕ್ಕೆ ಸರಿಯಾಗಿ ಕೆಲಸ ಮಾಡುವವರನ್ನು, ಗ್ರಾಮದ ಹಿತವನ್ನು ಬಯಸತಕ್ಕವರನ್ನು ಮುಖಂಡರನ್ನಾಗಿ ಚುನಾವಣೆ ಮಾಡಬೇಕೆಂದು ಅಜ್ಞೆ ಆಗಿತ್ತು. ಆ ರೀತಿ ಪ್ರಜಾ ಪ್ರಭುತ್ವದ ತಳಹದಿಯನ್ನು ಹಾಕಿದ್ದೆವು. ತಾವು ಬಂದ ಒಂದು ವರ್ಷದಲ್ಲಿ ಆ ಯೋಜನೆ ತಲೆಕೆಳಕಾಯಿತು. ಈಗ ಗ್ರಾಮಾಭಿವೃದ್ಧಿ ಸಮಿತಿಗಳೆಂಬುದಾಗಿ ಮಾಡಿದ್ದೀರಿ. ಅದಕ್ಕೆ ಅಧ್ಯಕ್ಷರನ್ನಾಗಿ ಕಾಂಗ್ರೆಸ್‌ನವರನ್ನೇ ಎಲ್ಲಾ ಕಡೆಯೂ ನಾಮಕರಣ ಮಾಡಿದ್ದೀರಿ, ಚುನಾವಣೆ ಮಾಡಲಿಲ್ಲ. ದೇಶದಲ್ಲಿ ಕಾಂಗ್ರೆಸ್‌ನವರಿಂದಲೇ ಕೆಲಸ ನಡೆಯುತ್ತದೆ ಎಂಬುದನ್ನು ನಿಜವಾಗಿಯೂ ನಂಬಬಾರದು. ಇದರಲ್ಲಿ ನಾನು ತಮಗೆ ಮುಖ್ಯವಾಗಿ ಹೇಳಬೇಕಾಗಿರುವುದೇನೆಂದರೆ ತಾವು ಏನೊಂದು ನೀತಿಯನ್ನು ಈಗ ಆಚರಿಸುತ್ತಾ ಬಂದಿದ್ದೀರೋ ಅದರಿಂದ ಮುಂದೆ ನಿಮಗೆ ಖಂಡಿತ ಅನುಕೂಲವಾಗುವುದಿಲ್ಲ. ಕಾಂಗ್ರೆಸ್ಸಿನವರಿಂದಲೇ ನಿಮಗೆ ಎಲ್ಲವೂ ನಡೆಯಲಾರದು. ತಾವೇನೋ ಒಂದು ವೇಳೆ ಆ ಮನೋಭಾವ ಹೊಂದಿರಬಹುದು. ಆದರೆ ಇತ್ತೀಚೆಗೆ ಜನಗಳು ಕೂಡ ಬುದ್ಧಿವಂತರಾಗಿರುವುದರಿಂದ ಯಾವುದು ನ್ಯಾಯ, ಯಾರು ಹೇಳುವುದು ನ್ಯಾಯ, ಯಾರು ಹೇಳುವುದು ಸತ್ಯ ಎಂಬುದನ್ನು ಗ್ರಹಿಸುವ ಶಕ್ತಿ ಅವರಿಗೆ ಉಂಟಾಗಿದೆ. ನೀವೇನೋ ನಿಮ್ಮದೊಂದು ನೀತಿ ಅನುಸರಿಸಿ ಕೇವಲ ನಿಮ್ಮ ಕಾಂಗ್ರೆಸ್ ಪಕ್ಷದವರಿಗೇ ಪ್ರತಿಯೊಂದು ಕಡೆಯೂ, ಪ್ರತಿಯೊಂದು ಬಾಬಿನಲ್ಲಿಯೂ ನೂರಕ್ಕೆ ನೂರು ಪ್ರಾತಿನಿಧ್ಯಗಳನ್ನು ಒದಗಿಸಿಕೊಟ್ಟು, ನಿಮ್ಮವರಿಗೆಲ್ಲ ಬೇಕಾದ ಹಾಗೆ ಬಸ್ಸು ಸ್ಥಾನಗಳನ್ನು ಒದಗಿಸಿದ್ದು, ಅವರು ಅವುಗಳನ್ನು ಮದುವೆ ಇತ್ಯಾದಿ ಸಮಾರಂಭಗಳಿಗೆಲ್ಲ ಅವುಗಳನ್ನು

ಉಪಯೋಗಿಸುವುದಕ್ಕೆ ಅವಕಾಶವಾಗಿದೆ. ನಾನು ಆಗಾಗ್ಗೆ ಹಾಸನಕ್ಕೆ ಓಡಾಡುವಾಗ ರಸ್ತೆಗಳಲ್ಲಿ ಅಂದರೆ ಹಾಸನ, ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ನಿಮ್ಮ ಗ್ರಾಮಾಭಿವೃದ್ಧಿ ಯೋಜನೆಯನ್ನೂ ನೋಡಿದ್ದೇನೆ. ಅಲ್ಲಿ ಯಾವ ಕೆಲಸವೂ ನಡೆಯದೆ ಸ್ತಬ್ಧವಾಗಿದೆ. ನಾನಿದ್ದಾಗ ಈ ಯೋಜನೆ ಎಷ್ಟು ಮುಂದುವರಿದಿತ್ತೋ ಇಂದು ಅಷ್ಟಕ್ಕೆ ನಿಂತಿದೆ. ಈ ಬಾಬಿಗೆ ತಾವು ಹೆಚ್ಚು ಹಣವನ್ನು ಒದಗಿಸಿಲ್ಲ.

ಇನ್ನು ವೈದ್ಯಕೀಯ ಇಲಾಖೆಯ ವಿಷಯದಲ್ಲಿ ಮಾನ್ಯ ಮಂತ್ರಿಗಳು ಹೊಸಬರು, ಅವರು ಅನೇಕ ವಿಷಯಗಳನ್ನು ತಿಳಿದುಕೊಳ್ಳಬೇಕಾಗಿದೆ. ತಾವೀಗ ಇನ್ನೂ ಅಲೋಪೆಥಿಕ್ ಔಷಧಿಗಳ ಮೇಲೆ ನಂಬಿಕೆಯನ್ನಿಟ್ಟುಕೊಂಡು ಲಕ್ಷಾಂತರ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ಕಳುಹಿಸುತ್ತಿದ್ದೀರಿ. ಇದು ಬಹಳ ಶೋಚನೀಯವಾದ ಅಂಶ. ದೇಶ ಪ್ರೇಮಿಗಳಾದ ತಾವು ನಮ್ಮ ದೇಶದ ದುಡ್ಡನ್ನು ನಮ್ಮಲ್ಲಿಯೇ ಉಳಿಯುವಂತೆ ಮಾಡಬಹುದು. ಮಂತ್ರಿ ಮಂಡಲದಲ್ಲಿ ನಾನಿದ್ದಾಗಲೇ ನಮ್ಮ ಹಿಂದು ವೈದಕೀಯದ ವಿಷಯವಾಗಿ ಬೇಕಾದಷ್ಟು ಪ್ರಯತ್ನಗಳನ್ನು ಮಾಡಿದ್ದೆನು. ಆದ್ದರಿಂದ ತಾವು ಈಗ ನಮ್ಮ ದೇಶೀಯ ವೈದ್ಯವನ್ನೇ ಮುಂದುವರಿಸಿಕೊಂಡು, ಏಕೆ ಹೋಗಬಾರದು? ಇನ್ನು ಈ ಅಲೋಪೆಥಿಕ್ ಆಸ್ಪತ್ರೆಗಳಲ್ಲಿ ಅದರಲ್ಲಿಯೂ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ವಿಚಾರಗಳಂತೂ ಹೇಳಲು ಅಸಾಧ್ಯ. ಈ ವಿಚಾರಗಳೆಲ್ಲ ಕೇವಲ ಸುಮ್ಮನೆ ವಾದಕ್ಕಾಗಿ ಹೇಳುತ್ತಿಲ್ಲ. ಇವೆಲ್ಲವೂ ನನ್ನ ಪೂರ್ಣ ಅನುಭವದ ಮಾತುಗಳಾಗಿರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಈ ನಿಮ್ಮ ಆಸ್ಪತ್ರೆಗಳೆಲ್ಲವೂ ಕೇವಲ ದುಡ್ಡುಳ್ಳ ಜನರಿಗೇ ಹೊರತು ಬಡವರಿಗಾಗಿ ಇಲ್ಲ. ಈ ಸರ್ಕಾರಿ ಆಸ್ಪತ್ರೆಗಳಲ್ಲಿ ಸಹ ದುಡ್ಡು ಕೊಟ್ಟಿದ್ದೇನೆ. ಅನುಕೂಲಗಳು ದೊರಕಿದರೆ ದೊರೆಯುತ್ತೆ ಇಲ್ಲದಿದ್ದರೆ ಇಲ್ಲ. ಇದರ ಮೇಲೆ ಮುಖನೋಡಿ ಮಣೆ ಹಾಕತಕ್ಕ ಸ್ಥಿತಿ ಬೇರೆ ಚಲಾವಣೆಯಲ್ಲಿರುತ್ತೆ. ಇವರು ಟೋಪಿಯವರು, ಇವರು ಪೇಟದವರು, ಇವರು ಅವರುಗಳ ಸ್ನೇಹಿತರು, ಹಾಗೆ ಹೀಗೆ ಎಂದು, ಆಸ್ಪತ್ರೆಗಳಲ್ಲೂ ಈ ಒಂದು trade unionism level ಇರುವುದು ಕಂಡು ಬರುತ್ತಿದೆ.

ಈಗ ತಾವು service extension ಮತ್ತು ಬಡ್ತಿ ಇತ್ಯಾದಿಗಳನ್ನು ಕೊಡುತ್ತಿದ್ದಿರಿ. ಇದು ಸರಿಯಾದ ಒಂದು ಕ್ರಮ ಅಥವ ರೀತಿ ನೀತಿಯನ್ನು ಅನುಸರಿಸಿ ನಡೆಯುತ್ತಿಲ್ಲ. ತಾವು ಈ ವಿಚಾರಗಳಲ್ಲಿ ಒಂದು ನಿರ್ದಿಷ್ಟವಾದ ತತ್ವವನ್ನಿಟ್ಟುಕೊಂಡು ಮಾಡಬೇಕು. ಯಾವ ಯಾವ ಕೆಲಸಗಳನ್ನು ಹೀಗೆ ವಿತರಣೆಯಿಂದ ಮಾಡಬೇಕೆಂಬುದನ್ನೂ ನೀವು ಆಲೋಚನೆಮಾಡಬೇಕಾಗಿದೆ. ಉದಾಹರಣೆಗೆ ತಾವು ಡೈರೆಕ್ಟರ್ ಆಫ್ ಹಾಸ್ಪಿಟಲ್ಸ್ ಎಂಬ ಒಬ್ಬ ಮೆಡಿಕಲ್ ಆಫೀಸರನ್ನು ಇಟ್ಟಿದ್ದೀರಿ. ಅವರು ಬೆಂಗಳೂರಿನಲ್ಲಿರುವುದು. ಅವರು ನೇರವಾಗಿ ಯಾರ ಅಧೀನದಲ್ಲೂ ಇಲ್ಲ. ಇತ್ತಲಾಗಿ ಸೀನಿಯರ್ ಸರ್ಜನ್ ಕೈಕೆಳಗೂ ಇಲ್ಲ. ಇವರು ಇರುವುದು ಮೈಸೂರಿನಲ್ಲಿ. ಹೀಗೆ ಕುದುರೆ ಒಂದು ಕಡೆ, ಗಾಡಿ ಒಂದು ಕಡೆ ಮತ್ತು ಲಗಾಮು ಒಂದು ಕಡೆ ಆಗಿರುತ್ತೆ.

ಶ್ರೀ ಟಿ. ಮರಿಯಪ್ಪನವರು.—ಅವರು ಆ ರೀತಿ ನಾವು ಬರುವುದಕ್ಕೆ ಮುಂಚೆಯಿಂದಲೂ ಇದ್ದಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇನ್ನೂ ಏತಕ್ಕೆ ಸರಿಪಡಿಸಿಲ್ಲ? ಅವೇ ರೀತಿ ತಾವೀಗ ರೇಡಿಯೋಲಾಜಿಕಲ್ ಎಕ್ಸಪರ್ಟ್ ಒಬ್ಬರನ್ನು ಅವರ ಅನುಭವವಿರುವಂಥ ಕೆಲಸಕ್ಕೆ ಹಾಕದೆ ಬೌರಿಂಗ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಹಾಕಿದ್ದೀರಿ. ಮೈಸೂರು ಮೆಡಿಕಲ್ ಕಾಲೇಜಿನ ಶಿಕ್ಷಣಕ್ಕೆ ಒಳ್ಳೆಯ ರೇಡಿಯಾಲಜಿಸ್ಟ್ ಈಗ ಇಲ್ಲವೇ ಇಲ್ಲ. ಇದು ಸರಿಯೆ!

ಶ್ರೀ ಎಚ್. ಸಿ. ದಾಸಪ್ಪನವರು.—ಅವರನ್ನು ಅಲ್ಲಿಗೆ ಹಾಕಿದ್ದು ಯಾರು!

ಶ್ರೀ ಎಲ್. ಸಿದ್ದಪ್ಪನವರು.—ನಾವೇ ಹಾಕಿದ್ದವರು. ಏನೋ ತಪ್ಪಾಯಿತು. ಅವನ್ನು ತಾವೀಗ ಸರಿಪಡಿಸಿ.

Sri H. B. GUNDAPPA GOWDA.—He is a very good doctor. I know him personally. But it is not his place.

Sri. H. C. DASAPPA.—Let there be no reflections cast on individuals who are rendering very good service.

Sri. H. B. GUNDAPPA GOWDA.—I can claim to know some of these things. ನಾನು ಹೇಳತಕ್ಕದ್ದು ಅಪಾದನೆಗಾಗಿ ಅಲ್ಲ. ನೀವು ಕೆಲಸಗಳನ್ನು ತಲೆಕೆಳಕಾಗಿ ಮಾಡಲು ಹೊರಟಿದ್ದೀರಿ. ಅದು ಸರಿಯಲ್ಲ ಎಂಬುದನ್ನು ಮಾತ್ರ ತಿಳಿಸುತ್ತಿದ್ದೇನೆ.

ಇದೇ ರೀತಿ cardaic disease ಆಸ್ಪತ್ರೆಯ ವಿಷಯದಲ್ಲೂ ಆಗಿರುತ್ತೆ. ಅಲ್ಲಿ ಯಾರು ಡ್ಯೂಟಿಯಲ್ಲಿದ್ದಾರೆ, ವಾರ್ಡುಗಳಲ್ಲಿ ನೋಡಿಕೊಳ್ಳಲು ತಕ್ಕ ವ್ಯವಸ್ಥೆ ಇಡಲಾಗಿದೆಯೇ, ಲಕ್ಷಾನುಗಟ್ಟಲೆ ರೂಪಾಯಿಗಳನ್ನು ಕೊಟ್ಟು ತಂದಿರುವ ಎಕ್ಸ್‌ರೇ ಅಪರೇಟಸ್ ಏನಾಗಿದೆ, ಕಾರ್ಡಿಯೋ ಗ್ರಾಂನ್ನು ಯಾರು ಪೇಷಂಟುಗಳಿಗೆ ಉಪಯೋಗಿಸುತ್ತಾರೆ ಎಂಬುದನ್ನು ನೋಡಿದ್ದೀರಾ, ಅಥವಾ ಅಲ್ಲೇನು ಕತ್ತೆ-ಕುದುರೆಗಳು ನಿಲ್ಲುತ್ತವೆಯೇ, ಅಲ್ಲಿ ಏನು ನಡೆಯುತ್ತಿದೆಯೆಂಬುದನ್ನೇ ಯಾರು ನೋಡಿದಂತೆ ಕಾಣುತ್ತಿಲ್ಲ. ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಕೆಲಸಮಾಡಲು ಅನುಭವ ಪಡೆದುಕೊಂಡ ಬರುವಂತೆ ಎರಡು ವರ್ಷಗಳವರೆಗೆ ರೆಸಿಡೆಂಟ್ ಮೆಡಿಕಲ್ ಆಫೀಸರನ್ನು ನೇಮಕಮಾಡಿ, ಅವರು ಸರಿಯ[illegible]ದ ತರಪೇತು ನಡೆದಮೇಲೆ ಬೇರೆ ಬೇರೆ ಜಿಲ್ಲೆಗಳಿಗೆ ಕಳುಹಿಸುವ ಪದ್ಧತಿ ಇತ್ತು. ಆದರೇನು! ಈಗ ನಿಂತುಹೋಗಿ ವರ್ಷಗಟ್ಲೆ ಒಂದೇ ಆಸ್ಪತ್ರೆಯಲ್ಲಿ ರೆಸಿಡೆಂಟ್ ಮೆಡಿಕಲ್ ಆಫೀಸರು ಇರುತ್ತಾರೆ? ಇದೂ ಸರಿಯಲ್ಲ. ಇವನ್ನೆಲ್ಲಾ ತಾವು ವಿಚಾರ ಮಾಡಿ ನೋಡಬೇಕಾಗಿದೆ.

ಅಂತೂ ಒಟ್ಟಿನಲ್ಲಿ ನಾನು ಹೇಳತಕ್ಕದ್ದಿಷ್ಟೆ. ನೀವು ವಿತರಣೆಯಿಂದ, ಒಂದು ನಿರ್ದಿಷ್ಟವಾದ ರೀತಿಯಲ್ಲಿ ಕೆಲಸ ಮಾಡದೆ ಹಣವನ್ನು ನಾನಾ ರೀತಿಯಲ್ಲಿ ಅನಗತ್ಯ ಬಾಬುಗಳಿಗೆಲ್ಲ ವಿಶೇಷವಾಗಿ ವೆಚ್ಚಮಾಡುತ್ತಿದ್ದೀರಿ. ನಮಗೆ ಆ 'ಡಕೋಟಾ' ಏತಕ್ಕೆ ಬೇಕಾಗಿತ್ತು! ಡೆಲ್ಲಿಯಲ್ಲಿ ಮೈಸೂರಿನ ಜನರಿಗಾಗಿ ಒಂದು ಕಾರು, ಇದಕ್ಕೆ ಖರ್ಚು ಎಷ್ಟಾಗುತ್ತದೆ! ಏನೀ ದುಂದು ವ್ಯಯ! ಒಂದು ಸಾರ್ತಿ ಈ ಡಕೋಟಾದಲ್ಲಿ ದೆಹಲಿಗೆ ಹೋದರೆ..................

ಶ್ರೀ ಕೆ. ಚೆಂಗರಾಯರೆಡ್ಡಿಯವರು.—ಈಗ ಅವುಗಳೆಲ್ಲವನ್ನೂ ಒಂದು ಲಕ್ಷ ಹದಿನೈದು ಸಾವಿರ ರೂಪಾಯಿಗಳಿಗೆ ಮಾರಾಟಮಾಡಲಾಗಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಕೇಳಿ ಬಹಳ ಸಂತೋಷವಾಯಿತು.

ಶ್ರೀ ಟಿ. ಮರಿಯಪ್ಪನವರು.—ಇವೆಲ್ಲವೂ ತಮ್ಮ legacy.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇನ್ನೂ ಒಂದು ವಿಷಯ ಹೇಳಬೇಕಾಗಿದೆ......................

ಶ್ರೀ ಎಲ್. ಸಿದ್ದಪ್ಪನವರು.—ನಾವು ಒಂದು ದಿವಸವೂ ಈ ವಿಮಾನ ಹತ್ತಿಲ್ಲ. ಅದರಲ್ಲಿ ಎಲ್ಲಿಗೂ ನಾವು

ಪ್ರಯಾಣ ಮಾಡಲಿಲ್ಲ. ಎಲ್ಲಾ ರೈಲಿನಲ್ಲಿ ಹೋಗಿ ಬರುತ್ತಿದ್ದೆವು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಬಹುಶಃ ತಮಗೆ ಅಷ್ಟು ಧೈರ್ಯವಿರಲಿಲ್ಲವೆಂದು ಕಾಣುತ್ತೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಶ್ರೀ ಎ. ಭೀಮಪ್ಪನಾಯಕರು ಈಗ ಇಲ್ಲಿರುವುದಿಲ್ಲ. ಅವರಿಗೆ ನಾನು ಒಂದು ಅಂಶ ತಿಳಿಸಬೇಕಾಗಿತ್ತು. ಈ ಹೆಚ್ಚು ಆಹಾರ ಬೆಳೆಯುವ ವಿಷಯವಾಗಿ ಹಿಂದೆ ಮಂತ್ರಿ ಮಂಡಳದಲ್ಲಿ ನಾನಿದ್ದಾಗಲೇ ರೈತರಿಗೆ ವ್ಯವಸಾಯದ ಮುಟ್ಟುಗಳು ಸರಾಗವಾಗಿ ದೊರೆಯುತ್ತಿಲ್ಲವೆಂಬುದನ್ನು ತಿಳಿದು ಆ ಬಗ್ಗೆ ಆಗಲೇ ಬೇಕಾದಷ್ಟು ಪ್ರಯತ್ನಗಳನ್ನು ಮಾಡಿದ್ದೆನು. ಆದರೆ ತಾವು ಅಷ್ಟನ್ನೂ ಕೂಡ ಈಗ ಮಾಡದೆ ಇರುವುದರಿಂದ ಈ ದಿವಸ ಹಳ್ಳಿ ಜನಗಳಿಗೆ ಸರಿಯಾಗಿ ಕಾಲ ಕಾಲಕ್ಕೆ ಗಾಡಿಪಟ್ಟಿ, ಗುಳ, ಇತ್ಯಾದಿ ಸಾಮಾನುಗಳು ದೊರೆಯುತ್ತಿಲ್ಲ. ನಾನಿದ್ದಾಗ ಈ ವಿಚಾರದಲ್ಲಿ ರೈತರಿಗೆ ಬೇಕಾದಷ್ಟು ಸಹಾಯಗಳನ್ನು ಒದಗಿಸಿದ್ದೆನು. ಹಿಂದೆ ಒಂದಾವರ್ತಿ ನಾನಿರುವಾಗ ಗಾಡಿ ಪಟ್ಟಿಗಳು ಜೊತೆಯೊಂದಕ್ಕೆ 126 ರೂಪಾಯಿಗಳವರಿವಿಗೂ ಮಾರಾಟವಾಗುತ್ತಿದ್ದುದನ್ನು 26 ರೂಪಾಯಿಗಳಂತೆ ನಿಗದಿ ಮಾಡಿ, ಅವರಿಗೆ ಸರಾಗವಾಗಿ ದೊರೆಯುವಂತೆ ಮಾಡಲಾಗಿತ್ತು. ಆದರೆ ಶ್ರೀ ಭೀಮಪ್ಪನಾಯಕರಿಗೆ ಇದೆಲ್ಲ ಗೊತ್ತಿಲ್ಲದೆ ಇರಬಹುದು. ಇಷ್ಟೇ ಅಲ್ಲ. ನಾನಿದ್ದಾಗಲೇ ಒಂದಾವರ್ತಿ ಈ ವ್ಯವಸಾಯದ ಅಭಿವೃದ್ಧಿ ಯೋಜನೆಗಳನ್ನು ದೆಹಲಿಯಲ್ಲಿ ಪರಿಶೀಲನೆ ಮಾಡುತ್ತಿದ್ದ ಕಾಲದಲ್ಲಿ ನಾನೇ ಈ ಬಾಬನ್ನು ಒಂದು ವಿಶೇಷ ವಿಷಯವನ್ನಾಗಿ Agricultural Institute of Research ಸಮಿತಿಯವರ ಮುಂದಿಟ್ಟು ಪ್ರಾಂತ ಸರ್ಕಾರಗಳಿಗೆ ಈ ಮುಟ್ಟುಗಳನ್ನು ಒದಗಿಸಬೇಕೆಂಬ directive ಡೆಲ್ಲಿಯಿಂದ ಕೊಡುವಂತಾಯಿತು. ಇದಕ್ಕೆ ನಾನೇ ಜವಾಬ್ದಾರನೆಂದು ಈಗ ಹೇಳಿಕೊಳ್ಳಬೇಕಾದ ಅಗತ್ಯವೇನೂ ಇಲ್ಲ. ಆದರೆ ನಾನು ತಮಗೆ ಏನು ಒಂದು ಅಂಶ ತಿಳಿಸಬೇಕಾಗಿದೆಯೆಂದರೆ, ತಾವೂ ಸಹ ರೈತರಿಗೆ ಬೇಕಾದ ಮರಮುಟ್ಟುಗಳನ್ನು ಕೊಡುವುದಕ್ಕೆ ಹೆಚ್ಚಿನ ನಿಗಾ ಕೊಡಬೇಕೆಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕೆಂಬ ಸಂಗತಿಯೇ ಅದು.

ಸರ್ಕಾರದವರು ಇನ್ನು ತಮ್ಮ ನೀತಿಯ ವಿಚಾರದಲ್ಲಿ ಎಷ್ಟರಮಟ್ಟಿಗೆ ಅದನ್ನು ನಡೆಸಿಕೊಂಡು ಬರುತ್ತಿದ್ದಾರೆಂಬುದಕ್ಕೆ ಈ ಸಭೆಯ ಕೆಲವು ಖಾಲಿ ಬಿದ್ದಿರುವ ಸದಸ್ಯರ ಸ್ಥಾನಗಳಿಗೆ ಉಪಚುನಾವಣೆ ಮುಖಾಂತರ ಇನ್ನೂ ಭರ್ತಿ ಮಾಡದಿರುವುದನ್ನು ನೋಡಿದರೆ, ಅದು ಗೊತ್ತಾಗುತ್ತದೆ. ತಾವು ಚುನಾವಣೆ ಏಕೆ ಮಾಡಲಿಲ್ಲವೋ ಗೊತ್ತಾಗುವುದಿಲ್ಲ.

ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಈಗಿನ್ನೂ ಚುನಾವಣೆಯ ನಿಯಮ ತಯಾರಾಗುತ್ತಿವೆ. ಅದಕ್ಕಾಗಿ ಕೊಂಚ ನಿಧಾನವಾಗಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆದರೆ 1950-51ರೊಳಗಾಗಿ ಈ ಹೊಸ ಚುನಾವಣೆಗಳನ್ನು ನಡಸಲಾಗುತ್ತೆ ಎಂದು ತಾವೇನೋ ಹೇಳುತ್ತೀರಿ. ನನ್ನ ಅನುಭವದಲ್ಲಿ ಹೇಳುವುದಾದರೆ ತಾವು ಅದನ್ನು 1952ಕ್ಕಾದರೂ ಸಹ ನಡೆಸುತ್ತೀರೋ ಅಥವಾ ಇಲ್ಲವೋ ಎಂಬ ಶಂಕೆ ನನಗೆ ಮನಸ್ಸಿನಲ್ಲಿ ಹಾಗೆ ಅನಿಸುತ್ತಿದೆ. ತಾವು ಎಷ್ಟು ಟೀಕೆ ಮಾಡಿದರೆ ಅಷ್ಟು ನನಗೆ ಸಂತೋಷ. ಆದರೆ ನಾನು ಈಗಾಗಲೇ ಏನನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಎಚ್. ಸಿ. ದಾಸಪ್ಪನವರು.—ತಾವು ಅದನ್ನು ಹಾಗೇ ತಿಳಿದುಕೊಂಡಿದ್ದರೆ ಬಹಳ ಒಳ್ಳೆಯದೇ ಆಗುತ್ತೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಚುನಾವಣೆ ಪಟ್ಟಿ ತಯಾರು ಮಾಡುತ್ತಿದ್ದೇವೆಂದು ಹಾಗೂ, ಹೀಗೂ ಹೇಳುತ್ತಲೇ ಇದ್ದಾರೆ.

ಶ್ರೀ ಟಿ. ಮರಿಯಪ್ಪನವರು.—ಏನು ತಾವು ಅದನ್ನು ಒಂದು ಭವಿಷ್ಯದಂತೆ ಹೇಳುತ್ತಿದ್ದೀರಲ್ಲಾ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ತಾವು ಈ ಬಾಬಿನಲ್ಲೂ ಸಹ ತಮ್ಮ ನೀತಿಯನ್ನು ಸರಿಯಾಗಿ ನಡೆಸಿಕೊಂಡು ಬರುತ್ತಿಲ್ಲ. ಚುನಾವಣೆಯಲ್ಲಿ ನಂಬಿಕೆಯಿಟ್ಟಿರುವ ನೀವುಗಳು, ನಾಮಕರಣಗಳನ್ನೇಕೆ ಇನ್ನೂ ಮಾಡಿಕೊಳ್ಳುತ್ತಿದ್ದೀರಿ! ತಾವು ಹೇಳುತ್ತಿದ್ದ ಪ್ರಕಾರ ಚುನಾವಣೆಗಳನ್ನೇಕೆ ಮಾಡಬಾರದು? ಇದೆಲ್ಲ ಸರಿಯಾದುದಲ್ಲ.

ಇನ್ನೊಂದು ವಿಷಯವೇನೆಂದರೆ, ತಾವುಗಳು ಈಗಿನಿಂದಲೇ ಜವಾಬ್ದಾರಿ ಸರ್ಕಾರದ ನಿಜ ಲಕ್ಷಣಗಳನ್ನೂ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಒಂದು ಉದಾಹರಣೆ ಹೇಳುವುದಾದರೆ, ಮಂತ್ರಿಮಂಡಳದ ರಚನೆಯ ವಿಚಾರದಲ್ಲಿ ಎಷ್ಟು ದಿನ ನಿಧಾನ ಮಾಡಿದಿರಿ. ಹಿಂದೇನೋ ತಾವು ಅಧಿಕಾರ ವಹಿಸಿಕೊಂಡಾಗ ಯಾರನ್ನೂ ಹೇಳದೆ ಕೇಳದೆ ತಮಗೆ ಇಷ್ಟಬಂದವರನ್ನು ಮಾಡಿಬಿಟ್ಟಿರಿ. ಅಸೆಂಬ್ಲಿ ಕೌನ್ಸಿಲುಗಳನ್ನು ರದ್ದು ಮಾಡಿದಿರಿ. ಇದಕ್ಕೆಲ್ಲಾ ಉತ್ತರ ಹೇಳುವುದು ಮುಂದಿನ ಮಹಾ ಚುನಾವಣೆಗಳು ಬಂದಾಗಲೇ!! ಹೋಗಲಿ, ಅಧ್ಯಕ್ಷರುಗಳ ವಿಷಯದಲ್ಲಾದರೂ ಅವರನ್ನು ಕೇಳಿ ಏನಾದರೂ ಮಾಡಿದಿರಾ? ಜವಾಬ್ದಾರಿ ಸರ್ಕಾರ ಎಂದರೇನು! ಡಿಕ್ಟೇಟರ್ ಷಿಪ್ ಎಂದು ಭಾವಿಸಿದ್ದೀರಾ!! ದೇಶದಲ್ಲಿ ಚುನಾಯಿತ ಅಧ್ಯಕ್ಷರುಗಳಿದ್ದರೆ ಅವರುಗಳನ್ನು ಯಾವುದರಲ್ಲಿಯೂ ಕೇಳಬೇಕಾಗಿಲ್ಲವೇ? ಕೊನೆಗೆ ಅಧ್ಯಕ್ಷರನ್ನು ಕಳುಹಿಸುವಾಗಲೂ ಕೂಡ ಯಾವ ರೀತಿ ಕಳುಹಿಸಿದಿರಿ. ಯಾರು ಮರೆತರೂ ನಾನಂತೂ ಅದನ್ನು ಖಂಡಿತ ಮರೆಯಲಾರೆ. ಈ ಸಭೆಗೆ ಹೊಸ ಅಧ್ಯಕ್ಷರನ್ನು ಚುನಾವಣೆ ಮಾಡುವಾಗ ಶ್ರೀ ಸಿದ್ದಲಿಂಗಯ್ಯನವರನ್ನು ನೇಮಕ ಮಾಡಿದಿರಿ. ಇದನ್ನೇ ಇನ್ನೂ 14 ದಿವಸಗಳು ಮುಂಚಿತವಾಗಿಯೇ ಮಾಡಿದ್ದರೆ ನಾನು ಅವರಿಗೇ ಚಾರ್ಜ್ ಕೊಟ್ಟು ಹೋಗುತ್ತಿದ್ದೆ. ಅದು ಎಷ್ಟೋ ಮರ್ಯಾದೆಯಾಗಿರುತ್ತಿತ್ತು. ಕಳೆದ 15ನೆಯ ತಾರೀಖಿನಲ್ಲಿ ಮಂತ್ರಿಮಂಡಳ ರಾಜಿನಾಮೆ ಕೊಟ್ಟ ಮೇಲೆ ಮತ್ತೇ ಅದೇ ಮಂತ್ರಿಮಂಡಲವನ್ನೇಕೆ ಹೊಸ ಮಂತ್ರಿಮಂಡಳ ರಚನೆಯಾಗುವವರೆಗೂ ಏಕೆ ಮುಂದುವರಿಸಿದಿರಿ! ಮಂತ್ರಿಗಳಾಗಿದ್ದವರು ಸಾಮಾನ್ಯವಾಗಿ ಚೀಫ್ ಸೆಕ್ರಿಟರಿಯವರಿಗೆ ಚಾರ್ಜ್ ಕೊಟ್ಟು ಹೋಗುವುದಕ್ಕಾಗುವುದಿಲ್ಲ ಎಂದಲ್ಲವೇ! ಅದೇ ರೀತಿ ಅಧ್ಯಕ್ಷರುಗಳ ವಿಷಯದಲ್ಲೇಕೆ ಮಾಡಲಿಲ್ಲ! ಅವರು ಸೆಕ್ರೆಟರಿಯವರಿಗೆ ಛಾರ್ಜು ಕೊಡಬೇಕೆ! ಇದಕ್ಕೆ ಯೋಚನೆಬೇಡವೆ! ಇದುವರೆಗೂ ಕೂಡ ನಾನು ಯಾರಿಗೂ ಚಾರ್ಜ್ ಕೊಟ್ಟಹಾಗೆಯೇ ಇಲ್ಲ. ಏಕೆಂದರೆ 15ನೆಯ ತಾರೀಖಾದ ಮೇಲೆ ನಾವುಗಳು ನಮ್ಮ ಮನೆಯಲ್ಲೇ ಇದ್ದುಬಿಟ್ಟೆವು. ನಮ್ಮನ್ನು ಯಾರೂ ಬಂದು ಕೇಳುವ ಧೈರ್ಯವೂ ಇರಲಿಲ್ಲ. ಇದೆಲ್ಲಾ ಪ್ರಜಾಪ್ರಭುತ್ವದ ತತ್ವದ ಪ್ರಕಾರ ಮಾಡಿರುವುದೇ! ನಾನೇಕೆ ಇವನ್ನೆಲ್ಲಾ ಹೇಳುತ್ತಿದ್ದೇನೆಂದರೆ, ಮುಂದೆ ಸಮಯ ಬಂದಾಗ ಇವೆಲ್ಲಾ ನಿಮಗೇ ಪುಟ ಹೊಡಿಯುತ್ತವೆಯೆಂಬುದನ್ನು ಮರೆಯಬಾರದು.

ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಅದಕ್ಕೆ ಜವಾಬು ಕೊಡುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಜವಾಬು ಕೊಡುವುದು ಹೆಚ್ಚಲ್ಲ. ಆದರೆ ನ್ಯಾಯ, ತತ್ವ ಏನು ಎಂಬುದನ್ನು ನೋಡಬೇಕು. ಆದ್ದರಿಂದ ತಾವುಗಳು

ಮುಖ್ಯವಾಗಿ ಪ್ರಜಾಪ್ರಭುತ್ವದ ತತ್ವಗಳನ್ನು ಪ್ರತಿಪಾದಿಸುವುದಕ್ಕಾಗಿ ಪ್ರಯತ್ನಪಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಮಾತು. ಈಚೀಚೆಗೆ ನೀವು ಪ್ರತಿಯೊಂದಕ್ಕೂ ಡೆಲ್ಲಿ ಕಡೆ ತಿರುಗುವುದು ಜಾಸ್ತಿಯಾಗಿಬಿಟ್ಟಿದೆ. ಎಷ್ಟೋ ವೇಳೆ ಜನಗಳು ಆಡಿಕೊಳ್ಳುವುದನ್ನು ನಾನೇ ಕಿವಿಯಾರ ಕೇಳಿದ್ದೇನೆ. ಮೈಸೂರಿನ ಮಂತ್ರಿಗಳೇಕೆ ಹೀಗೆ ಪದೇ ಪದೇ ಡೆಲ್ಲಿಗೆ ಹೋಗುತ್ತಾರೆಂದು ಜನ ಕೇಳುತ್ತಾರೆ. ತಾವು ಹೀಗೆ ಹೋಗುವುದು ಚೆನ್ನಾಗಿ ಕಾಣುವುದಿಲ್ಲ. ನಾವುಗಳೂ ಆದಷ್ಟುಮಟ್ಟಿಗೆ ನಮ್ಮ ಜಬರ್‌ದಸ್ತನ್ನಿಟ್ಟುಕೊಂಡು ದೂರದಲ್ಲೇ ಇರೋಣ. ನಾನು ಹೇಳಿದ ಕೆಲವು ಮಾತುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡುತ್ತೀರೆಂದು ನಾನು ನಂಬಿದ್ದೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ವರ್ಷದ ಆಯವ್ಯಯದ ಅಂದಾಜು ಪಟ್ಟಿಯ ಮೇಲೆ ಮಾತನಾಡುತ್ತಾ ನನ್ನ ಸ್ನೇಹಿತರಾದ ಶ್ರೀ ಘಟ್ಟಸ್ವಾಮಿಯವರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇವತ್ತಿನ ದಿವಸ ನಾವು ಕಂದಾಯ ತೆರಿಗೆ ಮುಂತಾದುವುಗಳನ್ನು ವಿಧಿಸತಕ್ಕ ಪದ್ಧತಿ ನ್ಯಾಯವಾಗಿಲ್ಲ, ಅದು ಯಾರು ಕೊಡುವುದಕ್ಕಾಗುವುದಿಲ್ಲವೋ ಅವರು ತಮ್ಮ ಶಕ್ತಿ ಮೀರಿ ಕೊಡುವಂತೆ ಮಾಡುವ ಮತ್ತು ಯಾರು ಕೊಡಲು ಶಕ್ತರೋ ಅವರಿಂದ ಹೆಸರಿಗೆ ಮಾತ್ರ ತೆಗೆದುಕೊಳ್ಳುವ ಪದ್ಧತಿಯಾಗಿದೆಯೆಂದು ಸೂಚಿಸಿದರು. ಬಡವ ನಾನು ಹಣ ಸಂಪಾದನೆ ಮಾಡಿದುದರಲ್ಲಿ ಪ್ರತಿಯೊಂದು ರೂಪಾಯಿನಲ್ಲೂ ತೆರಿಗೆಯನ್ನಾಗಲೀ, ಕಂದಾಯವನ್ನಾಗಲೀ ತೆರಬೇಕಾಗಿದೆ. ಒಟ್ಟಿನಲ್ಲಿ ತನ್ನ ಶಕ್ತಿ ಮೀರಿ ತೆರಬೇಕಾಗಿದೆ. ಇದನ್ನೇ ನಾನು ವಿವರಿಸಿ ಹೇಳುತ್ತಾ ಹೋಗಬೇಕಾದ ಅಗತ್ಯವಿಲ್ಲ. ಸಾಮಾನ್ಯವಾಗಿ ನೋಡಿದರೆ, ಇಂದು ಒಂದು ಎಕರೆಯಷ್ಟು ಜಮೀನಿರುವ ರೈತನು ತನ್ನ ಆದಾಯದಲ್ಲಿ ಶೇಕಡ 50ರಷ್ಟನ್ನು ಕಂದಾಯ, ತೆರಿಗೆ, ಸುಂಕ ಈ ರೀತಿಗಳಲ್ಲೆಲ್ಲಾ ಕೊಡುತ್ತಿರುತ್ತಾನೆ. ಆದರೆ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುವ ಸಾಹುಕಾರ ಸೂಪರ್‌ಟ್ಯಾಕ್ಸ್ ಕೊಟ್ಟರೆಂದರೂ ಕೂಡ ಸಂಪಾದನೆಯ ಮೇಲೆ ಶೇಕಡ 25ಕ್ಕಿಂತ ಹೆಚ್ಚಾಗಿ ಕೊಡಬೇಕಾಗುವುದಿಲ್ಲ. ಇಂಥ ಪದ್ಧತಿಯನ್ನು ಆದಷ್ಟು ಬೇಗ ತಪ್ಪಿಸುವುದು ಅಗತ್ಯವೆಂದು ಹೇಳಿ ನಾನೂ ಅವರ ಅಭಿಪ್ರಾಯ ವನ್ನು ಪುಷ್ಟೀಕರಿಸುತ್ತೇನೆ. ಈ ಪದ್ಧತಿಯಲ್ಲಿರತಕ್ಕ ಲೋಪದೋಷಗಳು ಇಂದು ಬಂದುವುಗಳಲ್ಲ, ಅನೇಕ ದಿವಸಗಳಿಂದ ಜನರು ಅನುಭವಿಸುತ್ತಿರುವುದು. ಇದನ್ನು ಆದಷ್ಟು ಬೇಗ ತಪ್ಪಿಸಬೇಕಾದ್ದು ನ್ಯಾಯವೆಂದು ಹೇಳುತ್ತೇನೆ.

ಆಯವ್ಯಯದ ವಿಚಾರದಲ್ಲಿ ಮಾತನಾಡುವಾಗ ಸಾಮಾನ್ಯವಾಗಿ ಸದಸ್ಯರ ಧೋರಣೆಹೇಗಿದೆಯೆಂದರೆ ಹಾಸಿಗೆಯಿದ್ದಷ್ಟು ಕಾಲು ಚಾಚು ಎನ್ನುವಂತೆ. ನಮ್ಮ ಸಾಮಾನ್ಯ ಉತ್ಪತ್ತಿಯೆಷ್ಟಿದೆಯೋ ಅದಕ್ಕನುಸಾರವಾಗಿ ಖರ್ಚನ್ನೂ ಹೊಂದಿಸಿಕೊಳ್ಳಬೇಕೆಂಬ ಅಭಿಪ್ರಾಯದಲ್ಲಿ ಬಹಳ ಮಂದಿ ಮಾತನಾಡಿದರು. ಇದು ಸಾಮಾನ್ಯವಾಗಿ ಸರಿಯೆಂದು ಕಾಣುವುದಾದರೂ ಕೂಡ, ನಮ್ಮ ದೇಶದ ಆಡಳಿತ ನಡೆಸುವುದಕ್ಕೆ ವಿಚಾರದಲ್ಲಿ ಅಗತ್ಯವಾಗಿ ಬೇಕಾಗಿರುವಷ್ಟು ಆದಾಯವನ್ನು ಹುಟ್ಟುವಳಿ ಮಾಡಿಕೊಳ್ಳುವುದಕ್ಕೆ ನಾವು ಪ್ರಯತ್ನಪಡಬೇಕೇ ಹೊರತು ಆದಾಯವಿರುವಷ್ಟಕ್ಕೇ ಖರ್ಚು ಹಾಕಿಕೊಂಡು ಆಡಳಿತ ನಡೆಸಿ ಜನಗಳಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದರೆ ಅದು ಬರೀ ಹಗಲು ಗನಸೆನ್ನಬೇಕು. ಆದ್ದರಿಂದ ನಮ್ಮ ದೇಶದಲ್ಲಿ ಪ್ರತಿ ವರ್ಷವೂ ನಡೆಯಬೇಕಾದ ಜನೋಪಯುಕ್ತ ಕಾರ್ಯಗಳೇನೇನಿವೆಯೋ ಅವುಗಳಿಗೆ ಆಗಬೇಕಾದ ಖರ್ಚನ್ನು ನಮ್ಮ ಜನಸಂಖ್ಯೆಗನುಗುಣವಾಗಿ ಅಥವಾ ಜನರ ಸಂಪಾದನೆಗನುಗುಣವಾಗಿ ಕಾಲಸ್ಥಿತಿಯನ್ನನುಸರಿಸಿ ಯಾವ ರೀತಿ ದುಡ್ಡು ವಸೂಲು ಮಾಡಬೇಕೆಂಬ ವಿಚಾರವನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಇದರಲ್ಲೊಂದು ವಿಷಯ ನಾನಾ ವಿಧವಾಗಿ ತೆರಿಗೆ, ಸುಂಕ ಇವುಗಳನ್ನು ನಾವೀಗ ವಸೂಲು ಮಾಡುವುದರಲ್ಲಿ ಒಂದೊಂದಕ್ಕೂ ಒಂದೊಂದು ವಿಧವಾದ ವಸೂಲಿ ಏಜನ್ಸಿ ಇಟ್ಟುಕೊಂಡಿದ್ದೇವೆ. ಈ ರೀತಿ ಏಜನ್ಸಿಗಾಗಿ ನಮಗೆ ಬಹಳ ಹಣ ಖರ್ಚಾಗುತ್ತಿದೆ. ಇದಕ್ಕೆ ಬದಲು ಒಬ್ಬ ಮನುಷ್ಯನು ಒಟ್ಟಿನಲ್ಲಿ ಎಷ್ಟು ಕೊಡಬೇಕಾಗುತ್ತದೆ ಎಂಬುದನ್ನು ತೀರ್ಮಾನಮಾಡಿ, ಒಟ್ಟುಗೂಡಿಸಿ, ಒಂದೇ ಒಂದು ತೆರಿಗೆ (ಟಾಕ್ಸ್) ಹಾಕಿ ಬಿಡಬೇಕು. There must be only one tax and one agency to collect the same ಆ ತೆರಿಗೆ ವಸೂಲಿಗೂ ಒಂದೇ ಏಜೆನ್ಸಿ ಇರಬೇಕು.

ಫೈನಾನ್ಷಿಯಲ್ ಸಕ್ರೆಟರಿಯವರು ತಮ್ಮ ಮೆಮೊರಾಂಡಮಿನಲ್ಲಿ ಈ ಸಾರಿಯ ಬಡ್ಜೆಟ್ಟನ್ನು ಯಾವ ಯಾವ ರೀತಿ ಸರಿತೂಗಿಸಬೇಕೆಂದು ಹೇಳಿದ್ದಾರೆ. ಅವರು ನಾನು ಹೇಳುವ ಅಭಿಪ್ರಾಯಕ್ಕೆ ಆಶ್ಚರ್ಯಪಡಬಹುದು. ಏಕೆಂದರೆ ಕಂದಾಯ, ತೆರಿಗೆ ಈ ವಿಚಾರದಲ್ಲಿ ಮೈಸೂರಿನವರೇ ಬೇರೆಯಾದ ಒಂದು ದಾರಿಯನ್ನನುಸರಿಸುವುದಕ್ಕೆ ಸಾಧ್ಯವಿಲ್ಲವೆಂದು ಅವರು ಹೇಳಬಹುದು. ಅದು ನನಗೆ ಗೊತ್ತಿದೆ. ಆದರೂ ಈ ವಿಚಾರವನ್ನು ಪರಿಶೀಲಿಸುವಂತೆ ಕೇಂದ್ರ ಸರ್ಕಾರದವರನ್ನು ಕೇಳಬೇಕು. ಅವರು ಒಪ್ಪದೇ ಇದ್ದರೆ ನಾವು ಮೈಸೂರಿನಲ್ಲಾದರೂ ಪರೀಕ್ಷಾರ್ಥವಾಗಿ ನಡೆಸುತ್ತೇವೆಂದು ಹೇಳಬಹುದು. ಹಣಕಾಸಿನ ಶಾಸ್ತ್ರದಲ್ಲಿ ಪರಿಣಿತರ ಸಮಿತಿಯೊಂದು ನೇಮಿಸಿ, ಅವರಿಂದ ಈ ವಿಷಯವನ್ನು ಪರಿಶೀಲಿಸಬಹುದು. ಬಡವನಾಗಲೀ, ಪುಣ್ಯವಂತನಾಗಲೀ ಯಾರ್ಯಾರು ಎಷ್ಟೆಷ್ಟು ಕಂದಾಯ ಕೊಡಬೇಕೆಂಬುದನ್ನು ನಿರ್ಧರಿಸುವುದು ಅಗತ್ಯ. ಒಟ್ಟು ನಮ್ಮ ದೇಶದಲ್ಲಿರುವ 80 ಲಕ್ಷ ಜನರ ಸೌಕರ್ಯ, ಅನುಕೂಲಗಳಿಗೆ ನಮಗೆ 20 ಕೋಟಿ ರೂಪಾಯಿಗಳು ಬೇಕಾದರೆ, ಅದನ್ನು ಯಾವರೀತಿ ಉತ್ಪತ್ತಿ ಮಾಡಿಕೊಳ್ಳಬೇಕೆಂಬುದನ್ನೂ, ಯಾರಿಗೆ ರೂಪಾಯಿಗೆ 8 ಆಣೆ ಹಾಕಬೇಕು, ಯಾರಿಗೆ ರೂಪಾಯಿಗೆ ಎರಡಾಣೆ, ನಾಲ್ಕಾಣೆ, ಮಾತ್ರ ಹಾಕಬೇಕೆಂಬುದನ್ನೂ ಪರಿಶೀಲನೆಮಾಡುವುದು ಅತ್ಯಗತ್ಯವೆಂದು ನಾನು ಸೂಚಿಸಲಿಚ್ಛಿಸುತ್ತೇನೆ.

ಇನ್ನು ಈ ವರ್ಷದ ಆಯವ್ಯಯ ಪಟ್ಟಿಯನ್ನು ವಿಮರ್ಶಿಸುವಾಗ ಅನೇಕ ಸ್ನೇಹಿತರು ಹೊರಪಡಿಸಿದ ಅಂಶಗಳಲ್ಲಿ ಎರಡು ವಿಷಯಗಳು ಮುಖ್ಯವಾಗಿವೆ. ಒಂದು, ಆರ್ಥಿಕ ವಿಲೀನೀಕರಣವಾಗಿರುವುದರಿಂದ ನಮಗೆ ನಿವ್ವಳವಾಗಿ ಸದ್ಯಕ್ಕೆ ಕೇಂದ್ರಸರ್ಕಾರದವರು ಕೊಡುತ್ತಾರಾದರೂ ಇನ್ನು ಐದು ಅಥವಾ ಹತ್ತು ವರ್ಷಗಳಾದಮೇಲೆ ನಮ್ಮ ಸ್ಥಿತಿ ಏನಾಗುತ್ತದೆಂಬುದು. ಎರಡನೆಯದು ನಮ್ಮಲ್ಲಿರುವ ರಿಸರ್ವ್ ನಿಧಿಗಳನ್ನೆಲ್ಲಾ ಖರ್ಚುಮಾಡುತ್ತಿದ್ದಾರೆ, ಕೊನೆಗೆ ಅವೆಲ್ಲಾ ಮುಗಿದು ಹೋದಮೇಲೆ ನಮ್ಮ ಸ್ಥಿತಿ ಏನಾಗುತ್ತದೋ ಎಂಬುದು : ಇವೆರಡರ ವಿಷಯದಲ್ಲೂ ಸ್ವಲ್ಪಮಟ್ಟಿಗೆ ಅನುಮಾನ, ಕಳವಳಗಳನ್ನು ವ್ಯಕ್ತಪಡಿಸುತ್ತಾ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ. ಆದರೆ ಈ ವಿಚಾರದಲ್ಲಿ ಒಂದಂಶವನ್ನು ನಾವು ಜ್ಞಾಪಕದಲ್ಲಿಡಬೇಕು. ಇಂಥ ನಿಧಿಗಳನ್ನು ಏರ್ಪಡಿಸಿರುವುದು

ನಮಗೆ ಕಷ್ಟಕಾಲ ಬಂದು ಅಗತ್ಯವಾಗಿ ಹಣಬೇಕಾದಾಗ ಉಪಯೋಗಿಸಿಕೊಳ್ಳೋಣ ಎಂಬ ಉದ್ದೇಶದಿಂದಲೇ. ಎಂಥ ಕಷ್ಟಸ್ಥಿತಿಯೇ ಬರಲಿ, ದೇಶದ ಪ್ರಗತಿಗೆ ಅವಶ್ಯಕವಾದ ದೊಡ್ಡ ದೊಡ್ಡ ಕಾಮಗಾರಿಗಳನ್ನು ಕೈಕೊಳ್ಳುವುದನ್ನು ನಿಲ್ಲಿಸಿಯಾದರೂ ಈ ನಿಧಿಗಳಿಂದ ಹಣ ತೆಗೆದುಕೊಳ್ಳಕೂಡದೆಂದಲ್ಲ. ಅಂಥ ಸಮಯದಲ್ಲೂ ತೆಗೆಯಕೊಳ್ಳದ ಹಾಗಿದ್ದರೆ ಅಂಥ ರಿಸರ್ವ್‌ಗಳನ್ನು ಕೂಡಿಡುವ ಅಗತ್ಯವಿಲ್ಲವೆಂದೇ ನನ್ನ ಅಭಿಪ್ರಾಯ. ರಿಸರ್ವ್‌ನಿಂದ ಹಣವನ್ನು ವಿಶೇಷವಾಗಿ ತೆಗೆದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಕಾರಣವನ್ನು ಅನೇಕ ಮಿತ್ರರು ಆಗಲೇ ಹೇಳಿದ್ದಾರೆ. ದೊಡ್ಡ ದೊಡ್ಡ ಕಾಮಗಾರಿಗಳಿಗಾಗಿ ಭಾರಿ ಮೊಬಲಗನ್ನು ಮಾಡಿದ್ದಾರೆ. ಹಿಂದಿನ ಸರ್ಕಾರಕ್ಕೆ ಅಷ್ಟು ಖರ್ಚಿನ ಅವಶ್ಯಕತೆಯಿರಲಿಲ್ಲ. ಈಗ ಹೆಚ್ಚಾಗಿ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಕೈಕೊಂಡಿರುವುದರಿಂದ ಹಣವನ್ನು ರಿಸರ್ವ್‌ನಿಂದ ತೆಗೆದುಕೊಳ್ಳಬೇಕಾಗಿ ಬಂತು. ಆಹಾರಾಭಾವದಿಂದಲೂ ಅಪ್ರಮೇಯ ಬಂತು. ರಿಜರ್ವಿನಲ್ಲಿ ಬೇಕಾದಷ್ಟು ಹಣವಿರುವಾಗ ನಮ್ಮ ಸರ್ಕಾರ ಸಾಲವೆತ್ತುವುದರ ಮೂಲಕ ಹಣವನ್ನು ತೆಗೆದುಕೊಳ್ಳುವುದು ಸರಿಯೆ! ಒಂದಕ್ಕೆರಡು ಬಡ್ಡಿ ಕೊಟ್ಟು ಸಾಲ ತರುವುದು ಉಚಿತವೆ! ಹೊರಗಡೆ ಸಾಲಮಾಡಬೇಕಾಗಿತ್ತೆಂದು ಶ್ರೀ ಗುಂಡಪ್ಪಗೌಡರು ಹೇಳಿದರು. ಅದನ್ನು ಒಪ್ಪುವುದಕ್ಕಾಗುವುದಿಲ್ಲ. ನಮ್ಮಲ್ಲಿರುವ ಹಣವನ್ನೇ ಉಪಯುಕ್ತವಾದ ಕಾರ್ಯಗಳಿಗೆ ಮತ್ತು ಲಾಭದಾಯಕವಾದ ಕಾರ್ಯಗಳಿಗೆ ಖರ್ಚು ಮಾಡಿರುವುದು ಸೂಕ್ತವಾಗಿದೆ; ಒಪ್ಪತಕ್ಕದ್ದಾಗಿದೆ. ಶ್ರೀ ಗುಂಡಪ್ಪಗೌಡರು ಹಿಂದೆ ಆಡಳಿತ ನಡೆಸಿದ್ದಾರೆ; ಮಂತ್ರಿಗಳಾಗಿದ್ದರು. ಅಂಥವರೂ ಸಹ ರಿಸರ್ವ್‌ನಿಂದ ಹಣ ತೆಗೆದುಕೊಂಡಿರುವುದು ಸರಿಯಲ್ಲವೆಂದು ಹೇಳಿದ್ದಾರೆ. ಆದರೆ ವಾಸ್ತವವಾಗಿ ಈ ಸಲ ರಿಸರ್ವ್‌ನಿಂದ ಹಣ ತೆಗೆದುಕೊಂಡಿಲ್ಲ, ಕೆಲವು ಫಂಡ್‌ಗಳಿಂದ ಮಾತ್ರ ಹಣ ತೆಗೆದುಕೊಂಡಿದ್ದಾರೆ ಎಂದು ಅವರಿಗೆ ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಯಾವುದಾದರೊಂದು ವರ್ಷ ಯಾವುದಾದರೊಂದು ಬಾಬಿನಲ್ಲಿ ಹೆಚ್ಚಾಗಿ ಆದಾಯ ಬಂದರೆ ಆ 12 ತಿಂಗಳಲ್ಲೇ ಆ ಹಣವನ್ನು ಆ ಬಾಬಿಗಾಗಿ ಖರ್ಚು ಮಾಡುವುದಕ್ಕೆ ಅವಕಾಶವಿರಬಹುದು ಅಥವಾ ಇಲ್ಲದೇ ಇರಬಹುದು. ಹೆಚ್ಚಾದ ಹಣವಿದ್ದರೆ ಅದನ್ನು ಅದೇ ಬಾಬಿಗೆ ಮುಂದಿನ ವರ್ಷ ಖರ್ಚುಮಾಡಲು ಅವಕಾಶವಿದೆ. ಕೂಡಿಟ್ಟಿರುವ ಆಯಾ ಫಂಡುಗಳಿಂದ ಹಣ ತೆಗೆದು ಆಯಾ ಬಾಬಿಗೆ ಉಪಯೋಗಿಸುವುದರಲ್ಲಿ ತಪ್ಪಿಲ್ಲ. ಕೂಡಿಟ್ಟ ಫಂಡಿನ ಉದ್ದೇಶವೇ ಅದು. ಆ ವಿಚಾರದಲ್ಲಿ ಸರ್ಕಾರದವರು ಅನುಸರಿಸಿರುವ ಮಾರ್ಗ ಆಕ್ಷೇಪಣೀಯವಲ್ಲ.

ಇನ್ನು ಹಣಕಾಸಿನ ವಿಲೀನೀಕರಣ ಮತ್ತು ಅದರಿಂದ ನಮ್ಮ ದೇಶಕ್ಕಾಗಿರುವ ಅನುಕೂಲಗಳ ವಿಚಾರದಲ್ಲಿ ನಾನು ಹೆಚ್ಚಾಗಿ ಪ್ರಸ್ತಾಪ ಮಾಡಬೇಕಾಗಿಲ್ಲ. ಹಣಕಾಸಿನ ಸಚಿವರು ಅವರ ಭಾಷಣದ ಪ್ರತಿಯ 8—9ನೇ ಪುಟಗಳಲ್ಲಿ ಆ ವಿಚಾರವನ್ನು ತಿಳಿಸಿದ್ದಾರೆ. ವಿಲೀನೀಕರಣದಿಂದ ಎಷ್ಟು ನಷ್ಟವಾಗ ತ್ತದೆಂಬುದನ್ನು ಕೇಂದ್ರ ಸರ್ಕಾರಕ್ಕೆ ಮನಗಾಣಿಸಿ, ಯಾವ್ಯಾವ ಬಾಬಿನಲ್ಲಿ ಎಷ್ಟೆಷ್ಟು ರಿಯಾಯಿತಿ ಸಂಪಾದನೆಮಾಡಬಹುದೋ ಅಷ್ಟನ್ನು ದೊರಕಿಸಿಕೊಂಡಿದ್ದಾರೆ. ವಿಲೀನೀಕರಣದಿಂದ ಒಟ್ಟು ಪ್ರತಿ ವರ್ಷವೂ ನಮಗೆ 3¼ ಕೋಟಿ ರೂಪಾಯಿಗಳ ನಿವ್ವಳ ನಷ್ಟವಾಗುತ್ತದೆ. 5 ವರ್ಷವಾದರೂ ದೊರೆಯುವಂತೆ ಮಾಡಿಕೊಂಡಿದ್ದಾರೆ. ಇದರ ಜೊತೆಗೆ ಇನ್ನೂ ಕೆಲವು ಅನುಕೂಲಗಳಿವೆ. ವಾಣಿಜ್ಯ ತೆರಿಗೆ ಮುಂತಾದ ಕೆಲವು ತೆರಿಗೆಗಳಲ್ಲಿ ಆಯಾ ಸಂಸ್ಥಾನಕ್ಕೆ ದಾವಾಷಾ ಪ್ರಕಾರ ನಮ್ಮ ಭಾಗ ಸಾರೋದ್ಧಾರವಾಗಿ ಬರುವುದಾಗಿದೆ. ಮತ್ತು ಇಂಡಿಯಾ ದೇಶದ ಇತರ ಪ್ರಜೆಗಳಂತೆ ಹಕ್ಕುಬಾಧ್ಯತೆಗಳನ್ನು ಅನುಭವಿಸುವುದಕ್ಕೆ ನಮಗೂ ಅವಕಾಶವಿದೆ. ಈಗಾಗಲೇ ಅನೇಕ ಹಕ್ಕುಗಳು ನಮಗೆ ದೊರೆತಿದೆ. ಆದ್ದರಿಂದ ಈ ವಿಚಾರವನ್ನು ಹೆಚ್ಚಾಗಿ ಪ್ರಸ್ತಾಪಮಾಡಬೇಕಾಗಿಲ್ಲ. ನಮ್ಮ ಮೈಸೂರು ಸಂಸ್ಥಾನಕ್ಕೆ ಅನುಕೂಲವಾಗುವಂತೆ ತಕ್ಕ ರಿಯಾಯಿತಿ ಪಡೆದುಕೊಂಡು ನಮ್ಮ ದೇಶದ ಹಣಕಾಸಿನ ಸ್ಥಿತಿಯು ಅಷ್ಟಾಗಿ ವ್ಯತ್ಯಾಸವಾಗದ ಹಾಗೆ ಮಾಡಿರುವುದಕ್ಕಾಗಿ ಸರ್ಕಾರದವರು ಅಭಿನಂದನಾರ್ಹರು.

ಇನ್ನು ಹತ್ತು ವರ್ಷಗಳಾದ ಮೇಲೆ ನಮ್ಮ ಸ್ಥಿತಿಯೇನಾಗುತ್ತೋ ಏನೋ ಎಂದು ಜನಾಬ್ ಇಮಾಂರವರು ಇನ್ನು ಕೆಲವು ಸದಸ್ಯರೂ ಸಂದೇಹಪಟ್ಟರು. ವಿಲೀನೀಕರಣದ ವಿಚಾರವಾಗಿ ಸಂಸ್ಥಾನಗಳ ಸರ್ಕಾರಕ್ಕೂ, ಕೇಂದ್ರ ಸರ್ಕಾರಕ್ಕೂ ಆಗಬೇಕಾದ ಒಪ್ಪಂದ ಮುಂತಾದುವುಗಳನ್ನು ಕುರಿತು ವರದಿಮಾಡಲು ನೇಮಕವಾಗಿದ್ದ ಸರ್ ವಿ. ಟಿ. ಕೃಷ್ಣಮಾಚಾರಿಯವರ ಸಮಿತಿಯವರು ನಮ್ಮ ಸಂಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಯಾವ ಬಾಬಿನಲ್ಲಿ ನಮ್ಮ ಆದಾಯವನ್ನು ಹತ್ತು ವರ್ಷಗಳಲ್ಲಿ ಸರಿದೂಗಿಸಬಹುದೆಂದು ಸಲಹೆಮಾಡಿದ್ದಾರೆ. ಅದು ಫೆಡರಲ್ ಫೈನಾನ್ಷಿಯಲ್ ಇಂಟೆಗ್ರೇಷನ್ನಿನ ಮೆಮೋರ್ಯಾಂಡಂನಲ್ಲಿ 9–10 ನೆಯ ಪುಟಗಳಲ್ಲಿ ಅಡಕವಾಗಿದೆ. ಆ ಸಲಹೆಗಳ ಪೈಕಿ ವ್ಯವಸಾಯದ ಉತ್ಪನ್ನದ ಮೇಲೆ ವರಮಾನ ತೆರಿಗೆ ಹಾಕಿ ಹುಟ್ಟುವಳಿ ಹೆಚ್ಚಿಸಬೇಕೆಂಬುದೂ ಅಡಕವಾಗಿದೆ. ಆದರೆ ಅದು ನಮ್ಮ ಸಂಸ್ಥಾನದಲ್ಲಿ ಸಾಧುವಾದುದಲ್ಲವೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಅಂತಹ ತೆರಿಗೆಯನ್ನು ತಿರುವಾಂಕೂರಿನಲ್ಲೇನೋ ಹಾಕಿದ್ದಾರೆ. ಭೂಕಂದಾಯ ಸುಧಾರಣಾ ಸಮಿತಿಯ ಪರವಾಗಿ ದೇಶಸಂಚಾರ ಹೋಗಿದ್ದಾಗ ಅದನ್ನು ನಾನು ಪರಿಶೀಲಿಸಿಕೊಂಡು ಬಂದಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಅಲ್ಲಿನ ಪರಿಸ್ಥಿತಿಗೂ ನಮ್ಮ ಪರಿಸ್ಥಿತಿಗೂ, ಅಲ್ಲಿನ ಬೆಳೆಗೂ ಮತ್ತು ಇಲ್ಲಿನ ಬೆಳೆಗೂ ಬಹಳ ವ್ಯತ್ಯಾಸವಿದೆಯೆಂದು ಕಂಡುಬಂತು. ಇಲ್ಲಿ ವ್ಯವಸಾಯದ ಉತ್ಪತ್ತಿಯಮೇಲೆ ವರಮಾನ ತೆರಿಗೆ ಹಾಕುವುದಾದರೆ ಈ ದಿವಸ ದವಸಧಾನ್ಯಗಳ ವಸೂಲಿ ಕಾಲದಲ್ಲಿ ಯಾವ ರೀತಿ ಜನರಿಗೆ, ಸಣ್ಣಪುಟ್ಟ ರೈತರಿಗೆ ಕಿರುಕುಳವಾಗುತ್ತದೆಯೋ ಅದೇ ರೀತಿಯಲ್ಲಿ ಕಿರುಕುಳವಾಗುತ್ತದೆ. ಇದರಿಂದ ಬಹಳ ತೊಂದರೆಯಿದೆಯೆಂದು ತಿಳಿಸಬೇಕಾಗಿದೆ. ನಮ್ಮ ದೇಶದಲ್ಲಿರುವ ವ್ಯವಸಾಯ ಕ್ರಮ, ಮಳೆ, ಬೆಳೆ ಇವುಗಳ ದೃಷ್ಟಿಯಿಂದ ವ್ಯವಸಾಯದ ಉತ್ಪತ್ತಿಯ ಮೇಲೆ ಆದಾಯ ತೆರಿಗೆ ಹಾಕುವುದು ಸೂಕ್ತವಲ್ಲ ಎಂಬುದು ನನ್ನ ಅಭಿಪ್ರಾಯ. ಆದ್ದರಿಂದ ಆ ಬಾಬಿನಲ್ಲಿ ನಮಗೆ ಹೆಚ್ಚಾಗಿ ಆದಾಯ ಬರುತ್ತದೆಂದು ನಿರೀಕ್ಷೆ ಮಾಡುವುದು ತಪ್ಪಾಗುತ್ತದೆಂದು ಅಭಿಪ್ರಾಯಪಡುತ್ತೇನೆ.

ಎರಡನೆಯದಾಗಿ, ಅನೇಕ ತಾಲ್ಲೂಕುಗಳಲ್ಲಿ ಕೆಲವು ವರ್ಷಗಳ ಹಿಂದೆಯೇ ರೀ ಸೆಟ್ಲ್‌ಮೆಂಟ್ ಆಗಬೇಕಾಗಿತ್ತೆಂದೂ ಅದರಿಂದ ಹೆಚ್ಚು ಆದಾಯ ಬರಬಹುದೆಂದೂ ಹೇಳಿದ್ದಾರೆ. ಆದರೆ ಅದೂ ಸಹ ಸಾಧ್ಯವಲ್ಲ. ಆದಾಯವನ್ನು ಹೆಚ್ಚಿಸಬೇಕೆಂಬ ದೃಷ್ಟಿಯಿಂದ ಭೂಕಂದಾಯ ಸುಧಾರಣಾ ಸಮಿತಿಯನ್ನು ನೇಮಕ ಮಾಡಿಲ್ಲವೆಂದೂ ನಾನು ತಿಳಿದುಕೊಂಡಿದ್ದೇನೆ. ಕಂದಾಯ ಬಹಳ ಕಡೆ ಹೆಚ್ಚಾಗಿದೆಯೆಂಬ ಕೂಗು ಬಹುಕಾಲದಿಂದಲೂ ಇದೆ. ಆದ್ದರಿಂದ ಅದರಿಂದಲೂ ಹೆಚ್ಚು ಆದಾಯ ಬರುತ್ತದೆಂದು ನಿರೀಕ್ಷೆಮಾಡುವುದು ಸೂಕ್ತವಲ್ಲ.

ಆದಾಯ ಹೆಚ್ಚಿಸಿಕೊಳ್ಳಬಹುದಾದ ಇನ್ನೂ ಮೂರು ನಾಲ್ಕು ಅಂಶಗಳನ್ನು ಆ ವರದಿಯಲ್ಲಿ ಹೇಳಿದ್ದಾರೆ. ಸೇಲ್ಸ್‌ಟ್ಯಾಕ್ಸ್, ಸ್ಟಾಂಪ್ ಡ್ಯೂಟಿ, ಮೋಟಾರು ಬಂಡಿಗಳ ಮೇಲಿನ ತೆರಿಗೆ ಇತ್ಯಾದಿ ಬಾಬುಗಳಲ್ಲಿ ತೆರಿಗೆ ಹೆಚ್ಚಿಸಬಹುದೆಂದು ಹೇಳಿದ್ದಾರೆ. ಅದನ್ನು ಸರ್ಕಾರದವರು ಪುನರ್ವಿಮರ್ಶೆಮಾಡಿ ಎಷ್ಟುಮಟ್ಟಿಗೆ ಹೆಚ್ಚಿಸಬಹುದೆಂದು ಯೋಚನೆಮಾಡಬೇಕು.

ಇದೂ ಅಲ್ಲದೆ ಮಾನ್ಯ ಮಿತ್ರರಾದ ಶ್ರೀ ಎಂ. ಗೋವಿಂದರೆಡ್ಡಿಯವರು ಹೇಳಿದಹಾಗೆ ಇನ್ನೂ ಕೆಲವು ಭಾಗಗಳಲ್ಲಿ ಮಿತವ್ಯಯ ಅನುಸರಿಸುವುದಕ್ಕೆ ಪ್ರಯತ್ನಮಾಡಿ ಖರ್ಚು ಕಡಮೆಮಾಡುವುದಕ್ಕೂ ಅವಕಾಶವಿದೆ. ಮೊದಲನೆಯದಾಗಿ ನಮ್ಮ ಸಂಸ್ಥಾನದಲ್ಲಿ ಸಾಧಾರಣವಾಗಿ ಮೊದಲಿನಿಂದ ಅಠಾರ ಕಛೇರಿಯಿತ್ತು. ಆ 18 ಕಛೇರಿಗಳಲ್ಲಿ ಕೆಲಸ ನಡೆಯುತ್ತಿತ್ತು. ಈಗ ಅದು ಒಂದಕ್ಕೆ ಎರಡರಷ್ಟು ಹೆಚ್ಚಿದೆ. ಅದು ಶಾಖೋಪಶಾಖೆಗಳಾಗಿ ಬೆಳೆದು ಹೋಗಿದೆ. ಈ ಶಾಖೋಪಶಾಖೆಗಳಲ್ಲಿ ಪ್ರತಿಯೊಂದಕ್ಕೂ ಬೇರೆ ಬೇರೆ ಆಫೀಸರುಗಳು. ಸಿಬ್ಬಂದಿ ವಗೈರೆ ಹೆಚ್ಚಿದೆ. ಬೇರೆಬೇರೆ ಶಾಖೆಗಳ ಕೆಲಸವನ್ನು ಹೀಗೆ ಕೋ ಆರ್ಡಿನೇಷನ್ ಮಾಡಿಕೊಳ್ಳಲು ಅವಕಾಶವಿದೆ. ಉದಾಹರಣೆಗೆ ವ್ಯವಸಾಯದ ಇಲಾಖೆಗೇ ಒಬ್ಬ ಡೈರೆಕ್ಟರು, ಪಶುವೈದ್ಯ ಶಾಖೆಗೇ ಒಬ್ಬ ಡೈರೆಕ್ಟರು, ಅವರವರ ಕೈಕೆಳಗೆ ಅಧಿಕಾರಿಗಳು— ಹೀಗೆ ಪ್ರತ್ಯೇಕ ಪ್ರತ್ಯೇಕವಾಗಿ ಬಹುಮಂದಿ ಇದ್ದಾರೆ ಮೀನುಗಳನ್ನು ಸಾಕುವುದಕ್ಕೆ ಒಬ್ಬರು ಅಧಿಕಾರಿ, ಅವರ ಕೈ ಕೆಳಗೆ ಅನೇಕ ಅಧಿಕಾರಿಗಳು—ಹೀಗೆಲ್ಲಾ ಇದ್ದಾರೆ. ಜೇನು ಸಾಕುವುದಕ್ಕೂ ಹಾಗೆಯೇ ಸಿಬ್ಬಂದಿಯಿದೆ. ವ್ಯವಸಾಯದ ಇಲಾಖೆಯಲ್ಲಿ ವಿಧವಿಧವಾದ ಫಾರಂಗಳನ್ನು ಸ್ಥಾಪಿಸಿದ್ದಾರೆ, ಬೇಸಿಕ್ ಫಾರಂ ಮಾಡಲ್ ಫಾರಂ, ಎಕ್ಸ್‌ಪೆರಿಮೆಂಟಲ್ ಫಾರಂ ಹೀಗೆ ಬೇರೆ ಬೇರೆ ಇವೆ. ಈ ಬೇರೆ ಬೇರೆ ಫಾರಂಗಳನ್ನು ನೋಡಿಕೊಳ್ಳಲು ಬೇರೆ ಬೇರೆ ಅಧಿಕಾರಿಗಳು ನೇಮಕವಾಗಿದ್ದಾರೆ. ಈ ರೀತಿಯಲ್ಲಿ ಬೇಕಾದಷ್ಟು ಜನರಿಗೆ ಸ್ಥಾನಗಳಾಗಿ, ಒಂದೊಂದು ಭಾಗದಲ್ಲಿ ಶಾಖೋಪಶಾಖೆಯಾಗಿ ಬೆಳೆದು ಖರ್ಚು ಹೆಚ್ಚಾಗಿದೆ, ಆದರೆ ಅದರಿಂದ ಪ್ರಯೋಜನ ಅಷ್ಟಾಗಿ ಹೆಚ್ಚಿಲ್ಲ.

ಉದಾಹರಣೆಗೆ ವ್ಯವಸಾಯ ಇಲಾಖೆ ಹುಟ್ಟಿ 40 ವರ್ಷವಾಗಿದೆ. ಈ ನಲವತ್ತು ವರ್ಷದಿಂದ ಹತ್ತು ಖಂಡಿ ಬೆಳೆಯುತ್ತಿದ್ದ ರೈತ ಅದೇ ಜಮೀನಿನಲ್ಲಿ 18 ಖಂಡಿ ಬೆಳೆಯುವುದಕ್ಕೆ ಈ ಇಲಾಖೆಯಿಂದ ಅನುಕೂಲವೇನಾದರೂ ಆಗಿದೆಯೇ? ಇದಕ್ಕೆ ಈ ಸರ್ಕಾರದವರೇನೂ ಜವಾಬ್ದಾರರಲ್ಲ, ಸುಮ್ಮನೆ ಉದಾಹರಣೆಗೆ ಹೇಳುತ್ತೇನೆ, ಆಡಳಿತ ಸುಮ್ಮನೆ ಶಾಖೋಪಶಾಖೆಗಳಾಗಿ ಬೆಳೆದುಹೋಗಿದೆ. ಒಂದೇ ಇಲಾಖೆಯವರು ಎರಡು ಮೂರು ಬಾಬುಗಳನ್ನೂ ನೋಡಿಕೊಳ್ಳುವುದಕ್ಕೆ ಅವಕಾಶವಿದೆ. ಆದರೂ ಬೇರೆ ಬೇರೆ ಇಲಾಖೆಗಳಿವೆ. ಒಂದು ಉದಾಹರಣೆ ಹೇಳುತ್ತೇನೆ. ಪಬ್ಲಿಕ್‌ವರ್ಕ್ಸ್ ಇಲಾಖೆಯ ವಿಚಾರ ಹೇಳುವುದಾದರೆ, ಕಟ್ಟಡ ರಸ್ತೆಗಳಿಗೊಬ್ಬರು ನೀರಾವರಿ ಕೆಲಸ ನೋಡಲು ಒಬ್ಬರು ಹೀಗೆ ಇಬ್ಬರು ಚೀಫ್ ಇಂಜಿನಿಯರುಗಳೂ, ಒಂದೊಂದು ಜಿಲ್ಲೆಗೂ ಇಬ್ಬಿಬ್ಬರು ಎಕ್ಸಿಕ್ಯುಟಿವ್ ಇಂಜನಿಯರುಗಳೂ, ಅವರ ಕೈಕೆಳಗಿನವರೂ ಇದ್ದರೂ, ಒಂದು ಕೆರೆ ಒಡೆದುಹೋಗುವ ಸ್ಥಿತಿಯಲ್ಲಿದ್ದರೂ ರಸ್ತೆ ಚೀಫ್‌ಇಂಜಿನಿಯರು ಆ ಕಡೆ ತಿರುಗಿ ನೋಡುತ್ತಿರಲಿಲ್ಲ. ಹಾಗೆಯೇ ಒಂದು ಸೇತುವೆ ಮುರಿದುಹೋಗಿದ್ದರೂ ಅದರ ಕಡೆ ನೀರಾವರಿ ಇಂಜನಿಯರು ನೋಡುತ್ತಿರಲಿಲ್ಲ. ಸರ್ಕಾರದವರು ಇದನ್ನು ಮನಗಂಡು ಈಚೆಗೆ co-ordinate ಮಾಡಿದ್ದಾರೆ. ಕೆಲಸ ಹೆಚ್ಚಾದರೆ ನೋಡಿಕೊಳ್ಳಬೇಕಾದ ಪ್ರದೇಶವನ್ನು ಬೇಕಾದರೆ ಕಡಿಮೆಮಾಡಬಹುದು. ಈಗ ಈ ರೀತಿ ಮಾಡಿದ್ದಾರೆ. ಹಾಗೆಯೇ ಅಧಿಕಾರಿಗಳ ಸಂಖ್ಯೆಯನ್ನೂ ಅವರು ಮಾಡತಕ್ಕ ಕಾರ್ಯವನ್ನೂ ನೋಡಬೇಕು. ಸಣ್ಣ ಪುಟ್ಟ ಕೆಲಸಗಳಿಗೆಲ್ಲಾ ಬೇರೆ ಬೇರೆ ಅಧಿಕಾರಿಗಳನ್ನು ನೇಮಕಮಾಡಿ ಕಡಿಮೆ ಸಂಬಳ ಕೊಟ್ಟು ಅವರು ಬೇರೆ ವಿಧದಲ್ಲಿ ಸಂಪಾದಿಸಲು ಕೈ ಒಡ್ಡುವುದಕ್ಕೆ ಅವಕಾಶಕೊಡುವ ಬದಲು ಕೆಲವರಿಗೇ ಹೆಚ್ಚು ಸಂಬಳ ಕೊಟ್ಟು ಅವರು ಸರಿಯಾಗಿ ದಕ್ಷತೆಯಿಂದ ಕೆಲಸಮಾಡುವಂತೆ ಮಾಡುವುದು ಉತ್ತಮ.

ವ್ಯವಸಾಯ ಇಲಾಖೆಯ ವಿಚಾರದಲ್ಲಿ ಇನ್ನೂ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇದಕ್ಕೆಲ್ಲಾ ಈಗಿನ ಸರ್ಕಾರದವರೇ ಕಾರಣವೆಂದು ನಾನು ಹೇಳುತ್ತಿಲ್ಲ. ಸಾಧಾರಣವಾಗಿ ರೈತರಿಗೆ ಸಹಾಯವಾಗಬೇಕೆಂದು ಫಾರಮುಗಳನ್ನು ಮಾಡುತ್ತಿದ್ದೀರಿ. ಈ ಪರೀಕ್ಷಾ ಕ್ಷೇತ್ರಗಳಲ್ಲಿ ಕೆಲವು ಸಂಶೋಧನೆಗಳನ್ನು ಮಾಡಿ ಉತ್ತಮ ಫಲತಾಂಶಗಳು ಹೊರಬಿದ್ದಿವೆ. ಹತ್ತಾರು ವರ್ಷಗಳಿಂದ ಕಬ್ಬಿನ ಬೆಳೆಯ ವಿಚಾರದಲ್ಲಿ ಪರೀಕ್ಷೆ ನಡೆಸಿ ಒಳ್ಳೆಯ ತಳಿ ಬೀಜಗಳನ್ನು ಕಂಡು ಹಿಡಿದಿದ್ದಾರೆ. ಆದ್ದರಿಂದ ಎಕ್ಸ್‌ಪೆರಿಮೆಂಟಲ್ ಫಾರಂಗಳ ವಿಚಾರದಲ್ಲಿ ನಾನು ಆಕ್ಷೇಪಿಸುವುದಿಲ್ಲ. ಆದರೆ ಮಾದರಿ ಫಾರಂಗಳಿಂದ ರೈತರಿಗೆ ಏನು ಸಹಾಯವಾಗಿದೆ? ಈ ಫಾರಂನಲ್ಲಿ ಬೆಳೆಯುವುದಕ್ಕಿಂತ ರೈತನೇ ಚೆನ್ನಾಗಿ ಬೆಳೆಯುತ್ತಾನೆ. ಮಾದರಿ ಫಾರಂನಲ್ಲಿ ಎಕರೆಗೆ ಎಂಟು ಒಂಭತ್ತು ಪಲ್ಲ ದವಸ ಬೆಳೆದರೆ, ನಾನು 18 ಪಲ್ಲ ಬೆಳೆಯುತ್ತೇನೆ. ಸರ್ಕಾರದವರು ಯಾವುದೇ ಉದ್ಯಮವನ್ನು ಕೈಗೊಂಡರೂ ಆಯಾ ಕಸಬಿನವರಿಗೆ ಸಹಾಯಮಾಡುವುದು ವಿನಾ ಅವರೊಡನೆ ಪೈಪೋಟಿ ಮಾಡಲು ಪ್ರಯತ್ನಮಾಡಬಾರದು. ಇನ್ನೊಂದು ಉದಾಹರಣೆ ತೆಗೆದುಕೊಳ್ಳುತ್ತೇನೆ. ಒಂದು ಕುರಿ ಸಾಕುವ ಕ್ಷೇತ್ರಕ್ಕೆ ಇಪ್ಪತ್ತು ವರ್ಷಗಳ ಹಿಂದೆ 200 ಕುರಿಗಳನ್ನು ತೆಗೆದುಕೊಂಡಿದ್ದರು. 20ವರ್ಷಗಳಾದ ಮೇಲೆ ಈಗ ಅದು 201 ಕುರಿ ಕೂಡ ಆಗಿಲ್ಲವೆಂದರೆ ನಾಚಿಕೆಗೆ ಈಡಾಗತಕ್ಕ ವಿಚಾರ. ಇಂತಹ ಫಾರಂಗಳನ್ನು ನಡೆಸಬಾರದು.

ಫಿಷರೀಸ್ ಎಂದು ಮಾಡಿ ಅದಕ್ಕೆ ಅಧಿಕಾರಿಗಳನ್ನು ನೇಮಕಮಾಡುವುದು. ಅವರು ಯಾವುದೋ ದೇಶದಿಂದ ಎರಡಂಗುಲದ ಮೀನನ್ನು ತಂದು ಎಂಟಂಗುಲ ಬೆಳೆಸಿದ್ದೇವೆಂದು ತೋರಿಸುವುದು ವಿನಾ ಇನ್ನೇನು ಮಾಡಿದ್ದಾರೆ! ನಮ್ಮ ದೇಶದಲ್ಲಿರುವ ದೊಡ್ಡದೊಡ್ಡ ಸಾಗರ, ಕೆರೆ, ನದಿಗಳಲ್ಲಿರುವ ಮೀನು ಹಿಡಿದು ಮಾರಿ ಹಣ ಸಂಪಾದಿಸಿದರೇ ಸಾಕಾಗಿದೆ. ಅದಕ್ಕೆ ಬದಲು ಯಾವುದೋ ದೇಶದಿಂದ ಸಣ್ಣ ಮೀನುಗಳನ್ನು ತಂದು ಬೆಳೆಸಲು ಅಧಿಕಾರಿಗಳನ್ನೇಕೆ ನೇಮಿಸುವುದು?

Sri H. B. GUNDAPPA GOWDA.—Fisheries Department is a separate department in foreign countries.

ಶ್ರೀ ಎಚ್. ಕೆ. ವೀರಣ್ಣಗೌಡರು.—ಇರಬಹುದು. ಇಲ್ಲಿ ಪ್ರವೀಣರು ಇದ್ದಾರೆಂದು ಹೇಳಿ ಎರಡು ಅಂಗುಲದ ಮೀನನ್ನು ತಂದು ಅದು ಈಗ ಆರಂಗುಲವಾಗಿದೆ ಎಂದು ಹೇಳುವುದು ಅಪಹಾಸ್ಯಕ್ಕೀಡಾಗಿದೆ. (ನಗು!) ಕೋಳಿ ಸಾಕುವುದು, ಬಾತುಗಳನ್ನು ಸಾಕುವುದು ಇದರಿಂದ ರೈತರು ಮೊಟ್ಟೆಗಳನ್ನು ಕೊಂಡು ತಿಂದು ಚೆನ್ನಾಗಿ ಬೆಳೆಯುತ್ತಾರೆಂದು ಹೇಳುವುದು ಹಾಸ್ಯಾಸ್ಪದವಾಗಿದೆ. ಹಾಗೆಯೇ ಹಸುಗಳನ್ನು ಸಾಕುವುದು, ಡೈರಿಫಾರಂ ನಡೆಸುವುದು—ಇದೆಲ್ಲ ಚೆನ್ನಾಗಿಲ್ಲ.

ಪ್ರಯೋಗಕ್ಷೇತ್ರಗಳೂ ಪ್ರವೀಣರೂ ಇದ್ದರೆ ಜನರಿಗೆ ಅವರ ಮೂಲಕ ತಿಳಿವಳಿಕೆ ಕೊಡಬಹುದು. ಅದು ಬಿಟ್ಟು ಸರ್ಕಾರದವರೇ ಇಪ್ಪತ್ತು ಹಸುಗಳನ್ನು ತೆಗೆದುಕೊಂಡು ಸಾಕಿ ಹಾಲು ಮಾರಲು ಹೊರಡಬಾರದು. ಆದ್ದರಿಂದ ಸರ್ಕಾರದವರೇ ಕುರಿ, ಕೋಳಿ, ಜೇನು ಮುಂತಾದುವನ್ನು ಸಾಕುವುದನ್ನು ಕಡಿಮೆ ಮಾಡಬೇಕೆಂದು ಸ್ಥೂಲವಾಗಿ ಹೇಳುತ್ತೇನೆ.

ಇನ್ನು ಕೈಗಾರಿಕೆ ವಿಚಾರ. ಶ್ರೀಮಾನ್ ಗೋವಿಂದರೆಡ್ಡಿಯವರು ಕೈಗಾರಿಕೆ ಸ್ಕೂಲುಗಳೆಂದರೆ ಏನು ಎಂದು ಒಂದು ಪ್ರಶ್ನೆ ಕೇಳಿದರು. ಈ ಸ್ಕೂಲುಗಳಲ್ಲಿ ಕೂಲಿ ಕೊಟ್ಟು ಕೆಲಸ ಮಾಡಿಸುವುದಿಲ್ಲ. ಅಲ್ಲಿ ಏನಿದ್ದರೂ ಶಿಕ್ಷಣ ಕೊಟ್ಟು ವಿದ್ಯಾರ್ಥಿಗಳನ್ನು ಆಚೆಗೆ ಕಳುಹಿಸಬೇಕು. ಅವರು ಸ್ವತಂತ್ರವಾಗಿ ತಮ್ಮ ತಮ್ಮ ಜೀವನ ಸಂಪಾದಿಸಿಕೊಳ್ಳಲು ಅರ್ಹರಾಗುವಂತೆ ಮಾಡಬೇಕು. ಸರ್ಕಾರದವರು ಪ್ರವೀಣರ ಅನುಭವ ಮತ್ತು ಬುದ್ಧಿಶಕ್ತಿಯಿಂದ ಜನರಿಗೆ ಉಪಯೋಗವಾಗುವಂತೆ ಮಾಡಬೇಕೇ ವಿನಾ ಸರ್ಕಾರದವರೇ ಉದ್ಯಮಗಳನ್ನು ಕೈಗೊಳ್ಳುವುದು ಯುಕ್ತವಲ್ಲ.

ಸರ್ಕಾರದ ಆಡಳಿತದ ವೆಚ್ಚವನ್ನು ಬಹುಮಟ್ಟಿಗೆ ತಗ್ಗಿಸಬೇಕು. ಎಕಾನಮಿ ಆಫೀಸರ ವರದಿಯನ್ನು ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆ ವರದಿಯನ್ನು ಈಗ ಬಹಿರಂಗಪಡಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಆ ವರದಿಯಲ್ಲಿರುವ ಸಲಹೆಗಳಲ್ಲಿ ಕೆಲವು practicable ಆಗಿರಬಹುದು ಇನ್ನು ಕೆಲವು impracticable ಆಗಿರಬಹುದು. ಇದರಲ್ಲಿ ಏನು ಗುಟ್ಟಿದೆ? ಆ ವರದಿಯನ್ನು ಸದಸ್ಯರಿಗೆ ಒದಗಿಸಬೇಕು. ಹೀಗೆ ಮಾಡಿದರೆ ಈ ವಿಷಯದಲ್ಲಿ ಈ ಸಭೆಯ ಸದಸ್ಯರ ಸಲಹೆಗಳನ್ನೂ ಪಡೆಯಲು ಅವಕಾಶವಾಗುತ್ತದೆ. ಅಂತೂ ಮೊದಲು ಖರ್ಚನ್ನು ತಗ್ಗಿಸಿಕೊಳ್ಳಬೇಕು. ಸಬ್‌ಡಿವಿಜನ್ ಆಫೀಸರು ಪೋಸ್ಟ್ ಆಫೀಸಿನ ಕೆಲಸ ಮಾಡುತ್ತಿದ್ದಾರೆಂದು ಶ್ರೀಮಾನ್ ಗೋವಿಂದರೆಡ್ಡಿಯವರು ಹೇಳಿದರು. ಅವರು ಹೇಳಿರುವುದು ಬಹಳ ಸೂಕ್ತವಾಗಿದೆ. ಅದನ್ನು ಸರ್ಕಾರದವರು ಆಲೋಚನೆಗೆ ತೆಗೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

ರೈತರೊಡನೆ ಮಿಳಿತವಾಗಿ ಕೆಲಸಮಾಡತಕ್ಕ ಇಲಾಖೆಗಳೆಂದರೆ ರೆವಿನ್ಯೂ, ವ್ಯವಸಾಯ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳು. ಈ ಇಲಾಖೆಗಳ ಅಧಿಕಾರಿಗಳು ಕುಳಿತಕಡೆ ಕೆಲಸಮಾಡುವುದರಿಂದ ಜನರಿಗೆ ಪ್ರಯೋಜನವಾಗುವುದಿಲ್ಲ. ಇವರುಗಳು ಹಳ್ಳಿಗಳಿಗೆ ಹೋಗಬೇಕು. ಹಿಂದಿನ ಕಾಲದಲ್ಲಿ ಅಮಲ್ದಾರರುಗಳು ಕುದುರೆಗಳ ಮೇಲೆ ಹೋಗುತ್ತಿದ್ದರು. ಈಗ ಅದು ಸಾಧ್ಯವಿಲ್ಲ. ಆದುದರಿಂದ ಅಮಲ್ದಾರರುಗಳಿಗೆ ಒಂದೊಂದು ಜೀಪ್ ಕಾರುಗಳನ್ನು ಕೊಡದಿದ್ದರೆ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ಹಾಗೆಯೇ ವ್ಯವಸಾಯ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರುಗಳಿಗೂ ಒದಗಿಸಬೇಕು. ಮಂಡ್ಯ ಜಿಲ್ಲೆಯಲ್ಲಿ ವ್ಯವಸಾಯದ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರವರು—ಅವರಿಗೆ ಜೀಪ್ ಕಾರ್ ಕೊಟ್ಟಿದ್ದಾಗ—ಬಹಳ ಕಷ್ಟದಿಂದ ಕೆಲಸ ಮಾಡುತ್ತಿದ್ದರು. ಈಗ ಅವರು ಅಷ್ಟೇ ಕಷ್ಟಪಟ್ಟರೂ ಹೆಚ್ಚು ಕೆಲಸ ಮಾಡಲು ವಾಹನ ಸೌಕರ್ಯವಿಲ್ಲದೆ ತೊಂದರೆಯಾಗಿದೆ. ಆದುದರಿಂದ ಈ ಅಧಿಕಾರಿಗಳಿಗೆ ಸಂಚಾರ ಸೌಕರ್ಯವನ್ನೊದಗಿಸಬೇಕು.

ಮೊದಲು ಗೊಬ್ಬರ ಮತ್ತು ವ್ಯವಸಾಯದ ಮುಟ್ಟುಗಳನ್ನು ವ್ಯವಸಾಯದ ಇಲಾಖೆಯವರೇ ರೈತರಿಗೆ ಮಾರುತ್ತಿದ್ದರು. ಈಗ ಅವರ ಕೈತಪ್ಪಿಸಿ ಈ ಕೆಲಸವನ್ನು ಸಮಗ್ರ ಸೇವಾ ಸಹಕಾರ ಸಂಘಗಳಿಗೆ ವಹಿಸಿರುವುದು ಬಹಳ ಒಳ್ಳೆಯದು. ಇನ್ನು ಗುಳಗಳ ವಿಚಾರದಲ್ಲಿ ಕೆಲವರು ಆಕ್ಷೇಪಣೆ ಮಾಡಿ ಈಗ ಒದಗಿಸುತ್ತಿರುವುದು ಏನೇನೂ ಸಾಲದೆಂದು ಹೇಳಿದರು. ಇಂಡಿಯಾ ಸರ್ಕಾರದಿಂದ ಕೋಟಾ ಬರಬೇಕಾಗಿತ್ತು, ಅದು ಬರುವುದು ತಡವಾಯಿತು. ಈಗ ಸರಿಯಾದ ಏರ್ಪಾಡುಮಾಡಿರುವುದಾಗಿ ಹೇಳಿದ್ದಾರೆ. ವ್ಯವಸಾಯ ಇನ್‌ಸ್ಪೆಕ್ಟರು ಪ್ರತಿಯೊಬ್ಬರೂ ಹಳ್ಳಿ ಹಳ್ಳಿಗೆ ಹೋಗಿ ಅಲ್ಲಿ ಬೆಳೆಯುವ ಬೆಳೆಗಳನ್ನು ನೋಡಿ ರೈತರಿಗೆ ಸರಿಯಾದ ಸಲಹೆಗಳನ್ನು ಕೊಡಬೇಕೇ ಹೊರತು ಸುಮ್ಮನೆ ಕಚೇರಿಯಲ್ಲಿ ಕಾಗದಗಳನ್ನು ನೋಡಿಕೊಳ್ಳುವುದು ಅವರ ಕೆಲಸವಲ್ಲ. ಈ ರೀತಿ ಏರ್ಪಾಡುಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನನ್ನ ಸೂಚನೆ. ಇನ್ನು ಅನೇಕ ಇಲಾಖೆಗಳಿವೆ, ಅವುಗಳ ವಿಚಾರದಲ್ಲಿ ನಾನು ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಖರ್ಚನ್ನು ಕಡಿಮೆಮಾಡಬೇಕು. ಅರಣ್ಯ ಇಲಾಖೆಯಲ್ಲಿ ಒಂದೇ ಸ್ಥಳದಲ್ಲಿ ಬೇರೆ ಬೇರೆ ಶಾಖೆಗಳಿಗೆ ಬೇರೆ ಬೇರೆ ಅಧಿಕಾರಿಗಳಿರುತ್ತಾರೆಂಬ ಆಕ್ಷೇಪಣೆ ಬಂದಿತ್ತು. ಹಾಗಿರತಕ್ಕದ್ದು ನ್ಯಾಯವಲ್ಲ.

ಇನ್ನು ಹೆಲ್ತ್ ಮತ್ತು ಮೆಡಿಕಲ್ ಇಲಾಖೆಯ ವಿಚಾರ. ಹೆಲ್ತ್ ಆಫೀಸರು ಇದ್ದಾರೆ, ಹೆಲ್ತ್ ಡೈರೆಕ್ಟರು ಇದ್ದಾರೆ, ಡಾಕ್ಟರುಗಳು ಇದ್ದಾರೆ ಮತ್ತು ಸೀನಿಯರ್ ಸರ್ಜನ್ ಇದ್ದಾರೆ—ಈ ರೀತಿ ಬೇರೆ ಬೇರೆ ಇರುವುದರಿಂದ ಕೆಲಸ ಸುಸೂತ್ರವಾಗಿ ನಡೆಯುವುದಿಲ್ಲ. ಖರ್ಚು ಜಾಸ್ತಿ ಆಗುತ್ತದೆ. ಫೈನಾನ್ಷಿಯಲ್ ಸೆಕ್ರೆಟರಿಯವರ ಮೆಮೋರ್ಯಾಂಡಂನಲ್ಲಿ ಈ ಸಂಬಂಧ ಒಂದು ವಿಚಾರವನ್ನು ಸೂಚಿಸಿದ್ದಾರೆ ಅದನ್ನು ತಮ್ಮ ಗಮನಕ್ಕೆ ತರಲು ಅಪೇಕ್ಷೆ ಪಡುತ್ತೇನೆ. ಅದೇನೆಂದರೆ:—

"The scheme aims at the ideal that the Doctor should be a social physician protecting the people and guiding them to a healthier and happier life and should so combine the remedial and preventive measures as to confer the maximum benefit on the community."

ಈ ತತ್ವವನ್ನು ನಾವು ಜಾರಿಗೆ ತರಬೇಕು. ಹೆಲ್ತ್ ಆಫೀಸರು ಬೇರೆ, ಔಷಧಿ ಕೊಡುವ ಡಾಕ್ಟರುಗಳು ಬೇರೆ ಈ ರೀತಿ ವಿಂಗಡಿಸಿಕೊಂಡು ಅಧಿಕಾರಿಗಳನ್ನು ಹೆಚ್ಚಿಸಿಕೊಂಡರೆ ಖರ್ಚು ಜಾಸ್ತಿಯಾಗುತ್ತದೆ: ಜನಗಳಿಗೆ ಅನುಕೂಲಗಳು ಕಡಿಮೆಯಾಗುತ್ತದೆ ಆ ರೀತಿ ಆಗಬಾರದು.

ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಚನ್ನಬಸಪ್ಪನವರು ಒಂದು ವಿಷಯವನ್ನು ಹೇಳಿದರು. ಆದರೆ ಅವರಿಗೆ ಸರಿಯಾದ ಅಂಕಿ ಅಂಶಗಳ ಮಾಹಿತಿ ಇಲ್ಲದೆ ಬರೀ ಬಜೆಟ್‌ನಲ್ಲಿರುವ ಅಂಕಿ ಅಂಶಗಳನ್ನು ನೋಡಿಕೊಂಡು ಮಾತನಾಡಿದ್ದಾರೆಂದು ನನಗೆ ಅನಿಸುತ್ತದೆ.

Sri H. M. CHANNABASAPPA.—Are the Budget figures incorrect?

Sri H. K. VEERANNA GOWDA.—Budget figures are quite incorrect.

Sri H. M. CHENNABASAPPA.—What do the Government Members say?

ಶ್ರೀ ಎಚ್. ಕೆ. ವೀರಣ್ಣಗೌಡರು.—ವಿಶ್ವೇಶ್ವರಯ್ಯ ನಾಲೆಯಲ್ಲಿ ಲಕ್ಷಾಂತರ ರೂಪಾಯಿ ನಿಂತು ಹೋಗಿದೆ. ಅದನ್ನು ವಸೂಲು ಮಾಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲವೇ ಎಂದು ಕೇಳಿದರು. ಸರ್ಕಾರದವರಿಗೆ ಶಕ್ತಿ ಇಲ್ಲದೇ ಇಲ್ಲ. ಅಲ್ಲಿನ ರೈತರು ಬಾಕಿ ಕೊಡಲಾರ

ದವರೂ ಅಲ್ಲ. ಕಾರಣ ಇಷ್ಟೆ. ಅನೇಕ ವರ್ಷಗಳಿಂದ ಮೊದಲಿನ ಸರ್ಕಾರ ಇದ್ದ ಕಾಲದಲ್ಲೂ ಕೂಡ—ಡಿಸ್ಟ್ರಿಕ್ಟ್ ಸಮ್ಮೇಳನ, ತಾಲ್ಲೂಕು ಸಮ್ಮೇಳನ, ಪ್ರಜಾ ಪ್ರತಿನಿಧಿ ಸಭೆ, ಇವುಗಳೆಲ್ಲಾ ನಿರ್ಣಯಗಳಮೂಲಕ, ಅರಿಕೆಗಳ ಮೂಲಕ ಈ ವಿಷಯ ಬಂದು ಬೇಕಾದಷ್ಟು ಚರ್ಚೆಯಾಗಿದೆ. ವಿಶ್ವೇಶ್ವರಯ್ಯ ನಾಲೆ ಪ್ರಾರಂಭವಾದ ಲಾಗಾಯ್ತಿನಿಂದ ಎಂದರೆ 18 ವರ್ಷದಿಂದ ಒಬ್ಬ ರೈತನಿಗೂ ಅಲ್ಲಿ ಪಟ್ಟೆ ಕೊಟ್ಟಿಲ್ಲ. ಕಾಂಟ್ರಿಬ್ಯೂಷನ್ ಎಷ್ಟು, ಕಂದಾಯ ಎಷ್ಟು, ವಾಟರ್ ರೇಟ್ ಎಷ್ಟು, ಯಾವ್ಯಾವ ನಂಬರಿಗೆ ಎಷ್ಟೆಷ್ಟು ಕೊಟ್ಟಿದ್ದಾರೆ, ಎಷ್ಟು ಬಾಕಿ ಇದೆ ಎಂಬುದನ್ನು ಇವತ್ತಿನವರೆಗೂ ತಿಳಿಸಿಲ್ಲ. ಅಲ್ಲಿನ ರೈತರಿಂದ 60—70 ಲಕ್ಷ ರೂಪಾಯಿಗಳ ವರೆಗೂ ಬಾಕಿ ಬರಬೇಕಾಗಿದೆ ಎಂದು ಮಾತ್ರ ಹೇಳುತ್ತಿದ್ದಾರೆ. ಇದು ನಿಜವಾದ ಅಂಶವಲ್ಲ. ಅವರು ಅಷ್ಟು ಕೊಡಬೇಕಾಗಿಲ್ಲ. ನನಗೆ ಅದರ ಅನುಭವ ಇದೆ. ಸರಿಯಾದ ಸಮಜಾಯಿಷಿ ಕೊಟ್ಟಾಗ ಶೇಕಡ 50 ರಷ್ಟು ಕಡಿಮೆಯಾಗಬಹುದು. ಇದನ್ನೆಲ್ಲಾ ವಿಚಾರ ಮಾಡಿ ಸರಿಯಾದ ಅಂಕಿ ಅಂಶಗಳನ್ನು ಕೊಟ್ಟರೆ ಒಪ್ಪಿಕೊಳ್ಳುತ್ತೇನೆ. ಇಲ್ಲದೇ ಇದ್ದ ಪಕ್ಷದಲ್ಲಿ ಆ ಅಂಕಿ ಅಂಶಗಳು ಸರಿಯಾದ್ದಲ್ಲವೆಂಬ ಬಗ್ಗೆ ಸವಾಲು ಹಾಕುತ್ತೇನೆ.

Sri H. M. CHANNABASAPPA.—Question.

ಶ್ರೀ ಎಚ್. ಕೆ. ವೀರಣ್ಣಗೌಡರು.—ಸಕ್ಕರೆ ಕಂಪೆನಿಯವರು ಕಬ್ಬು ಬೆಳೆಯತಕ್ಕ ರೈತರಿಗೆ ಕೊಡಬೇಕಾದ ದುಡ್ಡಿನಲ್ಲಿ ರೆವಿನ್ಯೂ ಬಾಕಿ ಹಿಡಿಯಬೇಕೆಂದು ಸರ್ಕಾರದವರು ನಿಯಮ ಮಾಡಿದ್ದಾರೆ. ಆದ್ದರಿಂದ ಸಕ್ಕರೆ ಕಂಪೆನಿಯವರು ಸರ್ಕಾರದ unpaid agents ಆಗಿ ಕೆಲಸ ಮಾಡುತ್ತಿದ್ದಾರೆ. ಒಬ್ಬ ರೈತ ಎರಡು ಸಾವಿರ ರೂಪಾಯಿ ಬೆಲೆಯ ಕಬ್ಬನ್ನು ಕಂಪೆನಿಗೆ ಒದಗಿಸಿದರೆ, ಅಂಥ ರೈತನಿಂದ ರೆವಿನ್ಯೂ ಡ್ಯೂಸ್ ಎರಡು ಸಾವಿರ ರೂಪಾಯಿ ಬರಬೇಕೆಂದು ಶೇಖದಾರರೋ ಶ್ಯಾನುಭೋಗರೋ ಬರೆದು ಬಿಟ್ಟರೆ ಆ ರೈತನಿಗೆ ಸಮಜಾಯಿಷಿ ಕೊಡದೆ ಕಂಪೆನಿಯವರಿಂದ ಆತನಿಗೆ ಬರಬೇಕಾದ ಮೊಬಲಗನ್ನೆಲ್ಲಾ ಹಿಡಿದುಬಿಡುತ್ತಾರೆ. ಕಬ್ಬು ಹಾಕಿದ್ದ ಸರ್ವೆ ನಂಬರಿನ ಬಾಕಿಯನ್ನು ಮಾತ್ರವಲ್ಲದೆ ಆ ರೈತನಿಗಿರುವ ಎಲ್ಲ ಸರ್ವೆ ನಂಬರುಗಳ ರೆವಿನ್ಯೂ ಡ್ಯೂಸ್ ಸಹ ಹಿಡಿದುಬಿಡುತ್ತಾರೆ. ಆತನಿಗೆ ಬೇರೆ ಗ್ರಾಮಗಳಲ್ಲಿ ಜಮೀನಿದ್ದರೆ ಅವುಗಳ ಬಾಕಿಯನ್ನು ಈ ಹಣದಲ್ಲೇ ಹಿಡಿದುಕೊಳ್ಳುತ್ತಾರೆ. ಇದು ರೂಲ್ಸ್‌ಗೆ ವಿರೋಧ. ಇದನ್ನೆಲ್ಲಾ ಲೆಕ್ಕ ಹಾಕಿದರೆ ಅನೇಕ ರೈತರಿಂದ ಹೆಚ್ಚು ದುಡ್ಡು ವಸೂಲಾಗಿದೆ. ಇದನ್ನು ಅನೇಕ ಸಾರಿ ಅನೇಕ ಕಡೆಗಳಲ್ಲಿ ಹೇಳಿದ್ದೇವೆ. ಹಿಂದೆ ಇದ್ದ ಸರ್ಕಾರದವರನ್ನು ಒತ್ತಾಯ ಮಾಡಿದ್ದೇವೆ. 18 ವರ್ಷದ ಲೆಕ್ಕ ತಯಾರಾಗಬೇಕು. ಇದಕ್ಕಾಗಿ 2 ಲಕ್ಷವಲ್ಲ 4 ಲಕ್ಷ ರೂಪಾಯಿ ಆದರೂ ಮೀಸಲಾಗಿ ಇಟ್ಟುಬಿಡಿ. ಎರಡು ವರ್ಷದಲ್ಲಿ ಈ ಕೆಲಸ ಪೂರೈಸಬೇಕೆಂದು ಮಾಡಿ ಪ್ರತಿಯೊಬ್ಬ ರೈತನಿಗೂ ಸರಿಯಾದ ಪಟ್ಟೆ ಕೊಟ್ಟು ಅವನಿಂದ ಬರಬೇಕಾದ್ದು ಇಷ್ಟೇ ಎಂದು ತೋರಿಸಿದರೆ ಬಾಕಿ ಎಲ್ಲ ಒಂದೇ ವರ್ಷದಲ್ಲಿ ವಸೂಲಾಗುತ್ತದೆಂದು ಹೇಳಿದ್ದೇನೆ. ಈಗಲೂ ಇದನ್ನು ಸರ್ಕಾರದವರಿಗೆ ಒತ್ತಾಯ ಪೂರ್ವಕವಾಗಿ ಸೂಚಿಸುತ್ತೇನೆ.

ಮಲೆನಾಡಿನವರಿಗೆ ಸರ್ಕಾರದವರು ಡಿ. ಡಿ. ಟಿ. ಯಿಂದ ಬಹಳ ಉಪಕಾರ ಮಾಡಿದ್ದಾರೆ. ಮಂಡ್ಯ ಮಲೆನಾಡಲ್ಲದಿದ್ದರೂ ಮಲೇರಿಯಾ ದೆಸೆಯಿಂದ ಜನರು ಆರೋಗ್ಯದ ವಿಷಯದಲ್ಲಿ ಬಹಳ ಹೀನಸ್ಥಿತಿಯಲ್ಲಿದ್ದಾರೆಂಬುದನ್ನು ಸರ್ಕಾರದವರು ಮನಗಂಡಿದ್ದಾರೆ, ಎಲ್ಲರೂ ಮನಗಂಡಿದ್ದಾರೆ. ಆರೋಗ್ಯದ ವಿಚಾರದಲ್ಲಿ ವಿಶ್ವೇಶ್ವರಯ್ಯ ನಾಲಾ ಪ್ರದೇಶದ ಕಡೆಗೆ ಸರ್ಕಾರದವರು ಗಮನ ಕೊಟ್ಟಿರುವುದು ಸಾಲದೆಂದು ವ್ಯಸನದಿಂದ ಹೇಳಬೇಕಾಗಿದೆ. ಬೇಕಾದಷ್ಟು ಉದಾಹರಣೆಗಳನ್ನು ಕೊಡಬಲ್ಲೆ. ಆ ಪ್ರಾಂತದಲ್ಲಿ ಸೊಳ್ಳೆ ಸಾಯಿಸುವುದಕ್ಕೆ ಪೈರೆಥ್ರಮ್ ಎಂಬುದನ್ನು ಮೊದಲು ಉಪಯೋಗಿಸುತ್ತಿದ್ದರು. ಡಿ. ಡಿ. ಟಿ. ಪ್ರಯೋಗ ಮಾಡಬೇಕಾಗಿರುವುದರಿಂದ ಪೈರೆಥ್ರಮ್ ಬೇಕಿಲ್ಲವೆಂದು ಹೇಳಿದರು. ಅದು ನಿಂತು ಹೋಯಿತು. ಡಿ. ಡಿ. ಟಿ. ಇನ್ನೂ ಬರಲಿಲ್ಲ. ಇದರ ಜೊತೆಗೆ ಕೃಷ್ಣರಾಜ ಸಾಗರದಲ್ಲಿ ನೀರು ಕಡಿಮೆಯಾದ್ದರಿಂದ, ದನಕರುಗಳು ಕುಡಿಯುವುದಕ್ಕಾದರೂ ನೀರು ಬಂದು ರೈತರಿಗೆ ಸಾಧ್ಯವಾದಷ್ಟು ಅನುಕೂಲ ಮಾಡೋಣವೆಂದೂ ಕೆರೆಗಳನ್ನು ದುರಸ್ತು ಮಾಡಿಸಿ ಕೆರೆಗಳಲ್ಲಿ ನೀರು ಭರ್ತಿಯಾಗಿ ಇರುವಂತೆ ಮಾಡಿದರು. ಅದರಿಂದ ಸೊಳ್ಳೆ ಜಾಸ್ತಿಯಾಗಿ ಡಿ. ಡಿ. ಟಿ. ಇಲ್ಲದೆ ಜನಗಳು ಬಹಳವಾಗಿ ಖಾಯಿಲೆ ಅನುಭವಿಸುತ್ತಿದ್ದಾರೆ. ಅನೇಕ ಕಡೆ ಮಕ್ಕಳು ಹುಟ್ಟದೇ ಇರತಕ್ಕ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿವೆ. ಗರ್ಭಿಣಿಯರಾದವರಿಗೆ ಗರ್ಭ ಸ್ರಾವವಾಗುತ್ತಿದೆ. ಅಷ್ಟು ಹೀನಸ್ಥಿತಿಯಲ್ಲಿದ್ದಾರೆ. ಅಲ್ಲಿನ ಜನರು, ಈ ವಿವರಗಳೆಲ್ಲ ಮೈಸೂರು ಕಾಂಗ್ರೆಸ್ಸಿನವರು ರಚಿಸಿದ್ದ ಸಮಿತಿಯವರ ಸಂಚಾರ ಕಾಲದಲ್ಲಿ ಹೊರಬಿದ್ದು, ಆ ಸಮಿತಿಯವರು ಕೆಲವು ಸಲಹೆಗಳನ್ನು ಮಾಡಿದ್ದರು. ಗ್ರಾಮಗಳ ಸುತ್ತಲೂ ಡ್ರೈಬೆಲ್ಟ್ ಮಾಡಬೇಕೆಂಬುದು ಅಂತಹ ಸಲಹೆಗಳಲ್ಲಿ ಒಂದು. ಆಗ ಮಂತ್ರಿಗಳಾಗಿದ್ದ ಶ್ರೀ ಗುಂಡಪ್ಪಗೌಡರು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡರು. ಆ ಪೈಕಿ ಡ್ರೈಬೆಲ್ಟ್ ಮಾಡಿದುದು ಒಂದು ಅದಕ್ಕಾಗಿ ಅವರೇ ಕ್ರೆಡಿಟ್‌ತೆಗೆದುಕೊಂಡರೂ ತೆಗೆದುಕೊಳ್ಳಬಹುದು. ಡ್ರೈಬೆಲ್ಟ್ ಮಾಡಿದ್ದರಿಂದ ಬಹುಮಟ್ಟಿಗೆ ಅನುಕೂಲವಾಯಿತು ಆದರೆ ಅದನ್ನು ಎಲ್ಲ ಕಡೆಯೂ ಸರಿಯಾಗಿ ಜಾರಿಗೆ ತಂದಿಲ್ಲ. ಉದಾಹರಣೆ ಹೇಳುವುದಾದರೆ ಆರೋಗ್ಯ ವಿಚಾರದಲ್ಲಿ ಮದ್ದೂರು ಹದಗೆಟ್ಟಿರುವ ಹಾಗೆ ಯಾವುದೂ ಇಲ್ಲ. ಅಲ್ಲಿ ಹೆಚ್ಚಾಗಿ ತರೀ ಜಮೀನು ಇದೆ, ಹೆಚ್ಚು ಪರಿಹಾರ ಕೊಡಬೇಕಾಗುತ್ತದೆ ಎಂತಲೋ ಏನೋ, ಹಳ್ಳಿಗಳಲ್ಲಿ ಎರಡು ಫರ್ಲಾಂಗ್ ಡ್ರೈಬೆಲ್ಟ್ ಮಾಡಿದ್ದರೂ ಸಹ ಅಲ್ಲಿ ಒಂದು ಫರ್ಲಾಂಗ್ ಮಾಡುವುದಕ್ಕೂ ಸಹ ಸರ್ಕಾರದವರು ಹಿಂದೂ ಮುಂದೂ ನೋಡುತ್ತಾ ಇದ್ದಾರೆ ಎಂಬುದನ್ನು ವ್ಯಸನದಿಂದ ಹೇಳಬೇಕಾಗಿದೆ. ಎಷ್ಟೇ ಖರ್ಚಾಗಲೀ ಒಂದೆರಡು ಫರ್ಲಾಂಗ್ ಆದರೂ ಡ್ರೈಬೆಲ್ಟ್ ಮಾಡಲೇಬೇಕು. ಗ್ರಾಮದ ಪಕ್ಕದಲ್ಲಿ ಜಮೀನಿರತಕ್ಕವರು ಎಷ್ಟೇ ಪ್ರಭಾವ ಶಾಲಿಗಳಾದರೂ ಡ್ರೈಬೆಲ್ಟ್ ಕೊಡದೆಂದು ಎಷ್ಟೇ ಒತ್ತಾಯ ಮಾಡಿದರೂ ಸಹ ಸರ್ಕಾರದವರು ಅಂಥವರ ಮಾತನ್ನು ಗಮನಿಸಕೂಡದು.

ಕೆಲವು ಸಂದರ್ಭಗಳಲ್ಲಿ ಬಲವಂತ ಮಾಘಸ್ನಾನ ಅಗತ್ಯ. ಹತ್ತಾರು ಜನರ ದಾಕ್ಷಿಣ್ಯಕ್ಕೊಳಗಾದರೆ ನೂರಾರು ಜನರ ಆರೋಗ್ಯ ದೃಷ್ಟಿಯಿಂದ, ಅವರಿಗೆ ಒಪ್ಪಿಗೆಯಿರಲೀ, ಇಲ್ಲದೇ ಇರಲೀ, ಅದನ್ನು ತಾವು ಕಡ್ಡಾಯವಾಗಿ ಮಾಡಲೇಬೇಕೆಂದು ನಾನು ಸರ್ಕಾರದವರನ್ನೂ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಹನುಮಯ್ಯನವರು.—ಸ್ವಾಮಿ, ಅಧ್ಯಕ್ಷರೇ, ಇತರೇ ಸದಸ್ಯರಿಗೇನಾದರೂ ಮಾತನಾಡಲು ಅವಕಾಶವುಂಟೇ ?

ಶ್ರೀ ಎಚ್. ಕೆ. ವೀರಣ್ಣಗೌಡರು.—ಇನ್ನು ಪಾನ ನಿರೋಧದ ವಿಚಾರವಾಗಿ ಶ್ರೀಮಾನ್ ಮಹಾರಾಜರವರೂ ಕೂಡ ಒಂದು ಅಂಶವನ್ನು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಸರ್ಕಾರದವರೂ ಸಹ ಒಂದು ಸೂಚನೆಯನ್ನು ತೋರಿಸಿದ್ದಾರೆ. ಈ ಪಾನನಿರೋಧ ಜಾರಿಯಲ್ಲಿರತಕ್ಕ ಪ್ರದೇಶದಲ್ಲಿ ಕಳ್ಳಭಟ್ಟಿ ಸಾರಾಯಿ, ಹೆಂಡ ಇತ್ಯಾದಿಗಳ ಚಲಾವಣೆಯನ್ನು ತಡೆಗಟ್ಟುವುದಕ್ಕೆ ಹೆಚ್ಚಿನ ನಿಗಾ ಕೊಡಬೇಕಾಗಿದೆ. ಅಂತೂ ಏನೇ ಆಗಲೀ ಅಷ್ಟಿಷ್ಟನ್ನಾದರೂ ಈ ಬಾಬಿನಲ್ಲಿ ಹೇಳಿದಂತೆ ನಮ್ಮ ಸರ್ಕಾರದವರು ನಡೆಸಿಕೊಂಡು ಬಂದಿದ್ದಾರೆ. ಇದು ಬಹಳ ಸಂತೋಷದ ವಿಷಯ. ಆದರೆ ಶ್ರೀಮಾನ್ ಎಚ್. ಬಿ. ಗುಂಡಪ್ಪಗೌಡರು ಕಾಂಗ್ರೆಸ್ ಸರ್ಕಾರದವರು ಗಾಂಧಿ ತತ್ವಗಳನ್ನೇ ಅನುಸರಿಸುತ್ತಿಲ್ಲವೆಂದು ಮಾತನಾಡಿದ್ದಾರೆ. ಕಾರಣ, ಅವರು ಎದುರು ಪಾರ್ಟಿಯವರು ಆರೀತಿ ಟೀಕೆಗಳನ್ನು ಅವರ ಮಾಡತಕ್ಕದ್ದು ಕೂಡ ಸಹ ನಿಜವಾಗಿಯೇ ಇದೆ. ಆದರೆ ಇದರಲ್ಲಿ ಒಂದು ಅಂಶವಿದೆ. ಗಾಂಧಿ ತತ್ವಗಳನ್ನು ಯಾರುಯಾರು ಹೇಗೆ ತಮ್ಮ ಮನಸ್ಸಿನಲ್ಲಿ ಭಾವಿಸಿಕೊಂಡರೆ ಅವು ಅವರಿಗೆ ಹಾಗೆ ಹಾಗೆಯೇ ಕಾಣುತ್ತವೆ. ಆದ್ದರಿಂದ ಈ ಗಾಂಧೀ ತತ್ವಗಳನ್ನು ಯಾರು ಬೇಕಾದರೂ ತಮ್ಮ ತಮ್ಮ ಅನುಕೂಲಗಳಿಗೆ ತಕ್ಕ ಹಾಗೆ ಉಪಯೋಗಿಸಿಕೊಳ್ಳಬಹುದು. ಅಂತೂ ಯಾರು ಎಷ್ಟೇ ಹೇಳಲಿ, ಈ ಪಾನನಿರೋಧ ವಿಷಯದಲ್ಲಿ ನನ್ನ ಮನಸ್ಸು ಡೋಲಾಯಮಾನವಾಗಿಯೇ ಇದೆ. ಕುಡಿತ ನಿಂತಿರುವ ಕೆಲವು ಕಡೆ ಜನರಿಗೆ ಅನುಕೂಲವಾಗಿದೆಯೆಂದು ಹೇಳಲಾಗಿದೆ. ಆದರೆ ಅಂಥ ಕಡೆ ಜನರು 90°-100° ಇರುವಂಥಾ ಕಳ್ಳಭಟ್ಟಿ ಸಾರಾಯಿ ಇತ್ಯಾದಿಗಳನ್ನು ತಯಾರಿಸಿ, ಕುಡಿದು, ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿದ್ದಾರೆಂದು ಹೇಳಲಾಗಿದೆ. ಇದರಿಂದ ಒಂದು ಕಡೆ ಸರ್ಕಾರಕ್ಕೆ ಬರುತ್ತಿದ್ದ ವರಮಾನವೂ ತಪ್ಪಿಹೋಯಿತು. ಅತ್ತಕಡೆ ಜನರ ಆರೋಗ್ಯವೂ ಕೆಟ್ಟುಹೋಗುತ್ತಿದೆ. ಇದನ್ನೆಲ್ಲಾ ತಕ್ಷಣವೇ ಸರಿಪಡಿಸತಕ್ಕದ್ದು ಅತ್ಯಾವಶ್ಯಕ. ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾದ ಮತ್ತೊಂದು ಅಂಶವೇನೆಂದರೆ ಈಗ ಯಾವಯಾವ ಜಿಲ್ಲೆಗಳಲ್ಲಿ ಈ ಪಾನನಿರೋಧವನ್ನು ಜಾರಿಗೆ ತರಬೇಕಾಗಿದೆಯೊ ಅದೇ ಸ್ಥಳದಲ್ಲಿ, ಹೆಂಡ ಇಳಿಸುವುದಕ್ಕೆ ಅವಕಾಶ ಕೊಡಲಾಗಿದೆ. ಇದೇನು ವಿಚಿತ್ರ! "ಜೇನು ಕಿತ್ತವನು ಕೈನೆಕ್ಕದೆ ಇರುತ್ತಾನೆಯೇ? ಹೆಂಡ ಇಳಿಸುವ ಕಡೆ ಅದನ್ನು ಕುಡಿಯದೆ ಇರುತ್ತಾರೆಯೆ? ಉದಾಹರಣೆಗೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ತೆಂಗಿನ ಮರಗಳಲ್ಲಿ ಹೆಂಡವನ್ನಿಳಿಸಲು ಅವಕಾಶ ಕೊಟ್ಟು—ಅದನ್ನು ಅಲ್ಲಿ ಇಳಿಸದಂತೆ ಬೇರೆ ಕಡೆಗೆ ಮಾರಾಟಕ್ಕಾಗಿ ಕಳುಹಿಸಬೇಕೆಂದು ಮಾಡಿದ್ದಾರೆ. ಆದರೆ ಈ ನೀತಿ ಎಷ್ಟರಮಟ್ಟಿಗೆ ಸೂಕ್ತವೋ ಅದನ್ನು ನಾನು ಹೇಳುವುದಕ್ಕಾಗುವುದಿಲ್ಲ. ಒಂದು ಸ್ಥಳದಲ್ಲಿ ಕುಡಿಯುವುದನ್ನು ತಪ್ಪಿಸಿದ ಮೇಲೆ, ಆ ಸ್ಥಳದಲ್ಲಿ ಅದರ ತಯಾರಿಕೆಯನ್ನು ತಪ್ಪಿಸಬೇಕು. ಇದು ಬಹಳ ಮುಖ್ಯವಾದ ವಿಚಾರ. ಈ ಪದ್ಧತಿಯನ್ನು ಕೂಡಲೇ ಮಾರ್ಪಾಡು ಮಾಡಿಕೊಳ್ಳಬೇಕು. ಡ್ರೈ ಜಿಲ್ಲೆಗಳಲ್ಲಿ ಇದನ್ನು ಯಾವ ರೀತಿಯಲ್ಲೂ ಪ್ರವೇಶ ಮಾಡಲು ಅವಕಾಶ ಕೊಡಬಾರದು.

ಇನ್ನೊಂದಂಶವೇನೆಂದರೆ—ಈ ಹೆಂಡದ ಆಸೆಗಾಗಿ ನೂರಾರು ವರ್ಷ, ಕಾಮಧೇನುವಿನಂತಿರುವ ತೆಂಗಿನ ವೃಕ್ಷಗಳನ್ನು ಈಗ ಹಾಳು ಮಾಡಲಾಗುತ್ತಿದೆ. ಹಾಗೆ ನೂರಾರು ವರ್ಷ ಬರುವ ತೆಂಗಿನ ಮರದಲ್ಲಿ ಯಾವಾಗ ಹೆಂಡವನ್ನಿಳಿಸುತ್ತಾರೋ, ಆಗ ಆ ಮರಗಳು ಕೇವಲ 20-30 ವರ್ಷಗಳಲ್ಲೇ ಹಾಳಾಗಿ ಹೋಗುತ್ತವೆ. ಹಿರಿಯರು ಮಾಡಿದ್ದ ಆಸ್ತಿಗಳೆಲ್ಲ ಈಗ ದುಡ್ಡಿನ ಆಸೆಗಾಗಿ ಅತ್ಯಲ್ಪಕಾಲದಲ್ಲೇ ನಾಶವಾಗುವಂತಾಗಿದೆ, ಈ ಅಂಶವನ್ನು ನಾನೀಗ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಒಟ್ಟಿನಲ್ಲಿ ನನ್ನ ಸಲಹೆಯೇನೆಂದರೆ, ಅದು ತೆಂಗಿನ ಮರವೇ ಆಗಲೀ ಅಥವಾ ಯಾವ ಮರವೇ ಆಗಲೀ, ಪಾನ ನಿರೋಧ ಜಾರಿಯಲ್ಲಿರುವ ಕಡೆ ಕಡ್ಡಾಯವಾಗಿ, ಈ ಹೆಂಡ ಇತ್ಯಾದಿಗಳ ತಯಾರಿಕೆಯನ್ನು ನಿಲ್ಲಿಸುವುದು ಅವಶ್ಯಕವಾದ್ದೆಂದು ಸೂಚನೆ ಮಾಡುತ್ತೇನೆ.

ಸರ್ಕಾರದವರಿಗೆ ನಾನು ಮತ್ತೊಂದು ಅಂಶವನ್ನು ಸ್ಪಷ್ಟವಾಗಿ ತಿಳಿಸಬೇಕಾಗಿದೆ. ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕವರಾಗಿದ್ದರೂ ಕೇವಲ 20—25 ಲಕ್ಷ ರೂಪಾಯಿಗಳಿಗೆ ಹೊಡೆದಾಡುತ್ತಿರುವುದು ಆಶ್ಚರ್ಯವಾಗಿರುತ್ತೆ! ಕಾರಣ, ತಾವೀಗ ಡಿಪೋ ಮತ್ತು ದ್ವಿದಳ ಧಾನ್ಯಗಳ ಮೇಲೆ ತೆರಿಗೆ ವಿಧಿಸಬೇಕೆಂದಿರುವುದು ಅಷ್ಟು ನ್ಯಾಯವಾಗಿಕಾಣುವುದಿಲ್ಲ. ಈ ತೆರಿಗೆಗಳನ್ನು ಹಾಕುವುದು ನ್ಯಾಯವಾಗಿ ಕಂಡರೂ ಕಷ್ಟ ಕಾಲದಲ್ಲಿ ಧಾನ್ಯಗಳನ್ನು ಹೊರಗಡೆಯಿಂದ ಹೆಚ್ಚಿನ ಬೆಲೆ ಕೊಟ್ಟು ಕೊಂಡು ತಂದು, ಆ ಧಾನ್ಯವನ್ನು ಇಲ್ಲಿ ಕಮ್ಮಿ ಬೆಲೆಗೆ ಮಾರಾಟ ಮಾಡಿ ಅನೇಕ ವರ್ಷಗಳಿಂದ ಕೋಟ್ಯಾಂತರ ರೂಪಾಯಿ ನಷ್ಟ ಹೊಂದಿರುವಾಗ ಈ ಅಲ್ಪ ಆದಾಯಕ್ಕಾಗಿ ಏಕೆ ಯೋಚಿಸಬೇಕು! ಹಾಗೆ ಮಾಡುವ ಬದಲು ಅಸಲು ಬೆರೆಗಾದರೂ ಮಾರಬೇಕಾಗಿತ್ತು. ಕೆಲವು ವೇಳೆ ರೂಪಾಯಿಗೆ 2 ಸೇರಿನಂತೆ ಕೊಂಡದ್ದನ್ನು 3 ಸೇರಿನಂತೆ ಮಾರಾಟ ಮಾಡಿದ್ದೀರಿ. ಇದರ ಜೊತೆಗೆ ಸಿಬ್ಬಂದಿಯ ಖರ್ಚು, ಸಾಗಿಸಿದ್ದರ ಖರ್ಚು ಇತ್ಯಾದಿ 7—8 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಈ ಒಂದು ಬಾಬಿನಿಂದಲೇ ಲುಕ್ಸಾನಾಗಿರುವುದು ನನ್ನ ಅನುಭವಕ್ಕೆ ಬಂದಿರುತ್ತೆ. ಆದರೆ ಈ ದಾರಣೆವಾಸಿಗಳು ಯಾವಾಗ್ಯೂ ಹೀಗೇ ಇರುವುದಿಲ್ಲ. ಒಂದೆರಡು ವರ್ಷಗಳಲ್ಲಿ ವ್ಯತ್ಯಾಸವಾಗಬಹುದು. ಈಗೇನು ತಾವು ಈ ಸಂದರ್ಭದಲ್ಲಿ ಹೇಳಿದ್ದೀರೆಂದರೆ, ಈ ಆಹಾರ ಸಾಮಗ್ರಿಗಳನ್ನು ಕೇವಲ ಪಟ್ಟಣವಾಸಿಗಳು ಮಾತ್ರ ಕೊಂಡು ತಿನ್ನತಕ್ಕವರಾಗಿರುವುದರಿಂದ ಈ ತೆರಿಗೆ ಹಳ್ಳಿಯವರ ಮೇಲೆ ಬೀಳುವುದಿಲ್ಲ ಎಂದು. ಆದರೆ ಇಂದಿನ ಪರಿಸ್ಥಿತಿ ಹಳ್ಳಿ-ಪಟ್ಟಣಗಳೆರಡಕ್ಕೂ ಒಂದೇ ಆಗಿದೆ. ಆದಕಾರಣ ಈ ಸಣ್ಣ ಮೊಬಲಗಿನಿಂದ ನಿಮಗೇನೂ ಅಷ್ಟು ಭಾಧಕವಾಗಲಾರದು. ಆದ್ದರಿಂದ ಇದನ್ನು ಸಂಪೂರ್ಣವಾಗಿ ಬಿಟ್ಟುಬಿಡುವುದು ಸೂಕ್ತ. ಅಂದರೆ ಈ ಡಿಪೋ ಛಾರ್ಜಸ್ ಮತ್ತು ದ್ವಿದಳ ಧಾನ್ಯಗಳ ಮೇಲೆ ಹಾಕಿರತಕ್ಕ ಎರಡು ತೆರಿಗೆಗಳನ್ನು ಬಿಟ್ಟುಬಿಡಬೇಕೆಂದೂ ನಾನು ಸೂಚನೆ ಮಾಡುತ್ತೇನೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಎಲ್ಲಾ ತೆರಿಗೆಗಳನ್ನೂ ಬಿಟ್ಟು ಬಿಡಿ.

ಶ್ರೀ ಬಿ. ಹುಚ್ಚೇಗೌಡರು.—ಆ ಬಗ್ಗೆ ತಾವು ಬೇರೆ ಯಾವುದನ್ನು ಸೂಚಿಸುತ್ತೀರಿ? ಇದರಿಂದ ಸುಮಾರು 24 ಲಕ್ಷ ರೂಪಾಯಿಗಳು ಲುಕ್ಸಾನಾಗುತ್ತದೆಯಲ್ಲಾ!

ಶ್ರೀ ಎಚ್. ಕೆ. ವೀರಣ್ಣಗೌಡರು.—ಆದರೆ ಈಗ ನಮ್ಮ ಕಾಂಗ್ರೆಸ್ ಪಾರ್ಟಿಯ ಎದುರು ಪಕ್ಷದವರು ಕೇಳುತ್ತಿರುವ ಪ್ರಶ್ನೆಗಳನ್ನು ನೋಡಿದರೆ ಈ ಸುಂಕವನ್ನು ನೀವು ಹಾಕಲೇಬೇಕೆಂದು ಹೇಳುತ್ತಿರುವಂತೆ ಕಾಣುತ್ತದೆ. ಬಹುಶಃ ಅವರಿಗೆ ಮನಸ್ಸಿನಲ್ಲಿ ಈ ಸುಂಕ ಲಕ್ಷಾಂತರ ಜನರ ಮೇಲೆ ಬೀಳುವುದರಿಂದ ಅವರೆಲ್ಲ ಕಾಂಗ್ರೆಸ್ ಸರ್ಕಾರದ ಮೇಲೆ ಅಸಮಾಧಾನಗೊಳ್ಳುವ

ರೆಂಬ ಭಾವನೆ ಇರಬಹುದು. ಆದರೆ ಅಂಥ ದುರುದ್ದೇಶ ಎದುರು ಪಕ್ಷದವರಿಗಿಲ್ಲವೆಂದೇ ನಾನು ಭಾವಿಸುತ್ತೇನೆ. ನಾನು ಯಾರ ಮೇಲೂ ಆರೋಪಣೆ ಮಾಡುವವನಲ್ಲ.

ಶ್ರೀ ಬಿ. ಹುಚ್ಚೇಗೌಡರು.—ನಾವು ಅದಕ್ಕೆ ಬೆಂಬಲನೀಡೇ ಇಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಇನ್ನು ವಿಶ್ವೇಶ್ವರಯ್ಯ ನಾಲೆಯ ಪ್ರದೇಶದಲ್ಲಿ ಜನರು ವಿಪರೀತವಾದ ತೆರಿಗೆಗಳನ್ನು ಕೊಡುತ್ತಿದ್ದಾರೆ. ನೀರು ಸರದಿ, ಹೆಚ್ಚು ಕಂದಾಯ ಮತ್ತು ಇತರೇ ಟ್ಯಾಕ್ಸ್ ಹೀಗೆ ಹೊರೆ ಏರಿ ಹೋಗಿದೆ. ದೇಶದ ಜನರಲ್ ರೆವೆನ್ಯೂ ಬಾಬಿನಿಂದ ಅಲ್ಲಿ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿದ್ದೀರಿ. ಅಲ್ಲಿಯ ಜನರ ಆರೋಗ್ಯದ ಕಡೆಗೆ ಸರ್ಕಾರದವರು ಅಷ್ಟಾಗಿ ಗಮನ ಕೊಟ್ಟಂತೆ ಕಾಣುವುದಿಲ್ಲ. ಈ ವಿಚಾರವನ್ನು ಈಗಾಗಲೇ ಪ್ರಸ್ತಾಪಿಸಿದ್ದೇನೆ. ಅಲ್ಲಿನ ರೈತರಿಗೆ ಅಧಿಕವಾದ ಷುಗರ್ ಕೇನ್ ಟ್ಯಾಕ್ಸ್ ಹಾಕಲಾಗಿದೆ, ಎಕರೆಗೆ ಸುಮಾರು 180 ರೂಪಾಯಿಗಳವರೆಗೂ ನಾವು ಅಲ್ಲಿ ಈಗ ತೆರಿಗೆ, ಸೆಸ್, ಇತ್ಯಾದಿಗಳನ್ನು ಕೊಡುತ್ತಿದ್ದೇವೆ. ಇಷ್ಟು ಹೆಚ್ಚಿನ ತೆರಿಗೆಯನ್ನು ಬೇರೆ ಯಾವ ಪ್ರಾಂತ್ಯದಲ್ಲೂ ಹಾಕಿರುವುದಿಲ್ಲ. ಅದರಲ್ಲೂ ರೈತನಿಗೆ ಇಷ್ಟು ಹೊರೆ ಯಾವ ದೇಶದಲ್ಲೂ ಇದ್ದಂತೆ ಕಾಣುತ್ತಿಲ್ಲ. ಅಷ್ಟಾದಾಗ್ಯೂ ನಾವು ಆ ತೆರಿಗೆಯನ್ನು ಕೊಡುವುದಕ್ಕೆ ಸಂಕೋಚಪಡುವುದಿಲ್ಲ. ಸಂತೋಷವಾಗಿ ಕೊಡುತ್ತೇವೆ. ಷುಗರ್‌ಕೇನ್ ಸೆಸ್ಸನ್ನು ಆ ಪ್ರಾಂತದ ಜನರ ಅನುಕೂಲ ಸೌಕರ್ಯಗಳಿಗಾಗಿ ಮೀಸಲಾಗಿಡಬೇಕೆಂದು ನಾನು ಒತ್ತಾಯ ಮಾಡಿದುದನ್ನು ಸರ್ಕಾರದವರು ಮನ್ನಿಸಿ ಈ ಸುಂಕದ ಹಣವನ್ನು ಯಾವ ರೀತಿ ವಿನಿಯೋಗ ಮಾಡಬೇಕೆಂಬ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಅದಕ್ಕಾಗಿ ಸರ್ಕಾರದವರನ್ನು ನಾನು ವಂದಿಸುತ್ತೇನೆ. ಆ ಸಮಿತಿಯ ಕೆಲಸ ಕೂಡಲೇ ಪ್ರಾರಂಭವಾಗುವಂತೆ ಏರ್ಪಾಡು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು, ವಿದ್ಯಾಭ್ಯಾಸದ ವಿಚಾರದಲ್ಲಿ ಹೆಚ್ಚಿಗೆ ಹೇಳದೆ ಒಂದೆರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ಇದಕ್ಕಾಗಿ ಬೇಕಾದಷ್ಟು ಖರ್ಚು ಮಾಡುತ್ತಿದ್ದಾರೆ. ಎಲ್ಲೆಲ್ಲೂ ಸ್ಕೂಲುಗಳು ಜಾಸ್ತಿಯಾಗಿವೆ. ಆದರೂ ಒಂದು ವಿಷಯವನ್ನು ಗಮನಕ್ಕೆ ತಂದುಕೊಂಡರೆ ವಿಷಾದವಾಗುತ್ತದೆ. ಉದಾಹರಣೆಯಾಗಿ ಹೇಳುವುದಾದರೆ ನಮ್ಮ ಮದ್ದೂರಿನಲ್ಲಿಯೇ ಒಂದು ಹೈಸ್ಕೂಲು ಕಟ್ಟಡ ಕಟ್ಟಿಸಿಕೊಡಬೇಕೆಂದು ಹೇಳಿ ಮಹಾ ಜನರು 30 ಸಾವಿರ ರೂಪಾಯಿ ವಸೂಲು ಮಾಡಿಕೊಟ್ಟು 3–4 ವರ್ಷಗಳಾಗಿದ್ದರೂ ಇದುವರೆಗೂ ಇನ್ನೂ ಕಟ್ಟಡ ಕಟ್ಟಿಸಿಕೊಟ್ಟಿಲ್ಲ. ಈ ವರ್ಷ 8–10 ಸಾವಿರ ರೂಪಾಯಿಗಳನ್ನು ಮಾತ್ರ ಅಂಧಾಜಪಟ್ಟಿಯಲ್ಲಿ ಒದಗಿಸಿರುವ ಹಾಗೆ ಕಾಣುತ್ತೆ. ಸಾಕಷ್ಟು ಹಣ ಒದಗಿಸದಿದ್ದರೆ ಕಟ್ಟಡದ ಕೆಲಸ ನಾಲ್ಕೈದು ವರ್ಷ ತಳ್ಳಿಹೋಗುತ್ತೆ. ಇದಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ. ಈ ವರ್ಷವಾದರೂ ಈ ಹೈಸ್ಕೂಲು ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ಮುಂದಿನವರ್ಷ ಮಿಡ್ಲ್ ಸ್ಕೂಲು ಮತ್ತು ಪ್ರೈಮರಿ ಸ್ಕೂಲುಗಳಿಗಾಗಿ ಏನೊಂದು ಹಣ ಮಂಜೂರು ಮಾಡಿಲ್ಲ. ಈಗ ತಮ್ಮ ನೀತಿಯನ್ನು ನೋಡಿದರೆ, ತಾವು qualitative expansion ಮಾಡಬೇಕೆಂದು ಹೇಳಿ quantitative expansion ಪೂರ್ತಿಯಾಗಿ ಕೈಬಿಟ್ಟಹಾಗೆಯೇ ಕಾಣುತ್ತದೆ. ಆದ್ದರಿಂದ ಮುಂದಿನ ವರ್ಷ ಈ ವಿಚಾರದಲ್ಲಿ ಏನು ಮಾಡುತ್ತೀರೆಂಬುದನ್ನು ತಿಳಿಸಿ ನನ್ನ ಅನುಮಾನವನ್ನು ನಿವಾರಣೆ ಮಾಡುತ್ತೀರೆಂದು ನಂಬಿ, ನಾನಿನ್ನು ಹೆಚ್ಚುಕಾಲ ತೆಗೆದುಕೊಳ್ಳದೆ, ಮಾನ್ಯ ಅಧ್ಯಕ್ಷರು ನಾನು ಮಾತನಾಡಲು ಇಷ್ಟೊಂದು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನರ್ಪಿಸುತ್ತೇನೆ.

Sri K. CHENGALARAYA REDDY.—Mr. Speaker, you may please give us an opportunity to reply. It is already 5-30 p.m. and even if we take an hour and a half—the minimum time required—we will be able to finish at 7 p.m. I suggest that you may give us permission straightway to proceed with our replies.

(*Many Members were on their legs to speak on the Budget*).

ಶ್ರೀ ಎ. ಜಿ. ಬಂದೀಗೌಡರು.—ಈಗ ಸರ್ಕಾರದ ಕಡೆಯಿಂದ ಮಾತನಾಡಲು ಅವಕಾಶ ಕೊಟ್ಟರೆ 1½ ಘಂಟೆ ಕಾಲ ಬೇಕಾಗುತ್ತದೆ. ಅಲ್ಲಿಗೆ 7 ಘಂಟೆ ಆಗಿ ಬಿಡುತ್ತದೆ. ಮೊನ್ನೆಯೇ ರಾಜಪ್ರಮುಖರ ಭಾಷಣದ ಸಂಬಂಧದಲ್ಲಿ ಮಂತ್ರಿಗಳು ಮಾತನಾಡಲು ಅವಕಾಶ ಕೊಟ್ಟಿದ್ದೇವೆ. ಅಲ್ಲದೆ Demands for Grants ಬಂದಾಗ ಅವರು ಮಾತನಾಡಬಹುದು.

ಒಬ್ಬ ಸದಸ್ಯರು.—ಸದಸ್ಯರಿಗೆ ಮಾತನಾಡಲು ಇನ್ನೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ನನ್ನ ಆಕ್ಷೇಪಣೆಯೇನೂ ಇಲ್ಲ. ತಾವೆಲ್ಲರೂ ಇನ್ನೂ ಹೆಚ್ಚಿಗೆ ಕಾಲ ಕುಳಿತು ಕೊಳ್ಳುವುದಕ್ಕೆ ಇಷ್ಟಪಟ್ಟರೆ ಇನ್ನೂ ಕೆಲವಾರು ಮಾತನಾಡಬಹುದು. ಡಿಮ್ಯಾಂಡ್‌ಗಳು ಚರ್ಚೆಗೆ ಬಂದಾಗ ಸಹ ಸದಸ್ಯರುಗಳು ಮಾತನಾಡಬಹುದು.

ಒಬ್ಬ ಸದಸ್ಯರು.—ಬಡ್ಜೆಟ್‌ಮೇಲೆ ಮಾತನಾಡುವಾಗ ಎಲ್ಲಾ ವಿಷಯಗಳನ್ನೂ ತಿಳಿಸಬಹುದು. ಡಿಮ್ಯಾಂಡ್‌ಗಳ ಮೇಲೆ ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಪ್ರಜಾಪ್ರಭುತ್ವ ಪದ್ಧತಿಯ ತತ್ತ್ವ ವಿಚಾರವಾಗಿ ಒಂದು ಮಾತು ಹೇಳುತ್ತೇವೆ. ಸಭೆಯಲ್ಲಿರುವ ಬೇರೆ ಬೇರೆ ಪಾರ್ಟಿಗಳವರು ತಾವು ತಾವೇ ಸೇರಿಕೊಂಡು ಬಡ್ಜೆಟ್ ಭಾಷಣವನ್ನಾಗಲೀ, ಬೇರೆ ಭಾಷಣಗಳನ್ನಾಗಲೀ ಮಾಡುವುದರಲ್ಲಿ ಒಬ್ಬರೊಡನೊಬ್ಬರು ಸಹಕರಿಸುತ್ತಾರೆ.

Sri K. CHENGALARAYA REDDY.—I leave it to the Hon'ble Chair, Sir.

ಅಧ್ಯಕ್ಷರು.—ಸಭಾ ಸದಸ್ಯರು ಇನ್ನೂ ಹೆಚ್ಚು ಕಾಲ ಕುಳಿತುಕೊಳ್ಳಬೇಕೆಂದು ಇಷ್ಟಪಟ್ಟರೆ ನನ್ನದೇನೂ ಆಕ್ಷೇಪಣೆಯಿಲ್ಲ.

ಒಬ್ಬ ಸದಸ್ಯರು.—ಏಳು ಗಂಟೆಯಮೇಲೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಮಂತ್ರಿಗಳು ಜವಾಬು ರೂಪದಲ್ಲಿ ನಾಲ್ಕಾರು ಅಂಶಗಳನ್ನು ತಿಳಿಸುವುದಕ್ಕೇ ಒಂದೂವರೆ ಗಂಟೆ ಕಾಲಬೇಕಾಗಬಹುದೆಂದು ಲೀಡರ್‌ರವರು ಹೇಳುತ್ತಿದ್ದಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಎಲ್ಲರ ಪರವಾಗಿಯೂ ಒಬ್ಬರು ಉತ್ತರ ಹೇಳಬಹುದು.

Sri K. CHENGALARAYA REDDY.—Sir, you may please allot half an hour

more to the Hon'ble Members. We will start our replies at six

ಅಧ್ಯಕ್ಷರು.—ಮಂತ್ರಿಗಳೇ ತಮ್ಮ ಭಾಷಣವನ್ನು ಕಡಿಮೆಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಆದ್ದರಿಂದ ಇನ್ನೂ ಸ್ವಲ್ಪಕಾಲ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಬಹುದು. ಜಾಗ್ರತ ಜಾಗ್ರತೆ ಸದಸ್ಯರು ಮಾತನಾಡಬಹುದು.

ಈಗ ಶ್ರೀ ಹನುಮಯ್ಯನವರು ಮಾತನಾಡಬಹುದು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಒಬ್ಬೊಬ್ಬರಿಗೂ ಇಷ್ಟುಕಾಲ ಎಂದು ನಿಗಧಿ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು.—ಹತ್ತು, ಹತ್ತು ನಿಮಿಷಗಳೆಂದು ನಿನ್ನೆ ದಿವಸವೇ ಗೊತ್ತುಮಾಡಿದೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ—ನಿಮ್ನ ಪಂಗಡ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಹೆಚ್ಚಿನ ದಕ್ಷತೆಯಿಂದ ನಮ್ಮ ಮುಂದಿಟ್ಟಿರುವ ಈ ಆಯವ್ಯಯದ ಪಟ್ಟಿಯನ್ನು ನಾನು ಸ್ವಾಗತಿಸುತ್ತೇನೆ. ಹಿಂದೆ ನಮ್ಮ ದೇಶದಲ್ಲಿ ಭೂಗಂದಾಯವೇ ದೇಶದ ಆದಾಯದಲ್ಲಿ ಒಂದು ಮುಖ್ಯ ಭಾಗವಾಗಿತ್ತು. ಇದೆಲ್ಲಾ ಸೇರಿ ದೇಶದ ಆದಾಯವೆಲ್ಲಾ ಒಟ್ಟು 3 ಕೋಟಿ ರೂಪಾಯಿಗಳಾಗುತ್ತಿತ್ತು. ಈಗ ಭೂಗಂದಾಯಕ್ಕೆ ಒಂದಕ್ಕೆ ನಾಲ್ಕರಷ್ಟು ಇತರ ಇಲಾಖೆಗಳಿಂದ ಹುಟ್ಟುವಳಿಯಾಗುತ್ತಿದೆ. ಜಮೀನು ವಿಸ್ತೀರ್ಣ ನೋಡಿದರೆ ಹಿಂದೆ ಎಷ್ಟಿತ್ತೋ ಈಗಲೂ ಅಷ್ಟೇ ಇದೆ. ಜನಸಂಖ್ಯೆ ಮಾತ್ರ ಜಾಸ್ತಿಯಾಗುತ್ತಿದೆ. ಹೀಗೆ ಜಮೀನು ವ್ಯವಸಾಯವೂ ಜಾಸ್ತಿಯಾಗದಿರುವುದಕ್ಕೆ ಕಾರಣ ಜನರಲ್ಲಿ ವ್ಯವಸಾಯದ ವಿಷಯದಲ್ಲಿ ಹೆಚ್ಚಿನ ಆಸಕ್ತಿಯಿಲ್ಲದಿರುವುದು ಹಿಂದಿನ ಕಾಲದ ವ್ಯವಸಾಯಕ್ಕೂ ಈಗಿನ ಕಾಲದ ವ್ಯವಸಾಯಕ್ಕೂ ವ್ಯತ್ಯಾಸವಿದೆ. ಹಳ್ಳಿಗಳಲ್ಲಿ ಈ ಆಧುನಿಕ ಕಾಲದ ವ್ಯವಸಾಯದ ಮುಟ್ಟುಗಳನ್ನು ಉಪಯೋಗಿಸಿ ಬೆಳೆ ಮಾಡುವವರಿಲ್ಲ. ಇನ್ನೊಂದು ಕಾರಣವೇನೆಂದರೆ ಹಳ್ಳಿಯಲ್ಲಿದ್ದವರು ಪಟ್ಟಣಕ್ಕೆ ಬರುತ್ತಿರುವುದರಿಂದ ವ್ಯವಸಾಯ ಕೆಟ್ಟುಹೋಗುತ್ತಿದೆ. ಒಂದುಕಡೆ ಹೆಚ್ಚುಹೆಚ್ಚು ಜಮೀನಿಟ್ಟುಕೊಂಡಿರುವವರು ಪಟ್ಟಣಗಳಿಗೆ ಬಂದು ದೊಡ್ಡದೊಡ್ಡ ಸಿನಿಮಾ ಡೈರೆಕ್ಟರುಗಳೋ, ಹೋಟಲ್ ಪ್ರೊಪ್ರೈಟರುಗಳೋ ಆಗುವುದಕ್ಕೆ ಪ್ರಯತ್ನ ಪಡುತ್ತಾರೆ. ಜಮೀನುಗಳಿಲ್ಲದ ಬಡವರು ಪಟ್ಟಣಗಳಲ್ಲಿ ಬೇಕಾದಷ್ಟು ಕೂಲಿ ಸಿಕ್ಕಿ ಸುಖವಾಗಿ ಜೀವನನಡೆಯುತ್ತದೆಂದು ಪಟ್ಟಣದ ಕಡೆಗೆ ಬಂದರು. ಹೀಗಾಗಿ ಹಳ್ಳಿಗಳಲ್ಲಿ ವ್ಯವಸಾಯ ಹಾಳು ಬಿತ್ತು. ಜನರಿಗೆ ಮುಖ್ಯವಾಗಿ ಬೇಕಾದ್ದು ಅನ್ನ, ಬಟ್ಟೆ. ನಾವು ಇಷ್ಟೊಂದು ಜಮೀನನ್ನಿಟ್ಟುಕೊಂಡು ಅನ್ನಕ್ಕಾಗಿ ಬೇರೆ ಕಡೆಗೆ ಕೈಯೊಡ್ಡುವುದು ಸರಿಯಲ್ಲವೆಂದು ಹೇಳಬೇಕಾಗಿದೆ. ಭಾರತದೇಶ ವ್ಯವಸಾಯದ ದೇಶ. ಪಾಶ್ಚಾತ್ಯ ದೇಶಗಳಾದರೋ ಕೈಗಾರಿಕಾ ದೇಶ. ಶೇಕಡ 75 ರಷ್ಟು ವ್ಯವಸಾಯ ದೇಶವಾಗಿರುವ ನಮ್ಮ ದೇಶದಲ್ಲಿ ಆಹಾರವನ್ನು ಪರದೇಶಗಳಿಂದ ತರಿಸಿಕೊಳ್ಳುವುದು ನಾಚಿಕೆಗೇಡು. ದೇಶದ ಜನರು ವ್ಯವಸಾಯದ ವಿಷಯದಲ್ಲೇಕೆ ಹೆಚ್ಚು ಆಸಕ್ತರಾಗಿಲ್ಲವೆಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಒಂದು ಕಾರಣವನ್ನು ಹೇಳಬಹುದು, ಇಂದು ಜಮೀನಿರತಕ್ಕವರ ಅಧೀನದಲ್ಲಿ ಸಾಕಷ್ಟು ಆಳುಗಳಿಲ್ಲ, ಕೆಲಸಮಾಡುತ್ತೇವೆಂದು ಹೇಳತಕ್ಕ ಆಳುಗಳಿಗೆ ಜಮೀನಿಲ್ಲ, ದೇಶದಲ್ಲಿ 25 ಲಕ್ಷ ಎಕರೆಗಳಷ್ಟು ಪಾಳು ಜಮೀನು ಇದೆ. ಅನೇಕರು ಜಮೀನುಗಳು ಬೇಕೆಂದು ಅರ್ಜಿಗಳನ್ನು ಹಾಕುತ್ತಿದ್ದಾರೆ. ಶೇಕದಾರರು, ಅಮಲ್ದಾರರು, ಸಬ್‌ಡಿವಿಜನ್ ಆಫೀಸರುಗಳಿಗೆ ಅರ್ಜಿ ಹಾಕಿಕೊಂಡರೆ ಅವರು, ಗ್ರಾಮಸ್ಥರನ್ನು ಕೇಳಿ ಎನ್ನುತ್ತಾರೆ. ಗ್ರಾಮಸ್ಥರನ್ನು ಕೇಳುವುದಕ್ಕೆ ಹೋದರೆ ಗೋಮಾಳ ಜಮೀನು ಮುಂತಾಗಿ ನಾನಾ ಕಾರಣಗಳ ಮೇಲೆ ಜಮೀನು ಕೊಡುವುದಕ್ಕೆ ಅಡ್ಡಿ ಪಡಿಸುತ್ತಾರೆ. ದೊಡ್ಡ ದೊಡ್ಡ ಜಮೀನ್ದಾರರು ಕೆಲಸ ಮಾಡುವುದಿಲ್ಲ. ಆದ್ದರಿಂದ ಸರ್ಕಾರದವರು ಹಳ್ಳಿಗಾಡಿನಲ್ಲಿರತಕ್ಕ ಈ ವ್ಯವಸಾಯ ಕೂಲಿಗಾರರಿಗೆ ಹೆಚ್ಚಿನ ಅವಕಾಶ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ನಮ್ಮ ಮೈಸೂರು ದೇಶದಲ್ಲಿರತಕ್ಕ 15 ಲಕ್ಷ ಪಟ್ಟಣದ ಜನರನ್ನು ಕಾಪಾಡುವುದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ! ಇನ್ನೂ ಹತ್ತು ವರ್ಷಗಳಾದರೂ ಇದೇ ರೀತಿ ನೀವು ಖರ್ಚುಮಾಡುತ್ತಿರುತ್ತೀರಿ. ರಾಗಿ, ಜೋಳ ಮುಂತಾದ ದ[illegible]ಗಳನ್ನು ಯಾವ ಯಂತ್ರದಿಂದಲೂ ನೀವು ತಯಾರು ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಭೂಮಿಯನ್ನುತ್ತು ಮನುಷ್ಯರೇ ಬೇಸಾಯ ಮಾಡಬೇಕು. ಆದ್ದರಿಂದ ಇಂಥ ವ್ಯವಸಾಯ ಮಾಡುವ ಕೂಲಿಗಾರರಿಗೆ ಜಮೀನುಗಳನ್ನು ಕೊಟ್ಟ ಹೊರತು ನಮ್ಮ ದೇಶದಲ್ಲಿ ಆಹಾರ ಸ್ವಪರಿಪೂರ್ಣತೆ ಹೊಂದುವುದಕ್ಕೆ ಸಾಧ್ಯವಾಗಲಾರದು. ಅದು ಬಿಟ್ಟು ನೀವು ಸುಮ್ಮನೆ ವ್ಯವಸಾಯಕ್ಕೆ ಎಷ್ಟೇ ಖರ್ಚು ಮಾಡುತ್ತಿದ್ದೇವೆಂದು ಹೇಳಿದರೂ 1951ನೆಯ ಇಸವಿಯೊಳಗೆ ನಮಗೆ ಸ್ವಪರಿಪೂರ್ಣತೆ ಲಭಿಸುವುದಿಲ್ಲ.

ಪಾನ ನಿರೋಧದ ವಿಚಾರದಲ್ಲಿ ಸರ್ಕಾರದವರು ಧೈರ್ಯವಾಗಿ ಒಂದು ಹೆಜ್ಜೆಯಿಟ್ಟು ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಜಾರಿಗೆ ತಂದರು. ಈಗ ಉಳಿದ ಡಿಸ್ಟ್ರಿಕ್ಟ್‌ಗಳಲ್ಲಿ ಜಾರಿಗೆ ಕೊಡದೆ ತಟಸ್ಥರಾಗಿದ್ದಾರೆ. ಈ ವಿಷಯದಲ್ಲಿ ಮುಖ್ಯವಾಗಿ ಸರ್ಕಾರದವರು ಧೈರ್ಯವನ್ನು ತಾಳಬೇಕು. ಒಮ್ಮೆ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಬಾರದು, ಏಕೆಂದರೆ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಸತ್ಯ ಅಹಿಂಸೆಗಾಗಿ ಯಾವತ್ತಿನಿಂದಲೂ ಬದ್ಧ ಕಂಕಣರಾಗಿ ದುಡಿದುಕೊಂಡು ಬಂದಿದ್ದವರು ಈಗ ಅದೇ ತತ್ವಗಳಿಗೆ ತಿಲಾಂಜಲಿ ಹಾಕಕೂಡದು. ನಾವೀಗ ದೇಶದ ಸ್ವಾತಂತ್ರ್ಯವನ್ನು ಗಳಿಸಿದ್ದರೂ ಯಾವ ರಕ್ತಪಾತಕ್ಕೂ ಎಡೆ ಕೊಟ್ಟು ಯುದ್ಧ ಮಾಡಿ ಗಳಿಸಲಿಲ್ಲ. ಕೇವಲ ಅಹಿಂಸಾ ಮಾರ್ಗದಲ್ಲಿ ಹೋಗಿ ಮಹಾತ್ಮಾ ಗಾಂಧಿಯವರ ರಚನಾತ್ಮಕ ತತ್ವಗಳನ್ನು ಅನುಸರಿಸುತ್ತಾ ಬಂದು ಈ ಸ್ವಾತಂತ್ರ್ಯ ಸಂಪಾದಿಸಿದ್ದೇವೆ. ಅಂಥಾದ್ದರಲ್ಲಿ ಈಗ ಅದೇ ರಚನಾತ್ಮಕ ತತ್ವಗಳನ್ನೆಲ್ಲಾ ಬದಿಗೊತ್ತುವುದು ಸಾಧುವಲ್ಲ, ಆದ್ದರಿಂದ ಪಾನನಿರೋಧ ನೀತಿಯನ್ನು ಧೈರ್ಯವಾಗಿ ಇತರ ಡಿಸ್ಟ್ರಿಕ್ಟುಗಳಿಗೂ ಮುಂದುವರಿಸಬೇಕೆಂದು ನನ್ನ ಸೂಚನೆ. ಈಗಾಗಲೇ ಇತರೇ ಡಿಸ್ಟ್ರಿಕ್ಟ್‌ಗಳಲ್ಲಿ ಜಾರಿಗೆ ತಂದವರು ನಮ್ಮ ಡಿಸ್ಟ್ರಿಕ್‌ಗಳಲ್ಲಿ ತರದಿರುವುದಕ್ಕೆ ನಾವೇನು ದುರದೃಷ್ಟರೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಸರ್ಕಾರದವರಿಗೆ ಬಹುಶಃ ಒಂದು ಭಾವನೆಯಿರಬಹುದು. ಇದರಿಂದ ಎರಡು ಕೋಟಿ ರೂಪಾಯಿಗಳು ಖೋತಾಬೀಳುತ್ತದೆಂದೂ ಸರ್ಕಾರದವರು ಹೇಳಬಹುದು. ಇದಕ್ಕೆ ನಾನೊಂದು ಸಲಹೆ ಕೊಡುತ್ತೇನೆ. ಹೋಟಲುಗಳು, ಸಿನೀಮಾಗಳು, ಬಸ್ಸುಗಳು ಮುಂತಾದುವುಗಳಿಗೆ ತೆರಿಗೆ ಹೆಚ್ಚಿಸಬಹುದು. ಇವುಗಳಿಂದ ಹೆಚ್ಚಿನ ಸಂಪಾದನೆ ಮಾಡಲು ಅವಕಾಶವಿದೆ. ಅದಕ್ಕೆ ಸರ್ಕಾರದವರು ಅವಕಾಶ ಕೊಡಕೂಡದು. ಏಕೆಂದರೆ ದೇಶದಲ್ಲಿರುವ ಜನರಿಗೆ ಹೆಚ್ಚಿನ ಅಂತರವಿರಕೂಡದು. ಇವುಗಳನ್ನಿಟ್ಟಿರುವವರು ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿ ಒಂದು ಕಡೆ

ಶೇಖರಿಸುತ್ತಾರೆ. ಹಾಗೆ ಮಾಡದಂತೆಯೂ, ಎಲ್ಲಾ ಕಡೆಯೂ ಆ ದುಡ್ಡು ಹಂಚಿಕೆಯಾಗುವಂತೆಯೂ ಏರ್ಪಡಿಸಬೇಕು. ಹೋಟಲು, ಸಿನೀಮಾ ಮತ್ತು ಬಸ್ಸುಗಳಿಗೆ ಶೇರಿಗೆ ಹೆಚ್ಚಿಸಿದರೆ ಹೆಚ್ಚಾಗಿ ಹಣವೂ ಬರುತ್ತದೆ. ಆಗ ನಾಲ್ಕು ಜಿಲ್ಲೆಗಳಲ್ಲಿ ಪಾನ ನಿರೋಧ ಮಾಡುವುದರಿಂದ ಆಗುವ ನಷ್ಟವೂ ಭರ್ತಿಯಾಗುತ್ತದೆ. ಈಗ ಪಾನ ನಿರೋಧ ಮಾಡಿರುವ 5 ಜಿಲ್ಲೆಗಳಲ್ಲಿ ಬೇಕಾದಷ್ಟು ಈಚಲುವನ ಮತ್ತು ವ್ಯವಸಾಯಕ್ಕೆ ಯೋಗ್ಯವಾದ ಜಮೀನೂ ಇದೆ. ಇದಕ್ಕಾಗಿಯೇ ಒಂದು ಸಮಿತಿಯಿದ್ದರೂ, ಈ ಪಾನ ನಿರೋಧ ನೀತಿಯನ್ನು ಅನುಸರಿಸಿ ಬಹಳ ದಿವಸವಾದರೂ, ಇದುವರೆಗೆ ಆ ಜಮೀನನ್ನು ವ್ಯವಸಾಯಕ್ಕೆ ಏಕೆ ಕೊಟ್ಟಿಲ್ಲವೋ ತಿಳಿಯದು. ಆ ವಿಚಾರವನ್ನು ಇನ್ನೂ ನಿಧಾನವಾಗಿ ಯೋಚನೆ ಮಾಡುತ್ತಿದ್ದಾರೆ. ಆಯಾಯಾ ಜಿಲ್ಲೆಯವರಿಗೆ ಅಲ್ಲಲ್ಲಿರುವ ಜಮೀನುಗಳನ್ನು ಇದುವರೆಗೆ ಏಕೆ ಕೊಡಬಾರದಾಗಿತ್ತು! ಈ ವಿಚಾರದಲ್ಲಿ ಈ ದಿವಸ ಪ್ರಗತಿ ಮಾರ್ಗದಲ್ಲಿ ನಾವು ಹೋಗಬೇಕಾಗಿದೆ. ಹಿಂದಿನ ಮಂತ್ರಿಗಳು ರೈಲಿನಲ್ಲಿ ಡೆಲ್ಲಿಗೆ ಪ್ರಯಾಣ ಮಾಡುತ್ತಿದ್ದರು. ಈಗ ಬಹು ಜಾಗ್ರತೆಯಾಗಿ ಹೋಗಬಹುದೆಂದು ವಿಮಾನದಲ್ಲಿ ಪ್ರಯಾಣ ಮಾಡುತ್ತಾರೆ. ಅದನ್ನು ಒಪ್ಪುತ್ತೇನೆ. ಈಗ ಭಾರತವು ಸ್ವತಂತ್ರವಾಗಿದೆ. ಇತರ ದೇಶಗಳಂತೆ ನಾವೂ ಮುಂದುವರಿಯಬೇಕು. ಅದ್ದರಿಂದ ಪಾನ ನಿರೋಧದ ನೀತಿಯನ್ನು ಯಾವ ಜಿಲ್ಲೆಯಲ್ಲಿ ಜಾರಿಗೆ ತಂದಿದೆಯೋ ಅಲ್ಲಿರುವ ಜಮೀನನ್ನು ತಕ್ಷಣ ವ್ಯವಸಾಯಕ್ಕೆ ಕೊಡುವುದರಿಂದ ಖಂಡಿತ ಹೆಚ್ಚು ವ್ಯವಸಾಯವಾಗುತ್ತದೆ, ಬೇಕಾದಷ್ಟು ಜನರು ವ್ಯವಸಾಯ ಮಾಡುವುದಕ್ಕೆ ಕಾತುರಪಡುತ್ತಿದ್ದಾರೆ. ಹೀಗಿರುವಾಗ ಸರ್ಕಾರದವರ ಸಮ್ಮನೆ ಕುಳಿತಿರುವುದೇಕೆ! ಕಾರಣ ಹೇಳಿದರೆ ಬೇಕಾದ ಸಲಹೆ ಕೊಡಬಹುದು. ಹಾಗಿಲ್ಲದೆ ಪಾನ ನಿರೋಧವನ್ನು ಜಾರಿಗೆ ತಂದು ಈಚಲುವನಗಳಿರುವ ಜಮೀನುಗಳನ್ನು ಸಾಗುವಳಿಗೆ ಕೊಡದಿದ್ದರೆ ಹಳ್ಳಿಗಳ ಜನರಿಗೆ, ಕೇಳಿದಾಗ ನಾವೇನು ಉತ್ತರ ಹೇಳಬೇಕು! ಇದರಿಂದ ತೊಂದರೆ. ನಮ್ಮ ದೇಶ ಆಹಾರದ ವಿಚಾರದಲ್ಲಿ ಸ್ವಪರಿಪೂರ್ಣವಾಗಬೇಕೆಂದು ಹೇಳುವುದರಿಂದ ಇದನ್ನು ಮನಗಂಡು ಜಾಗ್ರತೆಯಾಗಿ ಈಚಲು ವನಗಳಿರುವ ಜಮೀನುಗಳನ್ನು ಸಾಗಿಗೆ ಕೊಟ್ಟು ತನ್ಮೂಲಕ ಹೆಚ್ಚು ಆಹಾರ ಬೆಳೆಯುವಂತೆ ಮಾಡುವುದು ಒಳ್ಳೆಯದೆಂದು ಮನವಿಮಾಡುತ್ತೇನೆ.

ಈಗ ನಿಮ್ಮ ವರ್ಗದವರಿಗಾಗಿ 19 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದಕ್ಕಾಗಿ ವಂದಿಸುತ್ತೇನೆ. ಆದರೆ ಅದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ಎಂದು ಕೇಳಬೇಕಾಗಿದೆ. ಏಕೆಂದರೆ ಯಾವುದಾದರೂ ಒಂದು ನೀತಿಯ ಮೇಲೆ ಯಾವ ಕೆಲಸವೇ ಆಗಲಿ ನಡೆಯಬೇಕು. ಇಷ್ಟು ವರ್ಷಗಳಿಂದ ಹರಿಜನರಿಗೆ ಮನೆ ಸೌಕರ್ಯಮಾಡಿಕೊಡುವುದಾಗಿ ಹೇಳುತ್ತಿದ್ದೀರಿ. ಇಡೀ ಭರತ ಖಂಡದಲ್ಲೇ ಈ ಮನೆಗಳ ಸಮಸ್ಯೆ ಬಹುವಾಗಿದೆ. ಕೂಲಿಗಾರರಿಗೂ ಸಹ ಮನೆಗಳ ತೊಂದರೆಯಿದೆ. ಹೀಗಿರುವಾಗ ಶ್ರೀ ಗುಂಡಪ್ಪಗೌಡರು ಮನೆಗಳಿಗೆ ಬದಲಾಗಿ ಎತ್ತುಗಳನ್ನು ಕೊಡಿಸಬೇಕೆಂದು ಹೇಳಿದರು. ಆದರೆ ಹಿಂದೆ ಅವರೇ ಮಂತ್ರಿಗಳಾಗಿದ್ದಾಗ ಹರಿಜನರಿಗೆ ಮನೆ ಕಟ್ಟಿಸಿಕೊಡಬೇಕು, ಅವರಿಗೆ ತೊಂದರೆಯಿದೆ ಎಂದು ಹೇಳಿದ್ದರು. ಹಾಗೆ ಹೇಳಿದ್ದವರು, ಈಗ ಎತ್ತುಗಳನ್ನು ಕೊಡಬೇಕೆಂದು ಯಾವ ಉದ್ದೇಶದಿಂದ ಹೇಳಿದರೋ ಗೊತ್ತಿಲ್ಲ.

ಕೊನೆಯದಾಗಿ ವಿದ್ಯಾಭ್ಯಾಸದ ವಿಷಯದಲ್ಲಿ ಸುಮಾರು 8 ಕೋಟಿ ರೂಪಾಯಿಗಳನ್ನು ಸರ್ಕಾರದವರು ವೆಚ್ಚ ಮಾಡುತ್ತಿದ್ದಾರೆ. ಆದರೂ ನಿಮ್ಮ ವರ್ಗದವರಿಗೆ ಹೆಚ್ಚಿನ ವಿದ್ಯಾಭ್ಯಾಸ ಸಿಕ್ಕುತ್ತಿಲ್ಲ. ಅದಕ್ಕೆ ಹೆಚ್ಚು ಹಣ ಒದಗಿಸಿಲ್ಲ. ಕಾಲೇಜು ವಿದ್ಯಾರ್ಥಿಗಳ ಸ್ಕಾಲರ್‌ಷಿಪ್‌ಗಾಗಿ ಸುಮಾರು 50 ಸಾವಿರ ರೂಪಾಯಿಗಳನ್ನು ವಾಸರಾಗಿಟ್ಟಿದ್ದಾರೆ. ವರ್ಷಕ್ಕೆ 120 ರಿಂದ 150ರ ವರೆಗೆ ವಿದ್ಯಾರ್ಥಿ ವೇತನ ಮಾತ್ರ ಕೊಡುತ್ತಾರೆ, ಲಾ ಕಾಲೇಜಿನಲ್ಲಿ ಓದುವವರಿಗೆ ವಿದ್ಯಾರ್ಥಿ ವೇತನ ಕೊಡುತ್ತಿಲ್ಲ. ನಿಮ್ಮ ವರ್ಗದವರು ಯಾವ ವಿಧದಲ್ಲೂ ಇತರರಿಗಿಂತ ಕಡಮೆಯಿಲ್ಲ. ಇಡೀ ಭರತ ಖಂಡದಲ್ಲೇ ಒಳ್ಳೆಯ ಲಾ ಗ್ರಾಜುಯೇಟಾಗಿ, ಬುದ್ಧಿವಂತರಾಗಿ ಭಾರತದ ರಾಜ್ಯಾಂಗವನ್ನು ರಚಿಸಿದಂಥಾ ಡಾ! ಅಂಬೇಡ್ಕರ್ ಅಂಥವರು ನಮ್ಮ ಜನಾಂಗದಲ್ಲಿದ್ದಾರೆಂದು ಹೆಮ್ಮೆಯಿಂದ ಹೇಳಬೇಕಾಗಿದೆ. ಸರ್ಕಾರದವರು ಹೆಚ್ಚು ಮಂದಿ ಗ್ರಾಜುಯೇಟುಗಳಾಗುವಂತೆ ನಿಮ್ಮ ವರ್ಗದವರಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಎ. ಜಿ. ಬಂದೀಗೌಡರು (ಮಂಡ್ಯ ಜಿಲ್ಲೆ).—ಬಡ್ಜೆಟ್ಟಿನ ಮೇಲೆ ಭಾಷಣ ಮಾಡುವ ಸುಯೋಗವು ಇದೇ ಮೊದಲನೆಯದಾಗಿ ನನಗೆ ದೊರೆತಿದೆ. ಇಂಥ ಸುಯೋಗವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕಾದರೆ ಬಹುಶಃ ಒಂದು ಗಂಟೆಯಾದರೂ ಬೇಕೆಂದು ಭಾವಿಸಿದ್ದೆ. ಆದರೆ ಈಗ 15 ನಿಮಿಷಗಳು ಮಾತ್ರ ಇರುವುದರಿಂದ ಈ ಸುಯೋಗಕ್ಕೆ ಅವಕಾಶವಿಲ್ಲದೆ ಕೆಲವು ವಿಷಯಗಳನ್ನು ಮಾತ್ರ ಸಲಹೆಯರೂಪವಾಗಿ ಕೊಡಲು ನಿಂತಿದ್ದೇನೆ.

ಈಗ ನಮ್ಮ ಬಡ್ಜೆಟ್ ಯಾವ ಸ್ಥಿತಿಯಲ್ಲಿ ನಮಗೆ ಬಂದಿದೆ, ಎಂತಹ ಚಕ್ರಕಟ್ಟಿನಲ್ಲಿ ಬಂದಿದೆ, ಎಂದು ಯೋಚನೆ ಮಾಡುವುದಾದರೆ ನಾಲ್ಕಾರು ವಿಷಯಗಳು ಕಂಡು ಬರುತ್ತವೆ. ಒಂದು ಯುದ್ಧದಿಂದ ಉಂಟಾಗಿರುವ ಪರಿಣಾಮಗಳು, ಎರಡನೆಯದು, ಡೀವ್ಯಾಲ್ಯುಯೇಷನ್‌ನಿಂದ ಆಗಿರುವ ಕಷ್ಟ, ಮೂರನೆಯದು, ಆಹಾರಾಭಾವದಿಂದುಂಟಾಗಿರುವ ತೊಂದರೆ, ನಾಲ್ಕನೆಯದು, ನಮಗೂ ಮತ್ತು ಕೇಂದ್ರ ಸರ್ಕಾರದವರಿಗೂ ಆಗಿರುವ ಹಣಕಾಸಿನ ವಿಲೀನೀಕರಣ, ಅಂದರೆ ಇಂಟಗ್ರೇಷನ್. ಈ 4 ಕಷ್ಟಗಳಿಗೆ ಸಿಕ್ಕಿ ಅವುಗಳ ಚಕ್ರಕಟ್ಟಿನಲ್ಲಿ ಈ ಬಡ್ಜೆಟ್ ಬಂದಿದೆ. ಆದ್ದರಿಂದ ಇದು ಕರಾರುವಾಕ್ಕಾದ ರೀತಿಯಲ್ಲಿ ಬಂದಿರುವ ಸ್ವಾಭಾವಿಕವಾದ ಬಡ್ಜೆಟ್ ಅಲ್ಲ, ಚಕ್ರಕಟ್ಟಿನಲ್ಲಿ ಸಿಕ್ಕಿ ಕಷ್ಟದಿಂದ ಬಂದಿದೆ. ಅಂಥ ಕಷ್ಟದಲ್ಲಿ ಈ ರೀತಿ ಸರ್ಕಾರದವರು ಮಾಡಿರುವ ಬಡ್ಜೆಟ್ಟನ್ನು ನಾವು ಸ್ವಾಗತಿಸದೆ ಯತ್ನವಿಲ್ಲ. ಇದನ್ನು ಟೀಕೆ ಮಾಡಬೇಕೆಂದು ಪ್ರಯತ್ನ ಪಟ್ಟರೆ ಬೇಕಾದಷ್ಟು ಕಾರಣ ಕೊಟ್ಟರೂ ಕೊಡಬಹುದು. ಆದರೆ ಈ ಚಕ್ರಕಟ್ಟನ್ನು ಮನಸ್ಸಿನಲ್ಲಿಟ್ಟುಕೊಂಡರೆ ಖಂಡಿತ ಟೀಕೆಮಾಡಲು ಕಾರಣವಿಲ್ಲ. ಕಷ್ಟದಲ್ಲಿ ಈ ರೀತಿಯ ಒಂದು ಚಕ್ರಕಟ್ಟಿಗೆ ಸಿಕ್ಕಿ ತಯಾರಾಗಿರುವ ಈ ಬಡ್ಜೆಟ್ಟನ್ನು ಸ್ವಾಗತಿಸಿ ಉಪಯುಕ್ತ ಸಲಹೆ ಕೊಡುವುದು ಸಾಧುವಾಗಿದೆ.

ಈಗ ಸರ್ಪ್ಲಸ್ ಬಡ್ಜೆಟ್ ಕೊಟ್ಟಿದ್ದಾರೆ. ಇದನ್ನು ಸಮರ್ಥಿಸುತ್ತಾ ಶ್ರೀ ವೀರಣ್ಣಗೌಡರು ಕೆಲವು ಫಂಡಿನಿಂದ ಹಣ ತೆಗೆದುಕೊಂಡಿರುವುದು ತೃಪ್ತಿಕರವಾಗಿದೆ ಎಂದು ಕಾರಣ ಕೊಟ್ಟು ಹೇಳಿದರು. ನನಗೆ ಒಂದು ಅನುಮಾನ ಬರುತ್ತಿದೆ. ಯಾವ್ಯಾವ ಫಂಡಿನಿಂದ ಹಣ ತೆಗೆದುಕೊಳ್ಳುತ್ತೇವೆಯೋ, ಹಾಗೆ ತೆಗೆದುಕೊಳ್ಳುವಾಗ ಯಾವ ಉದ್ದೇಶಕ್ಕಾಗಿ ಆ ಹಣ ಆ ಫಂಡಿನಲ್ಲಿತ್ತೋ, ಈಗ ಅದನ್ನು ತೆಗೆದುಕೊಳ್ಳುವುದರಿಂದ ಆ ಉದ್ದೇಶ ನೆರವೇರುತ್ತದೆಯೋ ಅಥವಾ ಅದಕ್ಕೆ ಭಂಗ

ಬರುತ್ತದೆಯೋ ಮತ್ತು ಆ ಉದ್ದೇಶಕ್ಕಾಗಿಯೇ ಆ ಹಣವನ್ನು ತೆಗೆದುಕೊಂಡು ಪ್ರಸಕ್ತ ಸಾಲಿನಲ್ಲಿ ಉಪಯೋಗಿಸುತ್ತೇವೆಯೋ ಎಂಬ ಸಾಧಾರಣವಾದ ಶಂಕೆ ಬರುತ್ತದೆ. ಆ ರೀತಿಯಾಗಿ ಆ ಉದ್ದೇಶಕ್ಕಾಗಿಯೇ ಆ ಹಣವನ್ನು ಉಪಯೋಗಿಸಿದರೆ 87 ಲಕ್ಷ ರೂಪಾಯಿಗಳೂ ಸರಿಯಾಗಿ ವಿನಿಯೋಗವಾಗಿವೆಯೆಂದು ಹೇಳಬಹುದು. ಫಂಡಿನಿಂದ ತೆಗೆದುಕೊಳ್ಳಲು ಅವಕಾಶವಿದೆ, ತೆಗೆದುಕೊಂಡಿದ್ದಾರೆ, ಹಾಗೆ ತೆಗೆದುಕೊಂಡರೆ ಲೋಪವಿಲ್ಲ ಎಂದು ಹೇಳಬಹುದು. ಹಾಗಿಲ್ಲವೆ ಉದ್ದೇಶಕ್ಕೆ ಲೋಪ ಬಂದು ಪುನಃ ಆ ಫಂಡಿಗೆ ಹಣ ಹಾಕಿ ಬೆಳೆಸದೆ ಇದ್ದರೆ ಲೋಪವಾಗುತ್ತದೆ. ಮತ್ತು ತೊಂದರೆ ಯಾಗುತ್ತದೆ, ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಅನಿವಾರ್ಯದಿಂದ ಈ ಸಾರಿ ತೆಗೆದುಕೊಂಡರೂ ಮುಂದೆ ತೆಗೆದುಕೊಳ್ಳದೇ ಇರಲಿ ಎಂದು ಹೇಳಬೇಕಾಗುತ್ತದೆ.

ಎರಡನೆಯದಾಗಿ, 87 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಖರ್ಚುಗಳಿಗೆ ಹಾಕುವುದರಿಂದ ನಮಗೆ 3 ಲಕ್ಷ 6 ಸಾವಿರ ರೂಪಾಯಿಗಳು ಉಳಿದಿವೆ ಎಂದು ನಮ್ಮ ಅರ್ಥಿಕಸಚಿವರು ಹೇಳಿದ್ದಾರೆ. ಆದರೆ ಈ ಬಡ್ಜೆಟ್ ಮೆಮೋರ್‍ಯಾಂಡಮ್‌ನಲ್ಲಿರುವ ಒಂದು ವಾಕ್ಯವನ್ನು ಅರ್ಥಿಕ ಸಚಿವರು ನೋಟ್‌ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಅದು 9ನೆಯ ಪುಟದಲ್ಲಿದೆ.

ಬಡ್ಜೆಟ್ ಮೆಮೋರ್‍ಯಾಂಡಮಿನ 9ನೆಯ ಪುಟದಲ್ಲಿ:

"Out of the gross expenditure it is proposed to meet Rs. 2·95 lakhs from Irrigation Development Fund, Rs. 50·57 lakhs from Road Fund, Rs. 30·15 lakhs from Rural Development Fund and Rs. 4·18 lakhs from Silk Development Fund."

ಎಂದು ಹೇಳಿದ್ದಾರೆ. ಆದರೆ ಅದೇ ಪುಟದಲ್ಲಿ ರೋಡ್ ಫಂಡ್ ವಿಷಯದಲ್ಲಿ.

"It may therefore be seen that no amount is being drawn from this Fund to balance the Budget."

ಎಂದು ಹೇಳಿದೆ. ಇದಕ್ಕೆ ಅರ್ಥವಿವರಣೆ ಬೇಕಾಗಿದೆ.

ಕೈಗಾರಿಕೋದ್ಯಮಗಳಿಗೆ ಸಾಲವನ್ನು ಕೊಡತಕ್ಕ ಪದ್ಧತಿಯಲ್ಲಿ ವ್ಯವಸ್ಥೆಯಲ್ಲಿ ಸರ್ಕಾರದವರು ಅನುಸರಿಸತಕ್ಕ ನೀತಿಯ ವಿಚಾರದಲ್ಲಿ ಒಂದು ಸಲಹೆಯನ್ನು ಕೊಡಲು ಅಪೇಕ್ಷಿಸುತ್ತೇನೆ. ಇದೇ ಮೆಮೋರ್‍ಯಾಂಡಮಿನ 43ನೆಯ ಪುಟದ ಕೊನೆಯಲ್ಲಿ ಕೆಲವು ಕೈಗಾರಿಕೆಗಳನ್ನು ತೋರಿಸಿದ್ದಾರೆ. ಅವುಗಳಿಗೆ 1,06,47,365 ರೂಪಾಯಿಗಳನ್ನು ಕೊಟ್ಟಿರುವಂತೆ ಗೊತ್ತಾಗುತ್ತದೆ. ಈ ಮೊಬಲಗಿನ ಮೇಲೆ 3,43,342 ರೂಪಾಯಿ ಡಿವಿಡೆಂಡ್ ರೂಪದಲ್ಲಿ ಬಂದಿದೆ. ಒಟ್ಟು 24 ಕೈಗಾರಿಕೆಗಳಿಗೆ ಹಣ ಕೊಟ್ಟಿದ್ದಾರೆ. ಇವುಗಳಲ್ಲಿ ಸಕ್ಕರೆ ಕಾರ್ಖಾನೆಗೆ ಕೊಟ್ಟಿರುವುದು 12 ಲಕ್ಷ ರೂಪಾಯಿ. ಅದರಿಂದ ಡಿವಿಡೆಂಡ್ ಬಂದಿರುವುದು 2,40,000 ರೂಪಾಯಿ. ಬಾಕಿ ಕೈಗಾರಿಕೆಗಳಿಂದ ಮೂರು ಸಾವಿರ ರೂಪಾಯಿ ಮಾತ್ರ ಡಿವಿಡೆಂಡ್ ರೂಪದಲ್ಲಿ ಬಂದಿದೆ. ಇದು ಶೇಕಡ ಒಂದರಷ್ಟೂ ಆಗುವುದಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಕೈಗಾರಿಕೋದ್ಯಮಗಳಿಗೆ ಸಾಲವಾಗಿ ಕೊಡುವುದರಲ್ಲಿ ಒಂದು ನೀತಿಯನ್ನನುಸರಿಸಬೇಕು. ಸಕ್ಕರೆ ಕಾರ್ಖಾನೆಯಲ್ಲಿ ಇಷ್ಟೊಂದು ಲಾಭ ಬರುತ್ತಾ ಇರುವುದು ಏಕೆಂದರೆ, ಅದರ ಬಂಡವಾಳದಲ್ಲಿ ಶೇಕಡ 55ರಷ್ಟು ಷೇರುಗಳನ್ನು ತಾವು ತೆಗೆದುಕೊಂಡು ಆಡಳಿತವನ್ನು ತಮ್ಮ ಕೈಯಲ್ಲಿಟ್ಟುಕೊಂಡಿರುವುದರಿಂದ. ಹೀಗೆ ಕೈಗಾರಿಕೆಗಳನ್ನು ತಮ್ಮ ಆಡಳಿತಕ್ಕೆ ತೆಗೆದುಕೊಳ್ಳುವುದು ಸಾಧ್ಯವಾಗುವಂತಹ ಸಂದರ್ಭಗಳಲ್ಲಿ ಮಾತ್ರ ಹಣವನ್ನು ಕೊಟ್ಟರೆ ಒಳ್ಳೆಯದು. ಎರಡನೆಯದಾಗಿ, ನಮ್ಮ ಸರ್ಕಾರದವರು ಮುಂಗಡವಾಗಿ ಈ ಎರಡು ವರ್ಷಗಳಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದಾರೆಂಬುದನ್ನು ಅರ್ಥಸಚಿವರ ಭಾಷಣದಲ್ಲಿ ತಿಳಿಸಿದ್ದಾರೆ. ಅದನ್ನು ಒಟ್ಟು ಕೂಡಿದರೆ 201 ಲಕ್ಷ ರೂಪಾಯಿ ಆಗುತ್ತದೆ. ಸರ್ಕಾರದವರು ಒಂದು ಕಡೆ ಸಾಲವನ್ನೆತ್ತುತ್ತಿರುವುದು, ಅದಕ್ಕೆ ಬಡ್ಡಿಯನ್ನು ಕೊಡತ್ತಿರುವುದು, ಮತ್ತೊಂದು ಕಡೆ ತಾವು ಹೀಗೆ ಕಡಿಮೆ ದರದ ಬಡ್ಡಿಯಲ್ಲಿ ಅಥವಾ ತಾವು ತೆಗೆದುಕೊಂಡಿರುವ ಬಡ್ಡಿಯ ದರದಲ್ಲಿ ಸಾಲ ಕೊಡುತ್ತಿರುವುದು, ಸರಿಯಲ್ಲ. ಕೆಲವು ಸಂದರ್ಭಗಳಲ್ಲಿ ಕೊಟ್ಟ ಹಣ ಬಾರದೇ ಇರಬಹುದು. ಇಂತಹ ಸಂದರ್ಭಗಳಲ್ಲಿ ನಷ್ಟವಾಗುತ್ತದೆ. ಆದಕಾರಣ ಒಂದು ಲಕ್ಷ ರೂಪಾಯಿನ ಮೇಲೆ ಸಾಲವನ್ನು ಕೊಡುವಾಗ ಇಂತಿಂತಹ ಸಂದರ್ಭಗಳಲ್ಲಿ ಮಾತ್ರ ಕೊಡುತ್ತೇವೆಂದು ಒಂದು ನೀತಿಯನ್ನು ಗೊತ್ತುಮಾಡಿದರೆ ಉತ್ತಮ.

ಕೆಲವು ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಡಲೇಬೇಕು. ಕೊಡದಿದ್ದರೆ ತಪ್ಪುಮಾಡಿದ ಹಾಗಾಗುತ್ತದೆ. ಮತ್ತೆ ಕೆಲವು ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕಾಗಿಲ್ಲ, ಕೊಟ್ಟರೆ ಲೋಪವಾಗುತ್ತದೆ. ಕೊಡಬೇಕಾದ ಕೆಲವು ಕೈಗಾರಿಕೆ ಈಗ ಉತ್ತೇಜನ ಕೊಡುತ್ತಿಲ್ಲ, ಸ್ವಲ್ಪ ಉದಾಸೀನ ಮಾಡುತ್ತಿದ್ದಾರೆಂದು ಮಾತ್ರ ಹೇಳುತ್ತೇನೆ.

ನಾನು ಮುಂದಿನ ವಿಚಾರ ಮಾತನಾಡಿದರೆ ಒಂದು ಪ್ರಚಾರದ ದೃಷ್ಟಿಯಿಂದ ಎಂದು ತಿಳಿದುಕೊಳ್ಳಬಹುದು. ಆದರೂ ಈ ವಿಚಾರವನ್ನು ಸ್ವಲ್ಪ ಹೇಳುತ್ತೇನೆ. ನಮ್ಮ ದೇಶಕ್ಕೆ ಪವರ್ ಆಲ್‌ಕೋಹಾಲ್ ಬಹಳ ಪ್ರಯೋಜನಕಾರಿಯಾದುದು. ಮುಂದೆ ಪೆಟ್ರೋಲ್ ಸಿಕ್ಕದೇಯಿರುವ ಪರಿಸ್ಥಿತಿ ಬರಬಹುದು. ಸಿಕ್ಕಿದರೂ ಕೂಡ ಎಷ್ಟು ಬೇಕೋ ಅಷ್ಟು ಬಾರದೇಯಿರಬಹುದು. ಅಂತಹ ಸಂದರ್ಭದಲ್ಲಿ ಪವರ್ ಆಲ್‌ಕೋಹಾಲ್‌ನಿಂದ ಸಹಾಯವಾಗುತ್ತದೆ. ಇಂತಹ ಕೈಗಾರಿಕೆಗೆ ಉತ್ತೇಜನ ಕೊಡಬೇಕಾದುದು ಬಹು ಮುಖ್ಯ. ಹೀಗಿದ್ದರೂ ಈಗ ಅದಕ್ಕೆ ಎಷ್ಟು ಉತ್ತೇಜನ ಕೊಡಬೇಕೋ ಅಷ್ಟು ಉತ್ತೇಜನ ಕೊಡುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಈಗ ನಮ್ಮ ಮಂಡ್ಯದ ಕಾರ್ಖಾನೆಯಲ್ಲಿ ತಿಂಗಳಿಗೆ 30,000 ಗ್ಯಾಲನ್ನುಗಳಷ್ಟು ಪವರ್ ಆಲ್ಕೋಹಾಲ್ ತಯಾರಾಗುತ್ತಿದೆ. ಇದನ್ನು 75ರಿಂದ 80 ಸಾವಿರ ಗ್ಯಾಲನ್‌ಗಳವರೆಗೆ ಹೆಚ್ಚಿಸಬಹುದು. ಪೆಟ್ರೋಲಿಗೆ ಬದಲು ಪವರ್ ಆಲ್‌ಕೋಹಾಲನ್ನು ಉಪಯೋಗಿಸಬಹುದು. ಈಗ ಸಕ್ಕರೆ ಕಂಪೆನಿಯ ಲಾರಿಗಳೂ ಮತ್ತು ಇತರ ವಾಹನಗಳೂ ಇದರಿಂದಲೇ ನಡೆಯುತ್ತಿವೆ. ಇದುವರೆಗಾಗಲೇ ಒಂದು ಲಕ್ಷ ಮೈಲಿಗಳವರೆಗೂ ಓಡಿವೆ. ಈ ಲಾರಿಗಳು ನಾಲ್ಕರಿಂದ ಏಳು ಟನ್ನವರೆಗೂ ಎಳೆಯುತ್ತವೆ. ಆದರೂ ಕೆಟ್ಟಿಲ್ಲ. ಇಂತಹ ಉಪಯುಕ್ತ ಮತ್ತು ಪ್ರಯೋಜನಕಾರಿಯಾದ ಕೈಗಾರಿಕೆಗೆ ಉತ್ತೇಜನ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ.

ಇನ್ನು ನನ್ನ ಮಾನ್ಯಮಿತ್ರರು ಕೆಲವರು ಈ ಬಡ್ಜೆಟ್ಟನ್ನು ಟೀಕಿಸಿ ಮಾತನಾಡಿದ್ದಾರೆ. ಅದಕ್ಕೆ ಅನೇಕರು ಉತ್ತರ ಕೊಟ್ಟಿದ್ದಾರೆ. ಒಬ್ಬರು ಸದಸ್ಯರು ಮಾತನಾಡುವುದಕ್ಕೆ ಸರ್ಕಾರದವರೇ ಉತ್ತರ ಕೊಡುತ್ತಾರೆ. ಕೆಲವಕ್ಕೆ ಮಾತ್ರ ನಾನೇ ಉತ್ತರ ಕೊಡಬಯಸುತ್ತೇನೆ. ಮೊದಲನೆಯದಾಗಿ, ಮಂಡ್ಯದ ಜಿಲ್ಲೆಯ ವಿಚಾರದಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಹೇಳಿದುದಕ್ಕೆ ಶ್ರೀಮಾನ್ ವೀರಣ್ಣಗೌಡರು ಬಹುಮಟ್ಟಿಗೆ ಉತ್ತರ ಕೊಟ್ಟಿದ್ದಾರೆ.

ಈ ವಿಚಾರದಲ್ಲೇ ಇನ್ನೂ ಕೆಲವು ವಿಷಯಗಳನ್ನು ನಾನು ಹೇಳುತ್ತೇನೆ. ಕೃಷ್ಣರಾಜ ಸಾಗರಕ್ಕೆ ಕೋಟ್ಯಾಂತರ ರೂಪಾಯಿ ಖರ್ಚಾಗಿದೆ, ಅದರಿಂದ ಸರಿಯಾದ ಪ್ರಯೋಜನವಿಲ್ಲವೆಂದು ಹೇಳಿದರು. ಆದರೆ ಅದಕ್ಕೆ ಎಷ್ಟು ಖರ್ಚಾಗಿದೆಯೋ ಅಷ್ಟೂ ನಾನಾ ರೂಪದಲ್ಲಿ ದೇಶಕ್ಕೆ ಬಂದಿದೆಯೆಂದು ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ತತ್ವದ ವಿಚಾರ ಹೇಳಬೇಕಾಗಿದೆ. ಯಾವ ಸರ್ಕಾರವೇ ಆಗಲಿ, ಆ ಹಣವನ್ನು ದೊಡ್ಡ ನೀರಾವರಿ ಕೆಲಸಗಳಿಗೆ ಹಾಕಬೇಕಾದರೆ ಅದರಿಂದ ಶೇಕಡ ಒಂದರಷ್ಟು ಪ್ರತಿಫಲ ಬಂದರೆ ಸಾಕೆಂದು ಹೇಳುತ್ತಾರೆ. ಇದು ಒಂದು ಮುಖ್ಯವಾದ ನೀತಿ ಅಥವ ತತ್ವ. ಈಗ ಕೃಷ್ಣರಾಜಸಾಗರದಿಂದ ಶೇಕಡ ಒಂದಕ್ಕಿಂತ ಹೆಚ್ಚಾಗಿಯೇ ಬಂದಿದೆಯೆಂದು ಹೇಳಿದರೆ ಅವರಿಗೆ ತೃಪ್ತಿಯಾಗುತ್ತದೆಂದು ಕಾಣುತ್ತದೆ. ಎರಡನೆಯದಾಗಿ, ಮಂಡ್ಯ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯ ನಾಲೆ ಪ್ರಾಂತ್ಯದಿಂದ ಒಂದು ವರ್ಷಕ್ಕೆ ನಮಗಾಗುವಷ್ಟನ್ನು ಇಟ್ಟುಕೊಂಡು, ಮೂರು ಲಕ್ಷ ಪಲ್ಲ ಬತ್ತವನ್ನು ಕೊಡುತ್ತಿದ್ದೇವೆ. ಇದು ದೇಶಕ್ಕೆ ಒಂದು ಪ್ರಯೋಜನವಲ್ಲವೆ? ಮಂಡ್ಯದಲ್ಲಿ ಸಕ್ಕರೆ ಕಂಪೆನಿಯಿದೆ. ಇದಕ್ಕಾಗಿ ಜನರು ಆ ನಾಲೆಯ ಜಮೀನಿನಿಂದ ಕಬ್ಬು ಬೆಳೆದು ವರ್ಷಕ್ಕೆ ಎರಡು ಲಕ್ಷ ಮೂಟೆ ಸಕ್ಕರೆಯನ್ನು ದೇಶಕ್ಕೆ ಒದಗಿಸುವುದಲ್ಲದೆ ಆ ಕಂಪೆನಿಯಿಂದ ಪ್ರತ್ಯಕ್ಷವಾಗಿಯೂ ಮತ್ತು ಪರೋಕ್ಷವಾಗಿಯೂ ಸುಮಾರು 64 ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ದೊರೆಯುವಂತೆ ಮಾಡುತ್ತಿದ್ದಾರೆ. ಕೃಷ್ಣರಾಜಸಾಗರದಿಂದ ಈ ಸಕ್ಕರೆ ಕಂಪೆನಿಯಾಗಿದೆ. ಸಕ್ಕರೆ ಕಂಪೆನಿಯಿಂದ 64 ಲಕ್ಷ ರೂಪಾಯಿ ವರಮಾನ ಸರ್ಕಾರಕ್ಕೆ ಬರುತ್ತಿದೆ. ಅಂದರೆ ಇದು ಕೃಷ್ಣರಾಜ ಸಾಗರದಿಂದಲೇ ಬಂದಂತಾಯಿತು.

ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಯಾವುದನ್ನಾದರೂ ನಿಲ್ಲಿಸಿ, ಹೆಂಡ ಮತ್ತು ಬೀರ್ ಮಾತ್ರ ನಿಲ್ಲಿಸಬೇಡಿ ಎಂದು ಹೇಳಿದರು. ಹೀಗೆ ಹೇಳುವಾಗ ಅವರು ಮಹಾತ್ಮಾ ಗಾಂಧಿಯವರ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೋ ಅಥವಾ ಬೇರಾವ ತತ್ವವನ್ನಿಟ್ಟುಕೊಂಡಿದ್ದರೋ ಗೊತ್ತಾಗಲಿಲ್ಲ. ಸರ್ಕಾರಕ್ಕೆ ಎಷ್ಟು ವರಮಾನ ಬರಲಿ, ಮದ್ಯಪಾನವೆಂಬುದು ಬಹಳ ಕೆಟ್ಟದ್ದು, ಅದನ್ನು ದೇಶದಲ್ಲಿ ನಿರ್ಮೂಲವಮಾಡಬೇಕು. ನನ್ನ ಮಿತ್ರರಾದ ಶ್ರೀಮಾನ್ ಮಂಜಪ್ಪನವರು ತಮ್ಮ ಅಭಿಪ್ರಾಯವನ್ನು ಸ್ವಲ್ಪ ಬದಲಾಯಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮಾನ್ ಮಲ್ಲಿಕಾರ್ಜುನಪ್ಪನವರು ವಯಸ್ಕರಿಗೆ ವಿದ್ಯೆ ಬರುವುದೇಯಿಲ್ಲವೆಂದು ಹೇಳಿದರು. ಅದು ತಪ್ಪು, ಅವರ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ನಾನು ಕೆಲವು ದಿನ ವಯಸ್ಕರಿಗೆ ಪಾಠ ಹೇಳಿಕೊಡುತ್ತಿದ್ದೆ. ಆಗ 50,60 ಮತ್ತು 70 ವರ್ಷದ ಮುದುಕರು ಕೂಡ ಕಲಿತಿದ್ದಾರೆ. ಆದುದರಿಂದ 25 ವರ್ಷ ವಯಸ್ಸಾದ ಮೇಲೆ ಯಾರೂ ಕಲಿಯುವುದಿಲ್ಲವೆಂದು ಹೇಳುವುದು ತಪ್ಪು. ಇದಕ್ಕೆ ಖರ್ಚು ಮಾಡುವ ಐದುಲಕ್ಷ ರೂಪಾಯಿ ಬೆಂಕಿಯಲ್ಲಿ ಸುಟ್ಟ ಹಾಗಾಗುತ್ತದೆಂದು ಅವರು ಹೇಳಿದರು. ಇದು ತಪ್ಪು ಭಾವನೆ. ನಾನು ಒಂದು ಖೋತಾ ಸೂಚನೆಯನ್ನು ಕೂಡ ಕಳುಹಿಸಿ ಅದರಲ್ಲಿ 5 ಲಕ್ಷ ಇದಕ್ಕೆ ಸಾಲದು 15 ಲಕ್ಷವನ್ನಾದರೂ ಕೊಡಬೇಕೆಂದು ಸೂಚಿಸಬೇಕೆಂದು ಇದ್ದೆ. ಹಣದ ಅಭಾವದಿಂದ ಈ ಸಾರಿ ಸುಮ್ಮನಾದೆ. ಹೀಗಿರುವಾಗ ಅವರು ಈ ರೀತಿ ಮಾತನಾಡಿದುದು ಆಶ್ಚರ್ಯ ಮತ್ತು ವಿಷಾದವನ್ನುಂಟುಮಾಡುವುದಾಗಿದೆ. ಅವರ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾಗಿದೆ. ಆದರೆ ಕಾಲವಿಲ್ಲ. ಒಟ್ಟಿನಲ್ಲಿ ಒಂದೇ ಮಾತಿನಲ್ಲಿ ಹೇಳಬೇಕಾದರೆ ಸರ್ಕಾರದಲ್ಲಿ ಅನೇಕ ವಿಧದಲ್ಲಿ ಖರ್ಚು ಕಡಿಮೆ ಮಾಡಬೇಕು. ಇನ್ನೊಂದು ಕಡೆ, ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ಹಾಕಿ ಅಭಿವೃದ್ಧಿ ಕಾರ್ಯಗಳನ್ನು ಹೆಚ್ಚು ಹೆಚ್ಚಾಗಿ ಮಾಡಬೇಕು. ಹಾಗೆ ಮಾಡದಿದ್ದರೆ ತೊಂದರೆಯಾಗುತ್ತದೆ. ಡಿಪೋ ಚಾರ್ಜು ರೂಪಾಯಿಗೆ ಆರುಕಾಸು, ದ್ವಿದಳ ಧಾನ್ಯದ ಮೇಲೆ ಮೂರು ಕಾಸು, ಸೇಲ್ಸ್ ಟ್ಯಾಕ್ಸ್, ಈ ವಿಚಾರದಲ್ಲಿ ಸಚಿವರು ಪುನರ್ವಿಮರ್ಶಿಸಿ ತೆಗೆದುಹಾಕಿದರೆ ಬಹಳ ಸಂತೋಷವಾಗುತ್ತದೆ. ಈಗಲೇ ಒಪ್ಪಿದ್ದರೆ ಇನ್ನೂ ಬಹಳ ಸಂತೋಷವಾಗುತ್ತಿತ್ತು. ಅವರು ಪ್ರತಿನಿಧಿಗಳ ಸಲಹೆಗಳಿಗೆ ಮಾನ್ಯತೆ ಕೊಟ್ಟು ಅವುಗಳಂತೆ ನಡೆಯುತ್ತಾರೆಂದು ನಂಬಿ ಈ ಬಡ್ಜೆಟ್ಟನ್ನು ಸಂಪೂರ್ಣವಾಗಿ ಒಪ್ಪುತ್ತೇನೆ.

ಶ್ರೀ ಎಂ. ಎನ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನೂ ಕೊಟ್ಟಿದ್ದಾರೆ. ಟೀಕೆಗಳನ್ನೂ ಮಾಡಿದ್ದಾರೆ. ಇವತ್ತು ಯಾವ ತತ್ವದ ಮೇಲೆ ಸರ್ಕಾರಿ ಕೆಲಸ ಮಾಡುತ್ತಾ ಇದೆ ಎಂಬುದನ್ನು ಪ್ರತಿಯೊಬ್ಬರೂ ಯೋಚನೆ ಮಾಡಬೇಕು. ನೂರಾರು ವರ್ಷಗಳಿಂದ ಬಂದಿರತಕ್ಕ ಪದ್ಧತಿಯನ್ನು ಬದಲಾವಣೆ ಮಾಡಿ ಒಂದು ಹೊಸ ಪದ್ಧತಿಯನ್ನು ಜಾರಿಗೆ ತರುವಾಗ ಎಷ್ಟು ಕಷ್ಟ, ಸರ್ಕಾರದವರ ಮೇಲೆ ಮತ್ತು ಜನಗಳ ಮೇಲೆ ಎಷ್ಟು ಜವಾಬ್ದಾರಿ ಇರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದನ್ನು ಏಕೆ ಹೇಳುತ್ತೇನೆಂದರೆ ಈಗಾಗಲೇ ಅನೇಕ ಸದಸ್ಯರು ಟೀಕೆಯ ರೂಪದಲ್ಲಿ ಹಾಗೆ ಮಾಡಿದೆವು, ಹೀಗೆ ಮಾಡಿದೆವು ಎಂದು ಹೇಳಿದರು. ಹಿಂದಿನ ಸರ್ಕಾರದವರು ಆಗಿನ ವಾತಾವರಣಕ್ಕನುಸಾರವಾಗಿ ದೇಶೋದ್ಧಾರ ಕಾರ್ಯಗಳನ್ನು ಮಾಡಿ ಮೈಸೂರನ್ನು ಮಾದರೀ ರಾಜ್ಯವನ್ನಾಗಿ ಮಾಡಿದರು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅವರಿಗೆ ವಂದನೆಗಳನ್ನು ಕೊಡುತ್ತೇನೆ. ಆದರೆ ಇವತ್ತು ಸರ್ಕಾರ ಯಾವ ವಾತಾವರಣದಲ್ಲಿ ಕೆಲಸ ಮಾಡುತ್ತಾ ಇದೆ, ಯಾವ ರೀತಿ ಮುಂದೆ ಹೋಗಬೇಕು ಎಂಬುದನ್ನು ಅವರೂ ಕೂಡ ಯೋಚನೆ ಮಾಡಬೇಕು. ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದರೆ ಅವರೆಲ್ಲರಿಗೂ ವಂದಿಸುತ್ತಾ ಇದ್ದೆ. ಹಿಂದೆ ಯಾವ ಸರ್ಕಾರದ ಪದ್ಧತಿ ಇತ್ತೋ ಅದೇ ರೀತಿ ಇವತ್ತೂ ನಡೆಸಿಕೊಂಡು ಹೋದರೆ ಹೇಗೆ? ಈಗ ಜನಗಳಲ್ಲಿ ದೇಶಾಭಿವೃದ್ಧಿ ತಕ್ಷಣ ಆಗಬೇಕು ಎಂಬ ಕೂಗು ಎದ್ದಿದೆ. ಅದನ್ನು ನೆರವೇರಿಸುವುದಕ್ಕೆ ಆಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ಇವತ್ತು ಮೈಸೂರು ದೇಶದ ಆಯವ್ಯಯ ಪಟ್ಟಿಯನ್ನು ನೋಡಿದರೆ 11 ಚಿಲ್ಲರೆ ಕೋಟಿ ರೂಪಾಯಿಗಳು ಕಾಣುತ್ತಾ ಇವೆ. ದೇಶದ ಜನಗಳು ಕೇಳುತ್ತಾಯಿರುವ ಕೋರಿಕೆಗಳನ್ನು ನೋಡಿದರೆ 100 ಕೋಟಿ ರೂಪಾಯಿಗಳಾದರೂ ಸಹ ಆ ಕಾರ್ಯಗಳನ್ನು ನೆರವೇರಿಸುವುದಕ್ಕಾಗುವುದಿಲ್ಲ. ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿದ ಭಾಷಣದಲ್ಲಿ ಅವರು ಒಂದು ವಿಷಯವನ್ನು ಸದಸ್ಯರ ಗಮನಕ್ಕೆ ತಂದಿದ್ದಾರೆ. ಅದೇನೆಂದರೆ, ಹೊಸ ಪದ್ಧತಿ ಪ್ರಕಾರ ವಿಕೇಂದ್ರೀಕೃತ ಆಡಳಿತ ಪದ್ಧತಿಯನ್ನು ಜಾರಿಗೆ ತರಬೇಕು. ಅದನ್ನು ನಮ್ಮ ಸರ್ಕಾರದವರು ಕಾರ್ಯಗತ ಮಾಡಬೇಕು. ಅದರ ಕಡೆಗೆ ಹೆಚ್ಚು ಗಮನಕೊಟ್ಟು ಮಾನ್ಯ ಸದಸ್ಯರು ಸಲಹೆ ಕೊಟ್ಟರೆ ಚೆನ್ನಾಗಿತ್ತು ಎಂದು ಅನ್ನಿಸುತ್ತದೆ. ಇವತ್ತು ಸರ್ಕಾರದವರು ದೇಶದ ಮೂಲೆ ಮೂಲೆಗಳಿಗೂ ಹಣ ಒದಗಿಸಿ ಜನಗಳಿಗೆ

ಸ್ಫೂರ್ತಿ ಕೊಡುವ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಎಂದ ಮೇಲೆ ಪ್ರಜಾ ಪ್ರಭುತ್ವ ಆಡಳಿತದಲ್ಲಿ ಪ್ರಜಾಪ್ರಭುತ್ವದ ತತ್ವದ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ಅವನಷ್ಟಕ್ಕೆ ಅವನೇ ಬೆಳೆದು, ಅವನ ಜವಾಬ್ದಾರಿಯನ್ನು ಅರಿತುಕೊಂಡು, ಸರ್ಕಾರದ ಆಡಳಿತವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬುದು ಶ್ರೀಮಾನ್ ಮಹಾರಾಜರವರ ಭಾಷಣದ ಉದ್ದೇಶವೆಂದು ತಿಳಿಯುತ್ತದೆ. ಅದನ್ನು ಮಾನ್ಯ ಸದಸ್ಯರು ಅರಿತು ದೇಶಾದ್ಯಂತ ಪ್ರಜೆಗಳು ಅದರ ಮೇಲೆ ಒತ್ತಾಯ ಮಾಡಿದರೆ ಬಹಳ ಚೆನ್ನಾಗಿರುತ್ತದೆಂದು ಅನ್ನಿಸುತ್ತದೆ. ಇವತ್ತು ನಾವೆಲ್ಲಾ ಏನು ತಿಳಿದುಕೊಂಡಿದ್ದೇವೆ? ದೇಶದಲ್ಲಿ ಹೈಸ್ಕೂಲು, ಕಾಲೇಜುಗಳನ್ನು ಹೆಚ್ಚಿಸಿ, ಹೆಚ್ಚು ಜನ ವಿದ್ಯಾವಂತರಾಗುವುದಕ್ಕೆ ಸರ್ಕಾರದವರು ಅವಕಾಶ ಮಾಡಿ ಕೊಟ್ಟಿದ್ದಾರೆ. 11 ಚಿಲ್ಲರೆ ಕೋಟಿ ರೂಪಾಯಿ ಆದಾಯದಲ್ಲಿ ಸಂಬಳ ಸಾರಿಗೆಗಳಿಗೆ ಎಷ್ಟು ಕೊಡುತ್ತಿದ್ದಾರೆ ಎಂದರೆ 3¼ ಕೋಟಿ ರೂಪಾಯಿಗಳು ಎಂದ ಮೇಲೆ, ಯಾವ ಯಾವ ಬಾಬುಗಳಿಗೆ ಸರ್ಕಾರದವರು ದುಡ್ಡು ಕೊಡುವುದಕ್ಕಾಗುತ್ತದೆ? ಸರ್ಕಾರದವರು ಹಣದ ಭಾರವನ್ನು ಹಾಕುವುದಕ್ಕಾಗುತ್ತದೆಯೇ? ಜವಾಬ್ದಾರಿಯನ್ನು ತೆಗೆದುಕೊಂಡು ಸರ್ಕಾರದವರಿಗೆ ನೆರವಾಗಿ ಕೆಲಸಮಾಡಿದರೆ ದೇಶಾಭಿವೃದ್ಧಿ ಕಾರ್ಯ ನಡೆಸುವುದಕ್ಕೆ ಸಾಧ್ಯವೇ ಹೊರತು, ಸುಮ್ಮನೆ ಟೀಕೆಗಳಿಂದ ಪ್ರಯೋಜನವಿಲ್ಲ. ಈಗಿನ ವಾತಾವರಣದಲ್ಲಿ ಹಿಂದೆ ಇದ್ದ ಪದ್ಧತಿಯನ್ನೇ ಮುಂದುವರಿಸಿಕೊಂಡು ಹೋದರೆ ಆಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ಇವತ್ತು 3 ಕೋಟಿ ರೂಪಾಯಿ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದೆ, ಸಂಬಳ ಸಾರಿಗೆಗಳಿಗೆ 3¾ ಕೋಟಿ ರೂಪಾಯಿ ಖರ್ಚಾಗುತ್ತಿದೆ. ವಿದ್ಯಾಭ್ಯಾಸವನ್ನು ಕಲಿಸಿದ್ದಕ್ಕಾಗಿ ಸರ್ಕಾರದವರು ಅವರಿಗೆಲ್ಲಾ ಕೆಲಸಗಳನ್ನು ಒದಗಿಸುವುದಕ್ಕಾಗುತ್ತದೆಯೇ? ಆಗುವುದಿಲ್ಲ. ಇವತ್ತು ದೇಶದಲ್ಲಿ ಏನೋ ಒಂದು ಕೂಗು ಎದ್ದಿದೆ. ಆದರೆ ಎಲ್ಲರನ್ನೂ ಮೆಚ್ಚಿಸುವುದಕ್ಕಾಗುವುದಿಲ್ಲ. ಆದ್ದರಿಂದ ವಿದ್ಯಾಭ್ಯಾಸದ ಕ್ರಮವನ್ನು ಸಂಪೂರ್ಣವಾಗಿ ಬದಲಾಯಿಸಬೇಕು.

ಈಗ ಗ್ರಾಮಾಭ್ಯುದಯ ಕಾರ್ಯವಿದೆ. ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆಯನ್ನು ಎಲ್ಲರೂ ಹೇಳುತ್ತಾ ಇದ್ದಾರೆ. ಈಗ ಪ್ರತಿಯೊಂದು ಕೆಲಸವನ್ನು ಸರ್ಕಾರದವರೇ ಮಾಡಬೇಕೆಂಬ ಭಾವನೆ ಜನಗಳಲ್ಲಿ ಬಂದಿದೆ. ಆ ಭಾವನೆ ಹೋಗಬೇಕು. ಅದು ಹೋಗಬೇಕಾದರೆ ವಿಕೇಂದ್ರೀಕೃತ ಆಡಳಿತ ಪದ್ಧತಿ ಜಾರಿಗೆ ಬರಬೇಕು. ಪ್ರತಿಯೊಂದು ಗ್ರಾಮವಾದರೂ ಕೂಡ ಅವರವರ ಜವಾಬ್ದಾರಿಯನ್ನರಿತುಕೊಂಡು ಕೆಲಸ ಮಾಡಿದರೆ, ಹೆಚ್ಚು ಬೆಳೆ ಬೆಳೆಯುವುದಾಗಲೀ, ಗ್ರಾಮಾಭ್ಯುದಯ ಕಾರ್ಯವಾಗಲೀ ಆಗುತ್ತದೆಯೇ ಹೊರತು ಬರೀ ಪ್ರಚಾರದಿಂದಾಗಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದರಾಗಲಿ ಸಾರ್ಥಕವಾಗುವುದಿಲ್ಲ. ಎಂದ ಮೇಲೆ ವಿದ್ಯಾಭ್ಯಾಸದ ಕ್ರಮದಲ್ಲಿ ಮಾನವೀಯ ದೃಷ್ಟಿ ಇರಬೇಕು. ಪ್ರತಿಯೊಬ್ಬರಿಗೂ ವಿದ್ಯೆ ಕಲಿತರೆ ಸರ್ಕಾರದಲ್ಲಿ ಒಂದು ಕೆಲಸ ಸಿಕ್ಕುತ್ತದೆ ಎಂಬ ಭಾವನೆ ಇದೆ. ಅದು ಹೋಗಿ ಪ್ರತಿಯೊಬ್ಬನೂ ವಿದ್ಯೆ ಕಲಿಯುವುದು ದೇಶೋದ್ಧಾರ ಮಾಡುವುದಕ್ಕೆ ಎಂಬ ಭಾವನೆ ಬರಬೇಕು. ಅದು ಬರಬೇಕಾದರೆ ಈಗಿನ ವಿದ್ಯಾಭ್ಯಾಸದ ಪದ್ಧತಿ ಬದಲಾಯಿಸಬೇಕು. ಈಗ ಸ್ಕೂಲುಗಳ ಪಾಠಕ್ರಮ ಹೇಗಿದೆಯೆಂದರೆ ನಮ್ಮ ಹುಡುಗರು 11 ಘಂಟೆಗೆ ಸ್ಕೂಲಿಗೆ ಹೋಗಿ 5 ಘಂಟೆಗೆ ಮನೆಗೆ ಬಂದರೆ, ಅವರು ಬೇರೆ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಹಳ್ಳಿಗಾಡುಗಳಲ್ಲಿ ಸ್ಕೂಲುಗಳನ್ನು ಹೆಚ್ಚಾಗಿ ತೆರೆಯಬೇಕು. ಅಲ್ಲದೆ ಬೆಳಗಿನ ಹೊತ್ತು ತರಗತಿಗಳನ್ನು ನಡೆಸುವ ಏರ್ಪಾಡು ಮಾಡಬೇಕು. ಹಾಗಾದರೆ ಮಧ್ಯಾಹ್ನದ ವೇಳೆಯಲ್ಲಿ ಅವರು ಸ್ವಾಭಾವಿಕವಾಗಿ ವಂಶಪಾರಂಪರ್ಯವಾಗಿ ಬಂದ ವ್ಯವಸಾಯದ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಂತಹ ಸಲಹೆಗಳು ಮಾನ್ಯ ಸದಸ್ಯರಿಂದ ಬಂದಿದ್ದರೆ ಚೆನ್ನಾಗಿತ್ತು. ಶ್ರೀಮಾನ್ ಗುಂಡಪ್ಪಗೌಡರು ಒಂದು ವಿಚಾರ ಹೇಳಿದರು. ಆ ಸಲಹೆ ಒಳ್ಳೆಯದೆಂದು ಕಾಣುತ್ತದೆ. ಈಗ ವೈದ್ಯ ಇಲಾಖೆಯಲ್ಲಿ ಆಯುರ್ವೇದದ ಕಡೆಗೆ ಗಮನ ಕೊಡುತ್ತಿಲ್ಲ. ನನ್ನ ಅನುಭವದಿಂದ ಹೇಳುತ್ತೇನೆ. ನಮ್ಮ ಹಳ್ಳಿಯಲ್ಲಿ ನಮ್ಮ ಹತ್ತಿರ ಒಂದು [illegible]ಜದ ಹೋರಿ ಇದೆ. ಅದರ ಕಣ್ಣು ಗಾಯವಾಗಿ ರಕ್ತ ಸುರಿದು ಕಣ್ಣು ಕುರುಡಾಗಿತ್ತು. ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರೆ ಯಾವುದೋ ಒಂದು ಔಷಧಿ ಹಚ್ಚಿ ಕಳುಹಿಸುತ್ತಿದ್ದರು. ಎಷ್ಟೋ ದಿನಗಟ್ಟಲೆ ಆಸ್ಪತ್ರೆಗೆ ತಿರುಗಿಸಬೇಕಾಗಿತ್ತು. ಆಗ ನನ್ನ ಹರಿಜನ ಸಹೋದರರೊಬ್ಬರು, ಅದಕ್ಕೆಲ್ಲಾ ಹೋಗುವುದಿಲ್ಲ, ನಾನು ಒಂದು ಔಷಧ ಮಾಡಿಕೊಡುತ್ತೇನೆ, ಹಚ್ಚಿ ವಾಸಿಯಾಗುತ್ತದೆಂದು ಹೇಳಿ ಒಂದು ಬೆಳ್ಳುಳ್ಳಿ, ಮೆಣಸು, ಹಸುರು ಎಲೆ ಹಾಕಿ ಅರೆದು, ಅದನ್ನು ಇಪ್ಪತ್ತು ದಿನಗಳು ಬಿಡದೆ ಹಚ್ಚಿದ್ದರಿಂದ ಅದರ ಕಣ್ಣು ಸಂಪೂರ್ಣವಾಗಿ ವಾಸಿಯಾಯಿತು. ಅದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಹಿಂದೆ ನಮ್ಮಲ್ಲಿ ಬೇಕಾದಷ್ಟು ವ್ಯವಸ್ಥೆಗಳಿದ್ದವು. ಅವು ಇನ್ನೂ ಮರೆತು ಹೋಗಿಲ್ಲ. ನಾವು ಮರೆತರೂ ಹಳ್ಳಿಗಳಲ್ಲಿರತಕ್ಕವರು ಮರೆತಿಲ್ಲ. ಅದನ್ನು ಜೀರ್ಣೋದ್ಧಾರ ಮಾಡಿದರೆ ಬಹಳ ಚೆನ್ನಾಗಿರುತ್ತದೆ.

ಈ ಆಯವ್ಯಯ ತಃಖ್ತೆ ಒಂದು ಸಂದಿಗ್ಧ ಕಾಲದಲ್ಲಿ ನಮ್ಮ ಮುಂದಿದೆ. ಆದರೂ ವಿಕೇಂದ್ರೀಕೃತವಾದ ಆಡಳಿತವನ್ನು ಮಾಡಿ ದೇಶವನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಾರೆ ಎಂಬ ಧೈರ್ಯ ನಮಗೆಲ್ಲಾ ಇದೆ. ಏಕೆಂದರೆ ಮಹಾತ್ಮಾ ಗಾಂಧಿಜಿಯವರು 1915 ನೆಯ ಇಸವಿಯಲ್ಲಿ ಮೈಸೂರನ್ನು ರಾಮರಾಜ್ಯವೆಂದು ಕರೆದರು ಎಂದು ಈಗ್ಗೆ ಸ್ವಲ್ಪ ದಿವಸಗಳಲ್ಲಿ ಭದ್ರಾವತಿಯಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಅಪ್ಪಣೆ ಕೊಡಿಸಿದರು. ಅಂದ ಮೇಲೆ ನಾವೆಲ್ಲ ಅನ್ಯೋನ್ಯವಾಗಿ ಸಹಕರಿಸಿ ವಿಕೇಂದ್ರೀಕೃತ ಆಡಳಿತ ಪದ್ಧತಿಯನ್ನು ಜಾರಿಗೆ ತಂದು ಮೈಸೂರನ್ನು ಪ್ರಜಾಪ್ರಭುತ್ವ ಯುಗದಲ್ಲಿ ರಾಮರಾಜ್ಯವನ್ನಾಗಿ ಮಾಡಬಹುದೆಂಬ ಭರವಸೆ ನನಗಿದೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಬೋರಣ್ಣಗೌಡರು (ಹಾಸನ ಜಿಲ್ಲೆ) — ಸ್ವಾಮಿ, ಈಗ ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯಪಟ್ಟಿಯನ್ನು ಸ್ವಾಗತಿಸುತ್ತ ನಾನು ಹಣಕಾಸಿನ ಸಚಿವರನ್ನು ಅಭಿನಂದಿಸುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಇದರಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ. ಯಾವು ಯಾವುದಕ್ಕೆ ಎಷ್ಟೆಷ್ಟು ನಿಗದಿ ಮಾಡಿದ್ದಾರೆ, ದೇಶದ ಅತ್ಯಾವಶ್ಯಕತೆಗೆ ಏನೇನು ಆಗಬೇಕು ಎಂಬ ಬಗ್ಗೆ ಅವರು ಒಂದು ದೊಡ್ಡ ಭಾಷಣವನ್ನೇ ಮಾಡಿದ್ದರಿಂದ, ಇದನ್ನು ನಾವು ಸುಲಭವಾಗಿ ಅರ್ಥಮಾಡಿಕೊಳ್ಳಲು ಬಹಳ ಅನುಕೂಲವಾಯಿತು. ಈ ಬಗ್ಗೆ ಎದುರು ಪಕ್ಷದ ಮಾನ್ಯ ಸದಸ್ಯರು ಅವರವರ ಅಭಿಪ್ರಾಯಗಳನ್ನೂ ಸೂಚಿಸಿದ್ದಾರೆ. ನನ್ನ

ಅಭಿಪ್ರಾಯದಲ್ಲಿ ಕೆಲವು ಬಾಬುಗಳಿಗೆ ಸರ್ಕಾರದವರು ಒದಗಿಸಿರುವ ಹಣ ಬಹಳ ಕಡಿಮೆಯೆಂಬುದಾಗಿ ಕಾಣುತ್ತದೆ.

ಕೆರೆಗಳ ಕಾಮಗಾರಿಯ ಬಗ್ಗೆ 3ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇರತಕ್ಕ 24ಸಾವಿರ ಕೆರೆಗಳಲ್ಲಿ 21ಸಾವಿರ ಕೆರೆಗಳು ನಾದುರಸ್ತಿನಲ್ಲಿವೆ. ಹೀಗೆ ಈಗ ಅವರು ಒದಗಿಸಿರುವ ಹಣವನ್ನು ದುರಸ್ತಾಗಬೇಕಾಗಿರುವ ಪ್ರತಿಯೊಂದು ಕೆರೆಗೂ ಹಂಚಿದರೆ ಒಂದೊಂದು ಕೆರೆಗೂ 141 ರೂಪಾಯಿಗಳು ಬರುತ್ತವೆ. ಇನ್ನು ತೂಬು, ಏರಿ, ಇತ್ಯಾದಿಗಳ ದುರಸ್ತಿಗಾಗಿ ಒದಗಿಸಿರುವುದನ್ನೂ ಹೀಗೆ ಹಂಚಿದರೆ ಕೆರೆಯೊಂದಕ್ಕೆ 2ರೂಪಾಯಿ ಸಿಕ್ಕುತ್ತದೆ. ಆದ್ದರಿಂದ ಈ ಬಾಬಿಗೆ ಒದಗಿಸಿರುವ ಹಣಸಾಲದೆಂದೂ, ಅದಕ್ಕಾಗಿ ಹೆಚ್ಚು ಹಣ ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾಖಾತೆಯ ಬಗ್ಗೆ 4ಲಕ್ಷ ರೂಪಾಯಿಗಳನ್ನು ಖರ್ಚಿಗಾಗಿ ಒದಗಿಸಿದ್ದಾರೆ. ಆದರೆ ಇನ್ನೂ ಹೆಚ್ಚಿನ ವಿದ್ಯೆ ಸೌಲಭ್ಯಗಳೊದಗುವಂತೆ ಮಾಡಬೇಕೆಂದು ಇಷ್ಟೇಹೇಳುತ್ತೇನೆ. ಇನ್ನು ಈ ಪಾಠಶಾಲೆಗಳ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಉರ್ದು ಸ್ಕೂಲೇ ಬೇರೆ, ತಮಿಳು ಸ್ಕೂಲೇ ಬೇರೆ ತೆಲಗು ಸ್ಕೂಲೇ ಬೇರೆ,-ಹೀಗೆಲ್ಲಾ ಇರುವುದರಿಂದ ಈ ಬಾಬಿಗೆ ಹಣ ವಿಶೇಷವಾಗಿ ಖರ್ಚಾಗುತ್ತಿದೆ. ಇವುಗಳನ್ನೆಲ್ಲಾ ಒಂದುಗೂಡಿಸಿದರೆ ಈ ಬಾಬಿನಲ್ಲಿಯೂ ಸಹ ನಮಗೆ ಲಕ್ಷಾಂತರ ರೂಪಾಯಿಗಳ ಹಣ ಉಳಿತಾಯವಾಗಬಹುದು.

ಎರಡನೆಯದಾಗಿ, ಕೋ-ಎಜ್ಯುಕೇಷನ್ ಜಾರಿಗೆ ತರಬೇಕೆಂದಿರವಾಗ ಹೀಗೆ ಅಲಾಯಿದ ಪಾಠಶಾಲೆಗಳಿರುವುದು ಸರಿಯಲ್ಲ. ಈಗಗಾಲೇ ಅದೇರೀತಿ ಕಾಲೇಜುಗಳಲ್ಲಿಯೂ, ಕೆಲವು ಮಿಡಲ್‌ಸ್ಕೂಲುಗಳಲ್ಲಿಯೂ ಮತ್ತು ಹೈಸ್ಕೂಲುಗಳಲ್ಲಿಯೂ ಜಾರಿಗೆ ತರಲಾಗಿದೆ. ಆದರೆ ಇದು ಕೆಲವು ಕಡೆ ಮಾತ್ರ ಜಾರಿಗೆ ಬಂದಿವೆ. ಪಾಠಶಾಲೆಗಳಲ್ಲಿ ಕೋ-ಎಜ್ಯುಕೇಷನ್ ಜಾರಿಯಲ್ಲಿದೆ. ಹೈಸ್ಕೂಲು ತರಗತಿಗಳಲ್ಲಿ ಕೋ-ಎಜ್ಯುಕೇಷನ್ ಕೂಡದು. ಆದ್ದರಿಂದ ಈ ಸ್ಕೂಲುಗಳಲ್ಲೆಲ್ಲಾ ಈ ಕೋ-ಎಜ್ಯುಕೇಷನ್ ವ್ಯಾಸಂಗಕ್ಕೆ ದಾರಿಮಾಡಿಕೊಟ್ಟು,ಅಲ್ಲಿ ತಯಾರಾಗತಕ್ಕ ಬಾಲಕರು ಮುಂದೆ ದೇಶಕ್ಕೆ ನೆರವಾಗುವಂತೆ ಮಾಡಬೇಕು. ಇದರ ಬಗ್ಗೆ ತಾವು ಕೆಲವು ಮಾರ್ಪಾಡುಗಳನ್ನು ಹೊಸದಾಗಿ ಮಾಡಬೇಕಾಗುತ್ತದೆ.

ಇನ್ನು ಟೌನ್‌ಗಳಲ್ಲಿ ನೀರನ್ನು ಸರಬರಾಯಿ ಮಾಡತಕ್ಕ ಬಾಬಿಗೆ ತಾವು 5ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಈ ಹಣ ಮುನಿಸಿಪಾಲಟಿಗಳಿರತಕ್ಕ ಪ್ರತಿಯೊಂದು ಟೌನಿಗೂ ಹಂಚಿದರೆ ಬಹಳ ಕಡಿಮೆಯಾಗಿರುತ್ತೆ. ದೇಶದಲ್ಲಿರುವ ಅನೇಕ ಮುನಿಸಿಪಾಲಟಿಗಳು ನೀರಿನ ಸೌಕರ್ಯ, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನೆಲ್ಲಾ ನಡೆಸಬೇಕಾಗಿರುವುದರಿಂದ ಈ ಬಾಬಿಗೆ ತಾವು ಒದಗಿಸಿರುವ ಹಣ ಪೂರಾ ಕಡಿಮೆಯಾಗಿರುತ್ತೆ.

ಇನ್ನೊಂದು ಶೋಚನೀಯವಾದ ಅಂಶವೇನೆಂದರೆ, ನಮ್ಮ ದೇಶದಲ್ಲಿರುವ ಅನೇಕ ರಮ್ಯವಾದ ಮತ್ತು ಸುಂದರವಾದ ಸ್ಥಳಗಳನ್ನು ನೋಡಿಕೊಂಡು ಹೋಗಲು, ದೇಶದ ನಾನಾ ಕಡೆಗಳಿಂದ ಸಾವಿರಾರು ಜನರು ಬಂದು ಹೋಗುತ್ತಿದ್ದಾರೆ. ಅಂಥಾ ಸ್ಥಳಗಳ ಪೈಕಿ, ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಇತ್ಯಾದಿ ಕೆಲವು ಸ್ಥಳಗಳನ್ನು ಸುಂದರವಾಗಿಡಲು ಸರ್ಕಾರದವರು ಪ್ರತ್ಯೇಕ ನಿಧಿಯೊಂದನ್ನು ಇಡಲು ಆಲೋಚನೆ ಮಾಡಿರುವಂತೆ ಕಾಣುವುದಿಲ್ಲ. ಇಂಥಾ ಸ್ಥಳಗಳನ್ನು ರಮ್ಯವಾಗಿಡಲು ಹೆಚ್ಚು ಹಣವನ್ನೊದಗಿಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಈ ಮಲೇರಿಯಾ ನಿವಾರಣೆಗಾಗಿ ಡಿ. ಡಿ. ಟಿ. ಸ್ಪ್ರೇ ಮಾಡುತ್ತಿರುವ ವಿಷಯದಲ್ಲಿ ಎರಡುಮಾತನ್ನು ಹೇಳಬೇಕಾಗಿದೆ. ಇದರಿಂದ ಮಲೆನಾಡಿನಲ್ಲಿ ಅನುಕೂಲವಾಗಿದೆ. ಆದರೆ ಇದರಲ್ಲೂ ಕೂಡ ಒಂದು ಶೋಚನೀಯವಾದ ಅಂಶವಿದೆ. ಅದೇನೆಂದರೆ, ಈಗ ಮಲೆನಾಡಿನಲ್ಲಿ ಈ ಡಿ. ಡಿ. ಟಿ. ಯನ್ನು ಸ್ಪ್ರೇ ಮಾಡುತ್ತಿರುವುದು ಕೇವಲ ಎಲ್ಲೆಲ್ಲಿ 5,000 ಪ್ರಜಾಸಂಖ್ಯೆ ಇದೆಯೋ ಅಂಥಾಗ್ರಾಮಗಳಲ್ಲಿ ಮಾತ್ರ. ಆದರೆ ಅದೇ ಗ್ರಾಮಗಳ ಪಕ್ಕದಲ್ಲಿರುವ ಇತರೇ ಗ್ರಾಮದವರು ಆ ಮಲೇರಿಯಾದಿಂದ ನರಳಿಸಾಯುತ್ತಿದ್ದರೂ, ಅವರಿಗೆ ಈ ಅನುಕೂಲವನ್ನು ಕಲ್ಪಿಸಿ ಕೊಡುತ್ತಿಲ್ಲ. ಕಾರಣವೇನೆಂದರೆ, ಅಲ್ಲಿ 5,000 ಜನಸಂಖ್ಯೆ ಇಲ್ಲ. ಇದೆಂಥಾ ಶೋಚನೀಯವಾದ ವಿಚಾರ ! ಆ ಇಲಾಖೆಯವರನ್ನು ಕೇಳಿದರೆ, ನಾವು ಆ ಹಳ್ಳಿಗಳಿಗೆಲ್ಲ ಬರುವುದಕ್ಕಾಗುವುದಿಲ್ಲ, ನಮ್ಮಲ್ಲಿ ಹೆಚ್ಚಿನ ಸಿಬ್ಬಂದಿಯಿಲ್ಲ,ಅಲ್ಲಿ ಜನಸಂಖ್ಯೆ ಕಡಿಮೆ, ಇತ್ಯಾದಿ ಅನೇಕ ಕಾರಣಗಳನ್ನು ಹೇಳಿ ಬಿಡುತ್ತಾರೆ. ಆದಕಾರಣ ನಾನು ತಮ್ಮಲ್ಲಿ ಸಲಹೆ ಮಾಡತಕ್ಕದ್ದೇನೆಂದರೆ ಮಲೆನಾಡಿನಲ್ಲಿರತಕ್ಕ ಪ್ರತಿಯೊಂದು ಹಳ್ಳಿಗೂ, ಜನಸಂಖ್ಯೆಯ ಲೆಕ್ಕನೋಡದೆ ಈ ಡಿ.ಡಿ.ಟಿ. ಸ್ಪ್ರೇಮಾಡುವಂತೆ ಮಾಡಬೇಕೆಂದು ಸೂಚಿಸುತ್ತೇನೆ. ಇದೇರೀತಿ ಬೈಲು ಪ್ರದೇಶದಲ್ಲಿಯೂ ಸಹ ಕೆಲವು ಕಡೆ ನಾಲಾವಗೈರೆಗಳಿರುವಲ್ಲಿ, ಮಲೆನಾಡಿಗಿಂತಲೂ ಜನರು ಹೆಚ್ಚು ಹೆಚ್ಚಾಗಿ ಆ ಮಲೇರಿಯಾ ರೋಗದಿಂದ ನರಳುತ್ತಿದ್ದಾರೆ. ಆದ್ದರಿಂದ ಅಂಥಾಸ್ಥಳಗಳಿಗೂ ಸಹ ಈ ಡಿ. ಡಿ. ಟಿ ಉಪಯೋಗ ಜಾರಿಗೆ ಬರುವಂತೆ ಅನುಕೂಲಗಳನ್ನು ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಅಬ್ಕಾರಿ ವಿಷಯವಾಗಿ ಅನೇಕರು ಮಾತನಾಡಿದ್ದಾರೆ. ಆದ್ದರಿಂದ ನಾನು ಹೆಚ್ಚಾಗಿ ಏನೂ ಹೇಳತಕ್ಕದ್ದಿಲ್ಲ. ಈಗ ತಾವು ಈ ಪಾನನಿರೋಧವನ್ನು ಅತ್ತ ಚಿಕ್ಕಮಗಳೂರು, ಇತ್ತ ತುಮಕೂರು ಜಿಲ್ಲೆಗಳಲ್ಲಿ ಜಾರಿಗೆತಂದು, ಮಧ್ಯೆ ಹಾಸನ ಜಿಲ್ಲೆಗೆ ವಿಪರೀತ ತೊಂದರೆಯುಂಟಾಗಿದೆ. ಹಾಗಾದರೆ, ನಾವೇನು ಸೌಖ್ಯವಾಗಿರಬೇಡವೇ ಸ್ವಾಮಿ! ಜಾರಿಗೆ ತರುವವರಾಗಿದ್ದರೆ ಈ ನಾಲ್ಕು ಜಿಲ್ಲೆಗಳಲ್ಲೂ ಸಂಪೂರ್ಣವಾಗಿ ತನ್ನಿ. ಇಲ್ಲವಾದರೆ ಇದರಿಂದ ತುಂಬಾ ತೊಂದರೆಗಳಾಗುತ್ತೆ. ನಿಮಗೆ ಈ ಬಾಬಿನಿಂದ ಬರುವ ವರಮಾನ ಕಮ್ಮಿಯಾಗುತ್ತದೆಂಬ ಶಂಕೆ ನಿಮಗೇನಾದರೂ ಇದ್ದರೆ ಅದಕ್ಕೆ ಪ್ರತಿಯಾಗಿ ತಾವು ಯಾವುದಾದರೂ ಒಂದು ರೂಪದಲ್ಲಿ ಒಂದು ಸ್ಪೆಷಲ್ ತೆರಿಗೆಯನ್ನು ಬೇಕಾದರೂ ಹಾಕಿ, ನಾವು ಕೊಡಲು ತಯಾರಿದ್ದೇವೆ. ಆದರೆ ನೀವೀಗ ನಡೆಸುತ್ತಿರುವ ರೀತಿಯಿಂದ ನಾವು ತಲೆಎತ್ತಿಕೊಂಡು ತಿರುಗಾಡದಂತೆ ಆಗಿಹೋಗಿದೆ. ಇದನ್ನಾದರೂ ತಾವು ಗಮನಕ್ಕೆ ತೆಗೆದುಕೊಂಡು ತಕ್ಕ ಏರ್ಪಾಡನ್ನು ಕೂಡಲೇ ಮಾಡಬೇಕೆಂದು ಸೂಚನೆ ಕೊಟ್ಟು ಈ ಬಡ್ಜೆಟ್ಟನ್ನು ಸ್ವಾಗತಿಸುತ್ತೇನೆಂದು ಹೇಳಿ, ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ, ನಿಮ್ನ ವರ್ಗ).—ಸ್ವಾಮಿ, ನಮ್ಮ ಹಣಕಾಸಿನ ಸಚಿವರು ಮಂಡಿಸಿರತಕ್ಕ ಆಯವ್ಯಯ ಪಟ್ಟಿಯ ವಿಚಾರದಲ್ಲಿ ನಾನು ಹೆಚ್ಚಾಗಿ ಏನನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಮಗೆ ಈಗ ಒಂದು ಹೊಸ ಸನ್ನಿವೇಶವುಂಟಾಗಿ ಅದಕ್ಕನುಗುಣವಾಗಿ ಈ ಬಡ್ಜೆಟ್ಟೂ ಸಹ ಬದಲಾವಣೆ ಹೊಂದಿ, ಬಹಳ ಬುದ್ಧಿವಂತಿಕೆಯಿಂದ ತಯಾರುಮಾಡಲ್ಪಟ್ಟದ್ದಾಗಿದೆ. ಇದನ್ನು ಸ್ವಾಗತಿಸುತ್ತ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ,

ನಿಮ್ನ ತರಗತಿಯವರ ವಿದ್ಯಾಭ್ಯಾಸದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಆಡುತ್ತೇನೆ. ಕೋಮುವಾರು ಹಾಸ್ಟಲುಗಳಿರಬಾರದೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಅದೇ ಮಟ್ಟದಲ್ಲಿ ಇವರಿಗೆ ಎಲ್ಲಾ ಕಡೆಗಳಲ್ಲೂ ಅಂದರೆ ಪ್ರತಿಯೊಂದು ಹಾಸ್ಟಲು, ಸ್ಕೂಲು, ಕಾಲೇಜು ಇತ್ಯಾದಿಗಳಲ್ಲೆಲ್ಲಾ ಅದನ್ನು ಅನುಸರಿಸುವುದಾದರೆ ಬಹಳ ಸಂತೋಷ. ಆ ಭಾವನೆ ಇಂದೇ ಮಾಯವಾಗಲಿ; ನನಗೆ ಅದೂ ಕೂಡ ರಾಜಿಯಿದೆ. ಆದರೆ ಯಾರು ಹಾಗೆ ಹೇಳುತ್ತಾರೊ, ಅವರು ಮಾತ್ರ ಅದನ್ನಿಟ್ಟುಕೊಂಡು, ಇತರರಿಗೆ ಬರಿ ಬಾಯಿ ಮಾತುಗಳಿಂದ ಹೇಳುವುದು ಪ್ರಯೋಜನವಿಲ್ಲ. ನಾವು ಯಾರು ಯಾರು ಈಗ ಈ ತತ್ವವನ್ನು ಆಚರಣೆಗೆ ತರಬೇಕೆಂದು ಹೇಳುತ್ತಿದ್ದೇವೋ, ಅವರೂ, ನಮ್ಮ ಸರ್ಕಾರದವರೂ, ಮತ್ತು ಈ ಮಾನ್ಯ ಸಭಾಸದಸ್ಯರೂ, ಹಾಗೂ ಸಾರ್ವಜನಿಕರೂ ಎಲ್ಲರೂ ಇದರಲ್ಲಿ ಸಹಕರಿಸಿ, ಎಲ್ಲರೂ ಒಂದೇ ರೀತಿ ಎಂಬ ಭಾವನೆಯಿಂದ ವರ್ತಿಸುತ್ತಾ ಹೋಗತಕ್ಕದ್ದು ಉತ್ತಮವಾದುದೆಂದು ನಾನು ತಮ್ಮೆಲ್ಲರಲ್ಲೂ ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ. ನಮ್ಮ ಸ್ಟೇಟ್ ಸೆಕ್ಯುಲರ್ ಸ್ಟೇಟ್. ನಮ್ಮ ನೀತಿ ಅದಕ್ಕನುಗುಣವಾಗಿರಬೇಕು. ಇಲ್ಲವಾದರೆ ಅನರ್ಥಕಾರಿಯಾಗುತ್ತದೆ. ದೇಶದಲ್ಲಿ ಅಶಾಂತಿ ಮೂಡುತ್ತದೆ. ಈ ಭಾವನೆ ಈಗ ಅನೇಕರಲ್ಲಿರುವಂತೆ ಕಂಡುಬರುತ್ತಿದೆ. ಕನ್ನಡಿ ಹಿಡಿದು ನೋಡಿದರೆ ಹೇಗೆ ಕಾಣುತ್ತದೆಯೋ ಹಾಗೆ ನಮಗೆ ಇದು ಕಾಣುತ್ತಿದೆ. ಇದು ಸರಿಯಾದುದೇ ಅಥವಾ ಅಲ್ಲವೇ ಎಂಬುದನ್ನು ಯೋಚಿಸಿ ಅನೂಚಾನವಾಗಿ ಬಂದಿರುವ ಈ ಪದ್ಧತಿಯನ್ನು ತೆಗೆದು ಹಾಕಿ ಸರ್ವರಿಗೂ ಸಾಮಾನವಾದ ಅವಕಾಶಗಳನ್ನು ಕಲ್ಪಿಸಲು ದಾರಿಮಾಡಬೇಕಾಗಿದೆಯೆಂದು ನಾನು ತಮ್ಮೆಲ್ಲರಲ್ಲಿಯೂ ಅತಿವಿನಯದಿಂದ ಕೇಳಿಕೊಳ್ಳುತ್ತೇನೆ.

1944ನೆಯ ಇಸವಿಯಲ್ಲಿ ಮರಾಮತ್ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರುಗಳ 40 ಸ್ಥಾನಗಳು ಖಾಲಿಯಾಗಿದ್ದಾಗ ಅವುಗಳನ್ನು ಭರ್ತಿಮಾಡಬೇಕಾಗಿ ಬಂದಾಗ ಸೇಕಡ 50ರಷ್ಟನ್ನು ಸೀನಿಯಾರಿಟಿ ಪ್ರಕಾರ ಭರ್ತಿಮಾಡಬೇಕೆಂದು ಆಗ್ಯೆ ಒಂದು ಸರ್ಕಾರಿ ಆಜ್ಞೆಯೇ ಜಾರಿಯಲ್ಲಿತ್ತು. ಅದರಂತೆ 20 ಸ್ಥಾನಗಳನ್ನು ಭರ್ತಿ ಮಾಡಿದರು. ಅದೇ ಕಾಲದಲ್ಲಿ ಇನ್ನೂ 20 ಜನ ಹೊಸದಾಗಿ ಪ್ರೊಬೇಷನರುಗಳನ್ನು ತೆಗೆದುಕೊಂಡರು. ಕಳೆದ ವರ್ಷ ಎಂದರೆ, 1949ರಲ್ಲಿ 63 ಸ್ಥಾನಗಳಿಗೆ ಭರ್ತಿಮಾಡಲಾಯಿತು. ಆಗ ನೋಡಿದ್ದರಲ್ಲಿ ಅದರ ಹಂಚುವಿಕೆಯೇ ಒಂದು ವಿಶೇಷವಾಗಿತ್ತು. ಹಿಂದಿನ ತತ್ವವನ್ನೇ ಬಿಟ್ಟು ಮುಂದುವರಿದವರು, ಹಿಂದುಳಿದವರು ಮುಂದೆ ಬರಬೇಕೆಂದು ಬೇರೊಂದು ಮಾರ್ಗವನ್ನು ಅನುಸರಿಸಲು ಪ್ರಾರಂಭಮಾಡಿದರು. ಹಿಂದುಳಿದ ಪಂಗಡದವರನ್ನು ಮೇಲಕ್ಕೆ ತರಬೇಕೆಂಬ ಸದುದ್ದೇಶದಿಂದ ಸುಮಾರು 32 ಜನ ಹಿಂದುಳಿದ ಪಂಗಡದವರ ಸೀನಿಯಾರಿಟಿಯನ್ನು ಗಮನಿಸದೆ ಅದಕ್ಕೆ ವಿರೋಧವಾಗಿ ಮೇಲಕ್ಕೆ ತಂದಿರಿ. ಆಗ ನಿಮ್ನ ಪಂಗಡಕ್ಕೆ ಸೇರಿದ ಇಬ್ಬರನ್ನು ಮೇಲಕ್ಕೆ ತರಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ.

"There shall be equal opportunities for all citizens in matters relating to employment or appointment to any office under the State."

ಎಂದು ನಮ್ಮ ಭಾರತ ರಾಜ್ಯಾಂಗದ 16ನೆಯ ವಿಧಿಯಲ್ಲಿ ಹೇಳಿದೆ. ಅದರಲ್ಲಿಯೂ ಎಲ್ಲರಿಗೂ ಸಮಾನಾವಕಾಶ ಕೊಡಬೇಕೆನ್ನುವುದರಲ್ಲಿ ಜಾತಿ ಮತ ಭೇದವನ್ನು ಸೂಚಿಸಿಲ್ಲ......................

ಅಧ್ಯಕ್ಷರು.—ಆ ಸೆಕ್ಷನ್ ಸರ್ಕಾರದವರಿಗೂ ಗೊತ್ತಿದೆ ನೀವು ಓದಬೇಕಾಗಿಲ್ಲ.

ಶ್ರೀ ಎಂ. ಮಾದಯ್ಯನವರು.—ಈ ವಿಧಿಯನ್ನು ಏತಕ್ಕೆ ಉಲ್ಲೇಖಿಸಿ ಹೇಳುತ್ತಿದ್ದೇನೆಂದರೆ, ಸರ್ಕಾರದವರು ರಾಜ್ಯಾಂಗದಲ್ಲಿ ಅಡಗಿರತಕ್ಕ ಈ ತತ್ವಕ್ಕನುಗುಣವಾಗಿ ಎಷ್ಟು ಮಟ್ಟಿಗೆ ಕೆಲಸ ಮಾಡಬೇಕಾಗಿದೆಯೆಂಬುದನ್ನು ಸೂಚಿಸುವುದಕ್ಕೆ, 1922ನೆಯ ಇಸವಿಯಲ್ಲಿ ಸರ್ಕಾರದವರು ಒಂದು ಸರ್ಕಾರಿ ಹುಕುಮನ್ನು ಸಾದರುಮಾಡಿ ಎಲ್ಲಾ ಕೆಲಸಗಳಲ್ಲಿಯೂ ನಿಮ್ನ ತರಗತಿಯವರಿಗೆ ಮೊದಲು ಅವಕಾಶ ಕೊಡಬೇಕೆಂದು ಮಾಡಿದ್ದರು. ಆ ಹುಕ್ಕುಂ ಆದಮೇಲೆ, 1922ನೆಯ ಇಸವಿಯಲ್ಲಿ "ಕಂಟ್ರೋಲರ್ ಆಫೀಸಿನ ಕೆಲವರು ನಿಮ್ನ ತರಗತಿಯವರು ನೌಕರಿಗೆ ಬಂದರೆಂದು ಹೇಳಿ ಆ ಹುಕುಂಮನ್ನು 1928ರಲ್ಲಿ ವಜಾ ಮಾಡಿ ಬಿಟ್ಟರು. ಅಲ್ಲಿಂದ ಇಲ್ಲಿಯವರೆಗೂ ನೋಡಿದ್ದರಲ್ಲಿ ಒಂದೊಂದು regime ನಲ್ಲೂ ಕೆಲವು ಕೋಮುಗಳ ಜನರು ಮುಂದೆ ಬರುತ್ತಾರೆಂದು ಜನರು ಆಡಿಕೊಳ್ಳುತ್ತಿದ್ದಾರೆ. ನಿಮ್ನ ತರಗತಿಯವರನ್ನು ಮಾ ಯಾರೂ ಕೇಳುವವರಿಲ್ಲ. ಆದರೂ ಇವರ ಆರ್ತ ಧ್ವನಿ ಯಾರನ್ನೂ ಬಿಡುವುದಿಲ್ಲ! ಎಲ್ಲರನ್ನೂ ಅದು ಸುಡುತ್ತದೆ. ಈ ಹಿಂದೆ ನಮ್ಮಲ್ಲಿ 1944ರಲ್ಲಿ ಒಬ್ಬರು ಶ್ರೀ ಎಸ್. ಪುಟ್ಟಸ್ವಾಮಿ ಎಂಬುವರು ಬಿ.ಇ. ಗ್ರಾಜುಯೇಟ್ ಆಗಿದ್ದರೂ ಅವರಿಗೆ ಒಂದು ಸರಿಯಾದ ಕೆಲಸ ಮರಾಮತ್ ಇಲಾಖೆಯಲ್ಲಿ ಸಿಕ್ಕಲಿಲ್ಲ. ಅವರೀಗ ಮದ್ರಾಸಿಗೆ ಹೋಗಿ ಅಲ್ಲಿ ಕೆಲಸ ಸಿಕ್ಕಿ ಅಲ್ಲೇನೋ 500 ರೂಪಾಯಿ ಸಂಬಳದಲ್ಲಿದ್ದಾರೆಂದು ತಿಳಿದು ಬಂದಿದೆ. Now there are only two B.E. graduates amongst us. One is Sri Gangahunmiah and the other is Sri Shamanna ಮತ್ತೊಬ್ಬರು ರುದ್ರಯ್ಯ ಎಂಬುವವರು ಈಗ ಅಮೇರಿಕಾಕ್ಕೆ ಹೋಗಿ M.Sc ಮಾಡಿಕೊಂಡು ಪಶುವೈದ್ಯದಲ್ಲಿ specialist ಆಗಿದ್ದಾರೆ. ಈ ಪ್ರಕಾರ ನಿಜವಾಗಿ ಅರ್ಹತೆಯುಳ್ಳ ಜನರು ನಮ್ಮಲ್ಲಿದ್ದರೂ ಅವರಿಗೆ ಸರಿಯಾದ ಪ್ರೋತ್ಸಾಹ ಸಿಕ್ಕುತ್ತಿಲ್ಲ.

ಇನ್ನು ಪಾನನಿರೋಧದ ವಿಚಾರ ಹೇಳುತ್ತೇನೆ. ಇದರ ವಿಷಯದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿಯನ್ನು ನೋಡಿ ನನಗೆ ನಿಜವಾಗಿಯೂ ಬಹಳ ವ್ಯಸನವಾಗುತ್ತದೆ. ಈ ನೀತಿಯನ್ನು ತಾವು ಮುಂದುವರಿಸುವುದರಿಂದ ಎಷ್ಟೋ ವರಮಾನ ಕಡಿಮೆಯಾಗುತ್ತದೆಂದು ಹೇಳಿ ಈಗ ನಿಲ್ಲಿಸಿದ್ದಾರೆ. ನಾನಾದರೂ ಒಂದು ಹೇಳುತ್ತೇನೆ. ಈ ಖೋತಾ ಬೀಳತಕ್ಕ ವರಮಾನವನ್ನು ಸರಿತೂಗಿಸುವುದಕ್ಕೆ ನಿಮಗೆ ಬೇರಾವ ಮಾರ್ಗಗಳೂ ಇಲ್ಲದಿದ್ದರೆ ನಾನು ತಮ್ಮ ಮಾತನ್ನೊಪ್ಪುತ್ತಿದ್ದೆ." ಈ ಖೋತಾ ಆಗುವ ವರಮಾನವನ್ನು ಸರಿದೂಗಿಸುವುದಕ್ಕೆ ಅನೇಕ ಸಲಹೆಗಳನ್ನು ಪಾನನಿರೋಧ ಸಮಿತಿಯವರೇ ಮಾಡಿದ್ದಾರೆ. ಅನೇಕ ರೀತಿಯ ತೆರಿಗೆಗಳನ್ನು ಸೂಚಿಸಿದ್ದಾರೆ. ಈ ಕಳೆದ ಎರಡು ವರ್ಷಗಳಿಂದ ಐದು ಡಿಸ್ಟ್ರಿಕ್ಟ್‌ಗಳಲ್ಲಿ ಜಾರಿಗೆ ತಂದದ್ದರಿಂದ ಲಕ್ಷಗಟ್ಟಲೆ ರೂಪಾಯಿಗಳು ಖೋತಾ ಬೀಳುತ್ತವೆಂದು ಹೇಳಿ ಬಡವರಮೇಲೆ ಸೆಸ್ಸನ್ನು ಹಾಕಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈಗ ಈ ಕಾರ್ಯನೀತಿಯನ್ನು ಬದಲಾಯಿಸುವುದು ಸರಿಯಲ್ಲ. ಆದ್ದರಿಂದ ಸರ್ಕಾರದ ಪಾನನಿರೋಧ ನೀತಿಗೆ ಪುರಸ್ಕಾರ ಕೊಡಬೇಕೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನೊಂದು ಪ್ರಶ್ನೆಯನ್ನು ಕಳುಹಿಸಿಕೊಟ್ಟಿದ್ದೆ. ಅದು ಈರೀತಿ ಇದೆ.

"the reasons as to why total prohibition was not introduced in all parts of the State." ಇದಕ್ಕೆ ಉತ್ತರವಾಗಿ " it is the accepted policy of the Government to extend prohibition in the entire State gradually" ಎಂದು ಹೇಳಿದ್ದಾರೆ. ಇಲ್ಲಿ 'gradually' ಎನ್ನುವುದರ ಅರ್ಥವೇನು! Does it mean twenty, thirty or forty years? ಅದರಲ್ಲಾದರೂ ಒಂದು ನಿರ್ದಿಷ್ಟವಾದ ಕಾಲವನ್ನು ತಿಳಿಸಿ. ಯಾವ ಹಣ tainted money (ಪಾಪದ ಹಣ) ಎಂದು ಹೇಳಲ್ಪಟ್ಟಿದ್ದಿತೋ ಅದನ್ನು ತೆಗೆದುಕೊಳ್ಳಬೇಡಿ. ನಮ್ಮ ನೆರೆ ಪ್ರಾಂತ್ಯಗಳು ಒಮ್ಮೆಯೇ ಪೂರ್ತಿ ಪಾನನಿರೋಧವನ್ನು ಅನುಸರಿಸುವಾಗ ನಮ್ಮ ಮೈಸೂರಿನಲ್ಲಿ ಇಟ್ಟುಕೊಂಡಿದ್ದಾರೆ! ಅದೊಂದು black spot ಇದ್ದಂತಿದೆ. ಅದು ಹೋಗಿ ನಮ್ಮ ದೇಶದ ಧವಳಕೀರ್ತಿ ಎಲ್ಲೆಲ್ಲೂ ಪ್ರಸರಿಸಲೆಂದು ಹಾರೈಸುತ್ತೇನೆ.

ಶ್ರೀ ಕೆ. ಟಿ. ಭಾಷ್ಯಂರವರು (ನ್ಯಾಯಾಂಗ ಮತ್ತು ಕಾರ್ಮಿಕ ಸಚಿವರು).—ಅಧ್ಯಕ್ಷರೇ, ನನ್ನ ವ್ಯಾಪ್ತಿಯಲ್ಲಿರತಕ್ಕ ಇಲಾಖೆಗಳ ವಿಷಯದಲ್ಲಿ ಹೆಚ್ಚಿನ ಟೀಕೆಗಳೇನೂ ಆಗಿಲ್ಲ. ಅದಕ್ಕಾಗಿ ನಾನು ಸದಸ್ಯರನ್ನು ವಂದಿಸುತ್ತೇನೆ.

ಒಬ್ಬ ಸದಸ್ಯರು.—ಸರಿಯಾಗಿ ಕೆಲಸಮಾಡಿದ್ದೀರಿ.

ಶ್ರೀ ಕೆ. ಟಿ. ಭಾಷ್ಯಂರವರು.—ಒಬ್ಬಿಬ್ಬರು ಬಿಟ್ಟು ಮಿಕ್ಕವರು ಅಭಿನಂದನೆಗಳನ್ನು ಸೂಚಿಸಿಯೂ ಮಾತನಾಡಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ವಂದನೆಗಳು. ಇನ್ನು ಕೆಲವರು ಸೂಚನೆಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವು ಬಹಳ ಸೂಕ್ತವಾದ ಸೂಚನೆಗಳೇ. ಅವುಗಳನ್ನು ನಾವು ಕೈಲಾದಮಟ್ಟಿಗೂ ಅವಲಂಬಿಸುತ್ತೇವೆ. ಶ್ರೀಮಾನ್ ಆಚಾರ್ಯರವರು ಮನೆ ಕೈಗಾರಿಕೆಗಳನ್ನೂ ಗ್ರಾಮ ಕೈಗಾರಿಕೆಗಳನ್ನೂ ಹೇಗೆ ಪ್ರೋತ್ಸಾಹಿಸಬೇಕೆಂದು ಹೇಳಿದರು. ಅವರ ಸಲಹೆ ಸರಿಯಾಗಿದೆ. ಸರ್ಕಾರದವರು ಅದೇ ರೀತಿ ಮಾಡುವುದಕ್ಕೆ ಪ್ರಯತ್ನಪಡುತ್ತಾರೆ. ಕೆಲವು ಸದಸ್ಯರು heating current ವಿಷಯದಲ್ಲಿ ಹೆಚ್ಚಿಗೆ ತೆರಿಗೆ ಹಾಕಬಾರದು, ಈಗಿರತಕ್ಕ ಆರು ಕಾಸಿನ ದರವೇ ಇರಬೇಕೆಂದು ಹೇಳಿದರು. ಮತ್ತೊಬ್ಬರು ಇದನ್ನು ಒಂದಾಣೆ ಮಾಡಬಹುದೆಂದು ವಾದಿಸಿದರು. ನಾವು ಎರಡಕ್ಕೂ ಮಧ್ಯಸ್ಥವಾಗಿ 9 ಕಾಸುಗಳನ್ನು ಮಾತ್ರ ಹಾಕಿದ್ದೇವೆ. ಆ ಇಬ್ಬರು ಸದಸ್ಯರುಗಳು ಮಾತನಾಡಿದರಲ್ಲೇ ಒಬ್ಬರಿಗೊಬ್ಬರು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ನಾವು ಅನುಸರಿಸಿರುವ ನೀತಿಯೇ ಸರಿಯೆಂದು ಭಾವಿಸುತ್ತೇನೆ. Heating circuit ಸಾಮಾನ್ಯವಾಗಿ ಉಪಯೋಗಿಸತಕ್ಕವರು ಪಟ್ಟಣವಾಸದವರು. ಅದೂ ಸ್ವಲ್ಪ ಅನುಕೂಲಸ್ಥರೇ. ಹೆಚ್ಚಾಗಿ ಸಳಿದೆ ಉಪಯೋಗಿಸದೆ ಕರೆಂಟ್ ಉಪಯೋಗಿಸಿಕೊಳ್ಳಲೆಂದು ಈ ಸೌಲಭ್ಯವನ್ನು ಸರ್ಕಾರದವರು ಒದಗಿಸಿದ್ದಾರೆ. ಸಾಮಾನ್ಯವಾಗಿ heating circuit ಹಾಕಿಸಿ, ಸ್ಟೌವ್ ಮುಂತಾದುವುಗಳನ್ನು ತೆಗೆದುಕೊಳ್ಳುವಂಥವರು ಅನುಕೂಲಸ್ಥರೇ ಆಗಿರಬೇಕು. ಅಂಥವರು 9 ಕಾಸು ಕೊಡುವುದೇನೂ ಹೆಚ್ಚಲ್ಲವೆಂದು ಹೇಳಬಹುದು. ಅಂಥ ಶಕ್ತಿಯುತರಾಗಿರುವವರಿಂದ ಸರ್ಕಾರದವರು ಸ್ವಲ್ಪ ಹೆಚ್ಚಿಗೆ ಫಾಯಿದೆ ಹೊಂದುವುದು ತಪ್ಪಲ್ಲ. ಆದ್ದರಿಂದ 9 ಕಾಸುಗಳನ್ನು ಹಾಕಿರುವುದು ಸರಿಯೆಂದು ನಮ್ಮ ಅಭಿಪ್ರಾಯ. ಆದರೆ, ಅದೇ ವ್ಯವಸಾಯದ ಪಂಪುಗಳ ವಿಷಯ ನೋಡುವುದಾದರೆ ವ್ಯವಸಾಯವೇ ನಮ್ಮ ದೇಶದ ಪ್ರಗತಿಗೆ ಮೂಲ ಕಾರಣವೆಂದು ಮನಗಂಡು, ವ್ಯವಸಾಯಗಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ವ್ಯವಸಾಯದ ಪಂಪುಗಳಿಗೆ ಕೇವಲ 6 ಕಾಸಿನಂತೆ ತೆರಿಗೆ ಹಾಕಿದ್ದೇವೆ. ಇದರಲ್ಲೂ ವ್ಯಾಪಾರದ ಬೆಳೆಗಳನ್ನು ಬೆಳೆದರೆ ಅವರಿಗೆ ಒಂದಾಣೆ ಗೊತ್ತುಮಾಡಿದ್ದೇವೆ. ಶ್ರೀಮಾನ್ ಸುಬ್ಬರಾಯರು ಇದನ್ನು ಕೂಡದು ಎಂದು ವಾದಿಸಿದರು.

ಶ್ರೀ ಜಿ. ಎ. ಆಚಾರ್ಯರವರು.—ಇದನ್ನು ಹೇಗೆ ಕಂಡು ಹಿಡಿಯುತ್ತೀರಿ?

ಶ್ರೀ ಕೆ. ಟಿ. ಭಾಷ್ಯಂರವರು.—ಅದಕ್ಕಾಗಿ ಕಮರ್ಷಿಯಲ್ ಕ್ರಾಪ್ ಎಂದರೆ ಏನೆಂಬುದನ್ನು ವಿವರಿಸಿದ್ದೇವೆ. ಆಲೂಗೆಡ್ಡೆ, ಬಾಳೆಹಣ್ಣು ಮುಂತಾದ ಬೆಳೆಗಳೆಲ್ಲಾ ಕಮರ್ಷಿಯಲ್ ಕ್ರಾಪ್ ಎಂದು ಹೇಳಿದ್ದೇವೆ. ಕೆಲವರು ಇವುಗಳೂ ಆಹಾರದ ಬೆಳೆಗಳೆಂದೇ ಭಾವಿಸಬೇಕೆಂದು ಹೇಳಿಕೊಂಡಿದ್ದರಮೇಲೆ ಅದಕ್ಕೂ ಒಪ್ಪಿಕೊಂಡು ಈಚೆಗೆ ಕಮರ್ಷಿಯಲ್ ಕ್ರಾಪ್ ಎಂದರೆ ಹೊಗೆಸೊಪ್ಪು, ಉಪ್ಪುನೇರಳೆ ಈ ರೀತಿಯಾದ ಕೆಲವನ್ನು ಮಾತ್ರ ನಿಗದಿಮಾಡಿ, ಇವುಗಳಮೇಲೆ ಮಾತ್ರ ಒಂದಾಣೆ ತೆಗೆದುಕೊಳ್ಳುತ್ತೇವೆ. ಇದನ್ನು ಹೇಗೆ ಕಂಡುಹಿಡಿಯುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಿದರು. ಎಲ್ಲಾ ಕಡೆಗಳಲ್ಲಿಯೂ ಆಗಾಗ್ಗೆ ತನಿಖೆಮಾಡಿ ವರದಿಮಾಡುವುದಕ್ಕೆಂದು ಇನ್ಸ್‌ಪೆಕ್ಟರುಗಳಿರುತ್ತಾರೆ. ಊರಿನ ಪಟೇಲ್ ಶ್ಯಾನುಭೋಗರಿಂದ ಪಹಣಿ ವರದಿ ಬರುತ್ತದೆ. ಅಲ್ಲದೆ ಇನ್ನೊಂದು ರಿಯಾಯಿತಿಯನ್ನು ಕೂಡ ಆಹಾರ ಬೆಳೆಗಳಿಗೆ ತೋರಿಸಿದ್ದೇವೆ. ಯಾರಾದರೂ ಪಂಪು ಹಾಕಿರುವವರು ತಮ್ಮ ಜಮೀನಿನಲ್ಲಿ ಅರ್ಧಭಾಗಕ್ಕೆ ಮೇಲ್ಪಟ್ಟ ಪ್ರದೇಶದಲ್ಲಿ ಆಹಾರ ಪದಾರ್ಥಗಳನ್ನು ಬೆಳೆದಿದ್ದು ಮಿಕ್ಕ ಭಾಗದಲ್ಲಿ ಕಮರ್ಷಿಯಲ್ ಕ್ರಾಪ್ ಬೆಳೆದಿದ್ದರೂ, ಎಲ್ಲ ಭಾಗವನ್ನೂ ಒಟ್ಟಿಗೆ ಆಹಾರದ ಬೆಳೆಯೆಂದೇ ಪರಿಗಣಿಸಿ ಅರ್ಧಾಣೆಯಂತೇ ಚಾರ್ಜ್ ಮಾಡುತ್ತೇವೆ. ಅರ್ಧಕ್ಕೆ ಕಡಿಮೆ ಭಾಗದಲ್ಲಿ ಆಹಾರದ ಬೆಳೆಗಳಿದ್ದರೆ, ಪೂರ್ತಾ ಪ್ರದೇಶವನ್ನೂ ಕಮರ್ಷಿಯಲ್ ಕ್ರಾಪ್ ಎಂದು ಭಾವಿಸಿ ಒಂದಾಣೆಯಂತೆ ವಸೂಲು ಮಾಡುತ್ತೇವೆ. ಇದೂ ಸಮಂಜಸವಾಗಿ ಕಾಣುತ್ತದೆ. ಏಕೆಂದರೆ, ಕಮರ್ಷಿಯಲ್ ಕ್ರಾಪ್ ಹಾಕುವವರು ಸಾಮಾನ್ಯವಾಗಿ ಹೆಚ್ಚಿಗೆ ಜಮೀನಿದ್ದು ಅನುಕೂಲಸ್ಥರಾಗಿರುವರೇ ಆಗಿರುತ್ತಾರೆ. ಅಂಥವರಿಂದ ಒಂದಾಣೆ ವಸೂಲುಮಾಡುವುದು ನ್ಯಾಯ ಮತ್ತು ಧರ್ಮ. ಹಾಗೆ ಮಾಡುವುದರಿಂದ ಭಾಧಕವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಆಹಾರ ಪದಾರ್ಥಗಳನ್ನು ಬೆಳೆಯುವವರು ಬಡವರು.

ಶ್ರೀ ಕೆ. ಟಿ. ಭಾಷ್ಯಂರವರು.—ಆದರೆ ಕಮರ್ಷಿಯಲ್ ಕ್ರಾಪ್ ಬೆಳೆಯುವವರು ಸ್ವಲ್ಪ ಅನುಕೂಲಸ್ಥರೇ. ಆದ್ದರಿಂದ ಅವರಿಗೆ ಸ್ವಲ್ಪ ಹೆಚ್ಚಾಗಿ ತೆರಿಗೆ ಹಾಕಬಹುದೆಂಬ ಅಭಿಪ್ರಾಯವಿದೆ. ಅದು ಸಮಂಜಸವಾಗಿಯೂ ಇದೆ. ಹಾಗೆ ಮಾಡುವುದರಿಂದ ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೂ ಸಹ ಅನುಕೂಲವಾಗುತ್ತದೆ. ಕಮರ್ಷಿಯಲ್ ಕ್ರಾಪ್‌ಗೆ ಒಂದಾಣೆ ಹಾಕಿ ಆಹಾರ ಪದಾರ್ಥಗಳಿಗೆ ಉತ್ತೇಜನ ಕೊಡಬಹುದು. ಆ ಮನೋಭಾವನೆಯಿರುವುದರಿಂದ ದೇಶಕ್ಕೂ ಒಳ್ಳೆಯದು, ಹೆಚ್ಚು ಬೆಳೆಯೂ ಬರುತ್ತದೆ. ಆದ್ದರಿಂದ ಕಮರ್ಷಿಯಲ್ ಕ್ರಾಪ್‌ಗೆ ಒಂದು ಆಣೆ ಹಾಕಿರುವುದನ್ನು ಕಡಮೆ ಮಾಡುವುದು ಸರಿಯಲ್ಲ. ಆಮೇಲೆ ಶ್ರೀ ಮ್ಯಾಸ್ಕರೇನಸ್‌ರವರು ಅಲ್ಲಲ್ಲಿರುವ ಇರಿಗೇಷನ್ ಪಂಪುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅದಕ್ಕೆ ಒಬ್ಬ ಇನ್ಸ್‌ಪೆಕ್ಟರನ್ನು ನೇಮಕ ಮಾಡಬೇಕು ಎಂದು ಹೇಳಿದ್ದಾರೆ, ಅದಕ್ಕೆ ಸ್ವಲ್ಪ ತೊಂದರೆಯಿದೆ, ಹೇಗೆ ಮಾಡಿದರೆ ಅವ

ರಿಗೆ ಅನುಕೂಲವಾಗುವುದು, ಕೈಲಾದಮಟ್ಟಿಗೂ ಗ್ರಾಮಾಂತರಗಳಲ್ಲಿ ವ್ಯವಸಾಯದ ಪಂಪುಗಳನ್ನು ಕೊಟ್ಟು ರೈತರಿಗೆ ಹೇಗೆ ಸೌಲಭ್ಯವನ್ನೊದಗಿಸಬೇಕು, ಇರುವ ತೊಂದರೆ ಸರಿಪಡಿಸಲು ಯಾವ ರೀತಿ ಏರ್ಪಾಡು ಮಾಡೋಣ ಎಂದು ಆಲೋಚನೆ ಮಾಡುತ್ತಿದ್ದೇವೆ. ಕೈಲಾದಮಟ್ಟಿಗೆ ಸಹಾಯ ಮಾಡುತ್ತೇವೆ.

ಶ್ರೀ ಕೆ. ಸುಬ್ಬರಾಯರು.—ತರಕಾರಿಯು ಆಹಾರ ಪದಾರ್ಥವೆಂದು ಅದಕ್ಕೆ ವಿನಾಯಿತಿ ಕೊಡುತ್ತೀರಾ?

ಶ್ರೀ ಕೆ. ಟಿ. ಭಾಷ್ಯಂರವರು.—ಅದರಲ್ಲಿ ಅನೇಕ ತರಹ ಇದೆ. ಸರ್ಕಾರಿ ಆಜ್ಞೆಯಲ್ಲಿ ವಿವರಿಸಿರುವಂತೆ ನಡೆದುಕೊಂಡು ಹೋಗುತ್ತಿದೆ. ಅದರಲ್ಲಿ ತೊಂದರೆಯೇನಾದರೂ ಇದ್ದರೆ ಹೇಳಬಹುದು. ಇಂಥಾದ್ದು ಆಹಾರ ಪದಾರ್ಥವಲ್ಲವೆಂದು ಮಾಡಿದ್ದೀರಿ. ಅದರಿಂದ ತೊಂದರೆ. ಅವನ್ನು ಆಹಾರ ಪದಾರ್ಥವೆಂದು ಭಾವಿಸಬೇಕು ಎಂದು ಹೇಳಿದರೆ ಯೋಚನೆ ಮಾಡಿ ಸರಿಪಡಿಸುತ್ತೇವೆ. ಈಗ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಿ ವ್ಯವಸಾಯಕ್ಕೆ ಹೆಚ್ಚಾಗಿ ಒದಗಿಸಬೇಕು ಎಂದು ಮಾನ್ಯ ಸದಸ್ಯರು ಹೇಳಿದರು. ಅದು ವಾಸ್ತವವಾದ ಮಾತು. ಅದಕ್ಕಾಗಿಯೇ ಈ ಸಲ ಬಡ್ಜೆಟ್ಟಿನಲ್ಲಿ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಿ ಇರಿಗೇಷನ್ ಪಂಪುಗಳನ್ನು ಕೊಡಲು 50 ಲಕ್ಷ ರೂಪಾಯಿಗಳನ್ನು ಮಿಸಲಾಗಿಟ್ಟಿದ್ದೇವೆ. ಇದೇ ರೀತಿಯಲ್ಲಿ ಕೈಲಾದಮಟ್ಟಿಗೂ ಎಲ್ಲಾ ಕಡೆಗೂ ವಿದ್ಯುಚ್ಛಕ್ತಿಯನ್ನು ಕೊಟ್ಟು ವ್ಯವಸಾಯ, ಗೃಹಕೈಗಾರಿಕೆ ಮತ್ತು ಗ್ರಾಮ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದಿರುವುದಾಗಿ ಬಡ್ಜೆಟ್ಟಿನಲ್ಲಿ ಹೇಳಿದೆ. ಹೀಗೆ ಜನರಿಗೆ ಎಷ್ಟು ಅನುಕೂಲ ಮಾಡಬಹುದೋ ಅಷ್ಟನ್ನೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ನೀರಾವರಿ ಸೌಕರ್ಯದ ವಿಚಾರವನ್ನು ಒಂದು ಸಲ ಆಗಲೇ ಹೇಳಿದ್ದೇನೆ. 20 ಯೋಜನೆಗಳನ್ನು ತಯಾರಿಸಿದ್ದೇವೆ. ಹೊಸದಾಗಿ 20 ರಿಂದ 40 ಹಾರ್ಸ್ ಪವರ್ ವರೆಗಿನ ಪಂಪುಗಳನ್ನು ಕೊಟ್ಟು ಪಿಕ್ ಅಪ್ ಗಳನ್ನು ಒದಗಿಸುತ್ತೇವೆ. ನಿಲಸೋಗೆ ಬಳಿ ನೀರಾವರಿ ಸೌಕರ್ಯವಿರುವ ಜಾಗದಲ್ಲಿ ಜನರಿಗೆ ಅನುಕೂಲಪಡಿಸಿ ಸುಮಾರು ಒಂದೊಂದು ಜಾಗದಲ್ಲಿ 400—500 ಎಕರೆಗಳಷ್ಟು ಜಮೀನು ತರಿ, ಬಾಗಾಯ್ತು ವ್ಯವಸಾಯಕ್ಕೆ ಬರುವಂತೆ ಮಾಡಿ ಅನುಕೂಲಪಡಿಸಿದ್ದೇವೆ. ಹರಿಹರದ ಬಳಿ 400 ಎಕರೆ ಆಗಲೇ ಸಾಗಾಗುವುದಕ್ಕೆ ಷುರು ಆಗಿದೆ. ಒಂದು ಸಾವಿರ ಎಕರೆಯವರೆಗೂ ಪಿಕ್ ಅಪ್‌ಗಳಿಂದ ಸಾಗುಮಾಡಲು ಅನುಕೂಲಪಡಿಸಿದೆ. ಹೀಗೆ ವಿದ್ಯುಚ್ಛಕ್ತಿಯ ಅನುಕೂಲವನ್ನು ನೀರಾವರಿಗೆ ಒದಗಿಸಿ ಹೆಚ್ಚು ಹೆಚ್ಚಾಗಿ ತರಿ ಮತ್ತು ಬಾಗಾಯ್ತು ಬೆಳೆ ತೆಗೆಯಲು ಜನರಿಗೆ ಅನುಕೂಲ ಮಾಡುತ್ತಿದ್ದೇವೆ. ಸರ್ಕಾರದವರು ಎಷ್ಟೇ ಮಾಡಿದರೂ ಇನ್ನೂ ಹೆಚ್ಚಾಗಿ ಮಾಡಬೇಕೆಂದು ಅಪೇಕ್ಷೆ ಪಡುವುದು ಲೋಕದಲ್ಲಿ ಸಹಜವೇ ಆಗಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮೈಸೂರು ಜಿಲ್ಲೆಯಲ್ಲಿ ಎಲ್ಲಿ ಅನುಕೂಲ ಮಾಡಿದ್ದೀರಿ?

ಶ್ರೀ ಕೆ. ಟಿ. ಭಾಷ್ಯಂರವರು.—ಟಿ. ನರಸೀಪುರ ತಾಲ್ಲೂಕಿಗೆ ಸೇರಿದ ನಿಲಸೋಗೆಯಲ್ಲಿ ಮಾಡಿದೆ. ಇನ್ನೂ ಹೆಚ್ಚಾಗಿ ಮಾಡಬೇಕೆಂದು ಸೂಚನೆ ಕೊಟ್ಟರೆ ನೋಡಿ, ಅನುಕೂಲವಾದರೆ ನೀರಾವರಿ ಪಂಪು ಕೊಡುತ್ತೇವೆ. ಕೈಲಾದಮಟ್ಟಿಗೂ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂಬ ಅಭಿಪ್ರಾಯವಿದೆ.

ಉಪಚುನಾವಣೆಯ ವಿಚಾರದಲ್ಲಿ ಶ್ರೀ ಗುಂಡಪ್ಪಗೌಡರು ಮತ್ತು ಇತರ ಕೆಲವು ಸದಸ್ಯರು ಕೆಲವು ವಿಚಾರ ಹೇಳಿದರು. ಅದನ್ನು ರಾಜ್ಯಾಂಗದ ಆಕ್ಟಿನ 15 ನೆಯ ಭಾಗದಲ್ಲಿ ವಿಶದಪಡಿಸಿದ್ದಾರೆ. ಸಂಸ್ಥಾನಗಳ ಶಾಸನ ಸಭೆಗಳಿಗೆ ಚುನಾವಣೆ ಆಗಬೇಕಾದರೆ ಚುನಾವಣೆ ಕಮಿಷನರ ಮೂಲಕ ಆಗಬೇಕು ಮತ್ತು ಅದು ಅವರ ಹತೋಟಿಯಲ್ಲಿರಬೇಕು. ಎಲೆಕ್ಟೊರಲ್ ರೋಲ್ ಕೂಡ ಅವರ ಮೂಲಕವೇ ಆಗಬೇಕು ಎಂದು ಕಾನೂನಿದೆ.

Sri H. B. GUNDAPPA GOWDA.—Is it under the old franchise or under the new franchise, namely, adult franchise?

ಶ್ರೀ ಕೆ. ಟಿ. ಭಾಷ್ಯಂರವರು.—Adult franchise ಮೇಲೆ ಆಗಬೇಕೆಂದಿದೆ. According to the transitional provisions, "subject to such directions as may be given by the President of the Indian Republic" ಎಂಬುದಾಗಿದೆ. ಅವರಿಂದ ಸೂಚನೆ ಬಂದ ಕೂಡಲೆ ಚುನಾವಣೆ ನಡೆಸುತ್ತೇವೆ. 388 ನೆಯ ಆರ್ಟಿಕಲ್ ಪ್ರಕಾರ ನಡೆಯಬೇಕಾಗಿದೆ. ಅದು ಸ್ವಲ್ಪ ಸಾವಕಾಶವಾಗುತ್ತದೆ. ಈ ಮಧ್ಯೆ ಎಲೆಕ್ಟೊರಲ್ ರೋಲ್ ತಯಾರುಮಾಡುತ್ತಿದ್ದೇವೆ. ಮಾರ್ಚಿ ಕೊನೆಯ ಹೊತ್ತಿಗೆ ಕರಡುಪ್ರತಿ ತಯಾರಾಗುತ್ತದೆ. The printed electoral rolls will be ready all over the State under adult franchise by 1st July 1950. 1-1-1949 ರ ವರೆಗೆ ಪಟ್ಟಿ ತಯಾರಾಗುತ್ತದೆ. ಡಿಸೆಂಬರ್ 3ನೆಯ ವಾರದಲ್ಲಿ ಸಾರ್ವತ್ರಿಕ ಚುನಾವಣೆ ಆಗಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆಗ ಕಾರಣಾಂತರದಿಂದ ಆಗದೇ ಹೋದರೆ ಉಪ ಚುನಾವಣೆ ನಡೆಸುವುದಕ್ಕೆ ಬೇಗ ಪ್ರಯತ್ನ ಮಾಡುತ್ತೇವೆ. ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಂಡಿದೆ. ಈ ವಿಷಯದಲ್ಲಿ ಶ್ರೀ ಎಸ್. ಸಿ. ಸೂರ್ಯನಾರಾಯಣ ಚೆಟ್ಟಿಯವರ ಪ್ರಶ್ನೆಗೆ ಆಗಲೇ ಉತ್ತರ ಕೊಟ್ಟಿದ್ದೆ. ಬಡ್ಜೆಟ್ಟಿನಲ್ಲೂ 2ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ.

ಶ್ರೀ ಎಲ್. ಸಿದ್ದಪ್ಪನವರು.—ಯಾವ ಬಾಬಿನಲ್ಲಿ?

ಶ್ರೀ ಕೆ. ಟಿ. ಭಾಷ್ಯಂರವರು.—ಬಡ್ಜೆಟ್ ಅಂದಾಜಿನ ಮೊದಲನೆ ಪುಸ್ತಕದ 79 ನೇ ಪುಟದಲ್ಲಿ "ಸಿವಿಲ್ ಸೆಕ್ರೆಟೆರಿಯೇಟ್" ಎಂಬುದರ ಕೆಳಗೆ "Charges connected with Elections to the Legislature", ಎಂಬ ಬಾಬಿಗೆ 2ಲಕ್ಷ ರೂಪಾಯಿಗಳನ್ನು ಒದಗಿಸಿದೆ. ತಾವು ರೆಜಿಸ್ಲೇಚರ್ ಎಂಬಬಾಬಿನಲ್ಲಿ ನೋಡಬಹುದು. ಆದರೆ ಸದಸ್ಯರಿಗೆ ಸಂಬಂಧಪಟ್ಟ ಖರ್ಚು ಅಲ್ಲಿ ಬರುತ್ತದೆ. ನಮ್ಮ ದೇಶದಲ್ಲಿ ಎಷ್ಟು ಜನ ಇದ್ದಾರೆ, ಎಷ್ಟು ಬೂತ್ ಆಗಬೇಕು, ಎಷ್ಟು ಮುದ್ರಣದ ಖರ್ಚಾಗಬಹುದು ಎಂಬುದನ್ನೆಲ್ಲಾ ಲೆಕ್ಕ ಹಾಕಿ 2ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಕೇಂದ್ರ ಸರ್ಕಾರದವರೂ ಅರ್ಧ ವಹಿಸುತ್ತಾರೆ. ನಾವು 2 ಲಕ್ಷ ಒದಗಿಸಿರುವುದರಿಂದ ಅವರೂ 2 ಲಕ್ಷ ಕೊಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಅವರೇ ಓಟರು ಪಟ್ಟಿ ಮಾಡಲಿ. ನಾವೂ ಅದನ್ನು ಉಪಯೋಗಿಸಿಕೊಳ್ಳೋಣ.

ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲಿ ನಡೆಯುವ ಚುನಾವಣೆಗೆ ನಾವೇ ಪಟ್ಟಿ ತಯಾರು ಮಾಡಬೇಕು. ನಮಗೆ ಅದರಿಂದ ಪ್ರತಿಫಲ ಇದೆ.

ಶ್ರೀ ಜಿ. ಎ. ಆಚಾರ್ಯರು.—ವಿದ್ಯುಚ್ಛಕ್ತಿಯ ವಿಚಾರ ಹೇಳುವಾಗ ಅನೇಕ ಹಳ್ಳಿಗಳಲ್ಲಿ load ಇಲ್ಲದೇ ಇದ್ದರೂ ವಿದ್ಯುಚ್ಛಕ್ತಿಯನ್ನು ಮಂಜೂರು ಮಾಡುತ್ತಿದ್ದಾರೆ. ಲೋಡ್ ಇದ್ದರೆ ಕೊಡುವುದು ಸರಿ, ಇಲ್ಲದಿ

ದ್ದರೂ ಅವರು ಕೇಳುತ್ತಾರೆಂದು ಕೊಟ್ಟುಬಿಟ್ಟರೆ ತೊಂದರೆಯಾಗುತ್ತದಲ್ಲವೆ ಎಂಬುದನ್ನೂ ತಿಳಿಸಬೇಕು.

ಶ್ರೀ ಕೆ. ಟಿ. ಭಾಷ್ಯಂರವರು.—ಅವರ ಅಭಿಪ್ರಾಯ ಸರಿಯಾಗಿ ಗೊತ್ತಾಗಲಿಲ್ಲ. ದೀಪಾವಳಿಗೆ ಹೆಚ್ಚು ಲೋಡ್ ಬೇಕಾಗಿಲ್ಲ. ಇವರಂಥ ಮಹನೀಯರು ಫ್ಲೋರ್ ಮಿಲ್ಲಿಗೆ ಕೊಡಿ, ರೈಸ್ ಮಿಲ್ಲುಗಳಿಗೆ ಕೊಡಿ, ಎಂದು ಕೇಳುತ್ತಾರೆ, ಅದಕ್ಕೆ ಕೊಡಲು ಲೋಡ್ ಬೇಕು. ಅಂಥವರಿಗೂ ಕೊಡೋಣ, ಆದರೆ ಹೆಚ್ಚಾಗಿ ಒದಗಿಸುವುದಕ್ಕಾಗುವುದಿಲ್ಲ. ಮೊದಲು ಬಡವರಿಗೆ ಅನುಕೂಲವಾಗಬೇಕೆಂಬುದು ನಮ್ಮ ಉದ್ದೇಶ. ಆದರಿಂದ ಮೊದಲು ವ್ಯವಸಾಯದ ಪಂಪು, ಮನೆಗಳಿಗೆ ಮತ್ತು ಬೀದಿ ದೀಪಗಳಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆ. ರೈತಾಪಿ ಜನರಿಗೆ ಮತ್ತು ಬಡವರಿಗೆ ಎಲ್ಲಿ ಅನುಕೂಲ ಬೇಕೋ ಅಲ್ಲಿ ಮೊದಲು ಕೊಡುತ್ತೇವೆ, ಆ ಮೇಲೆ ಶ್ರೀಮಂತರಿಗೆ ಕೊಡುತ್ತೇವೆ. ಇದು ನಮ್ಮ ನೀತಿ. ಈಗ ಹೆಚ್ಚಾಗಿ ಟ್ರಾನ್ಸ್‌ಫಾರ್ಮರುಗಳು ಸಿಕ್ಕುವುದಿಲ್ಲ. ಇದಕ್ಕೆ ಬೇಕಾಗುವ 'ಸಿಲಿಕಾನ್ ಸ್ಟೀಲ್' ನಮ್ಮ ದೇಶದಲ್ಲಿ ತಾತಾ ಕಂಪನಿಯವರೊಬ್ಬರೇ ತಯಾರು ಮಾಡುವವರು. ಹಾಗೂ ನಾವು ಇಲ್ಲಿ ಟ್ರಾನ್ಸ್‌ಫಾರ್ಮರುಗಳನ್ನು ಆದಷ್ಟು ತಯಾರು ಮಾಡುತ್ತಿದ್ದೇವೆ. ಕೈಲಾದ ಮಟ್ಟಿಗೂ ಅವನ್ನು ತಯಾರಾದ ಹಾಗೆಲ್ಲ ಉಪಯೋಗಿಸಿ ಹೆಚ್ಚು ಹೆಚ್ಚು ಪವರ್ ಕೊಡುತ್ತಿದ್ದೇವೆ. ಎಲ್ಲಿ ಸಾಕಷ್ಟು ಪವರ್ ಇಲ್ಲವೋ ಅಲ್ಲಿ ಕೊಡುವುದಿಲ್ಲ. ಹಳ್ಳಿಗಳಲ್ಲಿ ಹಾಕಿರುವ ದೀಪಗಳು, ಸೀಮೆಯೆಣ್ಣೆ ದೀಪಗಳ ಹಾಗೆ ಮಿಣಕ್ ಮಿಣಕ್ ಎನ್ನುತ್ತಿರುತ್ತವೆಂದು ಹೇಳಿದರು. ಅದಕ್ಕೆ ನಾವೇನು ಮಾಡುವುದು. ಗ್ರಾಮ ಪಂಚಾಯಿತಿಯವರು 25 ಕ್ಯಾಂಡಲ್ ಪವರ್ ಅವರೇ ಸಾಕೆಂದು ಹೇಳುತ್ತಾರೆ. 40 ಅಥವಾ 60 ಕ್ಯಾಂಡಲ್ ಪವರ್ ಆದರೂ ಹಾಕಬೇಕು. ಚಾರ್ಜುಗಳಲ್ಲಿ ವ್ಯತ್ಯಾಸ ಬಹಳ ಕಡಿಮೆ. 25 ಕ್ಯಾಂಡಲ್ ಪವರ್‌ಗೆ 15 ರೂಪಾಯಿ, 40ಕ್ಕೆ 18 ರೂಪಾಯಿ, 60ಕ್ಕೆ 22½ ರೂಪಾಯಿ. ಆದರೂ ನಮಗೆ 15 ಕ್ಯಾಂಡಲ್ ಪವರೇ ಸಾಕೆಂದರೆ ನಾವೇನು ಮಾಡುವುದು! ಈಚೆಗೆ ಕೆಲವರು ಅವರಾಗಿಯೇ ಮುಂದೆ ಬಂದು ಇದು ಸೀಮೆಯೆಣ್ಣೆ ದೀಪದ ಹಾಗಿವೆ, ಹೆಚ್ಚಿನ ಕ್ಯಾಂಡಲ್ ಪವರ್ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಪಂಪು ಕೆಲಸ ಮಾಡದೇಯಿದ್ದರೂ ಕೂಡ ಚಾರ್ಜು ಕೊಡಬೇಕೆಂದು ಗೊತ್ತುಮಾಡಿದ್ದಾರೆ, ಇದು ನ್ಯಾಯವೆ?

ಶ್ರೀ ಕೆ. ಟಿ. ಭಾಷ್ಯಂರವರು.—ಅವರು ಮಿನಿಮಮ್ ಚಾರ್ಜು ವಿಷಯ ಕೇಳುತ್ತಿದ್ದಾರೆಂದು ಕಾಣುತ್ತದೆ. ಇದನ್ನೆಲ್ಲಾ ಪರಿಶೀಲನೆಮಾಡಿದ್ದೇವೆ. ಕೈಲಾದ ಮಟ್ಟಿಗೂ ರಿಯಾಯಿತಿ ಕೊಡುತ್ತಿದ್ದೇವೆ. ಆದರೆ 365 ದಿನಗಳಲ್ಲಿ 360 ದಿನ ಕೆಲಸಮಾಡದೇ ಇದ್ದರೂ ಅಲ್ಲಿ ವಿದ್ಯುಚ್ಛಕ್ತಿಮಾತ್ರ ಇರಬೇಕಾಗುತ್ತದೆ, ತೆಗೆಯುವ ಹಾಗಿಲ್ಲ. ಹಾಗಾದರೆ ನಮಗೆ ನಷ್ಟವಾಗುತ್ತವೆ. ನಾವು ಬಡವರ ಹಣವನ್ನು ಉಪಯೋಗಿಸಿದ್ದೇವೆ, ಅದಕ್ಕೆ ಅವರಿಗೆ ಪ್ರತಿಫಲ ಸಿಕ್ಕಬೇಕು. ಆದಕಾರಣ ಒಂದು ಮಿನಿಮಮ್ ಕೊಡಬೇಕಾಗುತ್ತದೆ.

ಹೀಗೆ ಎಲ್ಲರೂ ಒಪ್ಪತಕ್ಕ ನೀತಿಯ ಮೇಲೆ ನಾವು ಕೆಲಸಮಾಡುತ್ತಿದ್ದೇವೆ. ಬಹಳ ಹೊತ್ತಾಯಿತು. ಒಂದು ಮಾತನ್ನು ಹೇಳಬೇಕೆಂದು ಆಸೆಪಟ್ಟುಕೊಂಡಿದ್ದೆ, ಅದನ್ನು ಹೇಳಿ ಮುಗಿಸುತ್ತೇನೆ. ಜನಾಬ್ ಇಮಾಂರವರು ಏನೋ ದೊಡ್ಡ ಬಡ್ಜೆಟ್ ಮಾಡಿದ್ದೀರಿ, ಜನರಿಗೆ ಮಾಡಿರುವ ಉಪಕಾರವೇನೆಂದು ಕೇಳಿದರು, ಅದಕ್ಕೆ ಒಂದು ಮಾತು ಹೇಳಿ ಮುಗಿಸುತ್ತೇನೆ. ಕಾರ್ಮಿಕ ಇಲಾಖೆ ನನ್ನ ಖಾತೆಗೆ ಸೇರಿದ್ದು. ಇದುವರೆಗೆ ಜನರು ಕಾರ್ಮಿಕರ ಅಥವಾ ಲೇಬರರ್ಸ್ ಎಂದರೆ ಅವರು ಸೇವಕರು ಎಂದು ಭಾವಿಸಿ ಕೆಲಸ ನಡೆಸುತ್ತಿದ್ದರು. ಈಗ ಆ ಭಾವನೆ ಹೋಗಿ ಕಾರ್ಮಿಕರೂ ಕೂಡ ಬಂಡವಾಳಗಾರರೊಡನೆ ಪಾಲುದಾರರು ಎಂಬ ಭಾವನೆ ಬಂದಿದೆ. Partners with capitalists in the production of national wealth and in the maintenance of national services. A sort of silent revolution has come about among the people. They have come to feel that they are also men and women with self-respect and that they have also something to contribute to the national wealth and it is a very valuable transformation. It is not a small thing. It has got its roots very deep. It is not easy to tell you how this can come about, but it has come about and we have treated them as honourable people. We have formed a Labour Secretariat to look after Labour which was nothing but a fifth wheel in the coach up till now. We have appointed labour welfare officers in charge of Government and Government-aided industries in the State. We have appointed people to look after the welfare of the women workers in the State. We have formed a separate plantation division and there is an Assistant Commissioner of Labour in charge of it. We have started Labour Gazette to give news and views about labour in other parts of the world and in our country too.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಕನ್ನಡ, ತಮಿಳು ಮತ್ತು ಇಂಗ್ಲಿಷು ಈ ಮೂರು ಭಾಷೆಗಳಲ್ಲಿ ಪ್ರಕಟವಾಗುತ್ತಿದೆ! ಒಂದು ಭಾಷೆಯಲ್ಲಲ್ಲ.

Sri K. T. BHASHYAM.—Perfectly right. We have got people of all languages. Thank you for reminding me of it. We are trying to get in touch with all the people.

We have spent ten lakhs of rupees on labour housing and buildings are coming up. Why don't you go and see and satisfy yourselves about it? You will then appreciate the work that has been done.

Janab SYED ABDUR RAHMAN.—Please make arrangements. We would like to go and see.

Sri K. T. BHASHYAM.—I would be very glad to take you there.

ಇನ್ನು ಜೈಲುಗಳ ವಿಷಯದಲ್ಲಿ ಒಂದು ಮಾತು. ಖೈದಿಗಳಾಗಿ ಅಲ್ಲಿರುವವರ ಮನೋಭಾವವೇ ಬದಲಾಯಿಸುವಂತೆ ಮಾಡಿದ್ದೇವೆ. ಅವರಿಗೆ ಲೈಬ್ರರಿ ಕೊಟ್ಟಿದ್ದೇವೆ; ಒಳ್ಳೆಯ ಪುಸ್ತಕಗಳನ್ನು ಕೊಟ್ಟಿದ್ದೇವೆ.
Here also the psychological transformation is of extreme importance. We have provided amenities. We have given them radios, volley ball, carrom and other things, so that they need not think that they are for all time condemned men.

And then there is something more which we have done. We have said that regarding the prisoners who earn money by working in prison, half the amount will be credited to their account and given at the end when they are released. The other half will be given to them immediately for such small amenities as they may like to purchase. Then there was no system of parole at all for them. We have introduced a system of parole and thereby given them an opportunity to go home now and then and mix with their people, so that humanistic and social qualities may develop in them. They are great achievements.

Janab J. MAHOMED IMAM.—You have made it very comfortable!

Sri K. T. BHASHYAM.—I shall be very glad if my friend chooses to enjoy the comforts! (Laughter).

Sir, in the matter of Electricity, everybody knows how we have been doing our best to give power to every part of the State. Almost all the taluks have been supplied electricity. The remaining 16 we shall electrify during the course of the next year.

Sri L. SIDDAPPA.—We will compliment you for that.

Sri K. T. BHASHYAM.—Thank you. May I say that every pie which is spent on hydro-electric works gets back its return more than anything else in the State? Our total overall income will be somewhere about 13 per cent. In some places we get 50 per cent and in some places 216 per cent on what we have spent.

(*Sri G. A. Acharya interrupted*).

Sri K. T. BHASHYAM.—It is your Goribidnur which gives us 216 per cent, my friend.

We are doing our very best to help the people with electricity, in the matter of industries, in the matter of irrigation pumps and in many places where we do not get sufficient income, we consider it more as a sort of rendering service rather than profit-bearing venture. Even if it gets back only two per cent, it does not matter, particularly if these places happen to be places where electricity is going to be utilised for working irrigation pumps.

Sri L. SIDDAPPA.—They may develop slowly.

Sri K. T. BHASHYAM.—Surely, they will develop, there is no doubt.

Then there is the Trolley Bus Scheme. Every thing is ready but I am sorry that we do not have sufficient money to push on with it. We have got every thing ready to electrify the train service from Bangalore to Mysore. Unfortunately we have not the funds. If Hon'ble members will help us get more money, we will be very glad to electrify the train service from Bangalore to Mysore.

Janab J. MAHOMED IMAM.—I think the Government of India will finance for the electrification of railways.

Sri K. T. BHASHYAM.—Now that the Railways have been taken over, we will persuade them to undertake this venture and I will tell them that I can give them power as cheap as possible consistently with our needs.

And, Sir, one word more and I will be done. ನಾವು ಬೊಂಬಾಯಿ, ಮದರಾಸು ಮತ್ತು ಕೊಡಗು ಈ ಪ್ರದೇಶಗಳಿಗೆ ಪವರ್ ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ.

We have got surplus power available. By supplying them power we will get Rs. 30 lakhs net income. We are negotiating with them and I am sure that during the course of this year the negotiations will fructify into actual achievement and we will be able to make quite a lot of income.

Finally, I thank the Hon'ble Members for the kind words they have said of the Budget and in particular of the departments of which I am in charge. With these few words I request that if I have said anything over and above what should have been done, I may be pardoned. Thank you.

ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಅಧ್ಯಕ್ಷರೇ, ನನಗೆ ಸಂಬಂಧ ಪಟ್ಟ ಇಲಾಖೆಯ ವಿಷಯದಲ್ಲಿ ಕೆಲವು ಮಾನ್ಯಸದಸ್ಯರು ಕೆಲವು ಅಂಶಗಳನ್ನು ಸೂಚಿಸಿದ್ದಾರೆ. ಆ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ತಿಳಿಸುತ್ತೇನೆ. ಮೊದಲನೆಯದಾಗಿ ಶ್ರೀ ಟಿ. ಹುಚ್ಚೇಗೌಡರು ಅವರ ಭಾಷಣದಲ್ಲಿ ಲೋಕಲ್ ಸೆಸ್ಸ್ ಡಿಸ್ಟ್ರಿಕ್ ಬೋರ್ಡ್‌ಗಳಿಗೆ ಕೊಡುತ್ತಿಲ್ಲ ಮತ್ತು ಎಕ್ಸೈಜು ಸೆಸ್ಸ್‌ಗಳನ್ನು ಆಯಾಯಾ ಡಿಸ್ಟ್ರಿಕ್ಟ್‌ಗಳಿಗೇ ಕೊಡುತ್ತಿಲ್ಲ, ಅದನ್ನು ಕೊಡಬೇಕೆಂದು ಬಹಳ ಹಿಂದಿನಿಂದಲೂ ಕೇಳುತ್ತಿದ್ದೇವೆ ಎಂದು ಹೇಳಿದರು.

ಶ್ರೀ ಟಿ. ಹುಚ್ಚೇಗೌಡರು.—ನಾನು ಹೇಳಿದ್ದು ಲೋಕಲ್ ಸೆಸ್ಸು ಅಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸರಿ. ಇನ್ನು ಕೆಲವು ಮಾನ್ಯ ಸದಸ್ಯರು ರಜಾದಿನಗಳು ಬಹಳ ಜಾಸ್ತಿ ಇವೆ ಕಡಿಮೆಮಾಡಬೇಕು ಎಂಬ ಅಂಶವನ್ನು ತಿಳಿಸಿದರು. ಮೊದಲನೆಯದಾಗಿ, ಇದುವರೆಗೂ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗಾಗಿ ಬಡ್ಜೆಟ್‌ನಲ್ಲಿ ಒಂದು ಕಲಂ ಮಾತ್ರ ಹಾಕುತ್ತಿದ್ದರು. ಅಷ್ಟೇ ಹೊರತು ಹುಕುಂ ಕೊಡುತ್ತಾ ಇರಲಿಲ್ಲ. ಈ ವರ್ಷ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆ ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗಾಗಿ 3 ಲಕ್ಷರೂಪಾಯಿಗಳನ್ನು ಒದಗಿಸಿದ್ದಾರೆ. ಇನ್ನೂ ಹೆಚ್ಚು ಕೊಡುವುದಕ್ಕೆ ಸರ್ಕಾರದವರು ಬಹಳ ಕಾತುರರಾಗಿದ್ದಾರೆ. ಆದರೆ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಹಣದ ಅಭಾವದಿಂದ ಈ ಸಾರಿ ಇಷ್ಟು ಮಾತ್ರ ಒದಗಿಸಿದೆ. ಎಕ್ಸೈಜು ಸೆಸ್ಸಿನ ವಿಚಾರದಲ್ಲಿ ಹೇಳುವುದಾದರೆ ಪಾನ ನಿರೋಧವನ್ನು ಜಾರಿಗೆ ತಂದಿರುವ ಪ್ರದೇಶದಲ್ಲಿ ಸೆಸ್ಸು ಬರುತ್ತಾ ಇದ್ದದ್ದು ನಷ್ಟವಾಗಿದೆ. ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರುಗಳೇ ಅನೇಕ ವಿಧದಲ್ಲಿ ಸರ್ಕಾರದವರ ಗಮನಕ್ಕೆ ತಂದರು. ಇದನ್ನು ಸರ್ಕಾರದವರು ಆಲೋಚನೆಮಾಡುತ್ತಿದ್ದಾರೆ. ಡಿಸ್ಟ್ರಿಕ್ಟ್‌ಬೋರ್ಡ್, ರೂರಲ್ ಡೆವಲಪ್‌ಮೆಂಟ್ ಮತ್ತು ಗ್ರಾಮ ಪಂಚಾಯಿತಿ—ಇವು ಮೂರನ್ನು ಒಟ್ಟುಗೂಡಿಸುವ ವಿಷಯವನ್ನು ಪರಿಶೀಲಿಸಲು ಒಂದು ಇಂಟಿಗ್ರೇಷನ್ ಸಮಿತಿಯನ್ನು ನೇಮಕಮಾಡಿದ್ದಾರೆ. ಅವರ ವರದಿ ಬೇಗನೆ ಬರಬಹುದೆಂದು ಕಾಣುತ್ತದೆ.

ರಜಾ ದಿನಗಳ ವಿಚಾರದಲ್ಲಿ ಒಂದು ಅಂಶವನ್ನು ಹೇಳುತ್ತೇನೆ. ಶ್ರೀಮಾನ್ ಹುಚ್ಚೇಗೌಡರು ಹೋದ ವರ್ಷ 1949ರಲ್ಲಿ General holidays 28 ದಿನ ಇತ್ತು, ಈವರ್ಷ 14 ದಿನಕ್ಕೆ ಇಳಿದಿದೆ ಎಂದು ಹೇಳಿದರು. ಆ 28 ದಿನಗಳಲ್ಲಿ ಮೊದಲು ಪೆನಾಲ್ಟಿಮೇಟ್ ಸಾಟರ್‌ಡೇ 12 ದಿನ ಇತ್ತು ಮತ್ತು ಇತರ ರಜಾ ದಿನಗಳು 16 ದಿನ ಇತ್ತು. ಈರೀತಿ ಒಟ್ಟು 28 ದಿನ ರಜಾ ಇತ್ತು. ಈ ವರ್ಷ 14ಕ್ಕೆ ಇಳಿದಿದೆ. ಹಿಂದೂಗಳಿಗೂ, ಕ್ರಿಶ್ಚಿಯನ್ನರಿಗೂ ಮಹಮ್ಮದೀಯರಿಗೂ ಕೊಡುತ್ತಾ ಇದ್ದ Partial holidays 1949ರಲ್ಲಿ 16 ದಿನ ಇತ್ತು ಈ ವರ್ಷ 1950ರಲ್ಲಿ 8 ದಿನಕ್ಕೆ ಇಳಿದಿದೆ. ಈರೀತಿ ಕಡಿಮೆ ಮಾಡುತ್ತಾ ಇದ್ದೇವೆ. ಈ ವಿಚಾರದಲ್ಲಿ ಶ್ರೀಮಾನ್ ಎಲ್. ಸಿದ್ದಪ್ಪನವರು ಒಂದು ವಿಷಯವನ್ನು ಕೇಳಿದರು. Penultimate Saturday ರಜಾ ಕೊಡುತ್ತಿದ್ದುದನ್ನು ನಿಲ್ಲಿಸಿ ಬೆಳಗಿನಹೊತ್ತು ಆಫೀಸು ಮಾಡುತ್ತಾ ಇರುವುದು ಎಕಾನಮಿ ಆಫೀಸರ ಶಿಫಾರಸಿನಮೇಲೆಯೇ, ಹೇಗೆ ಎಂದು Penultimate Saturday ರಜಾ ಕೊಡುವುದನ್ನು ನಿಲ್ಲಿಸಿದ್ದರಿಂದ ಖರ್ಚು ಕಡಿಮೆಯಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಶನಿವಾರ ಬೆಳಗ್ಗೆ ಆಫೀಸು ಮಾಡಿರುವುದರ ಉದ್ದೇಶ ಇಷ್ಟೆ. ಸಿಟಿಗಳಲ್ಲಿ ಭಾನುವಾರ ಅಂಗಡಿಗಳ ಬಾಗಿಲು ಹಾಕುತ್ತಾರೆ. ಅದರಿಂದ ಸರ್ಕಾರಿ ಕೆಲಸದಲ್ಲಿ ರತಕ್ಕವರಿಗೆ ಅನೇಕರಿಗೆ ತೊಂದರೆ. ಭಾನುವಾರ ವ್ಯಾಪಾರ ಮಾಡುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಶನಿವಾರ ಬೆಳಗ್ಗೆ ಆಫೀಸು ಮಾಡಿದರೆ ಮಧ್ಯಾಹ್ನ ವ್ಯಾಪಾರ ಮಾಡಿಕೊಳ್ಳಬಹುದು. ಸರ್ಕಾರಿ ಕೆಲಸವೂ ಆಗುತ್ತದೆ, ಸ್ವಂತ ಕೆಲಸವೂ ಆಗುತ್ತದೆ ಎಂಬ ಸದುದ್ದೇಶದಿಂದ ಮಾಡಿದೆ. ಈರೀತಿ General holidays ಮತ್ತು Penultimate Saturdays ನ್ನು ತೆಗೆದು ಹಾಕಿದೆ. ಮತ್ತು ಬಹಳಮಟ್ಟಿಗೆ ಕಡಿಮೆಮಾಡಿದೆ ಎಂಬ ಅಂಶವನ್ನು ಶ್ರೀಮಾನ್ ಹುಚ್ಚೇಗೌಡರಿಗೆ ತಿಳಿಸಬೇಕಾಗಿದೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಶ್ರೀಮಾನ್ ವೀರಣ್ಣಗೌಡರೂ ಸಹ ಅರಣ್ಯ ಇಲಾಖೆಯಲ್ಲಿ ಬಹಳ ಜನ ಅಧಿಕಾರಿಗಳು ಇದ್ದಾರೆ ಎಂದು ಹೇಳಿದರು. ಶಿವಮೊಗ್ಗಾ ಜಿಲ್ಲೆಯಲ್ಲಿ ಬಹಳ ಜನ ಸಬ್‌ಅಸಿಸ್ಟಂಟ್ ಕನ್ಸರ್ವೇಟರುಗಳು ಇದ್ದಾರೆ. ಆರೀತಿ ಜಾಸ್ತಿಯಾಗಿರತಕ್ಕದ್ದು ವಾಸ್ತವಾಂಶ. ಅದರ ಅವಶ್ಯಕತೆ ಎಷ್ಟುಮಟ್ಟಿಗೆ ಇದೆ ಎಂಬುದು ನಾನು ಹೇಳಬೇಕಾಗಿಲ್ಲ, ಅದು ಅವರಿಗೂ ಗೊತ್ತೇ ಇದೆ. ಮಲೆನಾಡು ಪ್ರಾಂತ್ಯದಲ್ಲಿ ಹೆಚ್ಚು ಅರಣ್ಯ ಇದೆ. ಲಕ್ಷಾಂತರ ರೂಪಾಯಿ ಉತ್ಪತ್ತಿ ಬರತಕ್ಕ ಮಲೆನಾಡು ಪ್ರಾಂತ್ಯದಲ್ಲಿ ಹೆಚ್ಚು ಜನ ಅಧಿಕಾರಿಗಳು ಮತ್ತು ಸಿಬ್ಬಂದಿ ಇಲ್ಲದಿದ್ದರೆ ಸ್ಮಗ್ಲಿಂಗ್ ಜಾಸ್ತಿಯಾಗುತ್ತದೆ. ಭದ್ರಾವತಿ ಮತ್ತು ಶಿವಮೊಗ್ಗಾ ಕಡೆಗಳಲ್ಲಿ ಒಬ್ಬೊಬ್ಬರು ಜವಾಬ್ದಾರಿಯುತರಾದ ಅಧಿಕಾರಿಗಳಿರುವುದು ಸೂಕ್ತ. ಎಷ್ಟು ಸೂಕ್ತವೋ ಅಷ್ಟು ಇದ್ದಾರೆಯೇ ವಿನಾ ಅದಕ್ಕಿಂತ ಹೆಚ್ಚಾಗಿ ಇಲ್ಲ. ಈ ವರ್ಷದ ಬಡ್ಜೆಟ್‌ನಲ್ಲಿ ಮಾನ್ಯ ಆರ್ಥಿಕ ಸಚಿವರು ಹೇಳಿದ್ದಾರೆ. 2 ಲಕ್ಷ ರೂಪಾಯಿ ಖರ್ಚನ್ನು ಅರಣ್ಯ ಇಲಾಖೆಯಲ್ಲಿ ಕಡಿಮೆಮಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೆ ತಕ್ಕ ಕಾರ್ಯಕ್ರಮ ಮಾಡುತ್ತಿದ್ದೇವೆ. ಆದ್ದರಿಂದ ಸಿಬ್ಬಂದಿ ಜಾಸ್ತಿ ಇಲ್ಲ. ಅವರ ಅಭಿಪ್ರಾಯದಲ್ಲಿ ಜಾಸ್ತಿ ಎನ್ನುವುದಾದರೆ ಕಡಿಮೆಮಾಡಲು ಕಾರ್ಯಕ್ರಮ ಕೈಕೊಳ್ಳುತ್ತೇವೆ. ಮತ್ತು ಲಕ್ಷ ರೂಪಾಯಿ ಕಡಿಮೆ ಮಾಡಲೇಬೇಕೆಂದು ಸಂಕಲ್ಪ ಮಾಡಿದ್ದಾರೆ. ಈ ವರ್ಷ ಸ್ಮಗ್ಲಿಂಗ್ ಬಹಳ ಆಗುತ್ತಿದೆ ಎಂದು ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದರು.

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ. ಕಮ್ಮಿ ಆಗಿದೆ ಎಂದು ಹೇಳಿದೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಹಳ ಸಂತೋಷ. ಸ್ಮಗ್ಲಿಂಗ್ ಸಂಪೂರ್ಣವಾಗಿ ನಿಂತು ಹೋಗಿದೆ ಎಂದು ಹೇಳತಕ್ಕ ಧೈರ್ಯ ನನಗೆ ಮಾತ್ರ ಇಲ್ಲ. ದೊಡ್ಡ ಕಾಡುಗಳಲ್ಲಿ ಸ್ಮಗ್ಲಿಂಗ್ ಮಾಡುವುದಕ್ಕೆ ಅವಕಾಶಗಳು ಬೇಕಾದಷ್ಟಿವೆ. ಶಿವಮೊಗ್ಗಾ, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಇದನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಈ ಎರಡು ವರ್ಷಗಳಿಂದಲೂ ಸರ್ವ ಪ್ರಯತ್ನವನ್ನೂ ಮಾಡಿದ್ದಾರೆಂದು ಧೈರ್ಯವಾಗಿ ಹೇಳಬಲ್ಲೆ. 100ಕ್ಕೆ 75 ಭಾಗ ಕಡಿಮೆಯಾಗಿದೆ. ಸಂಪೂರ್ಣವಾಗಿ ನಿಲ್ಲುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಸರ್ವಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಈಗ ಚೆಕ್ಕಿಂಗ್ ಸ್ಟೇಷನ್‌ಗಳನ್ನು ಮಾಡಿದ್ದೇವೆ. ಅದರಿಂದ ಬಹುಮಟ್ಟಿಗೆ ಕಡಿಮೆಯಾಗುತ್ತೆ ಎಂಬ ಅಂಶವನ್ನು ಮಾತ್ರ ಹೇಳಬಲ್ಲೆ. ಸ್ಮಗ್ಲಿಂಗ್ ನಿಲ್ಲಿಸುವುದಕ್ಕೆ ಸರ್ಕಾರಿ ಅಧಿಕಾರಿಗಳಿಂದ ಮಾತ್ರ ಸಾಧ್ಯವಾಗುವುದಿಲ್ಲ. ಸಾರ್ವಜನಿಕರೂ ಖಾಸಗೀ ದೊಡ್ಡ ಮನುಷ್ಯರೂ ಸಹಾಯ ಮಾಡಿದರೆ ಅದು ಜಯಪ್ರದವಾ

ಗುತ್ತದೆ ಎಂಬ ಅಂಶವನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀಮಾನ್ ವೆಂಕಟೇಶ್ವರವರು ಮಾತನಾಡುತ್ತಾ ನಿಮ್ನ ವರ್ಗದವರಿಗೆ ಕೊಡುವ ಹಣ ಅನೇಕ ಸಂದರ್ಭಗಳಲ್ಲಿ ದುರುಪಯೋಗವಾಗುತ್ತಾ ಇದೆ. ಜಮೀನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ದುಡ್ಡು ಖರ್ಚುಮಾಡುತ್ತಾ ಇದ್ದೀರಿ, ಭಜನ ಮಂದಿರಗಳಿಗೆ ಉಪಯೋಗಿಸುತ್ತಾ ಇದ್ದೀರಿ ಎಂಬುದಾಗಿ ನಾನಾ ವಿಧವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನಿಮ್ನತರಗತಿಯವರು ಬಹಳ ಬಡವರು, ಜಮೀನು ಅಕ್ವೈರ್‌ಮಾಡಿಕೊಳ್ಳದಿದ್ದರೆ ಅವರು ಮನೆಗಳನ್ನು ಹೇಗೆ ಕಟ್ಟಿಕೊಳ್ಳಬೇಕು! ಅದಕ್ಕಾಗಿ ಖರ್ಚು ಮಾಡುತ್ತಿರುವುದು ನ್ಯಾಯವಾಗಿದೆ. ಅವರಿಗೆ ಸರಿಯಾಗಿ ಸಲ್ಲುತ್ತಿಲ್ಲವೆಂದು ಹೇಳಿದರು. ಅದೇ ವಿಷಯವನ್ನೇ ಇನ್ನೂ ಅನೇಕ ಮಹನೀಯರು ಮಾತನಾಡಿದ್ದಾರೆ. ಆದರೆ ನಾವು ಈ ವಿಚಾರದಲ್ಲಿ ಈಗ ಹೊಸದಾಗಿ ರೂಲ್ಸುಗಳನ್ನು ಮಾಡಿದ್ದೇವೆ. ಇದಕ್ಕಾಗಿ ಒಂದು ಪ್ರತ್ಯೇಕವಾದ 'ಫಾರಂ' ತಯಾರಿಸಿರುತ್ತೇವೆ. ಅವುಗಳನ್ನೆಲ್ಲಾ ಇನ್ನೂ ಜಾರಿಮಾಡಿಲ್ಲ. ಅವುಗಳೆಲ್ಲ ಜಾರಿಗೆ ಬರುವ ಮುನ್ನ ಇದರಲ್ಲಿ ಇನ್ನೂ ಏನಾದರೂ ಲೋಪದೋಷಗಳಿದ್ದರೆ ಅವುಗಳನ್ನೆಲ್ಲ ಕಮ್ಮಿ ಮಾಡಲಾಗುತ್ತದೆ. ಮತ್ತು ತಾವೆಲ್ಲರೂ ಈಗ ಕೊಟ್ಟಿರತಕ್ಕ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು ಯಾವ ಲೋಪದೋಷಗಳೂ ಇಲ್ಲದಂತೆ ಇದನ್ನು ಕ್ರಮವಾಗಿ ಮಾಡುವಂತೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳುವಳಿಕೆ ಕೊಡಲಾಗುತ್ತೆ. ಶ್ರೀಮಾನ್ ಟಿ. ಸುಬ್ರಹ್ಮಣ್ಯರವರು ಒಂದು ವಿಚಾರ ಹೇಳಿದರು; ಹಿಂದೆ 75 ರೂಪಾಯಿಗಳಿಗೆ ಮಾಡಿಕೊಡುತ್ತಿದ್ದುದನ್ನು ಈಗ 50 ರೂಪಾಯಿಗಳಿಗೆ ಮಾಡಿಕೊಡಿದ್ದಾರೆ ಎಂದು. ಅದೂ ವಾಸ್ತವವಾದ ವಿಚಾರ. ಹಿಂದೆ ಕಂಟ್ರಾಕ್ಟ್ ಕೊಡುವಾಗ, ಮರ ಚೆನ್ನಾಗಿರಬೇಕು, ಇಂಥಾ ಮರವನ್ನೇ ಉಪಯೋಗಿಸಬೇಕು, ಎಂಬ ಎಲ್ಲಾ ತಿಳುವಳಿಕೆಗಳನ್ನೂ ಕೊಟ್ಟಿದ್ದೇವೆ. ಅತಿಶಯವಾದ ಫಾರೆಸ್ಟಿರುವಂಥ ಶಿವಮೊಗ್ಗ ಜಿಲ್ಲೆಗೇ ಹೋಗಿ ಅಲ್ಲಿರುವಂಥ ಒಂದು ಸಾಮಿಲ್ಲಿಗೇನೆ ಆರ್ಡರು ಕೊಟ್ಟು ಬರಲಾಗಿತ್ತು. ಆದರೆ ಇನ್ನು ಮುಂದೆ ಇಂಥಾ ಆರೋಪಣೆಗೆ ಅವಕಾಶವಿಲ್ಲದ ರೀತಿಯಲ್ಲಿ ಇದನ್ನು ಸರಿಪಡಿಸಲಾಗುತ್ತದೆಂಬ ಭರವಸೆಯನ್ನೂ ಸಹ ನಾನೀಗ ತಮಗೆ ನೀಡುತ್ತೇನೆ

ಇನ್ನು ಭಜನೆ ಮಂದಿರಗಳ ವಿಚಾರವಾಗಿ ಹೇಳಬೇಕಾಗಿದೆ. ಹಿಂದೇನೋ ಈ ಮಂದಿರಗಳಿಗಾಗಿ ಸಹಾಯವನ್ನು ಒದಗಿಸಲಾಗುತ್ತಿತ್ತು. ಅದು ನಿಜ. ಹಿಂದೆ ಈ ಬಾಬಿಗಾಗಿ 30 ಲಕ್ಷ ಅಲ್ಲ 30 ಸಾವಿರ ರೂಪಾಯಿಗಳು ಖರ್ಚಾಗುತ್ತಿತ್ತು. 16-7-48ರಲ್ಲಿ ಸರ್ಕಾರದವರು ಈ ಹುಕುಂನ್ನು ವಾಪಸ್ಸು ಮಾಡಿದ್ದಾರೆ. ಈಗ ಹೊಸದಾಗಿ ಯಾರಿಗೂ ಈ ಸಹಾಯವನ್ನು ಕೊಡುತ್ತಿಲ್ಲ. ಈ ಬಗ್ಗೆ ಒಂದು ಹೊಸ ಸರ್ಕಾರಿ ಆಜ್ಞೆಯೇ ಹೊರಟಿರುತ್ತೆ. ಒಂದುವೇಳೆಯಾದರೂ ಒಬ್ಬಿಬ್ಬರಿಗೆ ಇತ್ತೀಚೆಗೆ ಹಣವನ್ನೇನಾದರೂ ಕೊಟ್ಟಿದ್ದಕ್ಕೆ ಅದು ಕೇವಲ ಹಿಂದಿನಿಂದಲೂ ಮುಗಿದು ಬಿದ್ದು ಫೈಸಲಾಗದೆ ಉಳಿದಿದ್ದಂಥಾ ಸಂದರ್ಭಗಳಿರಬೇಕೇ ಹೊರತು ಹೊಸ ಕೇಸುಗಳಲ್ಲ.

ಇನ್ನು ಶ್ರೀಯುತ ಕೆ. ಎಚ್. ಮುದಿಯಪ್ಪನವರು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಹಣವನ್ನು ಕೊಡುತ್ತಿಲ್ಲವೆಂದು ಅಪ್ಪಣೆ ಕೊಡಿಸಿದರು. ಅದೆಲ್ಲ ಸರ್ಕಾರಿ ಆಜ್ಞೆಯಲ್ಲಿ ವಿಶದವಾಗಿ ಮತ್ತು ವಿವರವಾಗಿ ತಿಳಿಸಿರುತ್ತೆ. ಆ ಹುಕುಂನ್ನು 1948ನೆಯ ಜನವರಿ 4ನೆಯ ತಾರೀಖಿನಲ್ಲೇ ಸಾದರುಮಾಡಲಾಗಿರುತ್ತೆ. ಅದರ ಪ್ರಕಾರ ಅನೇಕರು ಪಡೆಯುತ್ತಿದ್ದಾರೆ. ಅವರಂತೆ ಇವರೂ ಕೂಡ ಕಂಟ್ರೋಲರಿಗೆ ಬರೆದು ಅದನ್ನು ಪಡೆಯಬಹುದಾಗಿತ್ತು. ಇದು ಅವರ ಕರ್ತವ್ಯವೇ ಹೊರತು ಸರ್ಕಾರದ ತೊಂದರೆಯೇನೂ ಇರುವುದಿಲ್ಲ.

Sri K. CHENGALARAYA REDDY.—Before proceeding further, I would like to make a suggestion. In view of the exigencies of time, with regard to any doubts or any ideas that may cross the minds of Hon'ble Members, they may please exercise restraint and reserve them to be ventilated at the time when Demands for Grants are taken up. Hon'ble Ministers may be allowed to proceed without any further questioning and interruption at this stage, and all points will be cleared at the stage of Voting on Demands for Grants. So I would like to throw out this suggestion for the earnest consideration of Members.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ರೀತಿ ಸರ್ಕಾರಿ ಹುಕುಂ ಮಾಡಲಾಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದವರ ಕರ್ತವ್ಯ ಲೋಪವೇನೂ ಆಗಿಲ್ಲ.

ಶ್ರೀಮಾನ್ ಎಚ್. ಎಂ. ಮಲ್ಲಿಕಾರ್ಜುನಪ್ಪನವರು ನಮ್ಮ ದೇಶದ ಫಾರೆಸ್ಟ್ ಕತ್ತರಿಸಿದ ಕಡೆ ಹೊಸದಾಗಿ ಗಿಡಗಳನ್ನು ಬೆಳೆಸತಕ್ಕ ಯೋಜನೆ ತೃಪ್ತಿಕರವಾಗಿ ನಡೆಯುತ್ತಿಲ್ಲವೆಂದು ಅಪ್ಪಣೆ ಕೊಡಿಸಿದರು. ಆದರೆ ಅವರು ಸಾಕಷ್ಟು ಅಂಕಿ ಅಂಶಗಳನ್ನೆ ಕೊಡಲಿಲ್ಲ. ಈ ಬಗ್ಗೆ 2-3 ಕಡೆಗಳಲ್ಲಿ ಸುಮಾರು 5,982 ಎಕರೆಗಳಷ್ಟು ಪ್ರದೇಶದಲ್ಲಿ ಗಂಧದ ಮರಗಳನ್ನು ಬೆಳೆಸಲಾಗುತ್ತಿದೆ. 7,036 ಎಕರೆಗಳಷ್ಟು ಪ್ರದೇಶದಲ್ಲಿ ಹೊಸದಾಗಿ ಸಸಿಗಳನ್ನು ಬೆಳೆಸಲು ಏರ್ಪಾಡು ಮಾಡಲಾಗಿದೆ. 36 ಎಕರೆಗಳಷ್ಟು ಪ್ರದೇಶದಲ್ಲಿ ಸಿಂಕೋನ ಮರಗಳನ್ನು ಬೆಳೆಸಲು ಪ್ರಯತ್ನ ಮಾಡಲಾಗಿದೆ. ಈ ಸಂಬಂಧವಾಗಿ ನಾವು ಒಂದು ನಿರ್ದಿಷ್ಟವಾದ ಯೋಜನೆಯನ್ನು ತಯಾರುಮಾಡಿಕೊಂಡು, ಒಂದು ನೀತಿಯನ್ನು ಅನುಸರಿಸುತ್ತ ಈ ಕಾಡುಗಳ ಸಂಪತ್ತನ್ನು ಹೆಚ್ಚಿಸಲು ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಂಡಿದ್ದೇವೆ. ಈ ಫಾರೆಸ್ಟ್ ಬಾಬಿನ ಬಗ್ಗೆ ನಾವು ಬಹಳ ಜವಾಬ್ದಾರಿಯಿಂದ ವರ್ತಿಸುತ್ತಿದ್ದೇವೆ. ಆದಾಗ್ಯೂ ತಮ್ಮೆಲ್ಲರ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು ಈ ಬಾಬಿನಲ್ಲಿ ಯಾವ ಲೋಪದೋಷಗಳೂ ಇಲ್ಲದಂತೆ ಮಾಡುತ್ತೇನೆಂಬ ಭರವಸೆ ಸಹ ನಾನು ತಮಗೆ ಕೊಡಬಲ್ಲೆ.

ಇನ್ನು ಶ್ರೀ ಮುನಿಸ್ವಾಮಿಯವರು ಕೆ. ಜಿ. ಎಫ್. ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ದೊಡ್ಡ ದೊಡ್ಡ ನಗರಗಳಿಗೆ ಕೊಡುತ್ತಿರುವಂತೆ ಅಂದರೆ ಬೆಂಗಳೂರು, ದಾವಣಗೆರೆ ಇತ್ಯಾದಿ ನಗರಗಳಿಗೆ ಕೊಡುತ್ತಿರುವಂತೆ ಈ ಕೆ. ಜಿ. ಎಫ್. ಗೂ ಗ್ರ್ಯಾಂಟನ್ನೂ ಕೊಡಬೇಕೆಂದು ಕೇಳಿದ್ದಾರೆ. ಆದರೆ ಅಲ್ಲಿಯ ಡಿಪ್ರೆಸ್ಡ್ ಕ್ಲಾಸಿನವರಿಗೆ ಯಾವ ಗ್ರ್ಯಾಂಟನ್ನೂ ಕೊಟ್ಟಿಲ್ಲ. ಅದನ್ನು ತಿಳಿಸಿದ್ದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞನಾಗಿದ್ದೇನೆ. ಕೆ. ಜಿ. ಎಫ್. ಸ್ಯಾನಿಟೇರಿ ಏರಿಯಾಕ್ಕೆ ಏನು ಕೊಡಬೇಕೋ ಅದನ್ನು ಕೊಡಲಾಗುತ್ತೆ.

ಇನ್ನು ಸಿಂಕೋನ ಗಿಡಗಳನ್ನು ಬೆಳಸುವ ವಿಷಯದಲ್ಲಿ ಶ್ರೀಮಾನ್ ಎಂ. ಗೋವಿಂದ ರೆಡ್ಡಿಯವರು ಒಂದು ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಒಂದು ಸ್ಕೀಮನ್ನು ತಯಾರಿಸಿ, ಅದರ ಪ್ರಕಾರ ಒಂದೆರಡು ವರ್ಷಗಳಿಂದಲೂ ಇದನ್ನು ಮುಂದುವರಿಸಿಕೊಂಡು ಬಂದಿದ್ದೇವೆ. ಇದರಿಂದ ನಮಗೆ ಹೆಚ್ಚಿನ ಪ್ರಯೋಜನ ಉಂಟಾಗುವ ಸಂದರ್ಭಗಳುಂಟು. ಅನೇಕರ ಅನುಭವ ಪಡೆದುಕೊಂಡು ಇದನ್ನು ಮಾಡಲಾಗಿದೆ. ಈ ಬಾಬಿಗಾಗಿ ಅಷ್ಟು ಹಣವೂ ಕೂಡ ವೆಚ್ಚವಾಗುತ್ತಿಲ್ಲ. ಅನೇಕ ನಿಪುಣರ ಮತ್ತು ಬುದ್ಧಿವಂತರ ಸಲಹೆ ಮೇರೆಗೇ ನಾವಿದನ್ನು ಕೈಗೊಂಡು ಮಾಡುತ್ತಿರುವುದು.

ನನ್ನ ಬಾಬುಗಳ ಪರವಾಗಿ ಮಾನ್ಯ ಸದಸ್ಯರು ಏನೇನು ಟೀಕೆಗಳನ್ನು ಮಾಡಿದ್ದರೋ ಅವುಗಳಿಗೆಲ್ಲ ನಾನೀಗ ಉತ್ತರವನ್ನು ಕೊಟ್ಟಿರುತ್ತೇನೆ. ಇನ್ನು ಹೆಚ್ಚು ವೇಳೆಯಾದ್ದರಿಂದ ನಾನು ನನ್ನ ಭಾಷಣವನ್ನು ಇಲ್ಲಿಗೆ ಮುಗಿಸುತ್ತೇನೆ.

*ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೆ, ನನ್ನ ಸ್ವಾಧೀನದಲ್ಲಿರುವ ಇಲಾಖೆಗಳ ವಿಚಾರದಲ್ಲಿ ನಾನಾ ಸಲಹೆಗಳು ಬಂದಿವೆ. ಕೆಲವು ರಚನಾತ್ಮಕರೂಪವಾದ ಸಲಹೆಗಳಾಗಿಯೂ, ಮತ್ತೆ ಕೆಲವು ಟೀಕಾರೂಪವಾದ ಸಲಹೆಗಳಾಗಿಯೂ ಇರುತ್ತವೆ. ಅವುಗಳಿಗೆಲ್ಲ ನಾನಾ ಕಾರಣಗಳೂ ಇವೆ. ದೇಶಕ್ಕೆ ಸ್ವಾತಂತ್ರ್ಯತೆ ಇಲ್ಲದಿರುವಾಗ, ಕೆಲವು ಮಹನೀಯರು ಈ ವಿಚಾರಗಳನ್ನು ಯಾವ ದೃಷ್ಟಿ ಕೋನದಿಂದ ನೋಡುತ್ತಿದ್ದಾರೋ ಇಂದು ಅದೇ ದೃಷ್ಟಿ ಕೋನದಿಂದ ನೋಡುತ್ತಿದ್ದಾರೆ. ಈಗ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ದೇಶದಲ್ಲಿ ಆಶಾದಾಯಕ ಚಿಹ್ನೆ ಮೂಡುತ್ತಿದೆ. ಎಲ್ಲರಿಗೂ ಆದಷ್ಟು ಬೇಗ ಕೆಲಸಗಳಾಗಲೀ ಎಂಬ ಭಾವನೆಯಿಂದ ಕೆಲವರು ಟೀಕೆಮಾಡುವುದುಂಟು. ಆದರೆ ಮಂತ್ರಹಾಕಿ ಕೂಡ ಹಾಗೆಮಾಡಲು ಸಾಧ್ಯವಿಲ್ಲದಿರುವಾಗ ಇದು ಅತ್ಮ, ಬೇಗ ಅವರು ನಿರೀಕ್ಷಿಸಿದ ವೇಳೆಗೆ ಆಗಲು ಬಹಳ ಕಷ್ಟವಿದೆ. ನಿಜವಾಗಿಯೂ ನಾವು ತಪ್ಪು ಮಾಡಿದ್ದರೆ, ಅಂಥ ತಪ್ಪುಗಳನ್ನು ಕಂಡುಹಿಡಿದು ಯಾರೇ ಟೀಕೆಮಾಡಲಿ, ಅದನ್ನು ನಾನು ಸಂಪೂರ್ಣವಾಗಿ ಮತ್ತು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಅವರಿಗೆ ನನ್ನ ಧನ್ಯವಾದಗಳನ್ನೂ ಅರ್ಪಿಸುತ್ತೇನೆ.

ಪೋಲಿಸ್ ಇಲಾಖೆಯ ವಿಚಾರದಲ್ಲಿ ಅಷ್ಟು ಹೆಚ್ಚಿನ ಟೀಕೆಗಳೇನೂ ಬಂದಿಲ್ಲ. ಒಂದೆರಡು ಅಪಶಬ್ದಗಳನ್ನು ಉಪಯೋಗಿಸಿದ್ದಾರೆ. ಅದಕ್ಕೋಸ್ಕರವಾಗಿಯೇ ನಾವು ಹಿಂದೆ ಈ ಪೋಲೀಸ್ ಬಾಬಿನಲ್ಲಿದ್ದ ಅನೇಕರು ದೇಶದ ಸ್ವಾತಂತ್ರ್ಯತೆಗೆ ಅಡ್ಡಿ ಆತಂಕಗಳನ್ನು ತಂದೊಡ್ಡುವ ಮನೋಭಾವವನ್ನೇ ಹೆಚ್ಚಾಗಿ ಬೆಳಸಿಕೊಂಡು ಬಂದವರಾಗಿದ್ದ ಕಾರಣ, ಮತ್ತು ಅವರನ್ನು ಈಗಿನ ಪ್ರಜಾಸೇವೆಗೆ ಅಳವಡಿಸುವಂತೆಮಾಡುವುದಕ್ಕಾಗಿಯೂ, ಅವರಲ್ಲಿದ್ದ ಒರಟುಭಾವನೆಗಳನ್ನು ಹೋಗಲಾಡಿಸಿ, ಅವರ ಹೃದಯಪರಿವರ್ತನೆಯಾಗಿ, ಅವರು ಹೆಚ್ಚು ಹೆಚ್ಚಾಗಿ ಸಾರ್ವಜನಿಕರೊಡನೆ ಸಹಕರಿಸಿ, ಸಹಕಾರಮನೋಭಾವನೆಯ ಬೀಜವನ್ನು ಅವರಲ್ಲಿ ಬಿತ್ತಲು, ಜವಾಬ್ದಾರಿ ಸರ್ಕಾರ ಬಂದಕೂಡಲೇ ನಾನಾ ಪ್ರಯತ್ನಗಳನ್ನು ಕೈಗೊಂಡಿದ್ದೇವೆ. ಆದಾಗ್ಯೂ ಅವರ ಹೃದಯ ಪರಿವರ್ತನೆ ಅಷ್ಟಾಗಿ ಆಗಿಲ್ಲ. ಅವರ ಹಿಂದಿನ ಸಂಸ್ಕಾರ ಇನ್ನೂ ಹೋಗಿಲ್ಲ ಅದನ್ನೆಲ್ಲಾ ಸಂಪೂರ್ಣವಾಗಿ ಮಾರ್ಪಾಡುಮಾಡಲು ಪೋಲೀಸ್ ಟ್ರೈನಿಂಗ್ ಸ್ಕೂಲನ್ನು ತೆರೆದು, ಅಲ್ಲಿ ತಕ್ಕಷ್ಟು ವಿದ್ಯೆಯನ್ನು ಪೋಲಿಸ್ ಕಾನ್ಸ್ಟೇಬಲ್‌ಗಳಿಗೆ ಕೊಟ್ಟು, ಅವರಲ್ಲಿರುವ ಅನಕ್ಷರತೆಯನ್ನು ಹೋಗಲಾಡಿಸಿ ಅಕ್ಷರಸ್ಥರನ್ನಾಗಿ ಮಾಡಿ, ಜನರಲ್ಲಿ ಸಹಕರಿಸುವಂತೆ ತಕ್ಕ ಎಲ್ಲಾ ಏರ್ಪಾಡುಗಳನ್ನೂ ಮಾಡಿದ್ದೇವೆ.

ಸಾರ್ವಜನಿಕರಲ್ಲಿ ಒಂದು ಪ್ರಾರ್ಥನೆಯೇನೆಂದರೆ, ಅವರ ಕೆಲಸ ಬಹಳ ಕಷ್ಟತರವಾದದ್ದು, ಎಷ್ಟೋ ಸಾರಿ ಜನಗಳ ಮನಸ್ಸನ್ನು ನೋಯಿಸತಕ್ಕ ಕರ್ತವ್ಯಗಳನ್ನು ಮಾಡಬೇಕಾದ ಜವಾಬ್ದಾರಿ ಅವರಮೇಲಿದೆ. ಅದರಲ್ಲೂ ಪೂರ್ವಕಾಲದಲ್ಲಿ ಅಂಥ ಸನ್ನಿವೇಶದಲ್ಲಿದ್ದವರು ಈಗ ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳಬೇಕಾದ ಕಾಲದಲ್ಲಿ ಅವರ ಕರ್ತವ್ಯ ಬಹಳ ಗುರುತರವಾದುದು. ಆದ್ದರಿಂದ ಅವರ ವಿಷಯದಲ್ಲಿ ಸಹಾನುಭೂತಿಯನ್ನಿಡಬೇಕಾದ್ದು ಧರ್ಮ ಮತ್ತು ನ್ಯಾಯ. ಆ ರೀತಿಯಾದ ವಾತಾವರಣವನ್ನು ಕಲ್ಪಿಸುವುದಕ್ಕೆ ಪ್ರತಿಯೊಬ್ಬರೂ ಪ್ರಯತ್ನಪಡಬೇಕೆಂದು ಸಾರ್ವಜನಿಕರೆಲ್ಲರಿಗೂ ಈ ಸಭೆಯಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಆ ಮೇಲೆ, ಬ್ಲಾಕ್‌ಮಾರ್ಕೆಟ್ ವಿಚಾರವನ್ನು ಕೆಲವು ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ಇದಕ್ಕೆ ಶ್ರೀ ಸಿದ್ಧಲಿಂಗಯ್ಯನವರು ಉತ್ತರ ಕೊಡುತ್ತಾರಾದ್ದರಿಂದ ನಾನು ಹೆಚ್ಚಾಗಿ ಹೇಳುವುದಿಲ್ಲ. ಸದ್ಯಕ್ಕೆ ನಾನಿಷ್ಟು ಹೇಳಿದರೆ ಸಾಕು. ಅನೇಕ ಕಾರ್ಯಗಳಲ್ಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆದರೆ ನಾವು ಹಾಕಿದ ಕೇಸುಗಳು ವಜಾ ಆಗಿದ್ದರೆ ಅದಕ್ಕೆ ಪೋಲೀಸಿನವರನ್ನು ಸುಮ್ಮನೆ ಆಕ್ಷೇಪಣೆಮಾಡಬಾರದು. ಮಾಡತಕ್ಕ ಪ್ರಯತ್ನಗಳನ್ನೆಲ್ಲಾ ಅವರು ಮಾಡಿದ್ದಾರೆ. ಆದರೆ ತಮಗೇ ಗೊತ್ತಿದೆ. ಲಾಯರುಗಳ ಕೆಲಸ ಎಷ್ಟರಮಟ್ಟಿಗಿರುತ್ತದೆ ಎಂದು ಲಾಯರುಗಳ ದಕ್ಷತೆ ಅಥವಾ ಬುದ್ಧಿವಂತಿಕೆಯಿಂದ ಕೇಸುಗಳು ಹೋಗಬಹುದು. ಅಂದಮಾತ್ರಕ್ಕೇ ಸರ್ಕಾರದವರಾಗಲೀ ಪೋಲೀಸಿನವರಾಗಲೀ ಆಕ್ಷೇಪಣೆಗೆ ಗುರಿಮಾಡುವುದು ಸರಿಯಲ್ಲ. ಎಲ್ಲಾದರೂ ದಕ್ಷತೆಗೆ ಲೋಪ ಬಂದಿದ್ದರೆ ಅಂಥ ಸಂದರ್ಭಗಳಲ್ಲಿ ಖಂಡಿತ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ಹೇಳಬಲ್ಲೆ. ಅವರು ಹೊಸ ಸನ್ನಿವೇಶಕ್ಕೆ ಹೊಂದಿಕೊಂಡು ಹೋಗಬೇಕೆಂದೂ, ಜನಗಳನ್ನು ವಿಶ್ವಾಸದಿಂದ ಕಾಣಬೇಕೆಂದೂ, ಜೊತೆಗೆ ತಮ್ಮ ಕರ್ತವ್ಯವನ್ನೂ ನಿಷ್ಠೆಯಿಂದ ಧೈರ್ಯವಾಗಿ ಮಾಡಬೇಕೆಂದೂ ಹೇಳಿದ್ದೇವೆ. ಅವರು ಆ ರೀತಿಯಾಗಿಯೇ ನಡೆದುಕೊಳ್ಳುತ್ತಿದ್ದಾರೆ. ಈ ಸಭೆಯವರೆಲ್ಲರಿಗೂ ಮನವರಿಕೆಯಾಗಿರುವಂತೆ ಅವರು ಹಿಂದೆ 1947, 1948ರಲ್ಲಿ ಕಾಶ್ಮೀರದ ಮೇಲಿನ ಕಾರ್ಯಾಚರಣೆ, ಹೈದರಾಬಾದಿನ ಪೋಲೀಸ್ ಆಕ್ಷನ್, ನಮ್ಮ ಸಂಸ್ಥಾನದಲ್ಲಿ ಕೋಮುವಾರು ಗಲಭೆಗಳು ಮುಂತಾದ ಎಲ್ಲಾ ಸಂದರ್ಭಗಳಲ್ಲಿಯೂ ತಮ್ಮ ಕರ್ತವ್ಯವನ್ನು ಶ್ರದ್ಧೆಯಿಂದಲೂ ನಿಷ್ಠೆಯಿಂದಲೂ ಮಾಡಿದ್ದಾರೆ. ಅದರಲ್ಲೂ ನಮ್ಮ ಪೋಲೀಸಿನವರ ವಿಷಯದಲ್ಲಿ ಇಷ್ಟು ಹೇಳಿದರೆ ಸಾಕೆಂದು ಕಾಣುತ್ತದೆ. ಭಾರತದ ಇತರೇ ಪ್ರಾಂತ್ಯಗಳಲ್ಲಿ ಎಷ್ಟು ಮಟ್ಟಿಗೆ ಶಾಂತಿಗೆ ಭಂಗ ಬಂದಿದೆಯೋ ಅಷ್ಟುಮಟ್ಟಿಗೆ ನಮ್ಮ ಮೈಸೂರು ದೇಶದಲ್ಲಿ ಉಂಟಾಗದ ರೀತಿಯಲ್ಲಿ ಮುತುವರ್ಜಿಯಿಂದ ಕೆಲಸಮಾಡಿದ್ದರೆಂದು ನಾನು ಹೇಳಬಲ್ಲೆ. ಅಂಥವರ ವಿಷಯದಲ್ಲಿ ನಮ್ಮ ಹೆಚ್ಚಿನ ಸಹಾನುಭೂತಿಯಿರಬೇಕೆಂದು ಹೇಳುತ್ತೇನೆ.

ವಿಮಾನ ಶಿಕ್ಷಣದ ವಿಚಾರದಲ್ಲಿ ಮಾನ್ಯಸದಸ್ಯರು ಕಲವು ಆಕ್ಷೇಪಣೆಗಳನ್ನು ತಂದಿದ್ದಾರೆ. ಅವರಿಗೆ ಇಷ್ಟು ಹೇಳುತ್ತೇನೆ. ಪ್ರಾಯಶಃ ಅನೇಕರಿಗೆ ಇದು ಅನಾವಶ್ಯಕವೆಂದು ಅಭಿಪ್ರಾಯವಿರಬಹುದು. ಹಾಗೆ ಯಾರೂ ತಿಳಿದುಕೊಳ್ಳಕೂಡದು. ಭಾರತ ಸ್ವತಂತ್ರವಾದ ಮೇಲೆ, ವಿಮಾನವನ್ನು ನಡೆಸತಕ್ಕ ದಕ್ಷರಾದ

ಪೈಲಟ್‌ಗಳ ಸಹಾಯ ನಮಗೆ ಬೇಕೇ ಬೇಕು. ಅದರ ಅವಶ್ಯಕತೆ ನಮಗೆ ಎಷ್ಟೆಂಬುದು ನಮಗೆ ಗೊತ್ತಿದ್ದು ಕಾಶ್ಮೀರದ ಸಮಸ್ಯೆ ನಮಗುದ್ಭವಿಸಿ ಆಗ ಏರೋಪ್ಲೇನ್‌ಗಳನ್ನು ನಡೆಸುವುದಕ್ಕೆ ನಮ್ಮಲ್ಲಿ ಸಾಕಾದಷ್ಟು ಪೈಲಟ್‌ಗಳಿಲ್ಲದೆ ಇದ್ದಾಗ ಆಗಲೇ ಇದನ್ನು ನಾವು ಮಾಡಿದ್ದು. ಬೊಂಬಾಯಿ, ಮದ್ರಾಸ್, ನಾಗಪುರ ಮುಂತಾದ ಕಡೆಗಳಲ್ಲೆಲ್ಲಾ ಇಂಥಾ ಸ್ಕೂಲಿದೆ. ಆದ್ದರಿಂದ ಇಷ್ಟು ಮುಂದುವರಿದಿರುವ ನಮ್ಮ ಮೈಸೂರು ದೇಶದಲ್ಲಿ ವಿಮಾನಶಿಕ್ಷಣ ಶಾಲೆಯಿರುವುದು ಬಹಳ ಅಗತ್ಯ. ಅಲ್ಲದೆ ನಮಗಿರುವ ನೈಸರ್ಗಿಕ ಅನುಕೂಲತೆಗಳು ಬೇರೆ ಕಡೆಯಲ್ಲಿಲ್ಲ. ನಮಗೆ 12 ತಿಂಗಳೂ ಕೂಡ ಶಾಲೆ ನಡೆಸುವುದಕ್ಕೆ ತಕ್ಕ flying conditions ಇವೆ. ಬಾಕಿ ಕಡೆಗಳಲ್ಲಾದರೆ ಬಿರುಗಾಳಿ, ಮೋಡಗಳು ಬಂದು ಎಷ್ಟೋ ಕಾಲಗಳಲ್ಲಿ ನಡೆಸುವುದಕ್ಕಾಗುವುದಿಲ್ಲ. ಬೆಂಗಳೂರಿನ ಹವಾಗುಣ ಎಲ್ಲಾ ಕಾಲಗಳಲ್ಲೂ ತೃಪ್ತಿಕರವಾಗಿದೆ. ಜೊತೆಗೆ ಹಿಂದೂಸ್ಥಾನ್ ವಿಮಾನದ ಕಾರ್ಖಾನೆ ಇಲ್ಲೇ ಇರುವುದರಿಂದ ಇದು ಬಹಳ ಅಗತ್ಯ. ನಮ್ಮ ಯುವಕರು, ತರುಣರು ಇದರಲ್ಲಿ ತರಪೇತು ಹೊಂದಿ ನಮ್ಮ ದೇಶವನ್ನು ಕಾಪಾಡುವ ಸಮಯ ಬಂದಾಗ ಅಮೋಘ ಸೇವೆಯನ್ನು ಸಲ್ಲಿಸಬಹುದಾಗಿದೆ. ವೈಮಾನಿಕ ಶಿಕ್ಷಣವಿದ್ದರೆ ಅಂಥವರು ದೇಶದ ಸಂಪತ್ತಾಗುತ್ತಾರೆ. ನಮ್ಮ ದೇಶವನ್ನು ದುಃಖದಲ್ಲಿ ತಪ್ಪಿಸುತ್ತಾರೆಂದು ನಾನು ಸದಸ್ಯರಲ್ಲಿ ಹೇಳುತ್ತೇನೆ. ಒಟ್ಟಿನಲ್ಲಿ ಇಷ್ಟು ಹೇಳಬಲ್ಲೆ. ಕಾಶ್ಮೀರದ ಯುದ್ಧ ಸಂಬಂಧದಲ್ಲಿ ಭಾರತದ ಪೈಲಟ್‌ಗಳು ಕೇವಲ ನಮ್ಮ ಡಕೋಟಾಗಳನ್ನು ಉಪಯೋಗಿಸಿ ಹಲವಾರು ಕಷ್ಟ ಪ್ರಸಂಗದಲ್ಲಿ ಸಹಾಯಮಾಡಿದ್ದಾರೆ. ಕ್ರಿಕೆಟ್ ಆಡ ತಕ್ಕ ಮೈದಾನಗಳಲ್ಲಿ ವಿಮಾನವನ್ನು ನಿಲ್ಲಿಸುತ್ತಿದ್ದರು. ಆದ್ದರಿಂದ ನಮ್ಮವರಲ್ಲಿ ಬೇಕಾದಷ್ಟು talent ಇದೆ. ನಾವು ಕಲಿತುಕೊಳ್ಳುವುದಕ್ಕೆ ಸರಿಯಾದ ಅವಕಾಶವೂ ಇದೆ. ಆದ್ದರಿಂದ ಒಂದು ವೇಳೆ ನಮಗೆ ಸ್ವಲ್ಪ ಹೆಚ್ಚಿಗೆ ಖರ್ಚಾದರೂ ಪರವಾಗಿಲ್ಲವೆಂದು ಹೇಳಿ ಮಾಡಿದ್ದೇವೆ. ಅಲ್ಲದೆ ನಮ್ಮ ಬಡ್ಜೆಟ್ಟನ್ನು ನೋಡುವುದಾದರೆ ಇದಕ್ಕಾಗಿ ಸ್ವಲ್ಪ ಹೆಚ್ಚಿಗೆ non-recurring ವೆಚ್ಚ ಆಗಿದೆ. ಹೊಸದಾಗಿ ಕೆಲವು ಹ್ಯಾಂಗರುಗಳನ್ನೂ, seat ಗಳನ್ನೂ, ಕೊಠಡಿಗಳನ್ನೂ ಏರ್ಪಡಿಸಬೇಕಾಯಿತು. ಕೆಲವು ರಿಪೇರಿಗಳನ್ನು ಮಾಡಬೇಕಾಯಿತು. ಇದಕ್ಕಾಗಿ non-recurring ವೆಚ್ಚ ಆಗಿದೆ. ಆದರೂ ಒಂದು ವಿಷಯ ಹೇಳಬಲ್ಲೆ. ಇದಕ್ಕಾಗಿ ಇಂಡಿಯಾಸರ್ಕಾರದವರು ಸಬ್ಸಿಡಿ ಕೊಡುತ್ತೇವೆಂದು ಹೇಳಿದ್ದಾರೆ. ಈ ಹಣವನ್ನೂ ಸೇರಿಸಿಕೊಂಡರೆ ತಕ್ಕಮಟ್ಟಿಗೆ ಈ ಸ್ಕೂಲು self-supporting ಆಗಿರುತ್ತದೆ. ಇಂಡಿಯಾ ಸರ್ಕಾರದ ಇನ್‌ಸ್ಪೆಕ್ಟರು ಬಂದು ಇದನ್ನು ಮಾಡಿರುವುದು ಸರಿಯಾಗಿದೆ. Ground Engineering, Flying ಮುಂತಾಗಿ ನಾನಾ ಭಾಗಗಳಲ್ಲಿ ತರಪೇತು ಕೊಡಬೇಕೆಂದು ಹೇಳಿಹೋಗಿದ್ದಾರೆ. ಆದ್ದರಿಂದ ಇದು ಅನಗತ್ಯವೆಂದು ಹೇಳುವ ಹಾಗಿಲ್ಲ. ಬ್ರಿಟಿಷರು ನಮ್ಮ ದೇಶದಲ್ಲೇ ಇದ್ದು, ನಮ್ಮ ದೇಶದ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದರೆ ಇದು ನಮಗೆ ಅನಾವಶ್ಯಕವೆಂದು ಹೇಳಬಹುದಾಗಿತ್ತು. ಯುದ್ಧ ಮಾತ್ರಕ್ಕೇ ಅಲ್ಲ, ನಮ್ಮ ದೇಶದಲ್ಲಿ ಈಗ ಉತ್ಸವವನ್ನು ಜಾಸ್ತಿ ಮಾಡಬೇಕಾಗಿದೆ. ಪರಕೀಯರ ಆಕ್ರಮಣ ಕಾಲದಲ್ಲಿ ದೇಶರಕ್ಷಣೆಗೆ ಪೈಲಟ್‌ಗಳ ಆವಶ್ಯಕತೆಯೆಷ್ಟಿದೆಯೋ ಅಷ್ಟೇ ಮಟ್ಟಿಗೆ ವ್ಯಾಪಾರೋದ್ಯಮಗಳಲ್ಲೂ ಇರುತ್ತದೆ. Commercial licensee ಗಳಾಗಿ ಎಷ್ಟೋ ಪೈಲಟ್‌ಗಳಿರುತ್ತಾರೆ. ಆದ್ದರಿಂದ ದೇಶದ ತರುಣರಿಗೆ ಶಿಕ್ಷಣಕೊಟ್ಟು ಅವರಿಂದ ನಮ್ಮ ದೇಶದ ಸೇವೆಮಾಡಿಸಿಕೊಳ್ಳುವುದು ಸರಿಯಾದ ಮಾರ್ಗ.

ರೇಷ್ಮೆ ವಿಚಾರದಲ್ಲಿ ಹೆಚ್ಚು ಜನ ಮಾತನಾಡಲಿಲ್ಲ. ಒಬ್ಬಿಬ್ಬರು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮಾನ್ ಕೆ. ಸುಬ್ಬರಾಯರು ಒಂದು ವಿಷಯ ಪ್ರಸ್ತಾಪಮಾಡಿದ್ದಾರೆ. ರೇಷ್ಮೆ ಕೈಗಾರಿಕೆ ಹೇಗಿದೆಯೆಂದರೆ, ಅದರ ಧಾರಣೆ ಒಂದುಸಾರಿ ಏರುತ್ತದೆ, ಒಮ್ಮೆ ಬಹಳ ಕೆಳಗೆ ಇಳಿಯುತ್ತದೆ. ಇದನ್ನು ಸರ್ಕಾರದವರು ಪರ್ಯಾಲೋಚನೆಗೆ ತೆಗೆದುಕೊಂಡು ಯಾರು ಹಿಪ್ಪುನೇರಳೆ ವ್ಯವಸಾಯಮಾಡುತ್ತಾರೆ, ಯಾರು ನೂಲುತ್ತಾರೆ, ಯಾರು ಗೂಡುಗಳನ್ನು ಇಟ್ಟುಕೊಂಡು ಹುಳುಗಳನ್ನು ಸಾಕುತ್ತಾರೆ, ಯಾರು ರೀಲುಮಾಡುತ್ತಾರೆ ಮತ್ತು ಯಾರು ವ್ಯಾಪಾರಮಾಡುತ್ತಾರೆ ಎಂಬುದನ್ನೆಲ್ಲಾ ಪರಿಶೀಲಿಸಿ ಯಾರೊಬ್ಬರೂ ಇನ್ನೊಬ್ಬರನ್ನು ಶೋಷಣೆಮಾಡದ ರೀತಿಯಲ್ಲಿ ಒಂದು ವ್ಯವಸ್ಥೆ ಮಾಡಿದ್ದೇವೆ. ಇದೊಂದು ಮುಖ್ಯವಾದ ಕೈಗಾರಿಕೆ, ಅದರಲ್ಲೂ ಗೃಹಕೈಗಾರಿಕೆ ಮತ್ತು ದೇಶಕ್ಕೆ ಸಂಪತ್ತನ್ನು ತರತಕ್ಕ ಕೈಗಾರಿಕೆ. 27,000 ಎಕರೆಗಳಲ್ಲಿ ಹಿಂದೆ ಬೆಳೆಯುತ್ತಿದ್ದುದು ಈಗ 80 000 ಎಕರೆಗಳಲ್ಲಿ ಇದು ಬೆಳೆಯುತ್ತಿದೆ. ಇದನ್ನು ಅಭಿವೃದ್ಧಿಗೆ ತರಬೇಕೆಂದು ಸರ್ಕಾರದವರು ವಿಶೇಷ ಆಸಕ್ತಿವಹಿಸಿದ್ದಾರೆ. ಆಹಾರದ ಬೆಳೆಯನ್ನು ಬೆಳೆಯುವುದರಲ್ಲಿಯೂ, ಹಿಪ್ಪುನೇರಳೆ ವ್ಯವಸಾಯವನ್ನು ಮಾಡುವುದರಲ್ಲಿಯೂ ಒಂದಕ್ಕೊಂದು ಹೊಂದಿಕೊಂಡು ರೂಢಿಸಬೇಕೆಂದು ಸರ್ಕಾರದವರು ಮಾಡಿರುವರಲ್ಲದೆ, ಈ ಕೈಗಾರಿಕೆಯ ಸಂಬಂಧದಲ್ಲಿ ಅನೇಕ ಪರಿಶೋಧನೆಗಳನ್ನು ನಡೆಸಬೇಕೆಂದು ಹೇಳಿ ರಿಸರ್ಚ್ ಸ್ಟೇಷನ್ನನ್ನೂ ಮತ್ತು ರೋಗರಹಿತ ಮೊಟ್ಟೆಗಳನ್ನು ಒದಗಿಸುವ ಏರ್ಪಾಡನ್ನೂ ಮಾಡಬೇಕೆಂದಿದೆ. ಇದಕ್ಕಾಗಿ ಒಂದು ಸ್ಕೀಮನ್ನೂ ಮಂಜೂರು ಮಾಡಿದ್ದಾರೆ. ಇದಕ್ಕಾಗಿ ಸರ್ಕಾರದಿಂದ ಬೇಕಾದ ಸಹಕಾರಗಳನ್ನೆಲ್ಲಾ ನಾವು ಕೊಡುವುದಕ್ಕೆ ತಯಾರಾಗಿದ್ದೇವೆಂದು ಹೇಳುತ್ತೇವೆ.

ಆಮೇಲೆ Animal Husbandry ವಿಚಾರದಲ್ಲಿ ಶ್ರೀಮಾನ್ ವೀರಣ್ಣಗೌಡರೂ ಮತ್ತು ಇತರ ಕೆಲವು ಸದಸ್ಯರೂ ಸ್ವಲ್ಪ ಕಟುವಾಗಿಯೇ ಟೀಕೆಮಾಡಿದ್ದಾರೆ. ಆದರೆ ಅವರು ಹೇಳಿದ್ದು ಅಷ್ಟು ನಿಜವಲ್ಲ. ಅದೂ legacy of the past ನಾನು ಮೊದಲು ಹೇಳಬೇಕಾಗಿದೆ. ಅದನ್ನು ಹೊಸದಾಗಿ ಅಳವಡಿಸಿಕೊಳ್ಳಬೇಕಾದ್ದು ಧರ್ಮ. ಅದಕ್ಕಾಗಿ ಅವರು ಏನೇನು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದರೋ ಅದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಅದರಿಂದ ದೇಶಕ್ಕೂ ತೊಂದರೆಯಾಗಬಾರದು, ದನದ ತಳಿಯೂ ಅಭಿವೃದ್ಧಿಯಾಗಬೇಕು. ಆ ರೀತಿ ಮಾಡಬೇಕಾಗಿದೆ. ಕೋಳಿ ಸಾಕುವುದನ್ನೂ ಕೂಡ ನಾವು ನಿರಾಕರಿಸುವ ಹಾಗಿಲ್ಲ. ದನ ಸಾಕುವುದರಲ್ಲಿ ಎಚ್ಚರಿಕೆಯಿರಬೇಕು. ಇದನ್ನೆಲ್ಲಾ ಮನಗಂಡು ಎಲ್ಲೆಲ್ಲಿ duplication of staff ಇದೆಯೋ ಅದನ್ನು ತಪ್ಪಿಸಬೇಕು, ಏನು ಕಾರಣ ಎಲ್ಲೆಲ್ಲಿಂದು ವೆಚ್ಚವಾಗುತ್ತಿದೆಯೋ ಅದನ್ನು ತಪ್ಪಿಸಬೇಕು ಎಂದು ಮನಸ್ಸುಮಾಡಿ ಕೆಲಸಮಾಡುತ್ತಿದ್ದೇವೆ. ಪ್ರಾಯಶಃ ಕೊಂಚ ಕಾಲದಲ್ಲಿ ಸರ್ಕಾರದವರು ಅದನ್ನು ಮಾಡುವವರಿದ್ದಾರೆ. ಶ್ರೀಮಾನ್ ವೀರಣ್ಣಗೌಡರು ಇನ್ನೊಂದು ಹೇಳಿದರು. ಅದು ಮೀನು ವಿಚಾರ. ಬಹುಶಃ ಹಾಸ್ಯಾಸ್ಪದವಾಗಿದ್ದು ಸದಸ್ಯರಿಗಿರತಕ್ಕ ಬೇಜಾರನ್ನು ಕಳೆದು ಸ್ವಲ್ಪ ಖುಮ್ಮಸ್ಸು ಬರಬೇಕೆಂದು ಅವರು ಆರೀತಿ ಹೇಳಿರಬಹುದು. ಅದೇನೇ ಇರಲಿ,

ಈ ಮೀನನ್ನು ಮಾತ್ರ ಕಡೆಗಣ್ಣಿನಿಂದ ಕಾಣಬಾರದೆಂದು ನನ್ನ ವಿನಂತಿ. ಮೈಸೂರು ದೇಶದಲ್ಲಿ ಶೇಕಡ 60ರಷ್ಟು ಜನರು ಮೀನು ತಿನ್ನುತ್ತಾರೆ. ಶ್ರೀಮಾನ್ ನಾರಾಯಣಗೌಡರಿಗೆ ಇದರ ವಿಚಾರ ಚೆನ್ನಾಗಿ ಗೊತ್ತಿದೆ. ಒಂದು ಮುಖ್ಯ ಅಂಶ ನಾವು ನೋಡಬೇಕು. ನಮ್ಮ ಪೂರ್ವೀಕರು ಬಹಳ ಎಚ್ಚರಿಕೆಯಿಂದ ದೇಶದಲ್ಲಿರತಕ್ಕ 29,000 ಕೆರೆಗಳನ್ನೂ ಕಟ್ಟಿಸಿದ್ದಾರೆ. ಅವರು ಏನು ಬುದ್ಧಿವಂತಿಕೆ ಉಪಯೋಗಿಸಿದ್ದಾರೆಂದರೆ ಈ ಮೀನುಗಳ ಬೆಳೆವಣಿಗೆಗೆ ಸ್ವಲ್ಪವೂ ತಡೆಬಾರದ ರೀತಿಯಲ್ಲಿ ಕಟ್ಟಿದ್ದಾರೆ. ಮೊನ್ನೆ International Labour Organisation ಕಾನ್‌ಫರೆನ್ಸ್ ನಡೆದ ಸಂದರ್ಭದಲ್ಲಿ ಆ ಸದಸ್ಯರು ನೋಡಿ ಬಹಳ ಸಂತೋಷವನ್ನು ವ್ಯಕ್ತಪಡಿಸಿದರು. ಸುಮಾರು ನಾಲ್ಕೈದು ಶತಮಾನಗಳ ಹಿಂದೆ ಅಷ್ಟು ಜಾಣ್ಮೆಯಿಂದ ಕೆರೆಗಳನ್ನು ಕಟ್ಟಿಸಿ ಮೀನುಗಳ ರಕ್ಷಣೆಯ ಕಡೆಗೆ ಗಮನಕೊಟ್ಟಿದ್ದಾರೆ. ಕೆರೆ ಕೋಡಿಗಳನ್ನು ಕಟ್ಟುವುದರಲ್ಲಿ ಮೀನುಗಳು ಹತ್ತುವುದಕ್ಕೆ ಅನುಕೂಲವಾಗಿರುವ ರೀತಿಯಲ್ಲಿ ಕಟ್ಟಿಸಿದ್ದಾರೆ. ಆದ್ದರಿಂದ ನಮ್ಮ ಮೈಸೂರು ದೇಶದಲ್ಲಿ ಸ್ವಾಭಾವಿಕವಾಗಿಯೇ ಮೀನುಗಳ ಉತ್ಪತ್ತಿ ಬಹಳ ಚೆನ್ನಾಗಿದೆಯೆಂಬುದು ಒಂದು ಸಂತೋಷದ ಸಂಗತಿ. ಮೀನಿನ ಉತ್ಪತ್ತಿ ಹೆಚ್ಚುತ್ತಿದೆ. ಯಾರೂ ಆ ವಿಚಾರವನ್ನು ಉದಾಸೀನದಿಂದ ನೋಡಬೇಕಾಗಿಲ್ಲ. ಆದರೆ ಹೊಸದಾಗಿ ರಿಸರ್ಚ್ ಮಾಡುತ್ತೇವೆಂದು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಕೂಡದೆಂದು ತೀರ್ಮಾನಮಾಡಿದ್ದೇವೆ. ಏಕೆಂದರೆ ಈಗ ಮೀನುಗಳು ಹೇರಳವಾಗಿವೆ. ವಾಣೀವಿಲಾಸಸಾಗರ, ಹೆಸರುಘಟ್ಟ, ಮಾರ್ಕಂಡೇಯ ಕೆರೆಗಳಲ್ಲಿ ಮೀನುಗಳು ಅಭಿವೃದ್ಧಿಯಾಗಿವೆ. ಅವು ಆಹಾರಕ್ಕೆ ಬೇಕಾಗುವುದರಿಂದ ಅವನ್ನು ಹಿಡಿದು ಮಾರಾಟಮಾಡಬೇಕು. ನಮ್ಮಲ್ಲಿ ಆಳವಾದ ನೀರಿನಲ್ಲಿರುವ ಮೀನುಗಳನ್ನು ಹಿಡಿಯತಕ್ಕವರಿಲ್ಲದಿದ್ದುದರಿಂದ ಮದ್ರಾಸಿನಿಂದ ತರಪೇತಾಗಿರುವವರನ್ನು ಕರೆಸಿದೆ. ಅವರು ಹೆಸರುಘಟ್ಟದ ಕೆರೆಯಲ್ಲಿ ಈಗ ದಿನಕ್ಕೆ 150 ಪೌಂಡುಗಳವರೆಗೆ ಮೀನು ಹಿಡಿಯುತ್ತಿದ್ದಾರೆ. ಅದು ಪ್ರಾಯೋಗಿಕವಾಗಿ ಮಾಡಿದ ಮೇಲೆ ಈಚೆಗೆ 170 ಪೌಂಡುಗಳವರೆಗೂ ಸಿಕ್ಕುತ್ತಿದೆ. ಇದಕ್ಕೆ ಟೆಂಡರನ್ನು ಕೇಳಿದ್ದೇವೆ. ಸರ್ಕಾರಕ್ಕೆ ಕೆಟ್ಟ ಹೆಸರು ಬರಬಾರದೆಂಬ ದೃಷ್ಟಿಯಿಂದ, ಬೇಕಾದವರಿಗೆ ಮಾರಾಟಮಾಡಿಕೊಂಡರೆಂಬ ದೂರು ಬಂದೀತೆಂದು ಟೆಂಡರನ್ನು ಕರೆದಿದ್ದೇವೆ. ಇರುವ ಮೀನನ್ನು ಆಹಾರಕ್ಕಾಗಿ ಹಿಡಿಯುವುದಕ್ಕೂ, ಮೀನಿನ ಅಭಿವೃದ್ಧಿ ಕಡಮೆಯಾಗದಂತೆಯೂ ಏರ್ಪಾಡುಮಾಡಿದ್ದೇವೆ. ಆದರೆ ಇಷ್ಟುಮಾತ್ರ ಭರವಸೆ ಕೊಡಬಲ್ಲೆ. ವಿನಾ ಕಾರಣ ಖರ್ಚುಮಾಡಿಲ್ಲ. ಅಗತ್ಯವಾಗಿ ಖರ್ಚುಮಾಡಬೇಕಾದ್ದಕ್ಕೆ ಮಾಡದೆ ನಿಲ್ಲಿಸಿಲ್ಲ.

ಇದೇ ರೀತಿಯಲ್ಲಿ ಕೋಳಿ ಸಾಕುವುದಕ್ಕೆ ನಾಲ್ಕೈದು ಫಾರಂ ಇತ್ತು. ಈಗ ಹೊಸ ವಿಧಾನವನ್ನು ಕಂಡುಹಿಡಿದು ಹೆಸರುಘಟ್ಟದಲ್ಲಿ ಎಲ್ಲಾ ಅನಿಮಲ್ ಹಸ್ಬೆಂಡರಿಗೂ ಅನುಕೂಲಮಾಡಿದೆ. ಕ್ಯಾಟ್ಲ್ ಬ್ರೀಡಿಂಗ್, ಬಫೆಲೋ ಬ್ರೀಡಿಂಗ್, ಷೀಪ್ ಬ್ರೀಡಿಂಗ್, ಪೌಲ್ಟ್ರಿ ಬ್ರೀಡಿಂಗ್ ಇತ್ಯಾದಿ ಎಲ್ಲಕ್ಕೂ ಅಲ್ಲಿ ಏರ್ಪಾಡುಮಾಡಿದೆ. ಬಾಕಿ ಕಡೆ ನಷ್ಟವಾಗಿದ್ದರೂ ಇಲ್ಲಿ ಆಗಿಲ್ಲ. ಪ್ರಾಯೋಗಿಕವಾಗಿರುವಾಗ ನಫೆ ನಿರೀಕ್ಷೆಮಾಡುವುದಕ್ಕೆ ಸಾಧ್ಯವಿಲ್ಲ. ವರ್ಷೇ ವರ್ಷೇ ನಷ್ಟವಾಗದಂತೆ ಬೇರೆ ತರಹಮಾಡಬೇಕೆಂದು ಹೇಳಿರುತ್ತಾರೆ. ಅದಕ್ಕೆ ಕೃತಜ್ಞತೆ ಸೂಚಿಸುತ್ತೇನೆ. ಆದ್ದರಿಂದ ಅನಿಮಲ್ ಹಸ್ಬೆಂಡ್ರಿ ವಿಷಯದಲ್ಲಿ ಯಾರೂ ಆಕ್ಷೇಪಣೆಮಾಡಬಾರದು. ವೆಟರಿನರಿ ಇಲಾಖೆಯಿಂದ ಬಹಳ ಸಹಾಯವಾಗುತ್ತಿದೆ. Hessarghattea must be the centre of all animal husbandry activities ಎಂದು ಯೋಚನೆಮಾಡಿದೆ. ಕ್ಯಾಸ್ಟ್ರೇಟ್ ಮಾಡುವುದು ವಗೈರೆ ಕೆಲಸ ನಡೆಯುವಂತೆಯೂ, ಜನರಿಗೆ ಅಲ್ಲಿ ಸಂಪರ್ಕವಿಟ್ಟುಕೊಳ್ಳಲು ಅವಕಾಶವಿರುವಂತೆಯೂ, ಸಂಪೂರ್ಣ ಪ್ರಯೋಜನ ಸಾರ್ವಜನಿಕರಿಗೆ ದೊರೆಯುವಂತೆಯೂ ಏರ್ಪಾಡುಮಾಡಿದೆ.

ಇನ್ನೊಂದು ಅಂಶ. ಹಿಂದೆ ಅಭಿವೃದ್ಧಿ ಇಲಾಖೆಗಳಲ್ಲಿ ಒಂದಕ್ಕೊಂದಕ್ಕೆ ಸಂಪರ್ಕವಿರಲಿಲ್ಲ. ಈ ವಿಚಾರದಲ್ಲಿ ಕೋಆರ್ಡಿನೇಷನ್ ಮಾಡಬೇಕೆಂದು ಸರ್ಕಾರದವರು ಒಂದು ವರ್ಷದ ಕೆಳಗೆ ಎಲ್ಲಾ ಅಭಿವೃದ್ಧಿ ಇಲಾಖೆಗಳವರೂ ತಿಂಗಳಿಗೊಂದುಸಲ, ಎರಡು ತಿಂಗಳಿಗೊಂದು ಸಲ, ಒಬ್ಬರಿಗೊಬ್ಬರು ವಿಚಾರ ವಿನಿಮಯಮಾಡಿಕೊಂಡು ಕಾಲ ವಿಳಂಬವಾಗದಂತೆ ಬೇಗ ಕೆಲಸ ನಡೆಸಬೇಕೆಂಬ ಉದ್ದೇಶದಿಂದ ತಾಲ್ಲೂಕು ಕೋಆರ್ಡಿನೇಷನ್ ಸಮಿತಿ, ಡಿಸ್ಟ್ರಿಕ್ಟ್ ಕೋಆರ್ಡಿನೇಷನ್ ಸಮಿತಿ ಮತ್ತು ಸೆಂಟ್ರಲ್ ಕೋಆರ್ಡಿನೇಷನ್ ಸಮಿತಿ ಇರಬೇಕೆಂದು ಹುಕುಂ ಸಾದರು ಮಾಡಿದ್ದಾರೆ. ಇದು ಈ ದೇಶಕ್ಕೆ ಹೊಸದು. ಈ ದಿವಸ ಡಾ॥ ಜಾನ್‌ಮ್ಯಾಥಾಯ್‌ರವರು ಕೇಂದ್ರ ಸರ್ಕಾರದಲ್ಲಿ ಕೋಆರ್ಡಿನೇಟ್ ಮಾಡುವ ವಿಧಾನವನ್ನು ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ. ಇಲ್ಲಿಯವರೆಗೆ ಸರಿಯಾದ ಫಲ ಬರದಿರುವುದಕ್ಕೆ ಕಾರಣ ಎಲ್ಲರೂ ಅವರವರ ಇಲಾಖೆಯ ಕೆಲಸ ಮಾಡುತ್ತಿದ್ದರು. ಈಗ ಒಬ್ಬರಿಗೊಬ್ಬರು ವಿಚಾರವಿನಿಮಯ ಮಾಡಿಕೊಂಡು ಕೆಲಸ ಮಾಡದಿದ್ದರೆ ಆಗುವುದಿಲ್ಲ. ಒಂದು ಕೆರೆ ಕಟ್ಟಿದರೂ ಅದರಲ್ಲಿ ತೂಬು ಸರಿಯಾಗಿಲ್ಲದಿದ್ದರೆ, ನೀರು ಕಾಲಕ್ಕೆ ಸರಿಯಾಗಿ ಕೊಡದಿದ್ದರೆ ಆಗುವುದಿಲ್ಲ. ಆದ್ದರಿಂದ ಪರಸ್ಪರ ವಿಚಾರ ವಿನಿಮಯ ಮಾಡುವ ಏಜೆನ್ಸಿ ಇರಲಿಲ್ಲ. ಈಗ ಮಾಡಿದ್ದಾರೆ. ಈಗ ಅದು ಪ್ರಾರಂಭವಾಗಿರುವುದರಿಂದ ಪದೇ ಪದೇ ಕಲೆತು ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ. ಲಂಚಕೋರತನ ಕಡಮೆಯಾಗಿದೆ, ಹೀಗೆ ಹೆಚ್ಚು ಪ್ರಯೋಜನ ಬರುವ ಏರ್ಪಾಡು ಮಾಡಿದ್ದಾರೆ.

ಮುಖ್ಯವಾಗಿ ವಿಶೇಷ ಸಲಹೆ ಬಂದಿರುವ ಪಬ್ಲಿಕ್ ವರ್ಕ್ಸ್ ಇಲಾಖೆ ಮತ್ತು ಹೆಚ್ಚು ಆಹಾರ ಬೆಳೆಯುವ ಯೋಜನೆ ವಿಚಾರವಾಗಿ, ಪ್ರತಿಯೊಂದೂ ಅನುಭವಪೂರ್ವಕವಾದ ಮಾತು ಆಗಿರುವುದರಿಂದ ಅದಕ್ಕೆ ಕೃತಜ್ಞತೆ ಇದೆ, ವಂದನೆ ಸಲ್ಲಿಸುತ್ತೇನೆ. ಆದರೆ ಅಷ್ಟೇ ಅಲ್ಲ. 1943–44ರಲ್ಲೇ ಈ ದೇಶಕ್ಕೆ ಅನ್ನದ ಅಭಾವವಿದೆಯೆಂಬುದು ಗೊತ್ತಾಯಿತು. ಯಾವಾಗ ಜಪಾನ್ ದೇಶವು ಬರ್ಮಾ ದೇಶವನ್ನು ಆಕ್ರಮಣ ಮಾಡಬೇಕೆಂದು ಪ್ರಯತ್ನಿಸಿತೋ ಆಗಿನಿಂದ ನಮ್ಮ ದೇಶಕ್ಕೆ ಆಹಾರ ಪದಾರ್ಥಗಳು ಬರಲಿಲ್ಲ. ಆಗ ಇಂಡಿಯಾ ಸರ್ಕಾರದವರು ಹೆಚ್ಚು ಆಹಾರ ಬೆಳೆಯುವ ಯೋಜನೆಯನ್ನು ಮಾಡಿದರು. ಅದನ್ನು ನೋಡಿ, ವರ್ತಮಾನ ಪತ್ರಿಕೆಗಳಲ್ಲಿ ಓದಿ ಎಲ್ಲರಿಗೂ ಹಾಸ್ಯಾಸ್ಪದವಾಗುವಂತಾಯಿತು. ಅದು ಯಾರ ತಪ್ಪೆಂದು ಹೇಳಬಾರದು. ಹಿಂದೆ ಇಷ್ಟು ನಿರ್ದಿಷ್ಟವಾದ ಯೋಜನೆಯಿರಲಿಲ್ಲ. ಮೈಸೂರು ದೇಶದವರು ಬೇಕಾದಷ್ಟು ವ್ಯವಸಾಯಗಾರರಿಗೆ ಜಮೀನು ಕೊಟ್ಟರು. ಆದರೆ ಹೆಚ್ಚು ಬೆಳೆ ಆಗಲಿಲ್ಲ ಎಂದು ಹೇಳುವುದು ವಾಡಿಕೆಯಾಗಿದೆ. ಈ ಸಾರಿ ಕೇಂದ್ರ ಸರ್ಕಾರದವರು ಬೇಕಾದಷ್ಟು ಖರ್ಚು ಮಾಡಿದ್ದಾರೆ. ಮೈಸೂರು ಸರ್ಕಾರದವರು 1943-44 ರಿಂದ ಲಕ್ಷಾಂತರ ರೂಪಾಯಿಗಳನ್ನು

ಖರ್ಚು ಮಾಡಿದ್ದಾರೆ. ಆದರೆ ಫಲ ವಿಶೇಷವಾಗಿ ಬಂದಿಲ್ಲ. ಏಕೆಂದರೆ ನಿರ್ದಿಷ್ಟ ಯೋಜನೆಯಿರಲಿಲ್ಲ. ಮತ್ತು ಮಾಡುವ ವಿಧಾನ ಒಂದು ತರಹವಿತ್ತು. ಕೇಂದ್ರ ಸರ್ಕಾರದವರು 1949-50ಕ್ಕೆ ಒಂದು ರೀತಿ ನಿರ್ಧಾರ ಮಾಡಿದ್ದಾರೆ, 1955ಕ್ಕೆ ಹೊರಗಿನಿಂದ ಬರುವುದನ್ನು ನಿಲ್ಲಿಸುತ್ತೇವೆ, ಎಲ್ಲರೂ ಅವರ ಕಾಲ ಮೇಲೆ ಅವರು ನಿಲ್ಲಬೇಕು, ಇದಕ್ಕೆ ಸರ್ವಸಮರ್ಪಕವಾದ ಯೋಜನೆಯೊಂದನ್ನು ಮಾಡಬೇಕು ಎಂದು ಎಲ್ಲಾ ಪ್ರಾಂತಗಳಿಗೂ ಸಲಹೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಮೈಸೂರು ಸರ್ಕಾರದವರೂ ಆ ನೀತಿಯನ್ನನುಸರಿಸಿ 6 ತಿಂಗಳಿನಿಂದ ಹಿಡಿದು 1½ ವರ್ಷದೊಳಗೆ ಆಗಬಹುದಾದ ಅಲ್ಪಕಾಲಾವಧಿಯ ಪ್ರಾಜೆಕ್ಟುಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಯೋಚಿಸಿದ್ದಾರೆ. ಲಕ್ಕವಳ್ಳಿ ಪ್ರಾಜೆಕ್ಟಿನಿಂದ ಒಂದು ಲಕ್ಷ ಎಂಬತ್ತು ಸಾವಿರ ಎಕರೆ ತರಿಯಾಗುವುದು ನಿಜ. ಆ ಯೋಜನೆ 20 ಕೋಟಿ ರೂಪಾಯಿಗಳಿಗೆ ಏರಿದೆ. ಅದು ಮಾಡಬೇಕೆಂದರೆ ಕನಿಷ್ಠಪಕ್ಷ 12 ವರ್ಷವಾದರೂ ಆಗಬೇಕು. ಆದರೆ ಅದು ಇರಕೂಡದೆಂದೂ ಹೇಳುವುದಿಲ್ಲ. ಬೇಡವೆಂದೂ ಹೇಳುವುದಿಲ್ಲ. ಫಲ ಬರಬೇಕಾದರೆ ನಿಧಾನ. ಈಗ ಆಗಬೇಕಾಗಿರುವುದು ಎರಡುವರ್ಷದಲ್ಲಿ ಫಲ ಬರಬೇಕಾದ್ದು. ಆದರಿಂದ ದೀರ್ಘಕಾಲಾವಧಿಯ ಪ್ರಾಜೆಕ್ಟುಗಳನ್ನು ಸ್ವಲ್ಪ ನಿಧಾನ ಮಾಡಿದರೆ ನಷ್ಟವಾಗುವುದಿಲ್ಲ. ಅದರ ಬದಲು ಅಲ್ಪಕಾಲಾವಧಿಯ ಯೋಜನೆ ಕೈಗೊಳ್ಳುವುದು ಉತ್ತಮ ಎಂದು ಯೋಚಿಸಿದ್ದೇವೆ.

ಈಗ ನಮಗೆ ಬೇಕಾದದ್ದು ನಾಳೆ ನಾಳಿದ್ದು ಅಥವ ಒಂದು ತಿಂಗಳು, ಒಂದು ವರ್ಷ, ಹೆಚ್ಚಾದರೆ ಎರಡು ವರ್ಷ–ಇಷ್ಟರೊಳಗೆ ಕೆಲಸ ಮುಗಿದು ಫಲ ಕೊಡುವಂತಹ ಕಾಮಗಾರಿಗಳು. ಆದುದರಿಂದ ದೀರ್ಘಕಾಲಾವಧಿಯ ಯೋಜನೆಗಳನ್ನು ಸ್ವಲ್ಪ ನಿಧಾನ ಮಾಡಿ ಅವುಗಳನ್ನು ಯಾವ ಯಾವ ಮಟ್ಟದಲ್ಲಿ ಬಿಟ್ಟಿದ್ದರೆ ನಷ್ಟವಾಗುವುದಿಲ್ಲವೋ ಅಷ್ಟಕ್ಕೆ ಬಿಟ್ಟು, ಬೇಗ ಪೂರೈಸುವ ಅಲ್ಪಕಾಲಾವಧಿಯ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನಮಾಡಿದ್ದೇವೆ. ಅನೇಕ ಮಹನೀಯರು ನಡು ರಸ್ತೆಯಲ್ಲಿರುವ ಸಣ್ಣ ಸಣ್ಣ ಕಟ್ಟೆಗಳು, ಕೆರೆಗಳು ಮತ್ತು ನಾಲೆಗಳನ್ನು ರಿಪೇರಿ ಮಾಡಬೇಕೆಂದು ಹೇಳಿದ್ದಾರೆ, ಇದು ಬಹಳ ಒಳ್ಳೆಯ ಸಲಹೆ. ನಮಗೆ 60-70 ಸಾವಿರ ಟನ್ನಿನಷ್ಟು ಅಕ್ಕಿ ಅಭಾವವಿದೆ. ಮಳೆಯ ಅಭಾವವಾದರೆ ಇದು ಇನ್ನೂ ಹೆಚ್ಚಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಮಳೆಯಾಗದಿದ್ದರಂತೂ ಇನ್ನೂ ಕಷ್ಟ. ಈ ದೃಷ್ಟಿಯಿಂದ ಎಲ್ಲಿ assured rainfall ಇದೆಯೋ ಅಲ್ಲಿಗೆ works schemes ಎಂದು ಒಂದು ಯೋಜನೆ ಮಾಡಿದ್ದೇವೆ. ಮಳೆ ಕಡಿಮೆ ಬೀಳತಕ್ಕ ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಬಾವಿ ವ್ಯವಸಾಯಕ್ಕೆ ಏರ್ಪಾಡು ಮಾಡಿದ್ದೇವೆ. ಈ ವ್ಯವಸ್ಥೆ ಜಾರಿಗೆ ಬಂದರೆ ವರ್ಷಕ್ಕೆ ಎರಡುಮೂರು ಬೆಳೆಗಳನ್ನು ತೆಗೆದು ಕೊಯಮತ್ತೂರಿನಲ್ಲಿ ವರ್ಷಕ್ಕೆ ಮೂರು ಬೆಳೆಗಳನ್ನು ಸುಲಭವಾಗಿ ತೆಗೆಯುತ್ತಿದ್ದಾರೆ. ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ವಿಶೇಷವಾಗಿ ಬಾವಿಗಳಿಂದ ವ್ಯವಸಾಯವಾಗುತ್ತಿದೆ. ನಾವು ಭಾವಿಗಳಿಗೆಂದು ಕೊಟ್ಟ ಹಣ ವ್ಯರ್ಥವಾಗಿಲ್ಲ. ಒಂದೊಂದು ಬಾವಿಗೆ 500 ರೂಪಾಯಿ ಸಹಾಯ ದ್ರವ್ಯ ಕೊಡುತ್ತಿದ್ದುದನ್ನು 1,000 ರೂಪಾಯಿಗೆ ಹೆಚ್ಚಿಸಿದೆವು. ಈಗ 1-4-50 ರಿಂದ 500 ರೂಪಾಯಿ ಮಾತ್ರ ಕೊಡಬೇಕೆಂದು ಸೂಚನೆ ಬಂದಿದೆ. ಭಾರತದ ಇತರ ಕಡೆಗಳಲ್ಲಿಯೂ ಹೀಗೆಯೇ ಇರುವುದರಿಂದ ಒಪ್ಪುತ್ತೇವೆ. ಎಲ್ಲಿ ತರಿ ಜಮೀನಿದೆಯೋ ಅಲ್ಲಿಗೆ assured water supply ಬೇಕು. ಈಗ ಸುಮಾರು 40-50 ವರ್ಷಗಳಿಂದಲೂ ಕೆರೆಯ ನಾಲೆಗಳು ಮತ್ತು ನದಿಯ ನಾಲೆಗಳನ್ನು ರಿಪೇರಿ ಮಾಡಿಲ್ಲ. ಎಷ್ಟೋ ಕಡೆ ಬಹಳ ದುಸ್ಥಿತಿಯಲ್ಲಿದ್ದುವು. ಇದರಿಂದ ಹತ್ತು ಸಾವಿರ ಎಕರೆ ಅಚ್ಚುಕಟ್ಟಿದ್ದರೆ ಅದರಲ್ಲಿ ಐದಾರು ಸಾವಿರ ಎಕರೆ ಮಾತ್ರ ಸಾಗಾಗುತ್ತಿತ್ತು. ಹುಣಸೂರು ತಾಲ್ಲೂಕಿನಲ್ಲಿ ಬಹಳ ಅನಾನುಕೂಲವಿತ್ತು. ಇದರಿಂದ ಸುಮಾರು ಶೇಕಡ 30 ರಿಂದ 40 ರಷ್ಟು ಬತ್ತ ನಷ್ಟವಾಗುತ್ತಿತ್ತು, ಈಚೆಗೆ ಕೆರೆಯ ನಾಲೆಗಳನ್ನೂ ನದಿಯ ನಾಲೆಗಳನ್ನೂ ರಿಪೇರಿ ಮಾಡಿಸುತ್ತಿದ್ದೇವೆ. ಈ ಕೆಲಸ ತ್ವರಿತವಾಗಿ ನಡೆಯುತ್ತಿದೆ. 1952ನೆಯ ಇಸವಿಯೊಳಗೆ ಎಲ್ಲವನ್ನೂ ರಿಪೇರಿ ಮಾಡುತ್ತೇವೆ. ಯಳಂದೂರು ತಾಲ್ಲೂಕಿನಲ್ಲಿ ಸುವರ್ಣಾವತಿ ನದಿಯೆಂದು ಒಂದು ನದಿಯಿದೆ. ಅದು ವಿಪರೀತ ಮಣ್ಣನ್ನು ತರುತ್ತದೆ. ಈ ಕಾರಣದಿಂದ ನೀರು ಹೋಗತಕ್ಕ ನಾಲೆಗಳಿಗೆ ಮಣ್ಣು ಸೇರಿ ಹೂಳುತುಂಬಿಕೊಂಡು ಕೆರೆಗಳಿಗೆ ನೀರೇ ಹೋಗುತ್ತಿರಲಿಲ್ಲ. ಈ ವರ್ಷ ಇದನ್ನು ಸರಿಪಡಿಸಲು ಪ್ರಯತ್ನ ಮಾಡಿದ್ದೇವೆ. ಮೊದಲೇ ಇದನ್ನು ಮಾಡಿದ್ದರೆ, ಸರಿಯಾದ ಸ್ಥಿತಿಯಲ್ಲಿಟ್ಟಿದ್ದಿದ್ದರೆ ಹತ್ತಾರು ಸಾವಿರ ಪಲ್ಲ ಹೆಚ್ಚಾಗಿ ಬೆಳೆಯಬಹುದಾಗಿತ್ತು. ಈಗ ಹೊಸದಾಗಿ ಹೈಡ್ರಾಲಿಕ್ ಸಂಶೋಧನೆ ಮಾಡಿ, ಅದರಿಂದ ಒಂದು ವಿಧಾನವನ್ನು ಕಂಡುಹಿಡಿದು ನೀರಿನ ಜೊತೆಗೆ ಬರುವ ಮಣ್ಣು ನಾಲೆಗೆ ಹೋಗದೆ ಅಲ್ಲೇ ನಿಲ್ಲುವಂತೆ ಮಾಡಿದ್ದಾರೆ. 1943ರಿಂದ ಕೆರೆ ಮತ್ತು ನದಿಯ ನಾಲೆಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿದ್ದಿದ್ದರೆ ಈ ದಿವಸ ಆಹಾರಕ್ಕೆ ಇಷ್ಟು ಕಷ್ಟ ಬರುತ್ತಿರಲಿಲ್ಲ. ರೈತರಿಗೆ ನೀರನ್ನು ಸರಿಯಾಗಿ ಒದಗಿಸಿದರೆ ಈ ಹೊತ್ತು ಅವರು ನಮ್ಮ ದೇಶಕ್ಕೆ ಬೇಕಾಗುವ ಅನ್ನವನ್ನು ಒದಗಿಸುವ ಶಕ್ತಿ ಅವರಿಗಿದೆ. ಒಟ್ಟಿನಲ್ಲಿ ಕೆರೆ ಮತ್ತು ನದಿ ನಾಲೆಗಳನ್ನೂ, ಫೀಡರ್ ನಾಲೆಗಳನ್ನೂ ರಿಪೇರಿ ಮಾಡಿದರೂ ಕೂಡ ಎಷ್ಟೋ ಅನ್ನದ ಅಭಾವ ತಪ್ಪುತ್ತದೆ.

ಹೀಗೆಯೇ ಸಂಸ್ಥಾನದಲ್ಲಿ ಅನೇಕ ಮೈನರ್ ಕೆರೆಗಳಿವೆ. ಸುಮಾರು 20 ಸಾವಿರ ಸಣ್ಣ ಕಟ್ಟೆಗಳನ್ನು ಬಿಟ್ಟು 20,028 ಕೆರೆಗಳಿವೆ. ಇವುಗಳಲ್ಲಿ ಕೆಲವಕ್ಕೆ ತೂಬು ಕೆಟ್ಟುಹೋಗಿದೆ, ಕೆಲವಕ್ಕೆ ಕೋಡಿ ಮುರಿದು ಹೋಗಿದೆ, ಫೀಡರ್ ನಾಲೆ ಹೂಳು ತುಂಬಿದೆ,—ಹೀಗೆ ನಾದುರಸ್ತಿನಲ್ಲಿವೆ, ಅನೇಕ ಸಂದರ್ಭಗಳಲ್ಲಿ ಫೀಡರ್ ನಾಲೆಗಳು ಚೆನ್ನಾಗಿದ್ದಿದ್ದರೆ ಎಷ್ಟೋ ಉಪಯೋಗವಾಗುತ್ತಿತ್ತು. ಉದಾಹರಣೆಗೆ ಚಿಕ್ಕಸಂದ್ರದ ಕೆರೆ ಫೀಡರಿನಲ್ಲಿ ಎಂಟಡಿ ಹೂಳು ತುಂಬಿಕೊಂಡಿತ್ತು, ಹೂಳು ತೆಗೆಯುವ ಕೆಲಸವನ್ನು ಎರಡು ಕೆರೆಗಳಲ್ಲಿ ಪ್ರಾಯೋಗಿಕವಾಗಿ ಮಾಡುತ್ತಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದವರು ಅರ್ಧ ಖರ್ಚು ಕೊಡುತ್ತಾರೆ. ಹೊಸದಾಗಿ ಕಟ್ಟುವುದಕ್ಕಿಂತ ಇರುವ ಅಚ್ಚುಕಟ್ಟಿಗೆ ಸರಿಯಾಗಿ ನೀರು ಸರಬರಾಯಿ ಮಾಡುವುದು ಉತ್ತಮ. ಈ desilting ಅಥವಾ ಹೂಳು ತೆಗೆಯುವುದರಲ್ಲಿ ಇರುವ ಕೆರೆಗಳು ಉತ್ತಮವಾಗುತ್ತವೆಯೇ ಹೊರತು ಬೇರೆ ಜಮೀನು ಮುಳುಗಡೆಯಾಗುವುದಿಲ್ಲ. ಹೊಸ ಕೆರೆ ಜಲಾಶಯಗಳನ್ನು ಕಟ್ಟಿದರೆ ಜಮೀನು ಮುಳುಗಡೆಯಾಗುತ್ತವೆ. ಆದಕಾರಣ ಹೂಳು ತೆಗೆಯುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ. ನೂರಾರು ಸಂದರ್ಭಗಳಲ್ಲಿ ನೀರು ಹಳ್ಳಕ್ಕೆ ಬಿದ್ದು ವ್ಯರ್ಥವಾಗಿ ಹರಿದು ಹೋಗುತ್ತಿದೆ. ಇದನ್ನು ನಿಲ್ಲಿಸಿ, ಉಪಯೋಗ ಮಾಡಿ ದೀರ್ಘಕಾಲಾವಧಿ ಯೋಜನೆಗಳಿಗೆ ಲಕ್ಷಾಂತರ ರೂಪಾಯಿ ಹಾಕಿದರೂ ಬೇಗ ಅದರಿಂದ

ಪ್ರತಿಫಲ ಬರುವುದಿಲ್ಲ, ಎಷ್ಟೋ ಖರ್ಚು ಮಾಡಿದ್ದರೂ ಒಂದು ಎಕರೆ ಹೆಚ್ಚಾಗಿಲ್ಲದಿರುವ ಉದಾಹರಣೆಗಳಿವೆ. ನಾನು ಅಂಕಿ ಅಂಶಗಳನ್ನಿಟ್ಟಿದ್ದೇನೆ. ಹಿಂದೆ ನೋಡಿ ಸಂತೋಷಪಡುವ ದೀರ್ಘಕಾಲಾವಧಿಯ ಯೋಜನೆಗಳನ್ನು ಮಾಡುತ್ತಿದ್ದರು. ಆದರೆ ಈ ಎರಡರಲ್ಲಿಯಾವುದು ಮುಖ್ಯ. ಎಂಬುದನ್ನು ಗೊತ್ತುಪಡಿಸಿ ತಿಳಿದಿರಲಿಲ್ಲ. ಈಗ ಹೂಳು ತೆಗೆಯುವುದು, ಮೈನರ್ ಕೆರೆ ಕಟ್ಟೆಗಳನ್ನು ರಿಪೇರಿ ಮಾಡಿಸುವುದು—ಈ ಕೆಲಸಗಳಿಗೆ ಪ್ರಾಶಸ್ತ್ಯ ಕೊಟ್ಟು ಮಾಡಿಸುತ್ತಿದ್ದೇವೆ. 1952ನೆಯ ಇಸವಿಯ ಹೊತ್ತಿಗೆ ಈ ಅಲ್ಪ ಕಾಲಾವಧಿಯ ಯೋಜನೆಗಳೆಲ್ಲವೂ ಪೂರೈಸಿ ರೈತರಿಗೆ ನೀರಿನ ಅಭಾವವಿಲ್ಲದಿದ್ದರೆ ಏನೂ ತೊಂದರೆಯಿರುವುದಿಲ್ಲ. ನಮಗೆ ಬೇಕಾದಷ್ಟು ದವಸವನ್ನು ರೈತರು ಬೆಳೆದು ಕೊಡುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಹೋದ ವರ್ಷ ಆರು ಲಕ್ಷ ಪಲ್ಲ ಬತ್ತ ಕೊಟ್ಟರು, ಅವರಿಗೆ ಸರಿಯಾದ ಅನುಕೂಲಗಳನ್ನು ಕೊಟ್ಟರೆ ಇದನ್ನು 12—13 ಲಕ್ಷಕ್ಕೆ ಏರಿಸಬಹುದು.

ಶ್ರೀ ಎಂ. ಎಚ್. ಜೋಯಿಸರು.—ಮಾಡಿಕೊಟ್ಟರೆ, ಎಂದು ಹೇಳುತ್ತೀರಿ. ಮಾಡಿಕೊಡುತ್ತೀರಾ, ಹೇಳಿ.

ಶ್ರೀ ಟಿ. ಮರಿಯಪ್ಪನವರು.—ಅಲ್ಲಿಗೆ ಸುಮಾರು 12 ಲಕ್ಷ ರೂಪಾಯಿ ಖರ್ಚುಮಾಡಬೇಕೆಂದಿದ್ದೇವೆ, ಸಣ್ಣ ಕೆರೆಗಳು ಬೇಕಾದಷ್ಟಿವೆ, ಅವುಗಳನ್ನು ರಿಪೇರಿ ಮಾಡಿ ನೀರಿನ ಕೊರತೆಯನ್ನು ನಿವಾರಣೆ ಮಾಡಿದರೆ ರೈತರು ಬೆಳೆಯುತ್ತಾರೆ.

ಕೈಗಾರಿಕೆ ಸಂಸ್ಥೆಗಳಿಗೆಲ್ಲಾ ಮನವಿಮಾಡಿಕೊಂಡು ತಮ್ಮ ತಮ್ಮ ಕೆಲಸಗಾರರಿಗೆ ಬೇಕಾಗುವ ಆಹಾರದಲ್ಲಿ ಆದಷ್ಟು ಬೆಳೆದುಕೊಳ್ಳಬೇಕೆಂದು ಸೂಚಿಸಿದ್ದೇವೆ. ಹಿಂದಿನ ವರ್ಷ ಮಂಡ್ಯದ ಸಕ್ಕರೆ ಕಾರ್ಖಾನೆಯವರು 400 ಎಕರೆ ಜಮೀನಿಗೆ ಕಾರುರಾಗಿ ಹಾಕಿದ್ದರು. ಹಾಸನದ ಇಂಪ್ಲಿಮೆಂಟ್ಸ್ ಕಾರ್ಖಾನೆಯವರೂ ಕೂಡ ಸ್ವಲ್ಪ ಜಮೀನಿಗೆ ಹಾಕಿದ್ದಾರೆ. ಇದೇ ರೀತಿ ಮಾಡಬೇಕೆಂದು ಎಲ್ಲ ಕೈಗಾರಿಕೆಗಳವರನ್ನೂ ಕೇಳಿದ್ದೇವೆ. ಭದ್ರಾವತಿ ಕಾರ್ಖಾನೆಗೆ 500 ಎಕರೆ ಜಮೀನು ಕೊಟ್ಟಿದ್ದೇವೆ. ಅಲ್ಲಿ ಸನ್ನಿವೇಶ ಚೆನ್ನಾಗಿದೆ, ಬೆಳೆಯಬಹುದು. ಹೀಗೆಯೇ ಪ್ಲಾಂಟರುಗಳಿಗೂ ಹೇಳಿದ್ದೇವೆ. ಅವರು ತರಿ ಬೆಳೆ ಅಥವಾ ಟಾಪಿಯೋಕ ಬೆಳೆಯಬೇಕೆಂದು ಸೂಚಿಸಿದ್ದೇವೆ. ಮೊನ್ನೆ ತಾನೆ ಡೆಪ್ಯುಟಿ ಕಮೀಷನರು ವ್ಯವಸಾಯದ ಡೈರೆಕ್ಟರೂ ಕೆಲವು ಪ್ಲಾಂಟರುಗಳನ್ನು ನೋಡಿ ಮಾತನಾಡಿದ್ದಾರೆ. ಅವರು ಇದಕ್ಕೆ ಒಪ್ಪಿದ್ದಾರೆ.

ಶ್ರೀಮಾನ್ ಚನ್ನಬಸಪ್ಪನವರು ಈ ಯೋಜನೆಯಿಂದ ಪ್ರಯೋಜನವಿಲ್ಲ, ಪಲ್ಲಕ್ಕೆ 25 ರೂಪಾಯಿನಂತೆ ನಮ್ಮ ರೈತರಿಗೆ ಕೊಟ್ಟರೆ ಮೈಸೂರು ದೇಶದಲ್ಲಿ ಆಹಾರ ದವಸವನ್ನು ನಮ್ಮ ರೈತರೇ ಬೇಕಾದಷ್ಟು ಬೆಳೆಯುತ್ತಾರೆ ಎಂದು ಹೇಳಿದರು.

Sri H. M. CHANNABASAPPA.—The Hon'ble Minister is proceeding on a wrong assumption, Mr. Speaker. I never said that the purchase price should be enhanced. What we have been spending to meet the deficit works out to Rs. 25 per palla. That is my statement, and I do not want the Hon'ble Minister to create a wrong impression.

Sri T. MARIAPPA.—I stand corrected Sir.

ಶ್ರೀ ಟಿ. ಮರಿಯಪ್ಪನವರು.—ಇಷ್ಟು ಹೇಳುತ್ತೇನೆ. ಬೆಲೆ ಜಾಸ್ತಿ ಮಾಡಿದ್ದರಿಂದಲೇ ನಮ್ಮ ಖೋತಾ ಇಲ್ಲಿಯವರೆಗೂ ಸರಿತೂಗಿಲ್ಲ.

Sri H. M. CHANNABASAPPA.—No body said that the price should be enhanced.

ಶ್ರೀ ಟಿ. ಮರಿಯಪ್ಪನವರು.—ಬೆಲೆ ವಿಪರೀತವಾಗಿ ಏರಿಸಿದರೂ ಹೆಚ್ಚು ಖೋತಾ ಆಗಿಲ್ಲ. 14—15 ರೂಪಾಯಿನಿಂದ 21 ರೂಪಾಯಿಗಳವರೆಗೆ ಏರಿಸಿದರೂ ಉತ್ಪತ್ತಿ ಜಾಸ್ತಿಯಾಗಿಲ್ಲ ಎಂದರೆ ನಿಜವಾಗಿ ಯಾರಿಗೆ ನಷ್ಟ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಉತ್ಪನ್ನದ ಬೆಲೆ ಜಾಸ್ತಿಯಾಗಿದೆ ಎಂಬ ಸೂಚನೆ ಬಂತು, ಅದಕ್ಕೇ ಹೇಳಿದೆ. ಶ್ರೀಮಾನ್ ಚನ್ನಬಸಪ್ಪನವರು ಕೃಷ್ಣರಾಜಸಾಗರದಿಂದ ಎಷ್ಟೋ ಖರ್ಚಾಗುತ್ತಾ ಇದೆ, ಆದರೆ ಅಷ್ಟು ಪ್ರಯೋಜನವಾಗುತ್ತಿಲ್ಲವೆಂದು ಹೇಳಿದರು. ಅದಕ್ಕೆ ಶ್ರೀಮಾನ್ ಎ. ಜಿ. ಬಂದೀಗೌಡರೂ ಮತ್ತು ಎಚ್. ಕೆ. ವೀರಣ್ಣಗೌಡರೂ ಉತ್ತರ ಕೊಟ್ಟಿದ್ದಾರೆ. ನಾನು ಇಷ್ಟು ಮಾತ್ರ ಹೇಳಬಲ್ಲೆ. ಕೃಷ್ಣರಾಜಸಾಗರ ದೇಶದ ಸ್ವತ್ತು. ಅದರ ಪ್ರತ್ಯಕ್ಷ ಮತ್ತು ಅಪರೋಕ್ಷ ಲಾಭವನ್ನು ಸರಿಯಾಗಿ ಅಂದಾಜು ಮಾಡುವುದು ಕಷ್ಟ. ನಮ್ಮ ದೇಶದಲ್ಲಿ ಇವತ್ತು ಸಕ್ಕರೆಗೆ ಅಭಾವವಿಲ್ಲವೆಂದರೆ ಅದು ಕೃಷ್ಣರಾಜಸಾಗರ ಪ್ರಭಾವ ಎಂದು ಹೇಳಬಹುದು. ಆ ಪ್ರದೇಶದಲ್ಲಿ ರೈತರ ಆರ್ಥಿಕ ಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಶ್ರೀಮಾನ್ ವೀರಣ್ಣಗೌಡರು ಹೇಳಿದರು. ರೈತರಿಗೆ ಸರಿಯಾದ ಪಟ್ಟೆ ವಗ್ಯೆರೆ ಒದಗಿಸತಕ್ಕ ಏರ್ಪಾಡು ಮಾಡಿದ್ದರೆ, ಈಗಿರತಕ್ಕ ಅನೇಕ ಲೋಪದೋಷಗಳು ಇರುತ್ತಾ ಇರಲಿಲ್ಲ. ಅದಕ್ಕಾಗಿ ಈಗಿನ ಸರ್ಕಾರದವರನ್ನು ಆರೋಪಿಸುವುದರಿಂದ ಪ್ರಯೋಜನವಿಲ್ಲ. ಇದು 1931-32 ರಿಂದಲೇ ಪ್ರಾರಂಭವಾಗಿದೆ. ಮೂರು ನಾಲ್ಕು ತಿಂಗಳ ಹಿಂದೆ ಒಂದು ಸಮಿತಿ ಆಗಿ ಏರ್ಪಾಡಾಗಿತ್ತು. ರೈತರ ಮುಖಂಡರನ್ನೆಲ್ಲಾ ಕರೆಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು, ಟೆಕ್ನಿಕಲ್ ಆಫೀಸರ ಅಭಿಪ್ರಾಯವನ್ನೂ ತೆಗೆದುಕೊಂಡು, ಯಾವ ಪ್ರದೇಶದಲ್ಲಿ ಕಬ್ಬು ಬೆಳೆಯಬೇಕು, ಯಾವ ಪ್ರದೇಶದಲ್ಲಿ ಬತ್ತ ಬೆಳೆಯಬೇಕು, ಹೇಗೆ ನೀರಿನ ಸರಬರಾಯಿ ಮಾಡಬಹುದು, ಅದರ ಜೊತೆಗೆ ಜನರ ಆರೋಗ್ಯವನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬ ವಿಷಯಗಳ ಬಗ್ಗೆ ವೈಜ್ಞಾನಿಕ ರೀತಿಯಲ್ಲಿ ತೀರ್ಮಾನ ಮಾಡಬೇಕು. ಈ ಎಲ್ಲಾ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅದಕ್ಕೆ ಸುವ್ಯವಸ್ಥಿತವಾದ ಏರ್ಪಾಡು ಮಾಡಬೇಕೆಂದು ಸರ್ಕಾರದವರು ಮನಸ್ಸು ಮಾಡಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಅವರ ವರದಿ ಆದಷ್ಟು ಬೇಗ ಬರಲೆಂದು ಆಶಿಸುತ್ತೇನೆ. ಜನರ ಆರೋಗ್ಯಾಭಿವೃದ್ಧಿ ಹೆಚ್ಚಿಸುವುದಕ್ಕೆ ರಸ್ತೆ, ಚರಂಡಿ ರಿಪೇರಿ ಮಾಡುವುದು ಹಳ್ಳ ಕೊಳ್ಳಗಳನ್ನು ಮುಚ್ಚಿಸುವುದು, ಜೌಗು ಪ್ರದೇಶ (marshy area) ದಲ್ಲಿ pick-ups ಹಾಕುವುದು, ಷುಗರ್ ಕೇನ್ ರಿಸರ್ಚ್‌ಗೆ ಏರ್ಪಾಡು ಮಾಡುವುದು—ಇವುಗಳನ್ನೆಲ್ಲಾ ತೀರ್ಮಾನ ಮಾಡಿದ್ದಾರೆ. ಆದ್ದರಿಂದ ಇರ್ವಿನ್ ನಾಲಾ ಪ್ರದೇಶದಲ್ಲಿರುವವರು ಸಂತುಷ್ಟರಾಗಬಹುದೆಂದು ಹೇಳುತ್ತೇನೆ.

ಶ್ರೀಮಾನ್ ಟಿ. ಮಾದಯ್ಯಗೌಡರು ಒಂದು ಆಕ್ಷೇಪಣೆ ಮಾಡಿದರು, 63 ಜನ ಗ್ರ್ಯಾಜುಯೇಟ್ಸ್ ಸರ್ವೇಯರುಗಳನ್ನು ಅಸಿಸ್ಟೆಂಟ್ ಇಂಜನಿಯರುಗಳಾಗಿ ಬಡ್ತಿ ಮಾಡಲಾಯಿತು, ಅನೇಕರು 18—19 ವರ್ಷ ಸರ್ವಿಸ್ ಆದವರೂ ಇದ್ದಾರೆ, ಯಾರನ್ನೂ ನೇರವಾಗಿ ರೆಕ್ರೂಟ್

ಮಾಡಿಲ್ಲ ಎಂದು. ಶ್ರೀಮಾನ್ ಮಾದಯ್ಯಗೌಡರು ಯಾರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದರೋ ಗೊತ್ತಿಲ್ಲ. ಅವರು ಒಟ್ಟಿನಲ್ಲಿ ಅನಾವಶ್ಯಕವಾಗಿ ಕೋಪಿತರಾಗಬಾರದು ಎಂದು ಹೇಳುತ್ತೇನೆ.

ಖೋತಾ ಇರತಕ್ಕ ಆಹಾರವನ್ನು ಹೆಚ್ಚಿಸುವುದಕ್ಕೆ ಸಕಾಲದಲ್ಲಿ ಗೊಬ್ಬರವನ್ನು ಒದಗಿಸಬೇಕೆಂಬ ಉದ್ದೇಶದಿಂದ ಹಸರು ಎಲೆ ಗೊಬ್ಬರವನ್ನು ಸ್ಟಾಕ್ ಮಾಡಿದ್ದೇವೆ. ಅಲ್ಲದೆ ಬೀಜ ವಗೈರೆಗಳನ್ನು ಸಹ ಒದಗಿಸಿ ವಿಶೇಷ ರೀತಿಯಲ್ಲಿ ಪ್ರೋತ್ಸಾಹ ಮಾಡಬೇಕೆಂಬ ಯೋಚನೆ ಇದೆ. ಆದರೆ ವಿಶೇಷವಾಗಿ ಟೀಕೆಗೆ ಒಳಗಾದದ್ದು ಕಬ್ಬಿಣದ ವಿಷಯ; ನಿಜ. ಅದು ನಮ್ಮ ದೇಶದ ದೌರ್ಭಾಗ್ಯವೆಂದು ಹೇಳಬೇಕು. ಕಳೆದ ಮೇ ತಿಂಗಳಿನಿಂದ ಒಂದೇ ಸಮನಾಗಿ ಕೇಂದ್ರ ಸರ್ಕಾರದ ಮೇಲೆ ವಿಶೇಷವಾಗಿ ಒತ್ತಾಯ ಮಾಡಿದ್ದರ ಫಲವಾಗಿ ಅಂದಿನಿಂದ ಇವತ್ತಿನವರೆಗೆ ಒಂದು ಸಾವಿರ ಟನ್ ಕಬ್ಬಿಣ ಹೆಚ್ಚಾಗಿ ಒದಗಿಸಿದ್ದಾರೆ. ಸಾಮಾನ್ಯ ವರ್ತಕರಿಗೂ ನಮಗೂ ವ್ಯತ್ಯಾಸವಿದೆ. ನಮಗೆ ಅಷ್ಟು ಅಗ್ರಿಕಲ್ಚರಲ್ ಕೋಟಾ ಕೊಟ್ಟಿದ್ದಾರೆ. ಜನರಲ್ ಕೋಟಾ ಕೊಡಬೇಕಾದರೆ ಬಹಳ ಅಡ್ಡಿ ಆತಂಕ ಬಂತು. ಆದರೂ ಕೇಂದ್ರ ಸರ್ಕಾರದವರು ವಿಶಾಲವಾದ ಹೃದಯದಿಂದ ಇಲ್ಲಿಯವರೆಗೂ 3,400 ಟನ್ ಕೊಟ್ಟಿದ್ದಾರೆ. ಇನ್ನೂ ಕೊಡುತ್ತೇವೆಂದು ವಾಗ್ದಾನ ಮಾಡಿದ್ದಾರೆ. ಅವರ ರಿಲೀಸ್ ಆರ್ಡರ್ ನಮಗೆ ಬಂದದ್ದು ಫೆಬ್ರವರಿ 7 ನೇ ತಾರೀಖು. ಶ್ರೀಮಾನ್ ದಾಸಪ್ಪನವರು ಅಗಲೇ ಯಾವುದಕ್ಕೆ top-priority ಕೊಡಬೇಕು ಎಂಬುದನ್ನು ಗೊತ್ತುಮಾಡಿ, ಭದ್ರಾವತಿ ಕಬ್ಬಿಣದ ಕಾರ್ಖಾನೆಯವರಿಗೆ ಕೊಟ್ಟು, ಗಾಡಿ ಪಟ್ಟೆ, ಫ್ಲಾಟ್ಸ್ ಮುಂತಾದುವನ್ನು ಮಾಡಬೇಕೆಂದು ತಿಳಿಸಿದ್ದಾರೆ. ಈಗಾಗಲೇ ಕೆಲವು ತಾಲ್ಲೂಕುಗಳಿಗೆ ಅಲ್ಪ ಸ್ವಲ್ಪ ಹಂಚಿಕೆಯಾಗಿರಬಹುದು. ಎಲ್ಲರಿಗೂ ಸೂಕ್ತವಾದಷ್ಟು ಕೋಟಾ ಕೊಡಬೇಕೆಂದು ಮಾಡಿದ್ದೇವೆ. ಇನ್ನೂ ಹೆಚ್ಚಿಗೆ ಕೋಟಾ ಕೊಡಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹಾಕುತ್ತಿದ್ದೇವೆ. ಕಾಗದ ಬರೆದಿದ್ದೇವೆ. ಟೆಲಿಗ್ರಾಂ ಕೊಟ್ಟಿದ್ದೇವೆ, ನಾವೇ ಖುದ್ದಾಗಿ ಹೋಗಿ ನೋಡಿದ್ದೇವೆ.

ಸೂಪರ್ ಫಾಸ್‌ಫೇಟ್, ಅಮೋನಿಯಂ ಸಲ್ಫೇಟ್ ಮತ್ತು ಕಡಲೆಕಾಯಿ ಹಿಂಡಿಯನ್ನು ಎಲ್ಲಾ ತಾಲ್ಲೂಕುಗಳಲ್ಲೂ ತರೀ ವ್ಯವಸಾಯ ಇರುವ ಕಡೆ ಸ್ಟಾಕ್ ಮಾಡುತ್ತಾ ಇದ್ದೇವೆ. ಆದರೆ ರೈತರು ಅದನ್ನು ವಿಶೇಷವಾಗಿ ತೆಗೆದುಕೊಳ್ಳುವುದಿಲ್ಲ. ಕಾರಣ ಇಷ್ಟೆ. ಮೊದಲು ಸಾಲ ಕೊಡುತ್ತಿದ್ದರು. ಈಗ ಕೊಡುವುದಿಲ್ಲ. ಬಡವರಿಗೆ ಹೆಚ್ಚು ಉಪಯೋಗವಾಗುವುದಿಲ್ಲ, ಯಾರೋ ಉಪಯೋಗಿಸಿಕೊಳ್ಳುತ್ತಾರೆ. ಆದ್ದರಿಂದ ಅಸಲು ಬೆಲೆಗೆ ಮಾರಿ ಎಂದು ಕೇಂದ್ರ ಸರ್ಕಾರದವರು ಸಲಹೆ ಕೊಟ್ಟರು. ಆದರೂ ನಾವೇ ಜವಾಬ್ದಾರಿಯನ್ನು ವಹಿಸಿಕೊಂಡು ಸಾಲ ಕೊಡಬೇಕೇ ಬೇಡವೇ ಎಂಬುದನ್ನು ಯೋಚನೆ ಮಾಡುತ್ತಾ ಇದ್ದೇವೆ. ಒಂದು ಎಕರೆಗೆ ಎಷ್ಟು ಕೊಡಬೇಕೆಂಬುದು ಸರ್ಕಾರದವರ ಆಲೋಚನೆಯಲ್ಲಿದೆ. ಆದಷ್ಟು ಜಾಗ್ರತೆ ತೀರ್ಮಾನ ಮಾಡುತ್ತೇವೆ. ಉತ್ತಮವಾದ ಗೊಬ್ಬರ ಕೊಟ್ಟಿದ್ದೇವೆ. ಶಿವಮೊಗ್ಗದಲ್ಲಿ ರತ್ನಚೂಡಿ ಬತ್ತ ಆಗುತ್ತಾ ಇವೆ. ಉತ್ತಮವಾದ ಗೊಬ್ಬರ, ಬೀಜ ಇವುಗಳೆಲ್ಲವನ್ನೂ ದೊರಕಿಸಿ ಕೊಟ್ಟು ಹೆಚ್ಚು ಆಹಾರ ಬೆಳೆಯುವುದಕ್ಕೆ ಉತ್ತೇಜನ ಕೊಟ್ಟಿದ್ದೇವೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳಿದರೆ ಅದರ ಔಚಿತ್ಯವನ್ನು ಯಾರೂ ಪ್ರಶ್ನೆ ಮಾಡಬಾರದು. ಅವರು ಎಷ್ಟೆಷ್ಟು ಮಾಡಿದ್ದಾರೆ, ಅದರ ಫಲವೇನು ಎಂಬುದನ್ನೆಲ್ಲಾ ನಾನು ಗೋಪ್ಯವಾಗಿ ಹೇಳುತ್ತೇನೆ. ಆದರೆ ಅವರು ಹೇಳಿರುವುದು ಅಷ್ಟು ಸಮರ್ಪಕವಾಗಿಲ್ಲ ಮತ್ತು ಸಮಂಜಸವಾಗಿಯೂ ಇಲ್ಲ. ನಮ್ಮ ರೈತರಿಗೆ ಬೇಕಾದಷ್ಟು ಸಹಾಯ ನೀಡಲು ನಮಗೆ ಎಲ್ಲಾ technical knowledge ಇದೆ. ಅವರಿಗೆ, ಯಾವ ತರಹ ಬೀಜ ಒದಗಿಸಬೇಕು, ಯಾವಾಗ ಒದಗಿಸಬೇಕು............

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆದರೆ ಜೇಬಿನಲ್ಲಿ ದುಡ್ಡಿಲ್ಲ.

ಶ್ರೀ ಟಿ. ಮರಿಯಪ್ಪನವರು.—ನಾವೀಗ ರೈತರಿಗೆ ಬೇಕಾಗುವಂಥ ಬೀಜ, ಗೊಬ್ಬರ, ವ್ಯವಸಾಯ ಸಲಕರಣೆ ಇತ್ಯಾದಿಗಳನ್ನೆಲ್ಲಾ ಸಮಗ್ರ ಸೇವಾ ಸಂಘಗಳ ಮೂಲಕ ವಿಲೇ ಮಾಡಲು ಅವರಿಗೆ ಆ ಬಾಬುಗಳನ್ನು ವರ್ಗಾ ಮಾಡಿರುತ್ತೇವೆ. ಈ ವ್ಯವಸಾಯದ ಇಲಾಖೆಯ ಬಾಬಿನ ಅನೇಕ ವಿಷಯಗಳನ್ನು ಮದರಾಸಿಗೆ ಹೋಗಿದ್ದಾಗ ಅಲ್ಲಿಯೂ ಪ್ರಶ್ನೆ ಮಾಡಲಾಯಿತು. ಇದೇ ವಿಷಯವನ್ನು ಮಧ್ಯಪ್ರದೇಶ, ಇತ್ಯಾದಿಗಳ ಕಡೆ ಹೇಗೆ ನಡೆಯುತ್ತಿದೆಯೆಂಬುದನ್ನೇ ವಿಚಾರ ಮಾಡಲಾಗಿದೆ. ಆದರೆ ಜನರು ಇತ್ತೀಚೆಗೆ ಈ ಪೌರಪ್ರದೇಶಗಳಿಂದ, ಅಂದರೆ ನಗರಗಳನ್ನು ಬಿಟ್ಟು ಹೊರಗಡೆ ಹೋಗುತ್ತಿಲ್ಲ. ಹಳ್ಳಿಗಾಡಿನಿಂದ ಪಟ್ಟಣಕ್ಕೆ ಬಂದು ಸೇರುತ್ತಿದ್ದಾರೆ. ಇದಕ್ಕಾಗಿ ಈಗೊಂದು ಹೊಸ ಕಾನೂನನ್ನು ರಚಿಸಲಾಗುತ್ತಿದೆ. ಅದನ್ನು ತಮ್ಮ ಮುಂದೆ ತರಲಾಗುತ್ತೆ. ಶ್ರೀ ಎಚ್. ಕೆ. ವೀರಣ್ಣಗೌಡರು, ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಸರ್ಕಾರದವರ ಉದ್ದೇಶವಿರುವುದು, ಜನಗಳನ್ನು ಒಂದು ಸಹೋದರ ಭಾವದಿಂದ ಹೊಸ ಹೊಸ ಸ್ಥಳಗಳಿಗೆ ಅಂದರೆ ಅನುಕೂಲವಿರುವ ಕಡೆಗೆ ಹೋಗಿ ನೆಲಸುವಂತೆ ಮಾಡಬೇಕೆಂದಿದೆ. ಇದರ ಬಗ್ಗೆ ಈಗಾಗಲೇ ಕಾರ್ಯಕ್ರಮವನ್ನು ಕೈಗೊಂಡಿದೆ.

ಇನ್ನು ಈ ಕೋ-ಆಪರೇಟಿವ್ ಫಾರಂಗಳ ವಿಚಾರವಾಗಿ ಕೆಲವರು ಪ್ರಸ್ತಾಪಮಾಡಿದ್ದಾರೆ. ನಿಜ. ಅದಕ್ಕೆ ಆಗುವ ಖರ್ಚನ್ನು ನಾವು ಮಾಡುವುದಕ್ಕಾಗುವುದಿಲ್ಲ. ಆದರೆ ಇದು ಕೇಂದ್ರದಲ್ಲೇನೋ ಒಂದು ಅನುಕೂಲ ವಾತಾವರಣ ಇದ್ದದ್ದರಿಂದ, ಅಲ್ಲಿ ಅನೇಕ ರೆಫ್ಯೂಜಿಗಳು ಬಂದಿದ್ದರಿಂದ, ಅನುಕೂಲವಾಗಿ ನಡೆಯಿತು. ಅಲ್ಲಿ ಅವರು ನಿರೀಕ್ಷಿಸಿದ್ದ ಮಟ್ಟಕ್ಕೆ ಸರಿಯಾಗಿ ಕೆಲಸ ನಡೆದಿದೆ. ಆದರೆ ನಮ್ಮಲ್ಲಿ ಸ್ವಲ್ಪ ಕಷ್ಟವಿದೆ. ಇಲ್ಲಿ ಈಗ ಯಾರಿಗೆ ಜಮೀನಿಲ್ಲವೋ ಅವರು ಕಾತುರರಾಗಿದ್ದಾರೆ. ಮುಂದಕ್ಕೆ ಅವರಿಗೆ ಆದಷ್ಟು ಸಹಾಯ ಮಾಡಬಹುದು. ಕೆಲವು ಕಡೆ ಅಮೃತಮಹಲ್ ಕಾವಲುಗಳಲ್ಲಿ ಅವರಿಗೆ ತಲಾ 4 ಎಕರೆಗಳಂತೆ ಜಮೀನು ಕೊಟ್ಟು ಅಲ್ಲಿ ವ್ಯವಸಾಯ ಮಾಡಿಕೊಂಡು ಹೋಗಲು ಅನುಕೂಲಪಡಿಸಲು ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಅಲ್ಲಲ್ಲೆ ಒಂದೆರಡು ಇಂಥಾ ನಿದರ್ಶನಗಳು ಫಲಪ್ರದವಾಗಿ ನಡೆಯುತ್ತಿರುವುದು ಕಂಡುಬಂದರೆ ಸರ್ಕಾರದವರು ಈ ಬಾಬಿಗೆ ಎಷ್ಟು ಹಣ ಬೇಕಾದರೂ ಖರ್ಚು ಮಾಡಲು ಸಿದ್ಧವಾಗಿದ್ದಾರೆ. ಆದರೆ ನಮ್ಮಲ್ಲಿರುವ ಹಳ್ಳಿಜನಗಳನ್ನು ಒಂದುಗೂಡಿಸಿ ಕೆಲಸ ಮಾಡುವುದು ಬಹಳ ಕಷ್ಟ. ಆದರೆ ಈ ಬಗ್ಗೆ ಅನೇಕರು ಪ್ರತಿಭಟಿಸಲೂ ಬಹುದು. ಕಾರಣ ಅವರು ತಮ್ಮ ಹಕ್ಕುಬಾಧ್ಯತೆಗಳನ್ನು ಅಷ್ಟು ಬೇಗ ಬಿಟ್ಟುಕೊಡಲು ಅವರು ಒಪ್ಪುವುದಿಲ್ಲ. ಈ ಬಾಬಿನಲ್ಲಿ ಈಗಾಗಲೇ ಬೆಳಗುಂಬವೆಂಬ ಗ್ರಾಮದಲ್ಲಿ ಶ್ರೀಮಾನ್ ನಾರಾಣಪ್ಪನೆಂಬುವರು ಈ ಸಹಕಾರ ವ್ಯವಸಾಯ ಪದ್ಧತಿಯನ್ನು ಜಾರಿಗೆ ತಂದು

ಅದರಂತೆ ಕೆಲಸ ನಡೆಸುತ್ತಿದ್ದಾರೆ. ಈ ವಿಚಾರವಾಗಿ ನಾವು ಅವರ ಅಭಿಪ್ರಾಯವನ್ನೂ ಸಹ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಹೆಚ್ಚು ಹೇಳುವುದು ಇನ್ನು ಅನಾವಶ್ಯಕ.

ಇನ್ನು ಆಖೈರಾಗಿ ಗ್ರಾಮಾಭಿವೃದ್ಧಿಯ ವಿಷಯವಾಗಿ ಶ್ರೀಮಾನ್ ಎಚ್. ಬಿ. ಗುಂಡಪ್ಪಗೌಡರೂ ಮತ್ತು ಶ್ರೀಮಾನ್ ಎರ್. ಸಿದ್ದಪ್ಪನವರೂ ಕೆಲವು ಆಕ್ಷೇಪಣೆಗಳನ್ನೆತ್ತಿದ್ದಾರೆ. ಇದು 1936ರಲ್ಲಿ 'ಮಾದರಿ' ಗ್ರಾಮ ಎಂಬುದಾಗಿ ಪ್ರಾರಂಭವಾಯಿತು. ಕೆಲವು ಕಡೆ ಗ್ರಾಮಗಳನ್ನು ಸುಂದರವನ್ನಾಗಿ ಮಾಡಲಾಯಿತು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದಕ್ಕೂ ಸಹ ನಾನೇ ಜವಾಬ್ದಾರ.

ಶ್ರೀ ಟಿ. ಮರಿಯಪ್ಪನವರು.—ನಿಜ ಆದರೆ ಅದರಿಂದ ಪ್ರತಿಫಲ ನಿರೀಕ್ಷಿಸಿದಷ್ಟು ಮಾತ್ರ ಬರಲಿಲ್ಲ. ಖಾಸಗೀ ಜನರು ತಮ್ಮ ನೀತಿಯನ್ನು ಅನುಸರಿಸಲಿಲ್ಲ. ಅದನ್ನು ಕ್ರಮವಾಗಿ ಜಾರಿ ಮಾಡಬೇಕಾಗಿತ್ತು.

Janab J. MAHOMED IMAM.—I rise to a point of order. In reply to Budget Discussion only such important features as would satisfy the Members must be covered by the concerned Ministers but what we are now having is a big speech......... ...

Mr. SPEAKER.—It is not a point of order.

Sri K. CHENGALARAYA REDDY.—He is making a big point of order!

ಶ್ರೀ ಟಿ. ಮರಿಯಪ್ಪನವರು.—ನಮ್ಮ ಮುಖ್ಯ ಉದ್ದೇಶ ಗ್ರಾಮಾಭಿವೃದ್ಧಿ ಪುನರುಜ್ಜೀವನ ಮತ್ತು ಜನರಲ್ಲಿ ಒಂದು ನವಚೈತನ್ಯವನ್ನು ಹುಟ್ಟಿಸುವ ಸನ್ನಿವೇಶಗಳ ಮೂಲಕ ಅವರನ್ನು ಮುಂದಕ್ಕೆ ಬರುವಂತೆ ಮಾಡಬೇಕೆಂಬುದು. ಖಾಸಗಿ ಜನರ ಮೇಲೆ ನಾವು ದೋಷಾರೋಪಣೆ ಮಾಡುವುದಕ್ಕಾಗುವುದಿಲ್ಲ. ರಸ್ತೆ, ಚರಂಡಿ, ಬಾವಿ, ಗ್ರಾಮಕ್ಕೆ ಮುಖ್ಯವಾದ ಕೈಗಾರಿಕೆ ವ್ಯವಸಾಯದ ಮುಟ್ಟು ಇತ್ಯಾದಿಗಳನ್ನು ಈ ಸಮಗ್ರ ಸೇವಾ ಸಂಘಗಳ ಮೂಲಕ ಏರ್ಪಡಿಸಿಕೊಳ್ಳಲು ಅನುಕೂಲವಾಗುವಂತೆ ಮಾಡಲಾಗಿದೆ. ಈ ಸೊಸೈಟಿಗಳ ಸ್ಥಾಪನೆಯಾಗಿ ಕೇವಲ 5–6 ತಿಂಗಳುಗಳೊಳಗಾಗಿ 25 ಲಕ್ಷ ರೂಪಾಯಿಗಳು ವಸೂಲಾಗಿದೆ. ಇನ್ನು ಮುಂದಕ್ಕೆ ರೈತರಿಗೆ ಸಿಕ್ಕಬೇಕಾದ ಪ್ರತಿಯೊಂದು ವಸ್ತುವನ್ನೂ ಈ ಮೂಲಕವೇ ಅವರಿಗೆ ವಿಲೇವಾರಿಯಾಗುವಂತೆ ಮಾಡಲಾಗುತ್ತಿದೆ. ಈ ಬಗ್ಗೆ ರೈತರೂ ಸಾರ್ವಜನಿಕರೂ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ನಾನು ಇನ್ನು ವಿಚಾರಗಳನ್ನು ಲಂಬಿಸಿ ಹೇಳಲು ಕಾಲಾವಕಾಶವಿಲ್ಲ. ಆದ್ದರಿಂದ ರಚನಾತ್ಮಕ ಟೀಕೆಗಳನ್ನೆಲ್ಲಾ ಸ್ವಾಗತಿಸುತ್ತಾ ಆ ಬಗ್ಗೆ ಏನೇನು ಕಾರ್ಯಾಚರಣೆಯನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಕೈಗೊಳ್ಳಲಾಗುತ್ತದೆಂಬ ಭರವಸೆಯನ್ನು ನೀಡಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಜನಾಬ್ ಜೆ. ಮಹಮದ್ ಇಮಾಂರವರು.—ಅಧ್ಯಕ್ಷರೇ ನಾನೊಂದು ವಿಷಯವನ್ನು ತಿಳಿದುಕೊಳ್ಳಬೇಕಾಗಿದೆ. ಈಗ ಮಾತನಾಡಬೇಕಾದ ಮಂತ್ರಿಗಳು ಇನ್ನು ನಾಲ್ಕು ಜನರಿದ್ದಾರೆ. ಇನ್ನು 3 ಘಂಟೆ ಕಾಲ ಆಗಬಹುದು.

For example, in fairness to the Hon'ble the Finance Minister, we must give him at least an hour, and the Hon'ble Chief Minister also may want an hour.

ರಾತ್ರಿ ಹತ್ತು ಘಂಟೆಗಳವರೆಗೂ ಆಗುತ್ತದೆಂದು ಕಾಣುತ್ತದೆ. ಇದನ್ನು ನಾಳೆಗೆ ಬೇಕಾದರೆ ಮುಂದುವರಿಸಬಹುದು. ಅಥವಾ ಈ ದಿವಸ ಮುಗಿಸುವುದಾದರೆ ಎಷ್ಟು ಹೊತ್ತು ತೆಗೆದುಕೊಳ್ಳುತ್ತಾರೋ ತಿಳಿಯದಾಗಿದೆ. We can meet to-morrow.

Sri H. K. VEERANNA GOWDA.—We will sit up till the day is out.

Sri K. CHENGALARAYA REDDY.—The Hon'ble Member took one hour for his budget speech. He has forgotten it already.

Janab J. MAHOMED IMAM.—I am willing to give one full day to you.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಾನು ಮೊದಲೇ ಹೇಳಿದ್ದೆ. Then when shall we close the meeting?

*ಶ್ರೀ ಎಚ್. ಸಿದ್ದಯ್ಯನವರು (ರೆವಿನ್ಯೂ ಮತ್ತು ಆಬ್ಕಾರಿ ಸಚಿವರು).—ಅಧ್ಯಕ್ಷರೇ, ನಾನು ನಿರ್ವಹಿಸುತ್ತಿರುವ ಹಲವಾರು ಬಾಬುಗಳ ಮೇಲೆ ದೀರ್ಘವಾದ ಭಾಷಣವನ್ನು ಮಾಡುವುದಕ್ಕೆ ನಿಜವಾಗಿಯೂ ಉದ್ಯುಕ್ತನಾಗುವುದಿಲ್ಲ. ಈಗಾಗಲೇ ವೇಳೆಯಾಗಿ ಹೋಗಿದೆ.

ನನಗೆ ಸಂಬಂಧಪಟ್ಟ ಇಲಾಖೆಗಳ ವಿಷಯವಾಗಿ ಮಾನ್ಯ ಸದಸ್ಯರಾರೂ ಅಷ್ಟು ತೀಕ್ಷ್ಣವಾದ ಟೀಕೆಗಳನ್ನು ಮಾಡಿರುವುದಿಲ್ಲ. ಆ ಬಗ್ಗೆ ನಿಜವಾಗಿಯೂ ನಾನು ಅವರಿಗೆ ಆಭಾರಿಯಾಗಿದ್ದೇನೆ. ಕೆಲವು ಸದಸ್ಯರು ನಿಜವಾಗಿಯೂ ಉತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ಅವರನ್ನು ನಾನು ವಂದಿಸುತ್ತೇನೆ.

ಮೊದಲನೆಯದಾಗಿ ಪಬ್ಲಿಕ್ ಸರ್ವಿಸ್ ಕಮಿಷನ್ ರಚನೆಯ ಬಗ್ಗೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರೂ ಮತ್ತು ಶ್ರೀಮಾನ್ ಎಂ. ಎನ್. ಜೋಯಿಸರೂ, ಶ್ರೀಮಾನ್ ಎಂ. ಮಾದಯ್ಯನವರೂ ಕೆಲವು ವಿಚಾರಗಳ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಿದ್ದಾರೆ. ನಿಜ. ಆದರೆ ಹಲವಾರು ಕಾರಣಗಳಿಂದ ಇದು ಕೊಂಚ ನಿಧಾನವಾಗಿರುತ್ತೆ. ಈ ಕಮಿಷನ್ ರಚನೆ, ಅದರ ಕರ್ತವ್ಯ ಮತ್ತು ಅದಕ್ಕಿರಬೇಕಾದ ಅಧಿಕಾರ ಮತ್ತು ಜವಾಬ್ದಾರಿ, ಇತ್ಯಾದಿ ವಿಚಾರಗಳನ್ನೊಳಗೊಂಡು ನಾವು ಈಗ ಪರಿಶೀಲನೆ ಮಾಡಬೇಕಾಗಿದೆ ಮತ್ತು ಇದನ್ನು 1951 ರೊಳಗಾಗಿ ಏರ್ಪಡಿಸಬೇಕೆಂಬುದಾಗಿ ರಾಜಪ್ರಮುಖ್ ಶ್ರೀಮಾನ್ ಮಹಾರಾಜರವರು 16–2–1950 ರಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಇದನ್ನು ನಾವು ಈಗ ನಮ್ಮ ನೂತನ ರಾಜ್ಯಾಂಗ ವಿಧಿಯ ಪ್ರಕಾರ ರಚನೆ ಮಾಡಬೇಕಾಗಿರುತ್ತೆ. ಈ ಸ್ಥಳೀಯ ವಿದ್ಯಮಾನಗಳ ವಿಚಾರದಲ್ಲಿಯೂ ಕೊಂಚ ತೊಂದರೆಯಿದೆ. ಈ ರೀತಿ ಅನೇಕ ಪ್ರಬಲ ಕಾರಣಗಳಿದ್ದುದರಿಂದ ಈ ವಿಚಾರದಲ್ಲಿ ಕೊಂಚ ಸಾವಕಾಶವಾಯಿತೆಂದು ತಿಳಿಸಿದರೆ ಸಾಕಾಗಿದೆ.

ಆ ಮೇಲೆ ಇಲ್ಲಿಯವರೆಗೂ ನಡೆದುಕೊಂಡು ಬಂದ ರಿಕ್ರೂಟ್‌ಮೆಂಟ್ ವಿಧಾನದ ವಿಚಾರದಲ್ಲಿ ಶ್ರೀಮಾನ್ ಮಾದಯ್ಯನವರೂ ಮತ್ತು ಇನ್ನು ಕೆಲವು ಸದಸ್ಯರೂ ಕೊಂಚ ಆಕ್ಷೇಪಕರವಾದ ಕೊಂಚ ಅವರ ಹಕ್ಕುಬಾಧ್ಯತೆ

ಗಳಿಗೆ ಸಂಬಂಧಪಟ್ಟ ವಿಚಾರವನ್ನು ಪ್ರಸ್ತಾಪಿಸಿ ಮಾತನಾಡಿದ್ದಾರೆ. ಈಗ ಶೀಘ್ರದಲ್ಲೇ ಪಬ್ಲಿಕ್ ಸರ್ವಿಸ್ ಕಮಿಷನ್ನು ರಚನೆಯಾಗುವ ಸಂಭವವಿರುವುದರಿಂದ ಈ ವಿಚಾರವನ್ನು ನಾನು ವಿಸ್ತರಿಸಿ ಹೇಳುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು, Appointments and Promotions ವಿಚಾರ ಪ್ರಸ್ತಾಪಿಸಿ, ಸರ್ವಿಸ್ಸಿನಲ್ಲಿರತಕ್ಕ ಪ್ರಾತಿನಿಧ್ಯವನ್ನೂ ಗಮನಿಸಬೇಕಾಗಿದೆಯೆಂದು ಹೇಳಿ over-representation, under-representation, adequately represented ಮತ್ತು unrepresented ಇತ್ಯಾದಿ ಕೆಲವು ಶಬ್ದಗಳನ್ನು ಹೇಳಿದರು. ಇದನ್ನೂ ನಾವು ಗಮನದಲ್ಲಿಡಬೇಕು ಮತ್ತು ಪ್ರತಿಯೊಂದು ಕೋಮಿನ ವಿದ್ಯಾಮಟ್ಟವನ್ನೂ ಗಮನದಲ್ಲಿಡಬೇಕು. ಇವೆರಡನ್ನೂ ಗಮನದಲ್ಲಿಟ್ಟುಕೊಂಡು, ಪಬ್ಲಿಕ್ ಸರ್ವಿಸ್ ಕಮಿಷನರವರ ಸಲಹೆಗಳನ್ನೂ ತೆಗೆದುಕೊಂಡು, ಸಧ್ಯದಲ್ಲೆ ಸೂಕ್ತ ಏರ್ಪಾಡುಗಳನ್ನು ಮಾಡುವವರಾಗಿದ್ದೇವೆಂದು ಹೇಳುತ್ತೇನೆ.

ಶ್ರೀಮಾನ್ ಹುಚ್ಚೇಗೌಡರು ಒಂದು ವಿಚಾರವನ್ನು ನನ್ನ ಗಮನಕ್ಕೆ ತಂದರು. ಅವಷ್ಟು ನನಗೆ ಸಂಬಂಧಪಟ್ಟದ್ದೆಂದೇ ಹೇಳುವುದಿಲ್ಲ. ಏನೆಂದರೆ, ಮೋಟಾರುಗಳು, ಕಾರುಗಳು, ಟ್ಯಾಕ್ಸಿಗಳು ಇತ್ಯಾದಿ ವಾಹನಗಳ ಮೇಲೆ ನಾನಾ ರೂಪದಲ್ಲಿ ತೆರಿಗೆಗಳನ್ನು ಲಕ್ಷಾಂತರಗಟ್ಟಲೆ ವಸೂಲು ಮಾಡಿಕೊಂಡು ಸಂಚಾರ ಸೌಕರ್ಯಗಳನ್ನು ಮಾತ್ರ ಒದಗಿಸುವುದರಲ್ಲಿ ಹಣವನ್ನು ಸರಿಯಾಗಿ ಉಪಯೋಗಿಸುವುದಿಲ್ಲವೆಂದು ಅವರು ಹೇಳಿದರು. ಒಂದಂಶವನ್ನು ಅವರ ಗಮನಕ್ಕೆ ತರುತ್ತೇನೆ. ಅವರು ಹೇಳಿದಂತೆ ಈ ಮೋಟಾರು ವಾಹನಗಳ ಮೇಲೆ ಬರತಕ್ಕ ಎಲ್ಲಾ ತೆರಿಗೆಗಳನ್ನು ಸೇರಿಸಿ ಲೆಕ್ಕ ಹಾಕಿದರೂ ಕಳೆದ 9 ತಿಂಗಳಿನಲ್ಲಿ ವಸೂಲಾಗಿರತಕ್ಕ ಹಣವೆಲ್ಲಾ 21 ಲಕ್ಷ ರೂಪಾಯಿಗಳು ಮಾತ್ರ. ಹಾಗಿದ್ದರೂ ರಸ್ತೆಗಳು ಮತ್ತು ಸೇತುವೆಗಳಿಗಾಗಿ ಮತ್ತು ರಸ್ತೆಗಳ ಸ್ಪೆಷಲ್ ರಿಪೇರಿಗಳಿಗಾಗಿ, ಅಂದರೆ ಒಟ್ಟಿನಲ್ಲಿ ಸಂಚಾರ ಸೌಕರ್ಯಗಳಿಗಾಗಿ ಬಡ್ಜೆಟ್ಟಿನಲ್ಲಿ ಒದಗಿಸಿರುವುದು 50 ಲಕ್ಷ 57 ಸಾವಿರ ರೂಪಾಯಿಗಳು. ಅಂದ ಮೇಲೆ, ಕೇವಲ 20 ಲಕ್ಷ ರೂಪಾಯಿಗಳು ಈ ಮೋಟಾರು ವಾಹನಗಳ ಕಡೆಯಿಂದ ವಸೂಲಾಗುತ್ತಿದ್ದರೂ ಅದಕ್ಕೆ ಎರಡರಷ್ಟನ್ನು ಈ ಬಗ್ಗೆ ಉಪಯೋಗಿಸುತ್ತಿದ್ದೇವೆಂಬ ಅಂಶವನ್ನು ಸದಸ್ಯರು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ.

ರೆವೆನ್ಯೂ ಇಲಾಖೆಗೆ ಸಂಬಂಧಪಟ್ಟ ವಿಚಾರವನ್ನು ಹೇಳುವಾಗ ಹಿಂದಿನ ಶಾಸನ ಸಭೆಗಳಲ್ಲಿ ಯಾವ ರೀತಿಯಾದ ಟೀಕೆಗಳು ಬರುತ್ತಿದ್ದುವೋ ಅಂಥವಾವುವೂ ಬಂದಿಲ್ಲದಿರುವುದನ್ನು ನೋಡಿದರೆ ಆಡಳಿತ ಒಂದು ವಿಧದಲ್ಲಿ ತೃಪ್ತಿಕರವಾಗಿದೆಯೆಂದು ಅರ್ಥವಾಗುತ್ತದೆ. ಅದಕ್ಕಾಗಿ ನಾನು ಸದಸ್ಯರಿಗೆ ಆಭಾರಿಯಾಗಿದ್ದೇನೆ.

ಒಬ್ಬ ಸದಸ್ಯರು.— ಇನ್ನೂ ಖೊತಾ ಸೂಚನೆಗಳಿವೆ!!

ಶ್ರೀ ಎಚ್. ಸಿದ್ದಯ್ಯನವರು.— ಮುಂದಿನದನ್ನು ನೋಡೋಣ. ಇಲ್ಲಿಯವರೆಗೂ ಆಗಿರತಕ್ಕ ಭಾಷಣಗಳಿಂದ ಅಷ್ಟುಮಟ್ಟಿಗೆ ತೃಪ್ತಿಕರವಾಗಿದೆಯೆಂದು ನಾನು ಭಾವಿಸುತ್ತೇನೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರೂ ಮತ್ತು ಶ್ರೀಮಾನ್ ವೀರಣ್ಣಗೌಡರೂ ಭೂಗಂದಾಯದ ಕಮಿಟಿಯ ವರದಿ ಬಂದ ತಕ್ಷಣ ಬೇಗನೆ ಅದನ್ನು ಪರಿಶೀಲನೆ ಮಾಡಿ ಅವರ ಶಿಫಾರಸ್ಸುಗಳನ್ನು ಬಹಳಮಟ್ಟಿಗೆ ಅಂಗೀಕರಿಸಿ ಜಮೀನ್ದಾರರ ಅದರಲ್ಲೂ ರೈತರ ಹಿತದೃಷ್ಟಿಯಿಂದ ಬೇಗನೆ ಹುಕುಂ ಮಾಡುವುದು ಅವಶ್ಯಕವೆಂಬ ಅರ್ಥದಲ್ಲಿ ಸೂಚನೆ ಕೊಟ್ಟಿದ್ದಾರೆ. ಸರ್ಕಾರದವರು ಅವರ ವರದಿ ಬಂದ ತಕ್ಷಣ ಆ ಕೆಲಸವನ್ನು ನೆರವೇರಿಸುತ್ತಾರೆಂಬ ಭರವಸೆಯನ್ನು ಕೊಡುತ್ತೇನೆಂದು ಹೇಳುತ್ತೇನೆ.

ಶ್ರೀ ಗೋವಿಂದದಾಸ್‌ರವರು ತೋಟಿ ತಳವಾರರ ವಿಚಾರ ಹೇಳಿದರು. ಮಿರಾಸೆಗೆ ಬದಲಾಗಿ ಸಂಬಳವನ್ನು ನಿಷ್ಕರ್ಷೆ ಮಾಡಿಕೊಡಬೇಕೆಂದು ಸೂಚಿಸಿದರು. ಈ ವಿಚಾರದಲ್ಲಿ ಇಷ್ಟು ಹೇಳುತ್ತೇನೆ. ಪ್ರತಿಯೊಂದು ಅಧಿವೇಶನದಲ್ಲಿ ಬಂದಿರುವ ವಿಷಯಗಳನ್ನೂ ನೋಡಿದರೆ, ಅಲ್ಲಿ ಯಾವಾಗಲೂ ಈ ವಿಚಾರದಲ್ಲಿ ಒಂದು ಪ್ರಶ್ನೆಯಿದ್ದೇ ಇರುತ್ತದೆ. ಆದರೆ ಇದಕ್ಕಾಗುವ ಹಣಕಾಸಿನ ವೆಚ್ಚವೆಷ್ಟೆಂಬುದನ್ನು ನೋಡಿದರೆ, ಒಬ್ಬೊಬ್ಬರಿಗೆ 10 ರೂಪಾಯಿ ಸಂಬಳವೆಂದಿಟ್ಟುಕೊಂಡರೂ, ಒಟ್ಟು ಇವರಿಗೆ ಸಂಬಳಕ್ಕಾಗಿ 30 ಲಕ್ಷ ರೂಪಾಯಿಯಾಗುತ್ತದೆ. ನಮ್ಮ ದೇಶದ ಈಗಿನ ಆರ್ಥಿಕ ಸ್ಥಿತಿಯಲ್ಲಿ ಇದು ಸಾಧ್ಯವೇ ಎಂಬುದನ್ನು ಮಾನ್ಯಸದಸ್ಯರೇ ಯೋಚನೆ ಮಾಡಲೆಂದು ಹೇಳುತ್ತೇನೆ.

ಒಬ್ಬ ಸದಸ್ಯರು.—ಲ್ಯಾಂಡ್ ರೆವೆನ್ಯೂ ಕಮಿಟಿಯ ಮುಂದೆ ಈ ಪ್ರಶ್ನೆಯೂ ಇದೆ.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇದಕ್ಕೆ ತಗಲುವ ಹಣಕಾಸಿನ ದೃಷ್ಟಿಯನ್ನು ಗಮನಕ್ಕೆ ತಂದುಕೊಂಡು ಲೆಕ್ಕಚಾರ ಹಾಕಿದರೆ ಅನುಕೂಲವಾಗುತ್ತದೆ.

ಶ್ರೀ ಎಚ್. ಸಿದ್ದಯ್ಯನವರು.—ವಿಶ್ವೇಶ್ವರಯ್ಯ ನಾಲಾ ಕೆಳಗಿನ ಜಮೀನುಗಳ ವಿಚಾರವನ್ನು ಹೆಚ್ಚಾಗಿ ವಿಸ್ತರಿಸಿ ಹೇಳಲಿಚ್ಛಪಡುವುದಿಲ್ಲ. ಏಕೆಂದರೆ ಅದಕ್ಕೆ ಬೇರೆ ಸಂದರ್ಭ ಬರುತ್ತದೆ. ಶ್ರೀಮಾನ್ ವೀರಣ್ಣಗೌಡರು ಮತ್ತು ಶ್ರೀಮಾನ್ ಬಂದೀಗೌಡರು, ಅಲ್ಲಿ ಖಾತೇದಾರರುಗಳಾರಿಗೂ ಈವರೆಗೂ ಬಹಳ ಕಾಲದಿಂದಲೂ ಪಟ್ಟೆ ಕೊಟ್ಟಿಲ್ಲವೆಂದು ಹೇಳಿದರು. ನಾನದನ್ನು ಖಂಡಿತ ಒಪ್ಪುವುದಿಲ್ಲ.

ಶ್ರೀ ಎ. ಜಿ. ಬಂದೀಗೌಡರು.—ಬೇರೆಕಡೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದಯ್ಯನವರು.—ಎಲ್ಲಿಯೂ ಒಪ್ಪುವುದಿಲ್ಲ. ಆದರೂ ಅದು ಕೇವಲ ನಿರಾಧಾರವಾದದ್ದೆಂದು ನಾನು ಹೇಳಲಾರೆ, ಬಹಳಮಟ್ಟಿಗೆ ಉತ್ಪ್ರೇಕ್ಷೆಯಿಂದ ಕೂಡಿದ್ದೆಂದು ಹೇಳದೇ ವಿಧಿಯಿಲ್ಲ. ಏಕೆಂದರೆ ಕಳೆದ ಅಧಿವೇಶನದಲ್ಲಿ ಕೊಟ್ಟಿರುವ ಉತ್ತರದ ಪ್ರಕಾರ ಅಲ್ಲಿರತಕ್ಕ ಹಿಡುವಳಿದಾರರುಗಳ ಪೈಕಿ 19,800 ಜನರಿಗೆ ಪಟ್ಟೆಗಳನ್ನು ಒದಗಿಸಲಾಗಿದೆಯೆಂದು ತಿಳಿಸಿದ್ದೇನೆ. ಒಟ್ಟಿನಲ್ಲಿ ಸ್ವಲ್ಪಮಟ್ಟಿಗೆ ನಿಧಾನವಾಗಿದೆಯೆಂಬ ಅಂಶವನ್ನು ಒಪ್ಪುತ್ತೇನೆ. ನಾನಾ ಅಂಶಗಳನ್ನು ನೋಡಿ ಒಂದು ತೀರ್ಮಾನಕ್ಕೆ ಬರಬೇಕಾದ ಪ್ರಸಂಗ ಒದಗಿದೆಯೆಂದು ಹೇಳುತ್ತೇನೆ. ಆದರೆ 1932-33ನೇ ಇಸವಿಯಿಂದ ಈವರೆಗೂ ಬಾಕಿ ಕೊಡಬೇಕೆಂದು ಕೇಳಿದರೆ ಯಾರಿಗಾದರೂ ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ವಸೂಲಿ ಕಾರ್ಯಕ್ರಮ ಸ್ವಲ್ಪ ನಿಧಾನವಾಗಿ ನಡೆಯುತ್ತಿದೆ. ಆದರೂ ಈಚೆಗೆ ನಾಲ್ಕಾರು ವರ್ಷದಿಂದ ಒಂದು ರೀತಿಯಲ್ಲಿ ಹೆಚ್ಚಿನ ತೀವ್ರತೆಯಿಂದ ಕೆಲಸ ನಡೆಸುತ್ತಿದೆಯೆಂದು ಹೇಳಿದರೆ ಸಾಕೆಂದು ಕಾಣುತ್ತದೆ.

ಶ್ರೀಮಾನ್ ಹನುಮಯ್ಯನವರೂ ಮತ್ತು ಇನ್ನೂ ಕೆಲವರೂ ನಿಮ್ನ ತರಗತಿಯುವರಿಗೆ ಯಥೇಚ್ಛವಾಗಿ ಜಮೀನುಗಳನ್ನು ಕೊಡುವುದಿಲ್ಲವೆಂದು ಆಕ್ಷೇಪಣೆ ಮಾಡಿದರು. ಕೆಲವರು ಏನೂ ಕೊಡುವುದಿಲ್ಲವೆಂದೂ, ಕೆಲವು ಸದಸ್ಯರು ಕೊಡುವುದು ಬಹಳ ನಿಧಾನವೆಂದೂ ಹೇಳಿದರು. ಇದರಲ್ಲೂ ಸ್ವಲ್ಪಮಟ್ಟಿಗೆ ನಿಜಾಂಶವಿದೆ. ಕೊಟ್ಟಿದ್ದನ್ನು ಅವರು ಒಪ್ಪಿಕೊಳ್ಳದೆ ಹೋದರೆ, ಅವರು

ಯಾವ ಸಮಾಜದ ಹಿತದೃಷ್ಟಿಯಿಂದ ಮಾತನಾಡುತ್ತಿದ್ದಾರೋ ಅವರ ಹಿತದೃಷ್ಟಿಯಿಂದಲೇ ಅದು ಯುಕ್ತವೇ ಎಂಬುದನ್ನೂ ನಾವು ಸ್ವಲ್ಪ ಯೋಚನೆ ಮಾಡಬೇಕು. ಇರುವ ಅಲ್ಪಸ್ವಲ್ಪ ಗೋಮಾಳದಲ್ಲಿ ಜಮೀನು ಕೇಳಿದರೆ ಅದನ್ನು ಕೊಟ್ಟರೆ, ಸ್ಥಳದವರ ದೃಷ್ಟಿಯಿಂದ ಇದರ ಸೂಕ್ತಾಸೂಕ್ತತೆಯನ್ನೂ ಯೋಚನೆ ಮಾಡಬೇಕು. ಎರಡನೆಯದಾಗಿ, ನಾನವರಿಗೆ ಒತ್ತಿ ಹೇಳಬೇಕಾದ ಒಂದಂಶವೇನೆಂದರೆ ಹಾಲಿ ಮಲೆನಾಡು ಪ್ರಾಂತ್ಯಗಳಲ್ಲಿ ಬೇಕಾದಷ್ಟು ಫಲವತ್ತಾದ ಜಮೀನಿದೆ, ಅಲ್ಲಿಗೆ ಬನ್ನಿ ಎಂದು ಕರೆದರೂ ಅವರು ಬರುವುದಿಲ್ಲ. ಎಲ್ಲಿ ವಾಸವಾಗಿರುತ್ತಾರೋ ಅಲ್ಲಿಯೇ ಇನ್ನೊಬ್ಬರ ಜಮೀನನ್ನು ಕಿತ್ತು ಕೊಡಬೇಕೆಂದು ಹೇಳುವುದು ನ್ಯಾಯವಲ್ಲ. ಹಾಗೆ ಹೇಳಿದರೆ ಅದು ಅವರಿಗೂ ಸಹಾಯ ಮಾಡುವುದಿಲ್ಲ. ವ್ಯವಸಾಯಕ್ಕಾಗಿ ಆದಷ್ಟು ಜಮೀನುಗಳನ್ನು ಒದಗಿಸಿಕೊಡುವುದು ಅವಶ್ಯಕವೆಂಬುದನ್ನೂ ಸರ್ಕಾರದವರು ತಿಳಿದಿದ್ದಾರೆ. ಅದಕ್ಕಾಗಿ ಬೇಕಾದ ಎಲ್ಲಾ ಸಹಾಯಗಳನ್ನೂ ಧಾರಾಳವಾಗಿ ಮಾಡಲು ಸರ್ಕಾರದವರು ಸಿದ್ಧರಾಗಿದ್ದಾರೆಂದು ಹೇಳಬಲ್ಲೆ.

ಈಗ ಅಮೃತಮಹಲ್ ಕಾವಲಿನಲ್ಲಿ ಸುಮಾರು 1½ ಲಕ್ಷ ಎಕರೆ ಜಮೀನಿದೆ. ಪಾನನಿರೋಧ ಕೆಲವುಕಡೆ ಜಾರಿಗೆ ಬಂದಿರುವುದರಿಂದ ಸುಮಾರು 2 ಲಕ್ಷ ಎಕರೆಗೆ ಮೇಲ್ಪಟ್ಟ ಪ್ರದೇಶ ಈಚಲವನವಿದೆ. ಇದಕ್ಕೆ ಒಂದು ಸಮಿತಿ ಮಾಡಿದ್ದೇವೆ. ನಿಧಾನವಾಗಿ ಕೆಲಸ ನಡೆದಿರುವುದು ನಿಜ. ಕೋಲಾರ ಜಿಲ್ಲೆಯ ವರದಿ ಬಂದಿದೆ. ತುಮಕೂರು ಮತ್ತು ಇತರೆ ಜಿಲ್ಲೆಗಳ ವರದಿ ಬರುವುದರಲ್ಲಿದೆ. ಅದರಲ್ಲಿ ಬಡವರಿಗೆ, ನಿಮ್ನ ವರ್ಗದವರಿಗೆ ಮತ್ತು ಜಮೀನಿಲ್ಲದವರಿಗೆ ಎಷ್ಟು ಭಾಗ ಕೊಡಬೇಕೆಂದು ನೋಡಿಕೊಂಡು, ಆಲೋಚನೆ ಮಾಡುತ್ತೇವೆ. ಸಾಗುವಳಿ ಮಾಡುವುದಕ್ಕೆ ಕೊಟ್ಟರೆ ನಿಜವಾಗಿಯೂ ಸಾಗು ಮಾಡುವವರಿಗೇ ಕೊಡಬೇಕೆಂದು ನಿಷ್ಕರ್ಷೆ ಮಾಡಿದ್ದೇವೆ. ಆ ರೀತಿಯಾಗಿ ಸಹಾಯ ಮಾಡುವುದಕ್ಕೆ ಸರ್ಕಾರದವರು ಸದಾ ಸಿದ್ಧವಾಗಿದ್ದಾರೆ. ಇನ್ನು ಶ್ರೀ ಚೆನ್ನಬಸಪ್ಪನವರು ನಿನ್ನೆ ಸಬ್ಸಿಡಿ ಇರಿಗೇಷನ್ ಬಾವಿಗಳಿಗೆ ಕೊಡುವುದು ಸರಿಯಲ್ಲ ಎಂದು ಅರ್ಥ ಬರುವಹಾಗೆ ಹೇಳಿದರು. ನಾವು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಕಾರಣ ಅದರಿಂದ ಬಹಳ ಪ್ರಯೋಜನವಿದೆ ವಿವರಿಸುವುದಕ್ಕೆ ಕಾಲವಿಲ್ಲ. ನೀರಾವರಿ ಬಾವಿಗಳಿಗೆ ಸಬ್ಸಿಡಿ ಕೊಡುವುದು ಬಹಳ ಪರಿಣಾಮವುಳ್ಳದ್ದು. ಅದರಿಂದ ಆಹಾರದ ಉತ್ಪತ್ತಿ ಹೆಚ್ಚುತ್ತದೆ. ಮಳೆ ಇಲ್ಲದೇಯಿರುವಾಗ ಇದೇ ಒಂದು ನಿಧಿ. ಈ ಅನೇಕ ಕಾರಣಗಳಿಂದ ಈ ಬಾಬಿಗೆ ಅತ್ಯಾವಶ್ಯಕವಾಗಿ ಎಷ್ಟುಮಟ್ಟಿಗೆ ಹಣ ಒದಗಿಸಬೇಕೆಂಬ ಪ್ರಶ್ನೆಯಿದೆ. ಅದರಿಂದ ಬಹಳ ಜನ ರೈತರಿಗೆ ಸಹಾಯಮಾಡಿದ ಹಾಗಾಗುತ್ತದೆಯೆಂದು ಸರ್ಕಾರಕ್ಕೆ ಭಾವನೆಯಿರುವುದರಿಂದ ಕಳೆದ 2 ವರ್ಷದ ಲೆಕ್ಕದ ಪ್ರಕಾರ ಸ್ವಲ್ಪ ಹೆಚ್ಚುಕಡಿಮೆ 12 ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದೇವೆ. ಇಷ್ಟೇ ಅಲ್ಲ. 2 ವರ್ಷದಲ್ಲಿ ಸುಮಾರು 3,500 ಬಾವಿಗಳು ಪೂರೈಸಿವೆ. ಹೀಗಿರುವಾಗ ಇಂಥ ಉಪಯುಕ್ತವಾದ ಕೆಲಸಕ್ಕೆ ಅವರು ಯಾವ ಕಾರಣದಿಂದ ನಿಲ್ಲಿಸಬೇಕು ಅಥವಾ ಕೊಡಕೂಡದು ಎಂದು ಹೇಳಿದರೋ ಅರ್ಥವಾಗಲಿಲ್ಲ. ಅದು ಯಾವುದೋ ಒಂದು ಕಾಲದಲ್ಲಿ ದುರ್ವಿನಿಯೋಗವಾಯಿತೆಂದು ಮನಸ್ಸಿನಲ್ಲಿ ಭಾವನೆಯಿದ್ದರೂ ಹೋದ ವರ್ಷ, ಈ ವರ್ಷ ಆ ರೀತಿ ಆಗಿಲ್ಲವೆಂದು ಧಾರಾಳವಾಗಿ ಹೇಳಬಲ್ಲೆ. ಉದಾಹರಣೆಗೆ ಒಂದಾನೊಂದು ಕಾಲದಲ್ಲಾದರೂ ವಿಚಾರವನ್ನು ನೆನೆಸಿಕೊಂಡು ವಿವರಿಸಿ ಹೇಳುವುದಾದರೆ ಯಾರ್‍ಯಾರು ಹಣ ದುರುಪಯೋಗ ಪಡಿಸಿಕೊಂಡಿದ್ದರೋ ಅಂಥವರ ಮೇಲೆ ತುಮಕೂರು ಜಿಲ್ಲೆಯಲ್ಲಿ 54 ಕೇಸುಗಳನ್ನು ಹಾಕಿ ಹಣ ವಸೂಲು ಮಾಡುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗಾದರೆ ಕೊಡಬಹುದು.

ಶ್ರೀ ಎಚ್. ಸಿದ್ದಯ್ಯನವರು.—Thank you, Sir. ಇನ್ನು ಬಸ್ ಸರ್ವಿಸ್ ವಿಚಾರ ಹೆಚ್ಚು ಹೇಳಬೇಕಾಗಿಲ್ಲ. ಬೆಳಿಗ್ಗೆ ಒಂದು ಪ್ರಶ್ನೆಯಲ್ಲಿ ಉಪಪ್ರಶ್ನೆಗಳನ್ನು ಕೇಳಿದಾಗ ಉತ್ತರ ಕೊಟ್ಟಿರುವುದನ್ನು ನೋಡಿದರೆ ಟ್ರಾನ್ಸ್‌ಪೋರ್ಟ್ ಇಲಾಖೆಯು ನಿಜವಾಗಿಯೂ ಲಾಭದಾಯಕವಾಗುವ ರೀತಿಯಲ್ಲಿ ಕೆಲಸ ಮಾಡುತ್ತಿದೆಯೆಂಬುದು ಈಗಾಗಲೇ ವ್ಯಕ್ತವಾಗಿದೆ. ಇಷ್ಟು ಆ ವಿಚಾರದಲ್ಲಿ ಹೇಳಬಲ್ಲೆ. ಸಂಸ್ಥಾನದ ಅನೇಕ ಈ ತರಹೆ ಬಾಬುಗಳಲ್ಲಿ ಹೆಚ್ಚಿನ ಲಾಭ ಬರುವುದೆಂದು ಹೇಳುವುದಕ್ಕೆ ಒಂದು ರೀತಿ ಹೆಮ್ಮೆ ಮತ್ತು ಸಂತೋಷ. ಆದರೆ ಇದನ್ನು ಹೇಳುವಾಗ ವಿಸ್ತಾರ್ಥ ಮಾಡಬೇಕು, ರಾಷ್ಟ್ರೀಕರಣ ಸಂಪೂರ್ಣವಾಗಿ ಮಾಡಬೇಕು ಎಂದು ಮಾನ್ಯ ಸದಸ್ಯರನೇಕರು ತಿಳಿಸಿದರು. ಆದರೆ ಅದು ಕೆಲವು ಕಾರಣಗಳಿಂದ ನಿಧಾನವಾಗಿದೆಯೆಂದು 17ನೆಯ ತಾರೀಖು ಶ್ರೀ ಎಲ್. ಸಿದ್ದಪ್ಪನವರಿಗೆ ಉತ್ತರ ಹೇಳುವಾಗ ತಿಳಿಸಿದ್ದೇನೆ. ಆದಷ್ಟು ಜಾಗನೆ ಅದನ್ನು ಮುಂದುವರಿಸುವುದಕ್ಕೆ ಯಾವ್ಯಾವ ಪ್ರಯತ್ನಗಳು ಬೇಕೋ ಅವುಗಳನ್ನೆಲ್ಲಾ ಮಾಡಲಾಗುತ್ತದೆಯೆಂದು ಅಷ್ಟು ಮಾತ್ರ ಭರವಸೆ ಕೊಟ್ಟರೆ ಸಾಕಾಗಿದೆ. ಆದರೆ ಲಾರಿಗಳು, ಬಸ್ಸುಗಳು ಮತ್ತು ಖಾಸಗಿ ವಾಹನಗಳು—ಇವುಗಳ ಮೇಲೆ ಅಧಿಕವಾದ ತೆರಿಗೆ ಹಾಕಿ ಎಂದು ಹೇಳುವಾಗ ಒಂದಕ್ಕೊಂದಕ್ಕೆ inconsistent ಆಗುತ್ತದೆಂದು ಕಾಣುತ್ತದೆ.

ಇನ್ನು ಪಾನನಿರೋಧದ ವಿಚಾರ. ಅದನ್ನೂ ಕೂಡ 17ನೆಯ ತಾರೀಖೇ ಸೂಕ್ಷ್ಮವಾಗಿ ಹೇಳಿದ್ದೇನೆ. ಅದನ್ನು ಪುನಃ ವಿಸ್ತರಿಸಬೇಕಾದ್ದು ಅನಗತ್ಯ. ಶ್ರೀ ಟಿ. ಸಿ. ಹೊನ್ನಪ್ಪನವರು, ಶ್ರೀ ಹನುಮಂತಪ್ಪನವರು ಮುಂತಾದವರು ಇದನ್ನು ಮುಂದುವರಿಸಬೇಕು, ನಿಲ್ಲಿಸಬಾರದು ಎಂದೂ, ಶ್ರೀ ಬೋರಣ್ಣಗೌಡರು ಹಾಸನ ಜಿಲ್ಲೆಯಲ್ಲಿ ತಕ್ಷಣ ಜಾರಿಗೆ ತಂದು ಮುಂದುವರಿಸಬೇಕೆಂದೂ ಹೇಳಿರುವುದು ಸ್ವಾಭಾವಿಕವಾಗಿಯೇ ಇದೆ. ಶ್ರೀ ಮಾಸ್ಕರೇನಸ್‌ರವರೂ ಈಗಿನ ನೀತಿಯನ್ನು ಸಮರ್ಥಿಸಿದ್ದಾರೆ. ಆದರೆ ಶ್ರೀ ಕಡಿದಾಳ್ ಮಂಜಪ್ಪನವರು ಒಂದು ವಿಚಾರ ಸೂಕ್ಷ್ಮವಾಗಿ ಹೇಳಿದರು. ಕುಡಿತವನ್ನು ಪುನಃ ಜಾರಿಗೆ ತರಬೇಕು ಎಂದು ಧೋರಣೆ ಬರುವಂತೆ, ಅರ್ಥ ಬರುವ ಹಾಗೆ ಹೇಳಿದರು. ಆದರೆ ನಾನು ಅದನ್ನು ಅನುಮೋದಿಸುತ್ತೇನೆಂದು ಯಾರೂ ಭಾವಿಸಬಾರದು. 17ನೆಯ ತಾರೀಖೇ ಈ ವಿಚಾರವನ್ನು ಸ್ಪಷ್ಟವಾಗಿ ಸರ್ಕಾರದ ಪರವಾಗಿ ತಿಳಿಸಿದೆ. ಅನೇಕಕಡೆ ಹೊರಗಿನವರೂ ಆರೀತಿ ಅಭಿಪ್ರಾಯ ಪಡುವುದನ್ನು ವರ್ತಮಾನ ಪತ್ರಿಕೆಗಳಲ್ಲಿ ನೋಡುತ್ತಿದ್ದೇನೆ. ಏನೇ ಇರಲಿ, ಇಲ್ಲಿ ನಿಲ್ಲಿಸುತ್ತೇವೆ. ಸ್ವಲ್ಪ ನಿಧಾನವಾಗುವುದಕ್ಕೆ ಕಾರಣವೇನೆಂಬುದನ್ನು ಆ ದಿನ ಹೇಳಿದ್ದೇನೆ. ಒಂದೇ ಸಮನಾಗಿ ಮುಂದುವರೆದು ಹೋಗುವುದಕ್ಕಿಂತ ಹಿಂದೆ ಏನಾಗುತ್ತಿದೆ, ಅನರ್ಥವೇನಿದೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಅದರಿಂದ ಶರೀರ ಹಾನಿಯಾಗುತ್ತದೆ, ಹಣದ ಕೊರತೆಯಿದೆಯೆಂದು ಮೊನ್ನೆಯೇ ಹೇಳಿದ್ದೇನೆ. ಉದಾಹರಣೆಗೆ, ಹಾಸನ ಜಿಲ್ಲೆಯೊಂದರಲ್ಲೇ ಈ ಸಾಲಿನಲ್ಲಿ ಬಂದಿರು

ವುದು 27 ಲಕ್ಷ ರೂಪಾಯಿಗಳು. ವಿದ್ಯಾಭ್ಯಾಸಕ್ಕೆ ಹಣ ಬೇಕು, ಕೈಗಾರಿಕೆಗಳು ಹೊಸದಾಗಿ ಸ್ಥಾಪನೆಯಾಗಿ ಅಭಿವೃದ್ಧಿಯಾಗಬೇಕು, ಆಹಾರವು ಹೆಚ್ಚಬೇಕು, ವಿದ್ಯುಚ್ಛಕ್ತಿ ಸರಬರಾಯಿ ಆಗಬೇಕು, ಇದಕ್ಕೆಲ್ಲಾ ಹೆಚ್ಚು ಹಣ ಬೇಕು ಎಂದು ಹೇಳುತ್ತಿದ್ದಾರೆ. ಪ್ರಶ್ನೋತ್ತರಗಳ ಮೂರನೆಯ ಭಾಗದಲ್ಲಿ ಈ ವಿಚಾರದಲ್ಲಿ ಶ್ರೀ ರಾಮಾಚಾರರವರು, ಶ್ರೀ ಲಿಂಗಾರೆಡ್ಡಿಯವರು ಮತ್ತು ಶ್ರೀ ಎಂ. ಮಾದಯ್ಯನವರು ಕೇಳಿರುವ ಪ್ರಶ್ನೆಗಳನ್ನು ಉತ್ತರದೊಂದಿಗೆ ಮುದ್ರಿಸಿದೆ; ಮುಂದೆ ಬರುತ್ತವೆ. ಕಳ್ಳಭಟ್ಟಿ ಇಳಿಸುವುದರಿಂದ ಬಹಳ ಅನಾಹುತವಾಗುತ್ತದೆ, ರೆವೆನ್ಯೂ ಉತ್ಪತ್ತಿಯೂ ಕಡಮೆಯಾಗುತ್ತದೆ, ಜನರ ಆರೋಗ್ಯವೂ ಕೆಡುತ್ತದೆ ಮತ್ತು ಶರೀರಕ್ಕೂ ಹಾನಿ. ಹೀಗೆ ಎರಡು ಕಡೆಯೂ ತೊಂದರೆಗೆ ಸಿಕ್ಕುವುದು ಸರಿಯೆ ಎಂದು ಯೋಚನೆ ಮಾಡಬೇಕು. ಅದನ್ನು ಸರಿಪಡಿಸಿ ಮುಂದೆ ಹೆಜ್ಜೆಯಿಡುವುದು ಕ್ಷೇಮ ಎಂದು ಕೆಲವರು ಅಭಿಪ್ರಾಯಪಡುತ್ತಾರೆ, ಅದು ನಿಜವಾಗಿಯೂ ಯೋಚನೆ ಮಾಡತಕ್ಕ ಅಂಶ. ಆ ದೃಷ್ಟಿಯಿಂದಲೇ ನಾವೂ ಸ್ವಲ್ಪ ನಿಧಾನ ಮಾಡಿರುವುದು. ಈ ವರ್ಷ ಸರಿಯಾಗಿದೆಯೆಂದು ಹೇಳಿದರೂ ಕೂಡ ಅನೇಕ ಮಾನ್ಯ ಸದಸ್ಯರು ಹೇಳಿರುವ ಕೆಲವು ಅಮೂಲ್ಯವಾದ ಸಲಹೆಗಳನ್ನು ಗಮನಿಸಿ ಎಷ್ಟುಮಟ್ಟಿಗೆ ಸಾಧ್ಯವೋ ಅಷ್ಟುಮಟ್ಟಿಗೆ ಮುಂದುವರಿಯುವುದಕ್ಕೆ ಹಿಂಜರಿಯುವುದಿಲ್ಲ ಎಂದು ಸರ್ಕಾರದ ಪರವಾಗಿ ಹೇಳುತ್ತೇನೆ.

Sri T. SUBRAMANYA.—We are committed to complete prohibition.

ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರಕ್ಕೆ ಅದು ಚೆನ್ನಾಗಿ ಗೊತ್ತಿದೆ. ಆದರೆ ಈಗ ಹಣಕಾಸಿನ ಕೊರತೆಯೂ ಇದೆ ಎಂಬುದನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. 1946-47ರಲ್ಲಿ ಐದು ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದಾಗ ವರಮಾನವೆಷ್ಟು, ಅದಕ್ಕಿಂತ ಮುಂಚೆ ಎಷ್ಟು ಎಂಬುದನ್ನು ನೋಡಬೇಕು. ಮಾರಾಟ ತೆರಿಗೆಯ ವಿಚಾರವನ್ನು ಶ್ರೀಮಾನ್ ಸಿದ್ದಪ್ಪನವರು ಅಪ್ಪಣೆ ಕೊಡಿಸಿದರು. ಮದರಾಸಿನಲ್ಲಿ ಇದು ಐದು ಕೋಟಿಯಿಂದ 15 ಕೋಟಿಯವರೆಗೆ ಆಯಿತೆಂದು ಹೇಳಿದರು. ಅವರು ದೇಶಕ್ಕೆ ಹೆಚ್ಚು ಸಂಪಾದನೆಯಾಗುವ ಮಾರ್ಗವನ್ನು ತೋರಿಸಿ ಸಲಹೆಯನ್ನೇನೋ ಕೊಟ್ಟರು. ಆದರೆ ಈ ತೆರಿಗೆಯನ್ನು ಹಾಕಿದ್ದು ಯಾವ ಉದ್ದೇಶದಿಂದ ಎಂಬುದನ್ನು ಯೋಚನೆಮಾಡಬೇಕು. ಅಲ್ಲಿ ಎಕ್ಸೈಜು ರೆವೆನ್ಯು ಸುಮಾರು 16-17 ಕೋಟಿ ಮತ್ತು ಈಗ ಮಾರಾಟ ತೆರಿಗೆ 15 ಕೋಟಿ ಆಯಿತು; ನಮ್ಮಲ್ಲಿ ಮಾರಾಟ ತೆರಿಗೆಯಿಂದ ಬರತಕ್ಕ ವರಮಾನ 81½ ಲಕ್ಷ ರೂಪಾಯಿ. ಇದರಿಂದ ಏನೂ ಫಾಯಿದೆಯಿಲ್ಲವೆಂಬುದನ್ನು ಒಪ್ಪಿಕೊಳ್ಳೋಣ. ಆದರೂ ಕೂಡ ನಮ್ಮ ಕೈಲಾಗುವಷ್ಟು ಪ್ರಬಲ ಪ್ರಯತ್ನ ಮಾಡೋಣ.

ಜನಾಬ್ ಷರೀಫ್‌ರವರು ಇದರಿಂದಾಗುವ ಸಮಾಜ ಸುಧಾರಣೆಯೇನೆಂಬುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಇಡೀ ಸಂಸ್ಥಾನದಲ್ಲಿ ಪಾನ ನಿರೋಧ ಜಾರಿಗೆ ಬರುವ ದಿನವನ್ನು ಬೇಗ ನೋಡಬೇಕೆಂದು ಸರ್ಕಾರದವರಿಗೆ ಇರುವ ಆಶೆಯನ್ನು ಎಷ್ಟು ಹೇಳಿದರೂ ಸಾಲದು. ಕೆಲವು ಪ್ರಬಲವಾದ ಅಡಚಣೆಗಳಿರುವುದರಿಂದ ಈಗ ಸಧ್ಯದಲ್ಲಿ ಇದು ಸಾಧ್ಯವಾಗಿಲ್ಲವೆಂದು ಹೇಳಬೇಕಾಗಿದೆ. "Prohibition is the accepted policy, declared policy of Government" ಎಂದು ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಹಿಂದಿನ ಸರ್ಕಾರದವರು ಧೈರ್ಯಮಾಡಿ ಭೂಕಂದಾಯ ಸಮಿತಿಯನ್ನು ಏರ್ಪಾಡು ಮಾಡಲಿಲ್ಲ. ಅದನ್ನು ಈಗ ನಾವು ಮಾಡಲಿಲ್ಲವೆ!

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಒಟ್ಟಿಗೆ ಸಂಸ್ಥಾನಕ್ಕೆ ಪಾನನಿರೋಧವನ್ನು ಜಾರಿಗೆ ತಂದರೆ ಆಗ ನಿಮಗೆ ಸರ್ಟಿಫಿಕೇಟ್ ಕೊಡುತ್ತೇವೆ.

ಶ್ರೀ ಟಿ. ಸಿದ್ದಲಿಂಗಯ್ಯನವರು (ವಿದ್ಯಾ ಮತ್ತು ಆರೋಗ್ಯ ಸಚಿವರು).—ಅಧ್ಯಕ್ಷರೇ, ವಿಶ್ವವಿದ್ಯಾನಿಲಯದ ವಿಚಾರದಲ್ಲಿ ಮಾತನಾಡುತ್ತಾ ಕೆಲವು ಮಾನ್ಯ ಸದಸ್ಯರು ಕಾಲೇಜುಗಳನ್ನು ಹೆಚ್ಚು ಮಾಡಬೇಕೆಂದೂ, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಹೆಚ್ಚುಮಾಡಬೇಕೆಂದೂ ಸಲಹೆ ಮಾಡಿದರು. ಈಗ ಇರತಕ್ಕ ಕಾಲೇಜುಗಳಿಗೆ ಹೆಚ್ಚಿನ ಗಮನ ಕೊಟ್ಟು ಆದಷ್ಟು ಇವುಗಳನ್ನು ಇನ್ನೂ ಹೆಚ್ಚು ಸುವ್ಯವಸ್ಥಿತವಾಗಿ ಮಾಡಬೇಕೆಂಬ ಉದ್ದೇಶವಿರುವುದರಿಂದ ಹೊಸದಾಗಿ ಕಾಲೇಜುಗಳನ್ನು ತೆರೆಯುವುದಕ್ಕೆ ಸಾಧ್ಯವಾಗಿಲ್ಲ

ಎರಡನೆಯದಾಗಿ, ಪ್ರೋಛಾನ್ಸಲರ್ ಹುದ್ದೆ ಮತ್ತು ಡಾ॥ ರೆಡ್ಡಿಯವರ ವರದಿಯಮೇಲೆ ಕೆಲವು ಆಕ್ಷೇಪಣೆಗಳು ಬಂದಿವೆ. ನಮ್ಮ ಈಗಿನ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆಯಾಗಬೇಕೆಂದು ಎಲ್ಲ ಜನರ ಮನಸ್ಸಿನಲ್ಲಿಯೂ ಇದ್ದುದರಿಂದಲೂ 25 ವರ್ಷಗಳಿಂದಲೂ ವಿದ್ಯಾಭ್ಯಾಸ stagnant ಆಗಿದೆ ಎಂಬ ಭಾವನೆ ಇದ್ದುದರಿಂದಲೂ, ಸ್ವಾತಂತ್ರ್ಯ ಬಂದಮೇಲೆ ಎಂತಹ ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ಕೊಡಬೇಕೆಂಬ ವಿಷಯ ಜನರ ಮನಸ್ಸಿನಲ್ಲಿದ್ದುದರಿಂದಲೂ, agricultural bias, industrial bias ಮತ್ತು vocational bias ನಮ್ಮ ಮಕ್ಕಳ ಮನಸ್ಸಿನಲ್ಲಿ ಹುಟ್ಟುವಂತಹ ಒಂದು practical ವಿದ್ಯಾಭ್ಯಾಸವನ್ನು ಕೊಡಬೇಕೆಂಬ ಇಚ್ಛೆ ಇದ್ದುದರಿಂದಲೂ ಡಾ॥ ರೆಡ್ಡಿಯವರನ್ನು ನಮ್ಮ ಸಂಸ್ಥಾನಕ್ಕೆ ಬರಮಾಡಿಕೊಂಡು, ಅವರಿಂದ ಒಂದು ವರದಿಯನ್ನು ತಯಾರುಮಾಡಿಸಿದೆವು. ಅವರು ತಮ್ಮ ವರದಿಯಲ್ಲಿ ತಾವು ಪ್ರೋಛಾನ್ಸಲರ್ ಆಗಬೇಕೆಂದು ಶಿಫಾರಸು ಮಾಡಿದ್ದಾರೆಯೆ ಎಂದು ಸದಸ್ಯರೊಬ್ಬರು ಕೇಳಿದರು, ಅವರು ಆ ರೀತಿ ಮಾಡಿಲ್ಲ. ಈಗಾಗಲೇ ನಮ್ಮ ವಿಶ್ವವಿದ್ಯಾನಿಲಯದ ಕಾನೂನು ಪ್ರಕಾರ ಪ್ರೋಛಾನ್ಸಲರ್ ಹುದ್ದೆ ಇದ್ದೇ ಇದೆ. ಹೊಸದಾಗಿ ಏನೂ ಮಾಡಿಲ್ಲ, ಆದರೆ ಈ ಪ್ರೋಛಾನ್ಸಲರರವರಿಗೆ ಏನೇನು ಕೆಲಸವನ್ನು ಕೊಡಬೇಕೆಂಬುದನ್ನು ಡಾ॥ ರೆಡ್ಡಿಯವರ ವರದಿಯಲ್ಲಿ ಹೇಳಿದ್ದಾರೆ. ಆದುದರಿಂದ ಅವರು ಈ ಕೆಲಸವನ್ನು ಹೊಸದಾಗಿ ಸೃಷ್ಟಿಮಾಡಿಕೊಂಡು ತಾವೇ ಬರುವಂತೆ ಹೇಳಿದ್ದಾರೆಂದು ತಿಳಿಯಬಾರದು. ಅವರು ಇಲ್ಲಿರತಕ್ಕ ಅವಧಿಯೊಳಗೆ ಈಗಿರತಕ್ಕ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಅಥವಾ ಪದ್ಧತಿಯನ್ನು ಬದಲಾಯಿಸಬೇಕೆಂಬ ಒಂದು ಭಾವನೆ ವಿನಾ ಸರ್ಕಾರಕ್ಕೆ ಬೇರಾವ ಭಾವನೆಯೂ ಇಲ್ಲ. ಅವರನ್ನು ಒಂದ ಒಪ್ಪಂದದ ಪ್ರಕಾರ ಕರೆಸಿದ್ದರೂ ಕೂಡ ತಮಗಾಗಿ ಮಾಡಬೇಕಾದ ಖರ್ಚನ್ನು ಕಡಿಮೆ ಮಾಡಿಕೊಳ್ಳಲು ಒಪ್ಪಿದ್ದಾರೆ. ಉದಾಹರಣೆಗೆ, ಅವರಿಗೆ ಮೈಸೂರಿನಲ್ಲೊಂದು ನಿವಾಸ, ಬೆಂಗಳೂರಿನಲ್ಲೊಂದು ನಿವಾಸ ಕೊಡಬೇಕಾಗಿತ್ತು. ಈಗ ಮೈಸೂರಿನ ಬಂಗಲೆಯೊಂದನ್ನು ಮಾತ್ರ ಇಟ್ಟುಕೊಂಡು ಬೆಂಗಳೂರಿನದು ಬೇಡವೆಂದು ಅವರು ಒಪ್ಪಿದ್ದಾರೆ. ಅವರು ಮೈಸೂರಿನ ಮೇಲಿನ ಪ್ರೀತಿಯಿಂದ, ಮೈಸೂರಿಗೆ ಸೇವೆಸಲ್ಲಿಸಲು ಬಂದಿದ್ದಾರೆಂಬ ಅಭಿಪ್ರಾಯದಿಂದ, ಅವರ ಸೇವೆಯನ್ನು ನಮ್ಮ ಸಂಸ್ಥಾನಕ್ಕೆ ತೆಗೆದುಕೊಂಡಿದ್ದೇವೆ.

ಇನ್ನು ಕೋಲಾರ ಚಿನ್ನದಗಣಿ ಪ್ರದೇಶಕ್ಕೆ ಒಂದು ಕಾಲೇಜು ಕೊಡಬೇಕೆಂದು ಮಾನ್ಯ ಸದಸ್ಯರೊಬ್ಬರು ಸೂಚಿಸಿದರು. ಅಲ್ಲದೆ, ಲಾ ಕಾಲೇಜಿನಲ್ಲಿ ಓದತಕ್ಕ ಹರಿಜನರಿಗೆ ರಿಯಾಯಿತಿ ಕೊಡಬೇಕೆಂದು ಸಲಹೆಮಾಡಿದರು. ಈಗಿರತಕ್ಕ ತತ್ತ್ವದ ಮೇಲೆ ಹರಿಜನರಿಗೆ ರಿಯಾಯಿತಿಗಳಿರುವುದು ಅವರು ಗ್ರ್ಯಾಜುಯೇಟ್ ಆಗುವವರೆಗೆ ಮಾತ್ರ, ಆಮೇಲೆ ಎಲ್ಲ ಪಂಗಡದವರನ್ನೂ ಒಂದೇ ರೀತಿ ಕಾಣಬೇಕು. ಆದುದರಿಂದ ಈ ನೀತಿಯ ಮೇಲೆ ಹಾಗೆ ರಿಯಾಯಿತಿ ಕೊಡಲು ಸಾಧ್ಯವಿಲ್ಲ. ಹರಿಜನರ ಹಾಸ್ಟೆಲುಗಳಲ್ಲಿ ಹೆಚ್ಚು ಸಂಖ್ಯೆಗೆ ಅವಕಾಶ ಮಾಡಬೇಕೆಂದು ಹೇಳಿದರು. ಅಲ್ಲದೆ ಕೆಲವರು ಕೋಮುವಾರು ಹಾಸ್ಟೆಲುಗಳನ್ನೂ ಸ್ಕೂಲುಗಳನ್ನೂ ವಜಾ ಮಾಡಬೇಕೆಂದು ಸೂಚಿಸಿದರು. ಇದು ಬಹಳ ಒಳ್ಳೆಯ ಸಲಹೆ. ಈಗ ಈ ರೀತಿ ಮಾಡಲು ಪ್ರಾರಂಭಮಾಡುತ್ತಿದ್ದೇವೆ. ಹರಿಜನರ ಹಾಸ್ಟೆಲಿಗೆ ಮಿಕ್ಕ ಹಿಂದೂಗಳೂ ಹೋಗುವುದಾದರೆ ಅವರಿಗೆ ಅವಕಾಶ ಕೊಡಬೇಕು, ಉಚಿತ ವಸತಿ ಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—*Vice versa* ಆಗಬೇಕು.

ಶ್ರೀ ಟಿ. ಸಿದ್ಧಲಿಂಗಯ್ಯನವರು.—ಅದೂ ಕೂಡ ಆಗಬಹುದು. ಹೀಗೆ ಮಾಡಿ ಯುವಕರಲ್ಲಾದರೂ ಈ ಕೋಮುವಾರು ಭೇದ ಭಾವ ಬರದಂತೆ ಏರ್ಪಾಡು ಮಾಡಬೇಕೆಂಬ ಉದ್ದೇಶದಿಂದ ಹೀಗೆ ಮಾಡಿದ್ದೇವೆ. ಕೋಮುವಾರು ಸ್ಕೂಲುಗಳನ್ನು ವಜಾ ಮಾಡಬೇಕೆಂದು ಹೇಳಿದರು. ಇದು ಬಹಳ ಒಳ್ಳೆಯ ತತ್ತ್ವ, ನಮಗೆ ಸ್ವಾತಂತ್ರ್ಯ ಬಂದಮೇಲಂತೂ ಕೋಮುವಾರು ಸ್ಕೂಲುಗಳಿರಲೇಬಾರದು. ಮಕ್ಕಳು ಒಟ್ಟಾಗಿ ಬೆಳೆದು ಅವರು ಒಗ್ಗಟ್ಟಾಗಿ ಜೀವಿಸಲು ಅವಕಾಶವಿರಬೇಕು. ಇದನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ನಮ್ಮ ರಾಜ್ಯಾಂಗದ ಪ್ರಕಾರ ಮೊಟ್ಟಮೊದಲು ಅವರವರ ಮಾತೃಭಾಷೆಯಲ್ಲಿ ವಿದ್ಯೆ ಕಲಿಸಬೇಕೆಂದಿದೆ, ಅಂದರೆ ಪ್ರೈಮರಿ ಮಟ್ಟದಲ್ಲಿ ಮಾತ್ರ. ಆಮೇಲೆ ಎಲ್ಲರೂ ಒಂದೇ ರೀತಿಯಲ್ಲಿ ಓದಬೇಕು.

ಪ್ರೈಮರಿ ಶಾಲೆಯಲ್ಲಿ ಎಲ್ಲರಿಗೂ ಒಂದೇಕಡೆ ಹೇಳಿಕೊಡಬೇಕೆಂದು ರಾಜ್ಯಾಂಗದಲ್ಲೇ ಇದೆ. ಕಟ್ಟಡದ ಪ್ರಶ್ನೆಯೂ ಕೂಡ ಬಹಳ ದೊಡ್ಡ ಪ್ರಶ್ನೆ. ಅದೇನೋ ಬಹಳ ಸುಲಭವಾಗಿ ಪರಿಹಾರವಾಗುತ್ತದೆ. ಉರ್ದು ಸ್ಕೂಲುಗಳಿಗೆ ಅನೇಕ ಕಡೆ ಜಾಗ ಇದೆ. ಶ್ರೀಮಾನ್ ಸುಬ್ರಹ್ಮಣ್ಯರವರು ಹೇಳಿದಹಾಗೆ ಒಂದು ಸಣ್ಣ ಸ್ಕೂಲಿನಲ್ಲಿ ಒಬ್ಬರ ಮೇಲೊಬ್ಬರು ಕುಳಿತುಕೊಳ್ಳಬೇಕಾದ ಪ್ರಮೇಯ ಇತ್ತು. ಹೊಸದಾಗಿ ಸ್ಕೂಲುಗಳನ್ನು ತೆಗೆಯುವುದನ್ನು ಸಾಧ್ಯವಾದಷ್ಟುಮಟ್ಟಿಗೂ ಈಗ ಒಂದು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆ. ಅದರ ಅರ್ಥವೇನೆಂದರೆ, ಈಗ ನಡೆಯುತ್ತಾ ಇರತಕ್ಕ ಸ್ಕೂಲುಗಳಲ್ಲಿ ಉಪಾಧ್ಯಾಯರಿಲ್ಲ. ಈಗ ಇರತಕ್ಕ ಸ್ಕೂಲುಗಳಿಗೆ ಬೇಕಾದ ಸಹಾಯವನ್ನು ಕೊಟ್ಟು ಸಮರ್ಪಕವಾಗಿ ನಡೆಯುವಂತೆ ಮಾಡುವ ಉದ್ದೇಶದಿಂದ ಹೊಸದಾಗಿ ಸ್ಕೂಲುಗಳನ್ನು ಪ್ರಾರಂಭಮಾಡಬಾರದೆಂದು ಸರ್ಕಾರದವರ ಅಭಿಪ್ರಾಯ.

ವಯಸ್ಕರ ವಿದ್ಯಾಭ್ಯಾಸದ ವಿಚಾರದಲ್ಲಿ ಪ್ರಶ್ನೆಗಳ ಸುರಿಮಳೆ ಸುರಿಯಿತು. ಆ ವಿಚಾರದಲ್ಲಿ ನಿರ್ಧಾರವಾದ ಅಭಿಪ್ರಾಯವನ್ನು ಈಗಲೇ ಹೇಳುವುದಿಲ್ಲ. ಸದಸ್ಯರ ಅಭಿಪ್ರಾಯಗಳೆಲ್ಲವನ್ನೂ ಸರ್ಕಾರದವರು ಆಲೋಚನೆಮಾಡಿ ಬಹಳ ಸಮರ್ಪಕವಾಗಿ ನಡೆಸುವುದಕ್ಕೆ ಏನು ಅನುಕೂಲಬೇಕೋ ಅದನ್ನು ಮಾಡಬೇಕು. ಸರ್ಕಾರದವರು ವಯಸ್ಕರ ವಿದ್ಯಾಭ್ಯಾಸವನ್ನು ಸರಿಯಾದ ಹತೋಟಿಯಲ್ಲಿಟ್ಟುಕೊಳ್ಳಬೇಕೆಂಬ ದೃಷ್ಟಿಯಿಂದ ಆಲೋಚನೆಮಾಡುತ್ತಿದ್ದಾರೆ. ಅಷ್ಟು ವಿನಾ ಅದನ್ನು ಈಗಲೇ ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂಬ ಸಲಹೆಯನ್ನು ಸರ್ಕಾರದವರು ಒಪ್ಪುವುದಿಲ್ಲ. ಆರೀತಿ ಏನಾದರೂ ಅವಶ್ಯಕತೆ ಇದ್ದರೆ ಈಗ ಪ್ರಜಾಪ್ರಭುತ್ವ ಪದ್ಧತಿ ಜಾರಿಗೆ ಬಂದಿದೆ. ಅಸೆಂಬ್ಲಿಯಲ್ಲಿ ನಿರ್ಣಯ ತೆಗೆದುಕೊಂಡು ಬಂದು ಅದನ್ನು ತೆಗೆದುಹಾಕಬೇಕೆಂಬ ಅಭಿಪ್ರಾಯ ಬಂದರೆ ಅದು ಬೇರೆ ಮಾತು. ಈಗಿರತಕ್ಕ ಅಭಿಪ್ರಾಯದಲ್ಲಿ ಅದನ್ನು ಉಳಿಸಿಕೊಂಡು ಇತರ ವಿದ್ಯಾಭ್ಯಾಸಗಳ ಜೊತೆಗೆ ಯಾವರೀತಿ ಇನ್ನೂ ಚೆನ್ನಾಗಿ ಉಪಯೋಗ ಮಾಡಿಕೊಳ್ಳಲು ಸಾಧ್ಯವಿದೆಯೋ ಆ ರೀತಿ ಮಾಡಿಕೊಳ್ಳಬಹುದೆಂದು ಇದೆ.

ಆಮೇಲೆ ಸ್ಕಾಲರ್‌ಷಿಪ್ ವಿಚಾರ. ಕೆಲವು ಸ್ಕಾಲರ್‌ಷಿಪ್‌ಗಳನ್ನು ಹೆಚ್ಚು ಈ ವರ್ಷ ಮಾಡಿದೆ. ಹರಿಜನರಿಗೂ ಕೂಡ ಸ್ವಲ್ಪ ಹೆಚ್ಚಾಗಿಕೊಡಲಾಗಿದೆ. ಖಾಸಗೀ ಸ್ಕೂಲುಗಳನ್ನು ವಜಾಮಾಡಿ ಎಲ್ಲವನ್ನೂ ಸರ್ಕಾರದವರೇ ತೆಗೆದುಕೊಂಡು ಬಿಡಿ ಎಂಬ ಒಂದು ಅಭಿಪ್ರಾಯ ಬಂತು. ಅದಕ್ಕೆ ವಿರುದ್ಧವಾಗಿಯೂ ಸಹ ಸರ್ಕಾರಿ ಸ್ಕೂಲುಗಳನ್ನೇ ವಜಾಮಾಡಿ ಎಲ್ಲಾ ಖಾಸಗೀ ಸ್ಕೂಲುಗಳನ್ನಾಗಿ ಮಾಡಿ ಎಂಬ ಅಭಿಪ್ರಾಯವೂ ಬಂತು. ಆದ್ದರಿಂದ ಒಂದಕ್ಕೊಂದಕ್ಕೆ ಸರಿಹೋಗಿದೆ.

ಸೇವಾದಳದ ವಿಚಾರದಲ್ಲಿ ಅನೇಕ ಸದಸ್ಯರು ಬಹಳ ಶ್ರದ್ಧೆಯನ್ನು ತೋರಿಸಿದ್ದಾರೆ. ಈಗ ಬರೀ mental and moral literacy ಮಾತ್ರ ಇದೆ. ಅಷ್ಟೇ ಸಾಲದು. physical side ಟ್ರೈನಿಂಗ್ ಬೇಕು. ದೇಶಾಭಿಮಾನ ಬರುವುದಕ್ಕೆ ಸೇವಾದಳದಂತಹ ಸಂಘಗಳಿಗೆ ಉತ್ತೇಜನ ಮಾಡಿ ಯುವಕರನ್ನು ತರಪೇತು ಮಾಡಬೇಕು. ದೇಶಕ್ಕೆ ಇರತಕ್ಕ ಒಂದೇ ಒಂದು ಭರವಸೆ ಯುವಕರು. ಅವರಲ್ಲಿ ದೇಶಾಭಿಮಾನ ವುಂಟಾಗುವಂತೆ ಮೊದಲಿನಿಂದಲೂ ತಯಾರುಮಾಡಬೇಕೆಂದು ಸರ್ಕಾರದ ಅಭಿಪ್ರಾಯ ಎಂದು ಹೇಳುತ್ತೇನೆ. ನಮ್ಮ ಸ್ನೇಹಿತರ ಅಭಿಪ್ರಾಯದಂತೆ ಸೇವಾದಳದವರಿಗೆ ಸಹಾಯ ಮಾಡಬೇಕಾದ್ದು ಅವಶ್ಯಕವೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಹೆಚ್ಚು ಮೊಬಲಗು ಕೊಡುವುದಕ್ಕೆ ಸಾಧ್ಯವಿಲ್ಲ. ಸಾಧ್ಯವಾದಷ್ಟೂ ಸಹಾಯ ಮಾಡಬೇಕೆಂಬುದು ಸರ್ಕಾರದವರ ಅಭಿಪ್ರಾಯ.

ಈಗ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಮಾಡಬೇಕೆಂದು ಹೇಳಿದರು. ರಾಜ್ಯಾಂಗ ಪ್ರಕಾರ 14 ವರ್ಷದವರೆಗೆ ಪ್ರತಿಯೊಂದು ಮಗುವಿಗೂ ಕಡ್ಡಾಯವಾಗಿ ವಿದ್ಯಾಭ್ಯಾಸ ಮಾಡಿಸಬೇಕೆಂದು ರಾಜ್ಯಾಂಗ ರಚನೆಯ ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನಲ್ಲಿ ಒಪ್ಪಿದ್ದಾರೆ. 'But as and when possible and necessary' ಎಂಬ discretion ಬಿಟ್ಟಿದ್ದಾರೆ. ಆದ್ದರಿಂದ ಆ ತತ್ತ್ವವನ್ನು ಒಪ್ಪಿಕೊಂಡು ಸಾಧ್ಯವಾದಷ್ಟೂ ಜಾರಿಗೆ ತರುವುದಕ್ಕೆ ಪ್ರಯತ್ನ ಪಡುತ್ತೇವೆ. ಇಷ್ಟು ವಿಶ್ವವಿದ್ಯಾಲಯ ಮತ್ತು ಸ್ಕೂಲುಗಳ ವಿಚಾರ ಆಯಿತು.

ಕೆಲವು ಕಡೆ ಸ್ಕೂಲುಗಳಲ್ಲಿ ನಿವೃತ್ತರಾಗತಕ್ಕಂಥ ಉಪಾಧ್ಯಾಯರುಗಳಿದ್ದರೆ ಅವರಿಗೆ ಎಕ್ಸ್‌ಟೆನ್‌ಷನ್ ಕೊಡಬೇಕೆಂದು ಮಾನ್ಯ ಸದಸ್ಯರು ಸಲಹೆ ಮಾಡಿದರು. ಈಗ ಅವರುಗಳ ಅಭಾವವಿರುವುದರಿಂದ ವೈದ್ಯ ಮತ್ತು ವಿದ್ಯಾಭ್ಯಾಸದ ಇಲಾಖೆಗಳಲ್ಲಿ ಅವಶ್ಯಕತೆ ಇದ್ದರೆ ಎಕ್ಸ್‌ಟೆನ್‌ಷನ್ ಕೊಡಬಹುದು ಎಂದು ಸರ್ಕಾರದವರು ಆಲೋಚನೆಮಾಡಿ, ಬಹಳ ಮಿತವಾಗಿ, ಒಂದು ತತ್ತ್ವದ ಮೇಲೆ, ಯಾರಿಗೂ ಯಾವ ವಿಧವಾದ ಅನಾನುಕೂಲವೂ ಆಗದಂತೆ ನೋಡಿಕೊಂಡು ಕೊಟ್ಟಿದ್ದಾರೆ.

ಇನ್ನು ವಿದ್ಯಾಭ್ಯಾಸದ ವಿಷಯವನ್ನು ಮುಗಿಸಿ ಆಸ್ಪತ್ರೆಗಳ ವಿಚಾರಕ್ಕೆ ಬರುತ್ತೇನೆ. ಆಸ್ಪತ್ರೆಗಳ ವಿಚಾರದಲ್ಲಿ ಇನ್ನೂ ಬಹಳ ವಿಸ್ತರಿಸಬೇಕೆಂಬ ಸಲಹೆಬಂತು. ಈಗ ಹೊಸದಾಗಿ ಪ್ರಾರಂಭ ಮಾಡುವುದಕ್ಕಿಂತಲೂ ಇರತಕ್ಕ ಆಸ್ಪತ್ರೆಗಳಲ್ಲಿ ಎಲ್ಲೆಲ್ಲಿ ಡಾಕ್ಟರುಗಳಿಲ್ಲವೋ ಅಲ್ಲಿಗೆಲ್ಲಾ ಡಾಕ್ಟರುಗಳನ್ನು ಕಳುಹಿಸಿಕೊಟ್ಟು, ಅಲ್ಲಿರತಕ್ಕ ಕೊರತೆಯನ್ನು ಮೊದಲು ಸರಿಪಡಿಸಬೇಕೆಂಬ ದೃಷ್ಟಿಯಿಂದ ಸರ್ಕಾರದವರು ಡಾಕ್ಟರುಗಳನ್ನು ನೇಮಕಮಾಡಿಕೊಳ್ಳುವುದಕ್ಕೆ ಒಂದು ಯೋಜನೆಯನ್ನು ತಯಾರುಮಾಡಿಟ್ಟಿದ್ದೇವೆ. ಆದಷ್ಟು ಭರ್ತಿಮಾಡುತ್ತೇವೆ. ಶ್ರೀಮಾನ್ ಗುಂಡಪ್ಪಗೌಡರು ಮಂತ್ರಿಗಳಾಗಿದ್ದ ಕಾಲದಲ್ಲಿ ಆಯುರ್ವೇದದ ವಿಚಾರದಲ್ಲಿ ಬಹಳ ಮೆಹನತ್ತು ತೆಗೆದುಕೊಂಡು ಉತ್ತೇಜನ ಕೊಟ್ಟಿದ್ದಾರೆ. ಅದನ್ನು ನಾವು ಮುಂದುವರಿಸುತ್ತೇನೆ. ಅದು ನಮ್ಮ ದೇಶದ ದೃಷ್ಟಿಯಿಂದ ಒಂದು ತತ್ವವಾಗಿ ಇಟ್ಟುಕೊಂಡಿದ್ದೇವೆ. ಅದಕ್ಕೆ ಎಲ್ಲರೂ ಸಹಕರಿಸಿ ಉತ್ತೇಜನ ಕೊಡಬೇಕು. ಈಗ ಮಾಡುತ್ತಾ ಇರುವ ರೀತಿಯಲ್ಲಿ ಔಷಧಿಗಳು ಸರಿಯಾಗಿ ಒದಗುತ್ತಿಲ್ಲ, ಡಾಕ್ಟರುಗಳು ಒದಗುತ್ತಿಲ್ಲ. ಅಲೋಪೇಥಿಕ್ ಆಸ್ಪತ್ರೆ, ಆಯುರ್ವೇದ ಆಸ್ಪತ್ರೆ ಎರಡರಲ್ಲೂ ಸರಿಯಾಗಿ ಕೆಲಸ ನಡೆಯುತ್ತಿಲ್ಲವೆಂದು ಗೊತ್ತಿದೆ. ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ, ಹಾಸಿಗೆಗಳಿಲ್ಲ, ಔಷಧಿಗಳಿಲ್ಲ. ಈ ಅಭಾವವನ್ನು ಹೋಗಲಾಡಿಸಲು, ಕಾರ್ಯ ಮಾಡಿ ತೋರಿಸಬೇಕೇಹೊರತು ಮಾತುಗಳಿಂದ ತೃಪ್ತಿ ಆಗುವುದಿಲ್ಲ. ಔಷಧಿ ಒದಗಿಸತಕ್ಕ ವಿಚಾರದಲ್ಲೂ ಸಹ ಜನಗಳು ಸಹಕರಿಸಿ ಆಯುರ್ವೇದ ಮತ್ತು ಯುನಾನಿ ಔಷಧಗಳಿಗೆ ಬೆಂಬಲ ಕೊಡಬೇಕು. ಜನಗಳು ಯೋಚನೆ ಮಾಡುವ ಹಾಗೆ ನಾವುಗಳೂ ಸಹ ಸಹಕರಿಸಬೇಕೆಂದು ನನ್ನ ಅಭಿಪ್ರಾಯ. ಜನಾಬ್ ಮಹಮದ್ ಷರೀಫ್‌ರವರು ಮತ್ತು ಶ್ರೀಮಾನ್ ಗುಂಡಪ್ಪಗೌಡರು ಇಲ್ಲೇ ಔಷಧಿಗಳನ್ನು ತಯಾರುಮಾಡುವ ಏರ್ಪಾಡು ಮಾಡಬೇಕೆಂದು ಹೇಳಿದರು. ಅದಕ್ಕೆ ಸಾಧ್ಯವಾದಷ್ಟೂ ಅವಕಾಶ ಕೊಟ್ಟು ಮಾಡುತ್ತಾ ಇದ್ದೇವೆ.

ಹೀಗೆ ಡಾಕ್ಟರುಗಳ ಅಭಾವವಿರುವುದರಿಂದ ಕೆಲವರಿಗೆ ಸರ್ವೀಸ್ ಬಡ್ತಿಯನ್ನೂ ಕೊಡಲಾಗುತ್ತಿದೆ. ಆದರೆ ತಾವೀಗ ಏನೇನು ಸಲಹೆಗಳನ್ನು ಕೊಟ್ಟಿದ್ದೀರೋ ಅವುಗಳನ್ನೆಲ್ಲಾ ಜ್ಞಾಪಕದಲ್ಲಿಟ್ಟುಕೊಂಡಿದ್ದೇನೆ. ಈ ಬಾಬಿನಲ್ಲಿ ಎಲ್ಲೆಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಖಚಿತವಾಗಿ, ಕಡ್ಡಾಯವಾಗಿ ಕೆಲಸಮಾಡಬೇಕೋ ಅಷ್ಟನ್ನೂ ನಿರ್ದಾಕ್ಷಿಣ್ಯವಾಗಿ ಮಾಡುವಂತೆ ಎಲ್ಲಾ ಡಾಕ್ಟರುಗಳಿಗೂ ತಿಳುವಳಿಕೆಯನ್ನು ಕೊಡಲಾಗುತ್ತದೆ. ಇದನ್ನೆಲ್ಲಾ ಸರಿಪಡಿಸುತ್ತೇನೆಂದು ತಮಗೆ ಭರವಸೆ ನೀಡಬಲ್ಲೆ.

ಇನ್ನು ಮಲೆನಾಡಿನಲ್ಲಿ ಡಿ. ಡಿ. ಟಿ. ಸ್ಪ್ರೇ ಮಾಡುವ ವಿಚಾರ ತಿಳಿಸಿದ್ದಾರೆ. ಅಲ್ಲಿಗೆ ಸಾಕಾಗುವಷ್ಟು ಡಿ. ಡಿ. ಟಿ. ಇರುತ್ತದೆ. ನಾನು ಮೊನ್ನೆ ಸಂಚಾರ ಹೋಗಿದ್ದಾಗ ಸಾಗರದ ಟೌನ್ ಒಂದರಲ್ಲಿಯೇ ಬಹಳ ಪ್ರಯೋಜನ ಇದರಿಂದ ಅವರಿಗುಂಟಾಗಿದೆಯೆಂದೂ, ಅದಕ್ಕಾಗಿ ಅವರು ಈ ವರ್ಷ ಹೆಚ್ಚು ಆರೋಗ್ಯವಂತರಾಗಿದ್ದುದರಿಂದ 4½ ಸಾವಿರ ಪಲ್ಲ ಭತ್ತವನ್ನು ಆ ಒಂದು ಸರಹದ್ದಿನಲ್ಲಿ ಹೆಚ್ಚಾಗಿ ಬೆಳೆದಿರುವುದಾಗಿ ತಿಳಿಸಿದರು. ಮಲೆನಾಡಿಗೆ ಸಾಕಾಗುವಷ್ಟು ಡಿ. ಡಿ. ಟಿ. ಯನ್ನು ತರಿಸಲಾಗುತ್ತೆ. ಈ ಔಷಧಿಯೊಂದಕ್ಕೇ ಈಗ 18 ಲಕ್ಷ ರೂಪಾಯಿ ಖರ್ಚಾಗಿರುತ್ತೆ. 81 ಯೂನಿಟ್‌ಗಳಷ್ಟು ಔಷಧಿಗೇ ಅಷ್ಟು ಹಣ ಖರ್ಚಾಗಿದೆ. ಇದರಿಂದ ತಕ್ಕಷ್ಟು ಪ್ರತಿಫಲ ದೊರೆತಿರುವುದಾಗಿ ತಿಳಿದುಬಂದಿದೆ. ಜನರಿಗೆ ನಾವು ಎಷ್ಟರಮಟ್ಟಿಗೆ ಸಹಾಯ ಮಾಡಬಹುದೋ, ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅಷ್ಟರಮಟ್ಟಿಗೂ ಸಹಾಯ ನೀಡಲಾಗುತ್ತೆ. ಆ ಔಷಧಿಯ ಒಂದು ಶಾಖೆಯನ್ನೇ ಇಲ್ಲಿ ಸ್ಥಾಪಿಸುವ ಬಗ್ಗೆ ಇಂಡಿಯಾ ಸರ್ಕಾರದವರೊಡನೆ ಪತ್ರವ್ಯವಹಾರವನ್ನು ನಡೆಸಲಾಗುತ್ತಿದೆ. ಅವರೂ ಸಹ ಈ ಬಗ್ಗೆ ನಮಗೆ ಇದಕ್ಕೆ ವೆಚ್ಚವಾಗುವ ಹಣದಲ್ಲಿ ಅರ್ಧಭಾಗವನ್ನು ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆ. ಇನ್ನೂ ಇದು ವಿಮರ್ಶೆಯಾಗುತ್ತಿದೆ.

ಇನ್ನು ಲಂಚದ ವಿಚಾರಕ್ಕೆ ಬರುತ್ತೇನೆ. ಇದು ಇನ್ನೂ ಎಲ್ಲಾ ಕಡೆಗಳಲ್ಲೂ ಇದ್ದೇ ಇದೆ. ಇದು ನನ್ನ ಅನುಭವಕ್ಕೂ ಬಂದಿದೆ. ಇದನ್ನೆಲ್ಲಾ ನಾವು ಯಾವ ರೀತಿ ಸರಿಪಡಿಸಬೇಕೆಂಬ ಬಗ್ಗೆ ಆಲೋಚನೆಗಳನ್ನು ನಡೆಸುತ್ತಿದ್ದೇವೆ. ಇದು ಯಾವುದೋ ಒಂದು ದಾರಿಯಲ್ಲಿ ಹೋಗುತ್ತಿದೆ. ಇದ[illegible] ಈ ಆಸ್ಪತ್ರೆ, ಸ್ಕೂಲು ಇತ್ಯಾದಿಗಳ ಕಡೆ ಹೋಗಿಲ್ಲ. ವಿದ್ಯಾ ಇಲಾಖೆಯಲ್ಲೂ ಅಲ್ಲಲ್ಲೆ ಕೊಂಚ ಈ ಲಂಚರುಷವತ್ತುಗಳಿರುವುದಾಗಿ ತಿಳಿದು ಬರುತ್ತಿದೆ. ಈಗ ಮನುಷ್ಯನ ಸ್ವಭಾವವೇ ಕೆಟ್ಟು ಹೋಗಿ ಹೀಗಾಗಿದೆ. ಇದನ್ನು ತಡೆಗಟ್ಟಲು ನಾವು ಎಷ್ಟರಮಟ್ಟಿಗೆ ಪ್ರಯತ್ನ ಪಡಬೇಕೆಂಬ ಬಗ್ಗೆ ಬಹಳ ತೀವ್ರವಾಗಿ ಆಲೋಚಿಸುತ್ತಿದ್ದೇವೆ. ಈ ಸಂಬಂಧವಾಗಿ ನಾಳೆ ನಾಡಿದ್ದರಲ್ಲಿ ಒಂದು ಪ್ರಶ್ನೆ ಚರ್ಚೆಗೆ ಬರಬಹುದು. ಆಗ್ಯೆ ನಾನು ಈ ಬಾಬಿನಲ್ಲಿ ಹೆಚ್ಚು ವಿಷಯಗಳನ್ನು ತಿಳಿಸುತ್ತೇನೆ. ಅವರ ಹೆಸರು, ಹುದ್ದೆ, ಅವರು ಮಾಡುತ್ತಿರುವ ಕೆಲಸ ಇತ್ಯಾದಿ ವಿವರಗಳನ್ನೆಲ್ಲಾ ತಿಳಿಸಲಾಗುತ್ತೆ. ಇದು ಹೆಚ್ಚು ಪ್ರಾಶಸ್ತ್ಯಕ್ಕೆ ಬರದಂತೆ ಮಾಡಲು ತಕ್ಕಷ್ಟು ಸಿಬ್ಬಂದಿಯನ್ನು ಹೆಚ್ಚುಮಾಡಿ ಚುರುಕಾಗಿ ಕೆಲಸ ನಡೆಯಿಸುವಂತೆ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗುತ್ತದೆ. ಇದನ್ನು ಮುಂದಕ್ಕೆ ಈ ಲಂಚ ರುಷುವತ್ತುಗಳು ಜರುಗದಂತೆ ಮಟ್ಟ ಹಾಕುವುದಕ್ಕೆ ಪ್ರಯತ್ನಗಳನ್ನು ಸಂಪೂರ್ಣವಾಗಿ ಮಾಡೋಣ.

ಇನ್ನೂ ಅನೇಕ ವಿಚಾರಗಳಿವೆ. ಅವುಗಳನ್ನೆಲ್ಲಾ ವಿವರವಾಗಿ ತಿಳಿಸಲು ಹೆಚ್ಚು ವೇಳೆಯಾಗುತ್ತಾದ್ದರಿಂದ ಅವುಗಳನ್ನೆಲ್ಲ ಕೈಬಿಡುತ್ತೇನೆ. ಆದರೆ ಇಷ್ಟು ಮಾತ್ರ ಹೇಳಬಲ್ಲೆ. ನಾನು ಎಷ್ಟೇ ಒತ್ತಿ ಹೇಳಿದರೂ ಅಷ್ಟು ಕೆಲಸಗಳು ಪರಿಣಾಮಕಾರಿಯಾಗಿ ನಡೆಯಲಾರವು. ಬರೀಭಾಷಣದಿಂದಲೇ ಎಲ್ಲವೂ ಆಗುವುದಿಲ್ಲ. ಕಾರ್ಯತಃ ತೋರಿಸಿ, ಶ್ರದ್ಧೆಯಿಂದ ಎಲ್ಲರೂ ಕೆಲಸ ಮಾಡಬೇಕು. ಮಾತುಗಳಿಂದ ಸುಖವಿಲ್ಲ. ಇದುವರೆಗೂ ಮಾತನಾಡಿರತಕ್ಕ ಮಾನ್ಯ ಸದಸ್ಯರೆಲ್ಲರೂ ಬಹಳ ಸಕಾರಣವಾಗಿ ಟೀಕೆಗಳನ್ನು ಮಾಡಿದ್ದಾರೆ. ಈ ವಿಚಾರವಾಗಿ ನಾನು ಲಂಬಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಅಂದರೆ ಯಾರೂ ಅಂಥ ಉದ್ದೇಶ ಇಟ್ಟುಕೊಂಡು ಟೀಕೆ ಮಾಡಿಲ್ಲವೆಂಬುದು ನನ್ನ ಹೃದಯಕ್ಕೆ ಗೊತ್ತಿದೆ. ಎಲ್ಲರೂ ಸಹಕರಿಸಿ ಕೆಲಸ ಮಾಡಿದರೆ ದೇಶಾಭಿವೃದ್ಧಿಯಾಗುತ್ತದೆ. ಇನ್ನು ಅನೇಕ ಖೋತಾ ನಿರ್ಣಯಗಳೂ, ಸೂಚನೆಗಳೂ ಈ ಸಭೆಯ ಮುಂದೆ ಚರ್ಚೆಗೆ ಬರತಕ್ಕವುಗಳಾಗಿರುವುದರಿಂದ ನಾನು ಇನ್ನು ಹೆಚ್ಚು ಹೇಳದೆ ನನ್ನ ಭಾಷಣವನ್ನು ಇಷ್ಟಕ್ಕೇ ಮುಕ್ತಾಯಮಾಡುತ್ತೇನೆ.

*ಶ್ರೀ ಎಚ್. ಸಿ. ದಾಸಪ್ಪನವರು (ಅರ್ಥಿಕ ಸಚಿವರು).—ಸ್ವಾಮಿ, ಈಗಾಗಲೇ ಬಹಳ ವೇಳೆಯಾಗಿದೆ. ಹೇಳತಕ್ಕ ವಿಷಯಗಳು ಅನೇಕವಾಗಿದ್ದರೂ ಕೂಡ, ಅಷ್ಟನ್ನೂ ಹೇಳುವುದಕ್ಕಾಗುವುದಿಲ್ಲವೆಂಬುದನ್ನು ಗ್ರಹಿಸಿ, ನಾನು ಸಂಕ್ಷಿಪ್ತವಾಗಿ ಕೆಲವು ವಿಚಾರಗಳನ್ನು ಮಾತ್ರ ತಿಳಿಸಬೇಕೆಂದು ನಿರ್ಧರಿಸಿಕೊಂಡಿದ್ದೇನೆ. ಈ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತ ಯಾವ ಯಾವ ಮಹನೀ

ಯಾರು ಮಾತನಾಡಿದರೋ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನರ್ಪಿಸುತ್ತೇನೆ.

ನಾನು ಪ್ರಥಮತಃ ಕೆಲವು ಮಾನ್ಯ ಸದಸ್ಯರು ತಮ್ಮ ಭಾಷಣಗಳ ಕಾಲದಲ್ಲಿ ಯಾವ ಒಂದೆರಡು ಆಕ್ಷೇಪಣೆಗಳನ್ನು ಮಾತ್ರ ಎತ್ತಿ ಮಾತನಾಡಿದ್ದಾರೋ ಮತ್ತು ಈಗಿನ ಸರ್ಕಾರದ ತತ್ವ ಮತ್ತು ನೀತಿಯ ಬಗ್ಗೆ ಯಾವ ಟೀಕೆಯನ್ನು ಮಾಡಿದ್ದಾರೋ, ಆ ಬಗ್ಗೆ ಪ್ರಸಕ್ತ ಸಾಲಿಗೆ ಸಂಬಂಧಪಟ್ಟ, ನನಗೆ ಸೇರಿರುವ ಬಾಬುಗಳ ಕೆಲವು ವಿಷಯಗಳನ್ನು ತಿಳಿಸುತ್ತೇನೆ. ಅನೇಕ ಮಹನೀಯರು ತಮ್ಮ ಭಾಷಣಗಳಲ್ಲಿ ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಭಾಷಣಗಳೂ ಸಹ ಬಹಳ ಸ್ವಾರಸ್ಯವಾಗಿವೆ. ಆದರೆ ಅಂಥಾ ಟೀಕೆ ಟಿಪ್ಪಣಿಗಳನ್ನು ತಮ್ಮ ಭಾಷಣದಲ್ಲಿ ಮಾಡಲು, ಅವರು ಏನು ಆಧಾರವನ್ನಿಟ್ಟುಕೊಂಡು ಮಾಡಿದ್ದಾರೋ ಅದು ನನಗೆ ತಿಳಿಯದಾಗಿದೆ. ಅಂತೂ ಅವರು ಮಾಡಿರತಕ್ಕ ಟೀಕೆಗಳು ಅಷ್ಟು ಸಮರ್ಪಕವಾದವುಗಳಾಗಲೀ ಅಥವಾ ಸಮಂಜಸವಾದವುಗಳಾಗಲೀ ಆಗಿರುವುದಿಲ್ಲವೆಂದು ಹೇಳುತ್ತೇನೆ. ನಾನು ಅನೇಕ ಕಡೆ ಅರ್ಥಿಕ ಸಚಿವರು, ಪ್ರಾಂತೀಯ ಸರ್ಕಾರಗಳಲ್ಲಿ ಬಡ್ಜೆಟ್ಟನ್ನು ಹೇಗೆ ತಯಾರಿಸುತ್ತಿದ್ದಾರೆ ಮತ್ತು ಅದನ್ನು ಹೇಗೆ ಮಂಡಿಸುತ್ತಿದ್ದಾರೆಂಬುದನ್ನು ನೋಡಿ ತಿಳಿದುಕೊಂಡಿದ್ದೇನೆ. ಆ ಬಗ್ಗೆ ನನ್ನಲ್ಲಿ ಕೆಲವು ಪ್ರತಿಗಳೂ ಕೂಡ ಇವೆ. ಮಾನ್ಯ ಸದಸ್ಯರು ಕೆಲವರು ಅಭಿಪ್ರಾಯಪಟ್ಟಿರುವ ಹಾಗೆ, ಹಾಗೆ ಎಲ್ಲ ಜಾರಿಯಲ್ಲಿಲ್ಲ, ಹಾಗೆ ಎಲ್ಲ ಜಾರಿಯಲ್ಲಿದೆಯೆಂಬ ವಿಷಯವನ್ನು ಆ ಮಾನ್ಯ ಸದಸ್ಯರಿಂದಲೇ ತಿಳಿಯಬೇಕಾಗಿದೆ. ನಾವು ಈಗ ಹೊಸದಾಗಿ ಯಾವ ನೀತಿಯನ್ನೂ ಆಚರಿಸಿಕೊಂಡು ಬಂದಿರುವುದಿಲ್ಲ. ಈ ಸಂದರ್ಭದಲ್ಲಿ ನಾನು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿವರಗಳಿಗೆ ಈಗ ಹೋಗುವುದಿಲ್ಲ. ವಿರೋಧಪಕ್ಷದ ಸದಸ್ಯರು ಎತ್ತಿರುವ ಆಕ್ಷೇಪಣೆಗಳೇನೆಂದರೆ—ಈಗಿರತಕ್ಕ ನಮ್ಮ ಆರ್ಥಿಕ ನೀತಿ ಬೇರೆಯಾಗಿದೆ, ನಮ್ಮ ಒಳ ಆಡಳಿತ ನೀತಿ ಬೇರೆಯಾಗಿದೆ, ಇವುಗಳನ್ನೆಲ್ಲ ಬದಲಾಯಿಸಬೇಕಾಗಿರುತ್ತದೆ ಎಂದು. ಅಷ್ಟು ಹೊರತಾಗಿ ಅವರೇ ಆಗಲೀ ಅಥವಾ ಇತರ ಯಾವ ಮಾನ್ಯ ಸದಸ್ಯರೇ ಆಗಲೀ ಅಂಥ ಕಠಿಣತರವಾದ ಆಕ್ಷೇಪಣೆಗಳನ್ನೆತ್ತಿ ಲೋಪದೋಷಗಳನ್ನು ಕಂಡು ಹಿಡಿದು ಟೀಕೆ ಮಾಡಿರುವುದಿಲ್ಲ. ಆದಾಗ್ಯೂ ನಾನು ಅವರೆಲ್ಲರನ್ನೂ ವಂದಿಸಬೇಕಾಗಿದೆ. ಯಾರು ಯಾರು ಇದಕ್ಕೆ ಪೂರ್ತಿ ಬೆಂಬಲ ಕೊಟ್ಟಿದ್ದಾರೋ ಅದು ಅವರವರ ವೈಶಿಷ್ಟ್ಯಕ್ಕನುಸಾರವಾಗಿ, ಬೆಂಬಲ ಮತ್ತು ಟೀಕೆಗಳು ಬಂದಿವೆ. ಅಲ್ಲದೆ ನಮ್ಮ ಪಾರ್ಟಿಯವರಾದರೋ ಯಾವುದನ್ನೂ ಮುಚ್ಚುಮರೆ ಇಲ್ಲದಂತೆ ತೆರದ ಮನಸ್ಸಿನಿಂದ ಹೃದಯವನ್ನು ಬಿಚ್ಚಿ ಟೀಕೆಗಳನ್ನು ಮಾಡಿದ್ದಾರೆ. ಅದರೊಂದಿಗೆ ರಚನಾತ್ಮಕ ಸಲಹೆಗಳನ್ನು ನೀಡಿದ್ದಾರೆ. ಅಂತೂ ಎಲ್ಲರ ಟೀಕೆಗಳೂ ಬಹಳ ಸ್ವಾರಸ್ಯವಾಗಿವೆ. ಚರ್ಚೆಯೂ ಕೂಡ ಬಹಳ ತೃಪ್ತಿಕರವಾಗಿಯೇ ನಡೆದಿದೆ.

ಆದರೆ ಇದರಲ್ಲಿ ಒಂದು ಅಂಶವೇನೆಂದರೆ ಈ ಸಾರಿಯ ಆಯವ್ಯಯ ಪಟ್ಟಿಯನ್ನು ತಮಗೆ ಸಕಾಲದಲ್ಲಿ ಒದಗಿಸಲಾಗಲಿಲ್ಲ. ಅದಕ್ಕಾಗಿ ನಾನು ವ್ಯಥೆಪಡುತ್ತೇನೆ. ಮತ್ತು ತಮ್ಮೆಲ್ಲರ ಕ್ಷಮೆ ಕೇಳುತ್ತೇನೆ. ಆದರೆ ಇನ್ನು ಮುಂದೆ ಇಂಥಾದ್ದಕ್ಕೆ ಅವಕಾಶ ಕೊಡುವುದಿಲ್ಲವೆಂಬ ಭರವಸೆಯನ್ನು ನಾನು ತಮಗೆ ಈಗ ನೀಡತಕ್ಕವನಾಗಿದ್ದೇನೆ.

ಆದರೆ ನನಗಾದ ಒಂದು ಆಶ್ಚರ್ಯವೇನೆಂದರೆ, ಯಾರು ಇದರಲ್ಲಿ ವಿಶೇಷ ಅನುಭವ ಪಡೆದಿರಲಿಲ್ಲವೋ ಅವರಿಂದ ಆಕ್ಷೇಪಣೆ ಕಡಿಮೆ ಬಂತು, ಯಾರು ಪೂರ್ತಿ ಅನುಭವವಿಟ್ಟುಕೊಂಡು ಇದನ್ನು ನೋಡಬಲ್ಲರೋ ಅವರಿಂದ ವಿಶೇಷವಾಗಿ ಆಕ್ಷೇಪಣೆ ಬಂತು. ಬಹುಶಃ ಅವರುಗಳು ಇದನ್ನು ಪೂರ್ತಿಯಾಗಿ ಓದಿ ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶವಿರಲಿಲ್ಲವೆಂಬ ಸಂದೇಹ ನನಗೆ ಬಂದಿದೆ. ಏಕೆಂದರೆ ಅವರು ಮಾಡಿರತಕ್ಕ ಟೀಕೆಗಳು ಆ ರೀತಿಯಾಗಿ ಕಾಣುತ್ತವೆ.

ಬಡ್ಜೆಟ್ ವಿಚಾರದಲ್ಲಿ ಟೀಕೆಗಳನ್ನು ಮಾಡಿರುವುದಕ್ಕೆ, ಉತ್ತರ ಕೊಡುವುದಕ್ಕೆ ಮುಂಚೆ ಕೇಂದ್ರ ಸರ್ಕಾರದವರೊಡನೆ ಮಾಡಿಕೊಂಡಿರುವ ಆರ್ಥಿಕ ವಿಲೀನೀಕರಣದ ವಿಚಾರದಲ್ಲಿ ಮಾನ್ಯ ಸದಸ್ಯರು ಅದನ್ನು ಸಂಪೂರ್ಣವಾಗಿ ಸ್ವಾಗತಿಸಿ ತಮ್ಮ ಮೆಚ್ಚಿಕೆಯನ್ನು ಏಕಕಂಠದಿಂದ ವ್ಯಕ್ತಪಡಿಸಿರುತ್ತಾರಾಗಿ ಅವರಿಗೆ ಸರ್ಕಾರದವರ ಪರವಾಗಿ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ವಿಚಾರದಲ್ಲಿ ಯಾವೊಬ್ಬ ಸದಸ್ಯರೂ ಆಕ್ಷೇಪಣೆ ಮಾಡಲಿಲ್ಲ. ಅದಕ್ಕಾಗಿ ನಾನು ಬಹಳಮಟ್ಟಿಗೆ ಆಭಾರಿಯಾಗಿದ್ದೇನೆ.

A MEMBER.—There is a resolution which I have tabled.

ಶ್ರೀ ಎಚ್. ಸಿ. ದಾಸಪ್ಪನವರು —Thank you. ಯಾವಾಗ ಈ ರೀತಿ ಒಪ್ಪಂದವಾಗುತ್ತದೆಯೋ, ಅದರಲ್ಲಿ ಕೆಲವನ್ನು ಅನುಷ್ಠಾನಕ್ಕೆ ತರುವಾಗ ಅನೇಕ ವಿಚಾರಗಳು ಉದ್ಭವಿಸುತ್ತವೆ. ಅಂಥಾ ವಿಚಾರಗಳೆಲ್ಲವನ್ನೂ ನಾನು ಹೇಳುವುದಿಲ್ಲ. ಕಟ್ಟಡಗಳ ವಿಚಾರ ಮತ್ತು ಸೆಂಟ್ರಲ್ ಎಕ್ಸೈಸ್‌ಗಳ ವಿಚಾರ ಇನ್ನೂ ತೀರ್ಮಾನವಾಗಿಲ್ಲ. ಈ ವಿಚಾರದಲ್ಲಿ ಇದುವರೆಗೂ ಕೇಂದ್ರ ಸರ್ಕಾರದವರು ಉದಾರ ನೀತಿಯನ್ನು ಅವಲಂಬಿಸುತ್ತಾರೆಂದು ನಾನು ನಿರೀಕ್ಷಿಸುತ್ತಿದ್ದೇನೆ. ಒಂದು ಸಂದರ್ಭದಲ್ಲಿ, 'ಈಗೇನೋ ಸರಿ; 5 ವರ್ಷಗಳವರೆಗೂ ನಮಗೇನೂ ತೊಂದರೆಯಿಲ್ಲವೆಂದಾಯಿತು. ಆದರೆ ಮುಂದಕ್ಕೆ ಏನಾಗುತ್ತದೆಯೋ' ಎಂದು ಒಂದು ಶಂಕೆಯನ್ನು ಕೆಲವು ಮಹನೀಯರು ವ್ಯಕ್ತಪಡಿಸಿದ್ದಾರೆ. ಅದಕ್ಕೆ ನನ್ನ ಉತ್ತರ ಇಷ್ಟೆ. ನಾವು ಯಾವಾಗಲೂ ಕೂಡ ಯಾವ ವಿಚಾರದಲ್ಲಿ ಮುಖ್ಯವಾಗಿ ದೂರಾಲೋಚನೆ ಮಾಡಬೇಕು, ಯಾವುದರಲ್ಲಿ ಬೇಕಾಗಿಲ್ಲವೆಂಬುದನ್ನು ಹೇಳುತ್ತೇನೆ. ಬಡ್ಜೆಟ್ ತಯಾರು ಮಾಡುವ ವಿಷಯ ತೆಗೆದುಕೊಂಡರೆ ಇದನ್ನೆಲ್ಲಾ ಅಷ್ಟೇನೂ ದೂರಾಲೋಚನೆ ಮಾಡಬೇಕಾಗಿಲ್ಲ. ಆದರೆ ಆದೇ ಯೋಜನೆಗಳ ವಿಚಾರವಾದರೋ ಹಾಗಲ್ಲ. ಮುಖ್ಯವಾಗಿ 1950ರಿಂದ 1955ರವರೆಗೂ ನಾವೊಂದು ನಿರ್ದಿಷ್ಟವಾದ ನೀತಿ ಇಟ್ಟುಕೊಳ್ಳುವುದಕ್ಕೆ ಸಹಾಯ ಮಾಡಿರುವುದೇ, ನಮಗವರು ಸಹಾಯ ಮಾಡಿದ ಹಾಗಾಯಿತೆಂದು ನಾನು ಭಾವಿಸುತ್ತೇನೆ. ಅಂದಮಾತ್ರಕ್ಕೇ ಇದೆಲ್ಲಾ ಇಷ್ಟರಲ್ಲೇ ಪರ್ಯವಸಾನವಾಗುವುದಿಲ್ಲ. ಒಂದುವೇಳೆ ಈ ಏಳತಕ್ಕ net gap ನಲ್ಲೂ ನಾವು ಕೇವಲ ನಿಸ್ಸಹಾಯಕರಾಗಿದ್ದೇವೆಂದೂ ಹೇಳಬಾರದು. ಈ ಅಂಶವನ್ನು Financial Memorandumನ 43ನೆಯ ಪ್ಯಾರಾದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅಲ್ಲಿ ಮೈಸೂರು ಸಂಸ್ಥಾನದ ವಿಚಾರವಾಗಿ ಹೇಳುತ್ತಾ

"The Committee is satisfied that a scheme of federal financial integration on the above lines will not cause any sudden dislocation of the finances of the Mysore Government, nor will it necessitate a reversal of any well-established and desirable administrative and special policies of the State. The present dependence of Mysore on federal sources of finance is indeed considerable and the immediate scope for the development of 'provincial' taxes is rather limited."

ಅಲ್ಲಿಂದ ಮುಂದಕ್ಕೆ ಏನು ಹೇಳಿದ್ದಾರೆಂಬುದು ಮುಖ್ಯ ವಾದುದು.

"Having regard to these factors, the Committee is satisfied that a maximum period of five years during which the entire net 'revenue-gap' would be guaranteed in full is justified."

ಇದರಲ್ಲಿ ಅಡಗಿರತಕ್ಕ ತತ್ವವನ್ನು ನಾವು ಸ್ವಲ್ಪ ನೋಡಬೇಕು. ಮೈಸೂರು ಸರ್ಕಾರದ ಆಡಳಿತ ನೀತಿ ಬಹಳ ಚೆನ್ನಾಗಿದೆ, ಸಮಾಜ ನೀತಿಯ ವಿಚಾರದಲ್ಲಿ ಪ್ರಗತಿದಾಯಕವಾದ ಮಾರ್ಗವನ್ನು ಅವಲಂಬಿಸಿದ್ದಾರೆ ಮತ್ತು ಮೈಸೂರು ಸರ್ಕಾರದಲ್ಲಿ ವಿಲೀನೀಕರಣದಿಂದ ಉಂಟಾಗತಕ್ಕ ನಷ್ಟ ಬಹಳ ದೊಡ್ಡದು, ಅವರಿಗೆ ಇರತಕ್ಕ ರಿಜರ್ವ್‌ಗಳೆಲ್ಲಾ ಕಡಿಮೆ ಎಂಬ ಅಂಶವನ್ನು ಸ್ಪಷ್ಟವಾಗಿ ಅವರು ಹೇಳಿದ್ದಾರೆ. Fiscal Commission ಬೇರೆ ಇನ್ನೂ ಐದು ವರ್ಷಕ್ಕೆ ಬರುತ್ತದೆ. ನಾವು ಮಾಡತಕ್ಕ ಪ್ರಯತ್ನಮಾಡಿ, ನಾವು ಕೈಕೊಳ್ಳುವ ಒಳ್ಳೆಯ ಕಾರ್ಯಗಳಿಗೆ ಕಷ್ಟವಾದರೆ, ಅವರೇ ಸಹಾಯಮಾಡುತ್ತಾರೆಂದೂ ಹೇಳಬಲ್ಲೆ. ಈ ಫೆಡರೇಷನ್‌ನಲ್ಲಿ ಯಾವುದೇ ಭಾಗಕ್ಕೆ ತೊಂದರೆ ಬಂದರೂ ಕೇಂದ್ರ ಸರ್ಕಾರದವರು ಅದಕ್ಕೆ ಸಹಾಯ ಮಾಡುವುದಕ್ಕೆ ಸದಾ ಸಿದ್ಧರಾಗಿರುತ್ತಾರೆಂದು ಹೇಳುತ್ತೇನೆ.

ಇನ್ನೊಂದು ವಿಚಾರ. ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪನವರೂ ಮತ್ತು ಜನಾಬ್ ಇಮಾಂರವರೂ ಪಾನನಿರೋಧ ಕ್ರಮದಿಂದ ಇಂದಲ್ಲ ನಾಳೆಯಾದರೂ ಎರಡುಕೋಟಿ ರೂಪಾಯಿಗಳನ್ನು ಕಳೆದುಕೊಳ್ಳುತ್ತೇವೆಂದೂ ಮತ್ತು ಕೆಲವು ಸದಸ್ಯರು, ಸೆಕ್ಯೂರಿಟಿಗಳ ಮೇಲಿನ ಬಡ್ಡಿ ಕಡಿಮೆಯಾಗುತ್ತದೆಂದೂ. ಹಾಗೆಯೇ ಚಿನ್ನದ ಮೇಲಣ ಸುಂಕವೂ ಕಡಿಮೆಯಾಗುತ್ತದೆಂದೂ. ಸೂಚಿಸಿದರು. ಗೋಲ್ಡ್ ಡ್ಯೂಟಿ ವಿಚಾರದಲ್ಲಿ ಹಿಂದಿನ ಸಭೆಯಲ್ಲಿ ಮತ್ತು ಕೌನ್ಸಿಲ್‌ನಲ್ಲಿ ಪೂರ್ಣ ಸಹಕಾರ ದೊರೆತ್ತಿದೆ. ಈ ಗಣಿಗಳ ಜೀವಮಾನವನ್ನು ಜಾಸ್ತಿ ಮಾಡಬೇಕಾದರೆ ನಾವು ಅನುಸರಿಸಿರುವ ನೀತಿ ಸರಿಯಾಗಿದೆಯೆಂದು ಎಲ್ಲರೂ ಒಪ್ಪಿದ್ದಾರೆ. ಅದ್ದರಿಂದರೇ ಯಾರೂ ಅದನ್ನೀಗ ಟೀಕೆ ಮಾಡಲಿಲ್ಲ.

ಆದ್ದರಿಂದ ಇಷ್ಟಾದರೂ ಬರತಕ್ಕ ವರಮಾನ ಖರ್ಚಿಗಿಂತ ಕಡಿಮೆಯಾದರೆ ಪರಿಹಾರವೇನು? ಹೇಗೆ ಸರಿಪಡಿಸಬಲ್ಲಿರಿ, ಎಂದು ಪ್ರಶ್ನೆ ಮಾಡಬಹುದು. ಅದಕ್ಕಿಷ್ಟು ಹೇಳಬಲ್ಲೆ. ಪ್ರಜಾಪ್ರಭುತ್ವ ಯಾವಾಗ ಇದೆಯೋ, ಪದ್ಧತಿ, ಆಗ ಹೀಗೆ ಕೊರತಾ ಆಗುವ ಸಂದರ್ಭದಲ್ಲಿ ಅವನ್ನು ಯಾವ ರೀತಿ ಸರಿಪಡಿಸಬೇಕೆಂಬುದನ್ನು ಯೋಚನೆ ಮಾಡಿಯೇ ಮಾಡುತ್ತಾರೆಂಬುದನ್ನು ಹೇಳಬೇಕಾದ್ದಿಲ್ಲ. ಅವರಿಗೆ ಆ ಶಕ್ತಿಯಿದೆಯೆಂಬುದನ್ನು ಇವತ್ತಿನ ಸರಕಾರ ಮನಗಂಡಿದೆ. ಆ ಧೈರ್ಯವಿದೆಯೆಂಬುದನ್ನು ಹೇಳಬಲ್ಲೆ. ಆದ್ದರಿಂದ ಈ ವಿಚಾರದಲ್ಲಿ ಮುಂದಕ್ಕೆ ಯಾವ ತೊಂದರೆಯೂ ಇಲ್ಲವೆಂದು ಎಲ್ಲರೂ ಭಾವಿಸಬಹುದೆಂದು ಹೇಳುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ಮಾಡಿರತಕ್ಕ ಟೀಕೆಗಳ ವಿಚಾರ ಹೇಳುತ್ತೇನೆ.

ವಿರೋಧ ಪಕ್ಷದ ನಾಯಕರಾದ ಜನಾಬ್ ಇಮಾಂರವರು ಭಾಷಣ ಮಾಡುವಾಗ ಎಚ್ಚರಿಕೆಯಿಂದ ಪ್ರತಿಯೊಂದು ಶಬ್ದವನ್ನೂ ನಾನು ಕೇಳಿದ್ದೇನೆ. ಅವರು ಯಾವ ಆಧಾರದ ಮೇಲೆ ಟೀಕೆ ಮಾಡಿದರೋ ಅದು ನಿರಾಧಾರವಾದುದು ಎಂದು ಈ ದಿವಸ ವಿಷಾದದಿಂದ ಹೇಳಬೇಕಾಗಿದೆ. ಮೊಟ್ಟಮೊದಲು ಅವರು ರಿಜರ್ವಿನಿಂದ ಹಣ ತೆಗೆದಿದ್ದಾರೆಂದು ಹೇಳಿದರು. ಅದಕ್ಕೆ ಉತ್ತರವನ್ನು ಆಗಲೇ ಹೇಳಿದ್ದೇನೆ. ರಿಜರ್ವಿನಿಂದ ಒಂದು ಕಾಸೂ ಈ ವರ್ಷ ತೆಗೆದುಕೊಂಡಿಲ್ಲ ಎಲ್ಲ ಯಾವ ರಿಜರ್ವಿನಿಂದ ತೆಗೆದುಕೊಂಡಿದ್ದೇವೆಂಬುದನ್ನು ಅವರು ತೋರಿಸಲಿಲ್ಲ.

ಆಮೇಲೆ ಫಂಡಿಗೆ 24 ಲಕ್ಷ ಹಾಕಿ 62 ಲಕ್ಷ ರೂಪಾಯಿಗಳವರೆಗೆ ಹೆಚ್ಚಾಗಿ ತೆಗೆದಿದ್ದಾರೆಂದು ಹೇಳಿದರು. ಅಂದರೆ ಒಟ್ಟಿನಲ್ಲಿ 86 ಲಕ್ಷ ತೆಗೆದಿದೆಯೆಂದು ಆಕ್ಷೇಪಿಸಿದರು. ಆ ರೀತಿಯಾಗಿ ಅನುಭವಶಾಲಿಗಳಾದ ಸದಸ್ಯರು ಹೇಳಿದರೆ ಜನರಿಗೆ ಶಂಕೆಯುಂಟಾಗುತ್ತದೆ.

ಜನಾಬ್ ಜೆ. ಮಹಮದ್ ಇಮಾಂರವರು.—Expenditure met from Funds 87 ಲಕ್ಷ ಎಂದು ಬಡ್ಜೆಟ್ಟಿನಲ್ಲಿ ಹೇಳಿದೆ.

ಶ್ರೀ ಎಚ್. ಸಿ. ದಾಸಪ್ಪನವರು.—ಬಡ್ಜೆಟ್ಟಿನ 14ನೆಯ ಪುಟವನ್ನು ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ; ಕನ್ನಡಿ ಇದ್ದಹಾಗಿದೆ. ದೊಡ್ಡ ಪುಸ್ತಕದಲ್ಲಿ ತೋರಿಸಿರುವಂತೆ ಮೈಸೂರು ವಿಶ್ವವಿದ್ಯಾನಿಲಯದ ಫಂಡಿಗೆ 42 ಲಕ್ಷ, ರೋಡ್ ಫಂಡಿಗೆ 56 ಲಕ್ಷ ಚಿಲ್ಲರೆ ಹೀಗೆಲ್ಲಾ ಹಾಕಿ, ಕಡಮೆ ತೆಗೆದಿರುವುದಾಗಿ ತಿಳಿಸಿದೆ. ಫಂಡು ಇಲ್ಲವೇ ಇಲ್ಲ ಎಂದು ಹೇಳಿದೆ ಮಾನ್ಯ ಸದಸ್ಯರು ಬಡ್ಜಟ್ ಮೆಮೋರ್ಯಾಂಡಂನ ಆಖೈರು ಪುಟವನ್ನು ತೋರಿಸಿದಾಗ ಒಪ್ಪಿಕೊಂಡರು. ಮತ್ತು ಇದೇ ರೀತಿಯಲ್ಲಿ ರಸ್ತೆ ಫಂಡಿನ ವಿಚಾರವನ್ನೂ ಹೇಳಿದ್ದಾರೆ. 24 ಲಕ್ಷ ಕಾಂಟ್ರಿಬ್ಯೂಷನ್ ಜನರಲ್ ರೆವೆನ್ಯೂನಿಂದ ಕೊಟ್ಟಿರುವುದರ ಜೊತೆಗೆ, 56 ಲಕ್ಷ ಚಿಲ್ಲರೆ ಮೋಟಾರು ಲೈಸೆನ್ಸ್ ಫೀಜಿನಿಂದ ತೆಗೆದು ಸೇರಿಸಿರುವುದರಿಂದ, ಒಟ್ಟು ಮೊಬಲಗು ಅಷ್ಟಾಗಿದೆ. ಹೀಗೆ ರೂರಲ್ ಡೆವಲಪ್‌ಮೆಂಟ್ ಫಂಡಿಗೆ 32 ಲಕ್ಷ ಹಾಕಿ 30 ಲಕ್ಷ 15 ಸಾವಿರ ತೆಗೆದಿದ್ದೇವೆ. ಹೀಗೆ ಹೆಚ್ಚಾಗಿ ಹಾಕಿ ಕಡಮೆ ತೆಗೆದಿದ್ದೇವೆ. ಇನ್ನು ಇರಿಗೇಷನ್ ಡೆವಲಪ್‌ಮೆಂಟ್ ಫಂಡಿನ ವಿಚಾರಕ್ಕೆ ಉತ್ತರ ಕೊಡಬೇಕಾಗಿದೆ. ಕಳೆದ ವರ್ಷ ಸುಮಾರು 40-45 ಲಕ್ಷ ಈ ಫಂಡಿನಿಂದ ತೆಗೆದು ಹಾಕಿ 50 ಲಕ್ಷ ಸೇರಿಸಿ ಸುಮಾರು 90 ಲಕ್ಷದಷ್ಟು ಈ ಸಲ ತೋರಿಸಿದೆ. 1949-50ರಲ್ಲಿ ನಾವು ಈ ಫಂಡಿನಿಂದ ಏನೂ ತೆಗೆಯಲೇ ಇಲ್ಲ. ಆದರೆ ಎಲ್ಲಾ ಹಣವನ್ನೂ ಕೂಡ ರೆವೆನ್ಯೂನಿಂದ ಒದಗಿಸಿದ್ದೇವೆ. ಆ ರೆವಿನ್ಯೂನಲ್ಲಿ ಸುಮಾರು ಅರ್ಧ ಭಾಗ ಕೇಂದ್ರ ಸರ್ಕಾರಕ್ಕೆ ಸೇರಿದೆ. ಆದ್ದರಿಂದ ಜನಾಬ್ ಇಮಾಂರವರು ಇದನ್ನು ಸ್ವಾಗತಮಾಡಿ ಸಂತೋಷಪಡಬೇಕೇ ಹೊರತು ಹೆಚ್ಚು ತೆಗೆದಿದ್ದೇವೆಂದು ತಿಳಿದುಕೊಳ್ಳಬಾರದು. ಒಂದು ವೇಳೆ ತೆಗೆದುಕೊಂಡರೂ ತಪ್ಪಿಲ್ಲ. ಡೆವಲಪ್‌ಮೆಂಟ್ ಫಂಡಿರುವುದೇ ಆ ಕೆಲಸಕ್ಕೆ. ಆ ವಿಚಾರವನ್ನು ಫೈನಾನ್ಸ್ ಮತ್ತು ಕೋಆರ್ಡಿನೇಷನ್ ಸಮಿತಿ ಕೂಡ ಹೇಳಿದೆ. ಇಷ್ಟು ಹೇಳಿದರೆ ಈ ವಿಚಾರದಲ್ಲಿ ಸಾಕೆಂದು ತೋರುತ್ತದೆ.

ಆ ಮೇಲೆ ಕಾಂಟ್ರಿಬ್ಯೂಷನ್ ಇರುವುದು ಯಾವುದೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಾಗಿದೆ. ಹಿಂದೆ 1941-42ರಲ್ಲಿ ವಿಶೇಷವಾಗಿ ಸರ್ಕಾರದ ಬೊಕ್ಕಸಕ್ಕೆ ಹಣ ಬಂದು ಖರ್ಚು ಮಾಡುವುದಕ್ಕೆ ಅವಕಾಶವಿಲ್ಲದೇ ಹೋದ್ದರಿಂದ ರಿಜರ್ವಾಗಿಡುವುದು ಆಟೋಮ್ಯಾಟಿಕ್ ಆಯಿತು. ಖರ್ಚು ಮಾಡುವುದಕ್ಕೆ ರಹ ಇಲ್ಲದ್ದರಿಂದ ಸಹಜವಾಗಿ ರಿಜರ್ವ್ ಇಡುತ್ತಾರೆ. ಆದ್ದರಿಂದ ಅದು ಆಟೋಮ್ಯಾಟಿಕ್ ಆಗಿ ಆಯಿತು ಎಂದು ಹೇಳಬಹುದು.

ಆಮೇಲೆ ರಾಷ್ಟ್ರ ನಿರ್ಮಾಣಕ್ಕೆ ಸಂಬಂಧಪಟ್ಟ ಇಲಾಖೆಗಳು ಯಾವ ರೀತಿ ಖರ್ಚುಮಾಡಿದ್ದೆವು ಎಂಬು

ಕ್ಕೆ ವಿವರ ಕೊಡಬೇಕಾಗಿಲ್ಲ; ಅದು ಬೇಕಾದಷ್ಟಿದೆ. ವರಲ್ಲಿ ಅನುಮಾನವಿಲ್ಲ.

Janab J. MAHOMED IMAM.—If I n not interrupting the Hon'ble inister, I would beg of him to clear doubt. Please see the provisional atement of Liabilities and Assets on ge 38 of the Memorandum. There an item Special Reserve Fund, cluding Mining Revenue Fund 491·19 khs. In the foot note it is stated :—

"As the current liabilities are more than e current assets by Rs. 333·99 lakhs, to this tent the special reserve will have to be ated as extinguished."

If so, the remaining amount in the pecial Reserve will be only Rs. 113 khs as on 1st July 1949.

ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಅನ್ವಯಿ ಪುದಕ್ಕಾಗುವುದಿಲ್ಲವೆಂದು ಈಗ ನಾನು ಹೇಳುತ್ತೇನೆ. 1 5 –5 ಕ್ಕೆ ರಿಜರ್ವಿನಿಂದ ಒಂದು ಕಾಸನ್ನು ತೆಗೆಯುತ್ತಿಲ್ಲ ಎಂದು ಹೇಳುತ್ತಿದ್ದೇನೆ. ನಿಜವಾಯೂ ರಿಜರ್ವಿಗೆ ಹೆಚ್ಚು ಸೆಕ್ಯೂರಿಟಿ ಇದೆ ಅಥವಾ ಇಲ್ಲ ಂಬುದು ಬೇರೆ ವಿಚಾರ. ಈಗ 1950–51ಕ್ಕೆ ನಾವು ಜರ್ವಿನಿಂದ ಒಂದು ಕಾಸೂ ತೆಗೆದುಕೊಂಡಿಲ್ಲವೆಂದು ಪ್ರತಿಪಾದಿಸುತ್ತಿದ್ದೇನೆ.

ಆ ಮೇಲೆ ಯೋಜನೆಗಳ ವಿಚಾರ ಬಹಳ ಚೆನ್ನಾಗಿ ಚರ್ಚೆಯಾಗಿ, ಜನಾಬ್ ಇಮಾಂರವರು 36 ಕೋಟಿಯಷ್ಟು ರೂಪಾಯಿಗಳನ್ನು ಇದಕ್ಕಾಗಿ ಒದಗಿಸಲಾಗಿದ್ದ ವಿಚಾರ ಹೇಳಿದರು. ಅದು ಏನಿದ್ದರೂ ಹಿಂದಿನ Legacies ಗೆ ಸಂಬಂಧಪಟ್ಟ ವಿಚಾರ ಕಮಿಟಿಯವರು ವಿಚಾರ ಹೇಳುತ್ತೇನೆಂದು ಹೇಳಿದವರು ಹೇಳಲಿಲ್ಲ. ಕೋಆರ್ಡಿನೇಷನ್ ಮತ್ತು ಫೈನಾನ್ಸ್ ಸಮಿತಿಯ ವಿಚಾರವನ್ನು ಹೇಳುವುದಾದರೆ ಮುಖ್ಯ ಮಂತ್ರಿಗಳು ಮತ್ತು ಇತರ ಮಹನೀಯರು ಅದಕ್ಕೆ ಸದಸ್ಯರಾಗಿದ್ದರು. ಯುದ್ಧಾನಂತರ ಯೋಜನೆಗಳಿವೆ. ಅಂತೂ ಆ ಸಮಿತಿಯವರ ವರದಿಯಲ್ಲಿ ಸೂಚಿಸಿರುವ ಯೋಜನೆಗಳು ಮಾತ್ರ ಬಡ್ಜೆಟ್‌ನಲ್ಲಿವೆಯೇ ಹೊರತು ಬೇರೆ ಇಲ್ಲ. ಇದನ್ನು ದಯವಿಟ್ಟು ಒಪ್ಪಿಕೊಳ್ಳಬೇಕು. ತಮಗೆ ಬೇಕಾದರೆ ಪುಟಗಳನ್ನು ಹೇಳುತ್ತೇನೆ. ಅದು ಈ ರೀತಿ ಯಾಗಿದೆ.—

		ಪುಟ
1.	ಕೈಗಾರಿಕೆ ವಿಚಾರ ...	110, 111
2.	ಟೆಕ್ನಿಕಲ್ ವಿದ್ಯಾಭ್ಯಾಸ ...	118–120
3.	ಸೇತುವೆ, ರಸ್ತೆ ಮುಂತಾದ ಯುದ್ಧಾನಂತರ ಯೋಜನೆಗಳು	126–127
4.	ವಿದ್ಯುಚ್ಛಕ್ತಿ ...	144
5.	ಜನಾರೋಗ್ಯ, ಇರಿಗೇಷನ್ ...	138

ಶ್ರೀ ಬಿ. ಹುಚ್ಚೇಗೌಡರು.—ನಾರ್ಮಲ್ ಡೆವಲಪ್‌ಮೆಂಟ್ ಎಂದು ಹೇಳುವುದಕ್ಕೆ ಮಿತಿ ಯಾವುದು? ಅದಕ್ಕೆ ಎಷ್ಟು ಖರ್ಚುಮಾಡಬೇಕೆಂದಿದೆ?

ಶ್ರೀ ಎಚ್. ಸಿ. ದಾಸಪ್ಪನವರು.—1946ರಿಂದ ಈಚೆಗೆ ಯುದ್ಧಾನಂತರ ಯೋಜನೆಗಳು ಯಾವುವು ಆಗಬೇಕೆಂದು ಸಮಿತಿಯವರು ಹೇಳಿದ್ದಾರೆ. ಅದರಲ್ಲಿ ದೊಡ್ಡ ದೊಡ್ಡ ಯೋಜನೆಗಳೂ ಅಲ್ಲದೆ ಮೆಡಿಕಲ್ ಇಲಾಖೆಯಲ್ಲಿ ಜನರಲ್ ಆಸ್ಪತ್ರೆ ವಿಚಾರ ಮುಂತಾದ್ದೂ ಸಹ ಹೇಳಿದೆ. ವಿದ್ಯಾ ಇಲಾಖೆ ತೆಗೆದುಕೊಂಡರೆ ಕಲವು ಕಾಲೇಜುಗಳು ಮತ್ತು ಹೈಸ್ಕೂಲುಗಳು— ಇವುಗಳಿಗೆ ಸಂಬಂಧಪಟ್ಟ ಯೋಜನೆಗಳಲ್ಲದೆ, 3 ಕೋಟಿ ರೂಪಾಯಿಗಳನ್ನು ರೆಕರಿಂಗ್ ಛಾರ್ಜಸ್‌ಗೆ ತೆಗೆದುಕೊಳ್ಳಬಹುದೆಂದು 82ನೆಯ ಪುಟದಲ್ಲಿ ಸೂಚಿಸಿದೆ.

ತಾವು ಸ್ವಲ್ಪ ಇಲ್ಲಿ ಗಮನಿಸಬೇಕು. Even the Finance and Co-ordination Policy Committee had suggested as follows:

"In the meanwhile and pending the improvement in the revenue position which would take some years to become possible, it is suggested that a sum of Rs. 3 crores may be kept apart under the Special Reserve for Non-recurring Expenditure as a cover for the recurring expenditure on post-war schemes to be incurred in the interval, *i.e.*, till our revenues are augmented to meet increased demands due to undertaking of schemes calculated to improve our existing standards of Public Health, Education and other social services"

(Page 82 of the Report of the Committee for Co-ordination and Finance.)

ನಾನು ಖಚಿತವಾಗಿ ಹೇಳುತ್ತೇನೆ. ಈ ಫಂಡಿನಿಂದ ಒಂದು ಕಾಸು ಕೂಡ ಯುದ್ಧಾನಂತರ ಪುನರ್ರಚನೆ ಯೋಜನೆಗಳಿಗೆ ವಿನಾ ಬೇರೆ ಸಾಧಾರಣ ಖರ್ಚಿಗೆ ಉಪಯೋಗವಾಡಿಲ್ಲ. ಏಕೆ ಈ ರೀತಿ ಮಾಡಬೇಕಾಗಿ ಬಂತು ಎಂಬುದನ್ನು ನಾನು ನನ್ನ ಪ್ರಾರಂಭ ಭಾಷಣದಲ್ಲೇ ತಿಳಿಸಿದ್ದೇನೆ, ಈಗಲೂ ಹೇಳುವುದಕ್ಕೆ ಅಡ್ಡಿಯಿಲ್ಲ. ಆದರೆ ಅನಾವಶ್ಯಕ.

ಮತ್ತೊಂದು ವಿಚಾರವನ್ನು ಶ್ರೀಮಾನ್ ಸಿದ್ದಪ್ಪನವರು ಹೇಳಿದರು. ಅದೇನೆಂದರೆ, ಡೆವಲಪ್‌ಮೆಂಟ್ ಸ್ಕೀಮುಗಳನ್ನೂ, ಕ್ಯಾಪಿಟಲ್ ಪ್ರೋಗ್ರಾಮುಗಳನ್ನೂ ಬೇರೆ ತೋರಿಸಬೇಕು, ಸಾಧಾರಣ ರೆವೆನ್ಯೂ ಆದಾಯ ವೆಚ್ಚವನ್ನೂ ಬೇರೆ ತೋರಿಸಬೇಕು ಎಂದು ಮುಂತಾಗಿ ಹೇಳಿದರು. ಹಾಗೆ ಮಾಡುವುದಾದರೆ ಬಜೆಟ್ಟಿಗೆ ನಾಲ್ಕು ಪುಸ್ತಕಗಳು ಬೇಕಾಗುತ್ತವೆ. ಇದರಲ್ಲೇ ಯಾವುದು Capital Works, ಯಾವುದು Revenue ಎಂದು ತೋರಿಸಿರುವಾಗ ಹೀಗೆ ಬೇರೆ ಬೇರೆ ಮಾಡುವುದು ಅನಾವಶ್ಯಕವೆಂದು ಕಾಣುತ್ತದೆ.

ಒಟ್ಟಿನಲ್ಲಿ ನಾನು ಹೇಳಬೇಕಾದರೆ, ಸುಮಾರು 20 ರಿಂದ 30 ಕೋಟಿ ರೂಪಾಯಿಗಳವರೆಗೆ, ಅದೂ ಆಗಿನ ಅಂದಾಜಿನಲ್ಲಿ, ಹಿಂದಿನವರು ನವಗೆ ಯೋಜನೆಗಳನ್ನು ಕೊಟ್ಟು ಹೋದರು. ಅವುಗಳಲ್ಲಿ ಬಹುಭಾಗ ಅವರೇ ಪ್ರಾರಂಭಮಾಡಿ ಹೋಗಿದ್ದರು. ಈಗ ಅವರನ್ನೇ ಕೇಳುತ್ತೇನೆ. ಅವರು ಪ್ರಾರಂಭಮಾಡಿದುದನ್ನು ಅರ್ಧದಲ್ಲೇ ನಿಲ್ಲಿಸಬೇಕೇ ಅಥವಾ ಮುಗಿಸಬೇಕೇ ಎಂಬುದನ್ನು ಅವರೇ ಹೇಳಲಿ. ಯುದ್ಧಾನಂತರ ಪುನರ್ರಚನಾ ಯೋಜನೆಯೊಂದು ಅವರು ಪ್ರಾರಂಭ ಮಾಡಿ ಅರ್ಧ ಮುಕ್ಕಾಲು ಮಾಡಿದುದನ್ನು ನಾವು ಅಲ್ಲಿಗೇ ನಿಲ್ಲಿಸುವುದು ಹೇಗೆ? ಇದರ ವಿಚಾರದಲ್ಲಿ ಈ ಅಧಿವೇಶನದಲ್ಲಿ ಹೆಚ್ಚು ಟೀಕೆ ಇಲ್ಲದೇಯಿರುವುದಕ್ಕೆ ಕಾರಣವೇನೆಂಬುದು ನನಗೆ ಗೊತ್ತು. ಹೋದಸಾರಿ ಬಹಳ ಉಗ್ರವಾದ ಟೀಕೆ ಇತ್ತು. ನಾನು ಅದೇ ರೀತಿ ಆಗಬಹುದೆಂದು ನಿರೀಕ್ಷಿಸಿ ನನ್ನ ಪ್ರಾರಂಭ ಭಾಷಣದಲ್ಲೇ ತಕ್ಕಷ್ಟು ಜವಾಬಾಯಿಷಿ ಕೊಟ್ಟಿದ್ದರಿಂದ ಅಷ್ಟು ಟೀಕೆಗಳಿಗೆ ಅವಕಾಶವಾಗಲಿಲ್ಲವೆಂದು ಕಾಣುತ್ತದೆ.

ಜನಾಬ್ ಇಮಾಂರವರು credit ವಿಚಾರ, ಮತ್ತು prestige of the State ವಿಚಾರ ಹೇಳಿದರು. ಇದು

ನಿಜವಾಗಿಯೂ ಅನ್ಯಾಯ. ಒಂದು ಗೋಪ್ಯ ವಿಚಾರವನ್ನು ಬಯಲುಮಾಡುವುದಾದರೆ, ಕೇಂದ್ರ ಸರ್ಕಾರದವರು ಈ ಬಡ್ಜೆಟ್ಟನ್ನು ಮೆಚ್ಚಿದ್ದಾರೆ. ಅವರ ಮೆಚ್ಚಿಗೆಯನ್ನು ಪಡೆದಿರುವ ಈ ಬಡ್ಜೆಟ್ಟನ್ನು ಜನಾಬ್ ಇಮಾಂರವರು ಟೀಕೆ ಮಾಡಿ ನಮ್ಮ ದೇಶದ creditಗೇ ಲೋಪ ಬರುವಂತಿದೆಯೆಂದು ಹೇಳಿದುದು ಆಶ್ಚರ್ಯವಾಗಿದೆ. ಈ ದಿವಸಕ್ಕೂ ಹಿಂದಿನಕಾಲಕ್ಕೂ ಬಹಳ ವ್ಯತ್ಯಾಸವಿದೆ. ಹಿಂದೆ ಪರಕೀಯರು ನಮ್ಮ ದೇಶವನ್ನಾಳುತ್ತಿದ್ದರು. ಈಗ ನಮ್ಮ ದೇಶ ಸ್ವತಂತ್ರವಾಗಿದೆ. ನಮ್ಮ ರಾಜ್ಯದ ಹೊಣೆಗಾರಿಕೆ ನಮ್ಮ ಮೇಲೆ ಬಿದ್ದಿದೆ. ನಮ್ಮ ದೇಶದ ಕೀರ್ತಿಯನ್ನು ಎತ್ತಿ ಹಿಡಿಯಬೇಕು. ಕೇಂದ್ರ ಸರ್ಕಾರದವರೇ ಅಲ್ಲದೆ ಪ್ರಾಂತ ಸರ್ಕಾರಗಳವರೂ ಕೂಡ ಬಹಳ ಎಚ್ಚರಿಕೆಯಿಂದ ನಡೆಯಬೇಕು. ಮಾತನಾಡಬೇಕಾದರೆ ಬಹಳ ಎಚ್ಚರಿಕೆಯಿಂದ ಶಬ್ದಗಳನ್ನು ಪ್ರಯೋಗಮಾಡಬೇಕು. ಏನೇ ಉದ್ದೇಶವಿದ್ದರೂ ಇಂತಹ ಪದಗಳನ್ನು ಉಪಯೋಗಿಸಬಾರದೆಂದು ಅವರನ್ನು ವಿನಯದಿಂದ ಪ್ರಾರ್ಥಿಸುತ್ತೇನೆ. ನಮ್ಮ ಸಂಸ್ಥಾನದ credit ಮತ್ತು prestige ಏನೂ ಕಡಿಮೆಯಾಗಿಲ್ಲ.

ಇನ್ನು ಸಾಲವನ್ನೆತ್ತುವ ವಿಚಾರ ಹೇಳಿದರು. ಈ ದಿವಸ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ. ಎತ್ತಿದರೂ ಕೂಡ ವರಮಾನ ತೆರಿಗೆ ವಿನಾಯಿತಿ ಕೊಡಬಾರದು. ಈ ದಿವಸ ನಾವು ಸಾಲ ಎತ್ತುವುದಾದರೆ ಹಣ ಸಿಕ್ಕಬಹುದು, ಆದರೆ ನಾವು ಕೇಂದ್ರ ಸರ್ಕಾರದವರೊಡನೆ ಪರ್ಯಾಲೋಚಿಸಿ ಅವರಿಂದ ಎಷ್ಟು ಸಹಾಯ ದೊರೆಯಬಹುದು, ಇಂಟರ್‌ನ್ಯಾಷನಲ್ ಮಾನಿಟರಿ ಫಂಡಿನಿಂದ ಎಷ್ಟು ಪಡೆಯಬಹುದು, ಯಾವುದು ಉತ್ತಮ ಎಂಬುದನ್ನು ಯೋಚನೆಮಾಡುತ್ತಿರುವಾಗ ನಮ್ಮ ಮಾನ್ಯ ಮಿತ್ರರು ಹೀಗೆ ಹೇಳುವುದು ನ್ಯಾಯವೇ ಎಂಬುದನ್ನು ತಾವೇ ಯೋಚಿಸಬೇಕು. ಇದರಿಂದ ಅವರು ದೇಶಕ್ಕೆ ಸಹಾಯ ಮಾಡಿದಂತಾಗಲಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಬರಿಯ ಸಹಾಯ ಮಾಡಿದಂತಾಗಲಿಲ್ಲವೆಂದು ಹೇಳಬಾರದು. ಅನ್ಯಾಯ ಮಾಡಿದ್ದಾರೆಂದು ಹೇಳಬೇಕು.

ಶ್ರೀ ಎಚ್. ಸಿ. ದಾಸಪ್ಪನವರು.—ನನಗೆ ಶ್ರೀಮಾನ್ ಸುಬ್ರಹ್ಮಣ್ಯರವರಷ್ಟು ಬಗಿಯಾದ ಭಾಷೆ ಬರುವುದಿಲ್ಲ. ಬಂದಿದ್ದರೆ ಇನ್ನೂ ಕಠಿಣವಾದ ಭಾಷೆಯನ್ನು ಉಪಯೋಗಿಸುತ್ತಿದ್ದೆ.

ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ತಿಳಿದುಕೊಳ್ಳುವುದೇ ಕಷ್ಟ. ಫೈನಾನ್ಷಿಯಲ್ ಮೆಮೊರ್ಯಾಂಡಂನಲ್ಲಿ ಕೊಟ್ಟಿರುವ ಅಂಕಿ ಅಂಶಗಳಲ್ಲಿ ಸ್ವಲ್ಪ ಲೋಪವಿದೆ ಎಂದು ಹೇಳಿದರು. ಕೆರೆ ನೀರಾವರಿ ಕಾಮಗಾರಿಗಳಿಗೆ ಒದಗಿಸಿರುವ 10 ಲಕ್ಷ ರೂಪಾಯಿ ಎರಡುಕಡೆ ಇದೆ ಎಂದು ಶ್ರೀಮಾನ್ ಸಿದ್ದಪ್ಪನವರು ಆಕ್ಷೇಪಿಸಿದರು. ನನ್ನ ತಪ್ಪುಗಳು ಎಷ್ಟೋ ಇರಬಹುದು. ಆದರೆ ನಮ್ಮ ಇಲಾಖೆಯ ತಪ್ಪಿದೆ ಎಂದು ನಾನು ಒಪ್ಪಿಕೊಳ್ಳಲಾರೆ. ಬಡ್ಜೆಟ್ಟಿನ ಎರಡನೆಯ ಭಾಗದಲ್ಲಿರುವುದು ಮೊದಲನೆಯ ಭಾಗದ 163ನೆಯ ಪುಟದಿಂದ ವರ್ಗಮಾಡಿದ್ದೇ ವಿನಾ ಇದೇ ಬೇರೆಯಲ್ಲ. ಇದು ಸಣ್ಣ ವಿಚಾರ.

ಶ್ರೀ ಎಲ್. ಸಿದ್ದಪ್ಪನವರು.—ಇದನ್ನು ಏಕೆ ಅಲ್ಲಿಯೂ ತೋರಿಸಬೇಕು?

ಶ್ರೀ ಎಚ್. ಸಿ. ದಾಸಪ್ಪನವರು.—ಅಲ್ಲಿ ತೋರಿಸಿದರೆ ಕೇಂದ್ರ ಸರ್ಕಾರದಿಂದ ನಮಗೆ ಇದರಲ್ಲಿ ಶೇಕಡ 50 ರಷ್ಟು ಹಣ ಸಹಾಯ ಸಿಕ್ಕುತ್ತದೆ. ಇದಕ್ಕಿಂತ ಹೆಚ್ಚಾಗಿ ಇನ್ನೇನು ಹೇಳಲಿ?

We get grants to the extent of 50 per cent from the Central Government if it is mentioned under Agriculture. So we have transferred it.

Sri L. SIDDAPPA.—So you have not provided 20 lakhs for the restoration of minor tanks during the next year?

Sri H. C. DASAPPA.—No. That is an impression that I want to remove.

ಇನ್ನು ಮಾರಾಟದ ತೆರಿಗೆ ವಿಚಾರವನ್ನು ಹೇಳುತ್ತಾ ಶ್ರೀಮಾನ್ ಸಿದ್ದಪ್ಪನವರು ಮದರಾಸಿನ ಉದಾಹರಣೆಯನ್ನು ತೆಗೆದುಕೊಂಡು ಅಲ್ಲಿ ಇದರ ವರಮಾನ ಐದು ಕೋಟಿ ಇತ್ತು, ಈಗ ಅದು 15 ಕೋಟಿಗೆ ಏರಿದೆ, ಇಲ್ಲಿ ಪ್ರಾರಂಭದಲ್ಲಿ ಒಂದು ಕೋಟಿ ಇತ್ತು, ಈಗ ಮೂರು ಕೋಟಿಗಾದರೂ ಏಕೆ ಏರಿಸಬಾರದೆಂದು ಕೇಳಿದರು. ಅಲ್ಲಿನ ಸ್ಥಿತಿಯೇನಾಗಿದೆಯೆಂದರೆ, ಅಲ್ಲಿ ಮಾರುವ ಬೆಲೆಯನ್ನು ಹೆಚ್ಚಿಸಿದ್ದಾರೆ. ಅಕ್ಕಿ ಮಾರಾಟದ ಧಾರಣೆ ಅಲ್ಲಿ ಎಷ್ಟು ಇಲ್ಲಿ ಎಷ್ಟು ಎಂಬುದನ್ನು ನೋಡಲಿ, ಅಲ್ಲಿ ಎಲ್ಲ ಪದಾರ್ಥಗಳ ಮೇಲೂ ಮಾರಾಟ ತೆರಿಗೆಯನ್ನು ಹಾಕಿದ್ದಾರೆ. ಇದರಿಂದ ಎಷ್ಟು ವ್ಯತ್ಯಾಸವಾಗುತ್ತದೆಂಬುದನ್ನು ಅವರು ಸ್ವಲ್ಪ ಯೋಚಿಸಬೇಕು.

ಎರಡನೆಯದಾಗಿ ಅಲ್ಲಿ ಈ ತೆರಿಗೆಯ ದರ ರೂಪಾಯಿಗೆ $4\frac{1}{2}$ ಕಾಸು, ಇಲ್ಲಿರುವುದು ರೂಪಾಯಿಗೆ 3 ಕಾಸು ಅಂದರೆ ಅಲ್ಲಿ ಇಲ್ಲಿಗಿಂತ ಶೇಕಡ 50 ರಷ್ಟು ಜಾಸ್ತಿಯಾದಂತಾಯಿತು. ನಾವು ಇನ್ನೂ $1\frac{1}{2}$ ಕಾಸು ಹೆಚ್ಚು ಮಾಡಿದರೆ ವರಮಾನ ಹೆಚ್ಚಾಗುತ್ತದೆ. ಅಲ್ಲದೆ ಇಲ್ಲಿ ವಿನಾಯಿತಿಗಳು ಜಾಸ್ತಿ. ಆಹಾರ ಧಾನ್ಯಗಳಿಗೆ ಈ ತೆರಿಗೆಯಿಂದ ವಿನಾಯಿತಿ ಕೊಟ್ಟಿದ್ದೇವೆ. ಯಾವುದೇ ವಿಷಯವನ್ನು ಹೇಳುವಾಗ, ಅದರಲ್ಲಿಯೂ ಜವಾಬ್ದಾರಿಯುತರಾದ ಸದಸ್ಯರು ಹೇಳುವಾಗ ಅಂಕಿ ಅಂಶಗಳನ್ನೂ ವಾಸ್ತವ ವಿಷಯಗಳನ್ನೂ ಮುಂದಿಟ್ಟುಕೊಂಡು ಹೇಳಿದರೆ ಒಪ್ಪಿಕೊಳ್ಳಬಹುದು. ಈ ಬಾಬಿನಲ್ಲಿ 3 ಕೋಟಿ ರೂಪಾಯಿಗೆ ನಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳಲು ಸೂಚನೆ ಮಾಡುವಾಗ ಯಾವ ಯಾವ ಪದಾರ್ಥಗಳಿಗೆ ವಿನಾಯಿತಿ ಬೇಡ ಎಂಬುದನ್ನೂ 3 ಕಾಸಿನಿಂದ $4\frac{1}{2}$ ಕಾಸು ಮಾಡಬಹುದೇ ಎಂಬುದನ್ನೂ ಹೇಳಿದ್ದಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು.

ಅತಿಥಿಗಳ ಸತ್ಕಾರಕ್ಕಾಗಿ ಹೋದ ವರ್ಷ 7 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ ಎಂದು ಶ್ರೀ ಎಲ್. ಸಿದ್ದಪ್ಪನವರು ಹೇಳಿದರು. ಅದನ್ನು ನನ್ನ ಮಿತ್ರರಾದ ಶ್ರೀ ಸಿದ್ದಪ್ಪನವರು ಹೇಳಿದ್ದನ್ನು ಕೇಳಿ ಪರಮ ಆಶ್ಚರ್ಯವಾಗಿದೆ. ಬಡ್ಜೆಟ್ಟಿನಲ್ಲಿ 77ನೇ ಪುಟ ನೋಡಿದರೆ 'Carriage and Motor Cars Establishment'ಗೆ 1948–49ನೇ ಇಸವಿಯಲ್ಲಿ 3,62,[illegible]54 ರೂಪಾಯಿ ಖರ್ಚಾಗಿದೆ ಎಂಬುದು ಗೊತ್ತಾಗುತ್ತದೆ. ಇರಲಿ ಅತಿಥಿಗಳ ಸತ್ಕಾರದ ವಿಚಾರ ಬಂದಾಗ ಹೇಳುತ್ತೇನೆ. 3 ಲಕ್ಷ ರೂಪಾಯಿ ಖರ್ಚು ಮಾಡಿರುವುದು ಹೆಚ್ಚು ಎಂದು ಒಪ್ಪಿಕೊಳ್ಳುತ್ತೇನೆ. ಮತ್ತು ಇನ್ನೊಂದು ಭಾಗವನ್ನು ಬೇರೆ ಕಡೆಗೆ ವರ್ಗ ಮಾಡಿದ್ದೇವೆ. ಅದನ್ನು ಸೂಚಿಸಬೇಕಾದ್ದು ಧರ್ಮ ಎಂದು ತಿಳಿದುಕೊಂಡಿದ್ದೇನೆ.

Janab J. MOHAMED IMAM.—Are the Budget figures wrong? It is earmarked for the Entertainment of Guests according to the Budget.

Sri T. MARIAPPA.—Under that head.

ಶ್ರೀ ಎಚ್. ಸಿ. ದಾಸಪ್ಪನವರು.—ಅದರ ನೀತಿಯನ್ನು ಹೆಚ್ಚಾಗಿ ಹೇಳುವುದಿಲ್ಲ. ಮಾನ್ಯ ಸದಸ್ಯರಿಗೇ ಬಿಟ್ಟುಬಿಡುತ್ತೇನೆ. ಇನ್ನೊಂದು ದೊಡ್ಡ ಆಕ್ಷೇಪಣೆ ಎಂದರೆ ಗ್ರಾಮಾಂತರ ಪ್ರದೇಶಗಳಿಗೆ ಏನು ಮಹಾ ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ ಅದಕ್ಕೆಲ್ಲಾ ಅಂಕಿ ಅಂಶಗಳನ್ನು ಕೊಟ್ಟಿದೆ. ಅದನ್ನು ಹೇಳಬೇಕೆಂದರೆ ಬಹಳ ಕಾಲ ಹಿಡಿಯುತ್ತದೆ. ಎರಡನೇ ಭಾಗದ ಬಡ್ಜೆಟ್ಟನ್ನು ತೆಗೆದುಕೊಂಡು ನೋಡಿ. ಅದರಲ್ಲಿ ಖರ್ಚಾಗಿರತಕ್ಕದ್ದೆಲ್ಲಾ ಬಹು ಭಾಗ ಗ್ರಾಮಾಂತರ ಪ್ರದೇಶಕ್ಕೇ ಎಂದು ಖಡಾ ಖಂಡಿತವಾಗಿ ಹೇಳುತ್ತೇನೆ. ಬೇಕಾದರೆ ಯಾರಾದರೂ ಇಲ್ಲವೆಂದು ಪ್ರತಿಪಾದಿಸಲಿ ಅದಕ್ಕೆ ನಾನು ಜವಾಬು ಕೊಡುತ್ತೇನೆ. ವೈದ್ಯಕೀಯ, ವಿದ್ಯಾಭ್ಯಾಸ, ಸಿರಿಕಲ್ಚರ್, ಇಂಡಸ್ಟ್ರೀಸ್, ರೂರಲ್ ಡೆವಲಪ್‌ಮೆಂಟ್, ರೂರಲ್ ಎಲೆಕ್ಟ್ರಿಫಿಕೇಷನ್ ಇಷ್ಟಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟರೂ ಸಹ ಅದು ಸಾಲದು ಎಂದು ವಾದಿಸಿದರು. "None is so blind as the one who refuses to see" ಎಂದು ಹೇಳಿ ಮುಂದುವರಿಸುತ್ತೇನೆ.

ಇನ್ನೊಂದು ದೊಡ್ಡ ವಿಚಾರ ಎಂದರೆ, ಮಾರಾಟದ ತೆರಿಗೆಯ ವಿಚಾರ ಅದು ಈಗ ಮಲ್ಟಿ ಪಾಯಿಂಟ್ ಇದೆ, ಸಿಂಗಲ್ ಪಾಯಿಂಟ್ ಏಕೆ ಆಗಬಾರದು ಎಂದು ಅನೇಕ ಮಾನ್ಯ ಸದಸ್ಯರು ಕೇಳಿದರು. ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ಇದು ವಿಪುಲವಾಗಿ ಚರ್ಚೆಯಾಗಿದೆ. ನಮ್ಮ ವಿಧಾನದಲ್ಲಿ ಮದರಾಸು ನೀತಿಯನ್ನು ಅನುಸರಿಸಿದ್ದೇವೆ. ಅಲ್ಲೂ ಮಲ್ಟಿಪಾಯಿಂಟ್ ಇದೆ. ಬೊಂಬಾಯಿನಲ್ಲಿ ಸಿಂಗಲ್ ಪಾಯಿಂಟ್ ಇದೆ. ಅಲ್ಲಿಗೂ, ಇಲ್ಲಿಗೂ ವ್ಯತ್ಯಾಸ ಇಷ್ಟೇ. ಅಲ್ಲಿ ಹೋಲ್‌ಸೇಲ್ ಮರ್ಚೆಂಟ್ಸ್ ಬೇಕಾದಷ್ಟು ಜನ ಇದ್ದಾರೆ. ಸಿಂಗಲ್ ಪಾಯಿಂಟ್ ಹಾಕಿದರೆ ವರಮಾನ ಹೆಚ್ಚಿಗೆ ಬರುತ್ತದೆ. ಅಲ್ಲದೆ ಬೊಂಬಾಯಿನವರು ಅವರ ಆರ್ಥಿಸ್ಥಿತಿಗನುಗುಣವಾಗಿ ಸಿಂಗಲ್ ಪಾಯಿಂಟ್ ಹಾಕಿಕೊಂಡಿದ್ದಾರೆ. ಇಷ್ಟು ಹೇಳಬಲ್ಲೆ. ಗ್ಯಾಡ್‌ಗಿಲ್ ಸಮಿತಿಯವರು ಮದರಾಸಿನಲ್ಲಿ ಮಲ್ಟಿಪಾಯಿಂಟ್ ಹಾಕುವುದು ಒಳ್ಳೆಯದು ಎಂದು ಸೂಚನೆ ಕೊಟ್ಟಿದ್ದರು. ಮಲ್ಟಿ ಪಾಯಿಂಟ್ ನಮಗೆ ಅಷ್ಟು ಹೊರೆಯಾಗಿ ಕಾಣಿಸುವುದಿಲ್ಲ. ಅದರಲ್ಲಿ ನ್ಯೂನತೆ ಕಂಡುಬಂದಿಲ್ಲವೆಂದು ನನಗೆ ತೋರುತ್ತೆ.

ಇನ್ನೊಂದು ವಿಚಾರ, ಬಹಳ ಮುಖ್ಯವಾದದ್ದು ಎಂದರೆ ನಮ್ಮ ರಿಟ್ರೆಂಚ್‌ಮೆಂಟ್ ಪಾಲಿಸಿ.

